ಸೋಮವಾರ, ಡಿಸೆಂಬರ್ 20, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 351 | ಪುಟ 14
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಿಕ್ಷಣ
ತಂತ್ರಜ್ಞಾನ ಮತ್ತು ಚಿಲ್ಲರೆ ವಹಿವಾಟು ಪದ್ಧತಿ ಉಪಯೋಗಿಸಿಕೊಂಡು ಮಾರಾಟ ಮತ್ತು ಗ್ರಾಹಕರ ಸೇವೆಗಳನ್ನು ಉತ್ತೇಜಿಸುವುದೇ ರಿಟೇಲ್ ಮ್ಯಾನೇಜ್‌ಮೆಂಟ್ ಕೋರ್ಸ್ ಉದ್ದೇಶ.

ಆಳ-ಅಗಲ
ಜೇಮ್ಸ್ ವೆಬ್ ಉಪಗ್ರಹ: ಬಾಹ್ಯಾಕಾಶಕ್ಕೆ ಭೂತಕನ್ನಡಿ
ಓಮೈಕ್ರಾನ್: ರಾಜ್ಯದಲ್ಲಿ ಲಸಿಕೆ ವಿತರಣೆಗೆ ವೇಗ 10
ಕೇರಳ: ಬಿಜೆಪಿ, ಎಸ್‌ಡಿಪಿಐ ಮುಖಂಡರ ಹತ್ಯೆ 2
ರಿಯಲ್ ಎಸ್ಟೇಟ್‌ಗೆ ಕಡಿವಾಣ
‘ತುಂಡು’ ಭೂಮಿ ಬಳಕೆಗೆ ನಿರ್ಬಂಧ 5

ಸದನದಲ್ಲಿಂದು ರಾಯಣ್ಣ ಕಾವು?

ವಿಧಾನಮಂಡಲ ಅಧಿವೇಶನದಲ್ಲಿ ಕಿಡಿಗೇಡಿ ಕೃತ್ಯಗಳ ಪ್ರಸ್ತಾಪ ಸಾಧ್ಯತೆ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಬೆಂಗಳೂರಿನಲ್ಲಿ ಶಿವಾಜಿ ಪ್ರತಿಮೆಗೆ ಮಸಿ ಬಳಿದಿದ್ದು ಮತ್ತು ಬೆಳಗಾವಿಯಲ್ಲಿ ಸಂಗೊಳ್ಳಿ ರಾಯಣ್ಣ ಪ್ರತಿಮೆ ವಿರೂಪಗೊಳಿಸಿರುವ ಘಟನೆಯಿಂದ ‘ಕುಂದಾ ನಗರಿ’ ಬೂದಿ ಮುಚ್ಚಿದ ಕೆಂಡದಂತಾಗಿದ್ದು, ಸೋಮವಾರ ವಿಧಾನಮಂಡಲದ ಉಭಯ ಸದನಗಳಲ್ಲೂ ಈ ವಿಷಯ ಭಾರಿ ವಾಕ್ಸಮರಕ್ಕೆ ಕಾರಣವಾಗುವ ನಿರೀಕ್ಷೆಯಿದೆ.

‘ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ನಿಭಾಯಿಸುವಲ್ಲಿ ಬಿಜೆಪಿ ಸರ್ಕಾರ ವಿಫಲವಾಗಿದೆ. ಎಂಇಎಸ್‌ಅನ್ನು ಮಟ್ಟ ಹಾಕಬೇಕು ಮತ್ತು ಗೃಹ ಸಚಿವರು ರಾಜೀನಾಮೆ ನೀಡಬೇಕು’ ಎಂದು ಕಾಂಗ್ರೆಸ್ ಮತ್ತು ಜೆಡಿಎಸ್ ಸರ್ಕಾರದ ಮೇಲೆ ಪ್ರಹಾರ ನಡೆಸಲು ‘ಅಸ್ತ್ರ’ಗಳನ್ನು ಹರಿತ ಮಾಡಿಕೊಂಡಿವೆ.

ಇತ್ತ ಬೆಳಗಾವಿ ನಗರದಲ್ಲಿ ಉದ್ವಿಗ್ನ ಪರಿಸ್ಥಿತಿ ಮುಂದುವರೆದಿದ್ದು, ಪೊಲೀಸರು ಕಟ್ಟೆಚ್ಚರ ವಹಿಸಿದ್ದಾರೆ. ನಿಷೇಧಾಜ್ಞೆ ಮುಂದುವರಿದಿದೆ.

4ನೇ ಪುಟ ನೋಡಿ

‘ದೇಶಭಕ್ತರ ಹೆಸರಲ್ಲಿ ಕಾನೂನು ಸುವ್ಯವಸ್ಥೆ ಹಾಳುಗೆಡವದಿರಿ’



ಹುಬ್ಬಳ್ಳಿ: ‘ದೇಶ ಭಕ್ತರ ಹೆಸರಲ್ಲಿ ಕಾನೂನು ಸುವ್ಯವಸ್ಥೆ ಹಾಳು ಮಾಡುವವರನ್ನು ಯಾವುದೇ ಕಾರಣಕ್ಕೂ ಸಹಿಸುವುದಿಲ್ಲ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಎಚ್ಚರಿಕೆ ನೀಡಿದರು.

ಭಾನುವಾರ ನಗರದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ‘ಎಲ್ಲರಲ್ಲಿಯೂ ಮನವಿ ಮಾಡುತ್ತೇನೆ. ಬೇರೆ ಬೇರೆ ವಿಷಯ ತಂದು ಕಾನೂನು ಸುವ್ಯವಸ್ಥೆ ಹಾಳು ಮಾಡುವುದು ಸರಿಯಲ್ಲ. ದೇಶಭಕ್ತರಿಗೆ ಪ್ರತಿಯೊಬ್ಬರೂ ಗೌರವ ಕೊಡಬೇಕು. ಅದಕ್ಕಾಗಿಯೇ ಸಂಗೊಳ್ಳಿ ರಾಯಣ್ಣ, ಕಿತ್ತೂರು ರಾಣಿ ಚನ್ನಮ್ಮ, ಛತ್ರಪತಿ ಶಿವಾಜಿ ಅವರ ಪ್ರತಿಮೆಗಳನ್ನು ಸ್ಥಾಪಿಸಿದ್ದೇವೆ’ ಎಂದರು. ‘ಏನೇ ಹೇಳುವುದಿದ್ದರೂ ಶಾಂತವಾಗಿ ಹೇಳಬೇಕು. ಯಾವುದೇ ಕಾರಣಕ್ಕೆ ಕಾನೂನು ಸುವ್ಯವಸ್ಥೆಗೆ ಧಕ್ಕೆ ತರಬಾರದು. ಯಾರೇ ಹೋರಾಟ ಮಾಡಿದರೂ ಕಾನೂನು ಸುವ್ಯವಸ್ಥೆಗೆ ಭಂಗ ಬರದಂತೆ ನೋಡಿಕೊಳ್ಳಬೇಕು’ ಎಂದು ಹೇಳಿದರು.

ರಾಯಣ್ಣನ ಪ್ರತಿಮೆ ಪುನರ್ ಸ್ಥಾಪನೆ

ಬೆಳಗಾವಿ: ಅನಗೋಳದ ಕನಕದಾಸ ಕಾಲೊನಿಯಲ್ಲಿ ಕಿಡಿಗೇಡಿಗಳು ಭಗ್ನಗೊಳಿಸಿದ್ದ ಸಂಗೊಳ್ಳಿ ರಾಯಣ್ಣನ ಪ್ರತಿಮೆಯನ್ನು ದುರಸ್ತಿಗೊಳಿಸಿ ಭಾನುವಾರ ಮರಳಿ ಅಲ್ಲಿಯೇ ಸ್ಥಾಪಿಸಲಾಯಿತು.

ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಯುವಕ ಸಂಘ ಹಾಗೂ ರಾಯಣ್ಣ ಸೇನೆ ಕಾರ್ಯಕರ್ತರು ಪ್ರತಿಮೆ ಸ್ಥಾಪಿಸಿ ಪೂಜೆ ಸಲ್ಲಿಸಿದರು. ಬಡಾವಣೆ ಮುಖ್ಯ ದ್ವಾರದಿಂದ ಮಹಿಳೆಯರು ಕುಂಭಮೇಳದೊಂದಿಗೆ ಮೆರವಣಿಗೆ ನಡೆಸಿದರು. ಕಿತ್ತೂರು ಚನ್ನಮ್ಮ ಹಾಗೂ ರಾಯಣ್ಣನ ಪರ ಘೋಷಣೆಗಳನ್ನು ಕೂಗಿದರು.

4ನೇ ಪುಟ ನೋಡಿ

ಶಿವಾಜಿ ಪ್ರತಿಮೆಗೆ ಮಸಿ: 7 ಮಂದಿ ಬಂಧನ

ಬೆಂಗಳೂರು: ಎಂ.ಇ.ಎಸ್ ಸಂಘಟನೆಯವರು ಕನ್ನಡ ಧ್ವಜ ಸುಟ್ಟು ಹಾಕಿದ್ದಕ್ಕೆ ಪ್ರತೀಕಾರವಾಗಿ ನಗರದ ಸ್ಯಾಂಕಿ ಕೆರೆ ಬಳಿಯ ಶಿವಾಜಿ ಪ್ರತಿಮೆಗೆ ಮಸಿ ಬಳಿದಿದ್ದ ಆರೋಪದ ಮೇಲೆ ಕನ್ನಡ ಪರ ಸಂಘಟನೆಯ ಏಳು ಮಂದಿಯನ್ನು ಸದಾಶಿವನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಕರ್ನಾಟಕ ರಣಧೀರ ಪಡೆಯ 16 ಮಂದಿ ಕಾರ್ಯಕರ್ತರು ಪ್ರತಿಮೆಗೆ ಮಸಿ ಬಳಿದಿದ್ದರು. ಈ ಪೈಕಿ ಪಡೆಯ ಅಧ್ಯಕ್ಷ ಚೇತನ್ ಗೌಡ, ಗುರುದೇವ ನಾರಾಯಣ್ ಕುಮಾರ್, ವರುಣ್, ನವೀನ್ ಗೌಡ, ವಿನೋದ್, ಚೇತನ್ ಕುಮಾರ್ ಹಾಗೂ ಯೋಗೇಶ್ ಎಂಬುವರನ್ನು ಬಂಧಿಸಲಾಗಿದೆ. ಉಳಿದವರು ತಲೆಮರೆಸಿಕೊಂಡಿದ್ದಾರೆ’ ಎಂದು ಕೇಂದ್ರ ವಿಭಾಗದ ಡಿಸಿಪಿ ಎಂ.ಎನ್. ಅನುಚೇತ್ ತಿಳಿಸಿದ್ದಾರೆ.

ಕಿದಂಬಿ ಶ್ರೀಕಾಂತ್‌ಗೆ ಐತಿಹಾಸಿಕ ಬೆಳ್ಳಿ

ಯುವೆಲಾ, ಸ್ಪೇನ್ (ಪಿಟಿಐ): ಭಾರತದ ಕಿದಂಬಿ ಶ್ರೀಕಾಂತ್ ವಿಶ್ವ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನಲ್ಲಿ ಬೆಳ್ಳಿ ಪದಕ ಗೆದ್ದು ಐತಿಹಾಸಿಕ ಸಾಧನೆ ಮಾಡಿದರು. ಭಾನುವಾರ ನಡೆದ ಫೈನಲ್ ಪಂದ್ಯದಲ್ಲಿ ಸಿಂಗಪುರದ ಲೋಹ್ ಕೀನ್ ಯೂ ಎದುರು ಅವರು 21-15, 22-20ರಲ್ಲಿ ಸೋತರು. ಸೆಮಿಫೈನಲ್‌ನಲ್ಲಿ ಶ್ರೀಕಾಂತ್ ವಿರುದ್ಧ ಸೋತ ಯುವ ಆಟಗಾರ ಲಕ್ಷ್ಯ ಸೇನ್ ಕಂಚಿನ ಪದಕ ಗಳಿಸಿದರು.

11

ಚಿನಕುರಳಿ

ಪ್ರಕಾಶ್ ಶೆಟ್ಟಿ

ಬೊಮ್ಮಾಯಿಗೆ ಕೇಂದ್ರ ಸಚಿವರಾಗುವ ಯೋಗ – ನಿರಾಣಿ

ಸ್ಥಾನಮಾನ ಶಾಶ್ವತವಲ್ಲ: ಭಾವುಕರಾದ ಸಿ.ಎಂ

ಪ್ರಜಾವಾಣಿ ವಾರ್ತೆ

ಹಾವೇರಿ: ‘ಈ ಬದುಕೇ ಶಾಶ್ವತವಲ್ಲ. ನಾವು ಎಷ್ಟು ದಿನ ಇರುತ್ತೇವೋ ಅದು ಗೊತ್ತಿಲ್ಲ. ಅದರಂತೆ ಸ್ಥಾನಮಾನ ಕೂಡ ಶಾಶ್ವತವಲ್ಲ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭಾನುವಾರ ಇಲ್ಲಿ ಭಾವುಕರಾಗಿ ನುಡಿದರೆ, ‘ಬೊಮ್ಮಾಯಿ ಅವರಿಗೆ ಕೇಂದ್ರ ಸಚಿವರಾಗುವ ಯೋಗವಿದೆ’ ಎಂದು ಬೃಹತ್ ಕೈಗಾರಿಕಾ ಸಚಿವ ಮುರುಗೇಶ ನಿರಾಣಿ ಹೇಳಿದ್ದು ಚರ್ಚೆಗೆ ಗ್ರಾಸವಾಗಿದೆ.

ಶಿಗ್ಗಾವಿ ಪಟ್ಟಣದಲ್ಲಿ ಭಾನುವಾರ ವೀರರಾಣಿ ಕಿತ್ತೂರು ಚನ್ನಮ್ಮ ಕಂಚಿನ ಪುತ್ಥಳಿ ಅನಾವರಣ ಮತ್ತು ಪಂಚಮಸಾಲಿ ಸಮುದಾಯ ಭವನದ ಕಾಮಗಾರಿಗೆ ಅಡಿಗಲ್ಲು ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

‘ನಿಮ್ಮೆಲ್ಲರ ಆಶೀರ್ವಾದದಿಂದ ಈ ರಾಜ್ಯದ ಮುಖ್ಯಮಂತ್ರಿಯಾಗಿದ್ದೇನೆ. ನಾನು ನಿಮ್ಮೂರಿಗೆ ಬಂದಾಗ ರೊಟ್ಟಿ ತಿನ್ನಿಸಿದ್ದೀರಿ, ನವಣೆ ಅಕ್ಕಿ ಅನ್ನ ಮಾಡಿ ಹಾಕಿದ್ದೀರಿ. ಆ ಋಣ ತೀರಿಸಲು ಆಗೋದಿಲ್ಲ’ ಎಂದು ಬೊಮ್ಮಾಯಿ ಕೆಲಕ್ಷಣ ಗದ್ಗದಿತರಾದರು.

‘ನನಗೆ ಬಹಳ ದೊಡ್ಡ ಆಸೆಯಿಲ್ಲ. ನಿಮ್ಮ ಪ್ರೀತಿ, ವಿಶ್ವಾಸದ ಮುಂದೆ ಯಾವ ಅಧಿಕಾರ ಕೂಡ ದೊಡ್ಡದಲ್ಲ. ಭಾವನಾತ್ಮಕವಾಗಿ ಮಾತನಾಡಬಾರದು ಎಂದು ಅನಿಸಿದರೂ ಭಾವನೆಗಳು ಉಕ್ಕಿ ಬರುತ್ತಿವೆ. ಕ್ಷೇತ್ರದ ಹೊರಗಡೆ ಮಾತ್ರ ನಾನು ಸಿಎಂ. ಕ್ಷೇತ್ರದ ಒಳಗಡೆ ಬಂದಾಗ ಕೇವಲ ಬಸವರಾಜ ಬೊಮ್ಮಾಯಿಯಾಗಿ ಉಳಿಯುತ್ತೇನೆ. ಹೆಸರಿನ ಹಿಂದೆ ಇರುವ ಪದನಾಮಗಳು ಶಾಶ್ವತವಲ್ಲ’ ಎಂದು ಭಾವುಕರಾದರು.

4ನೇ ಪುಟ ನೋಡಿ

ಧಾರ್ಮಿಕ ಅಗೌರವ ಆರೋಪ: ಸಿಖ್ಖರಿಂದ ಇನ್ನೊಬ್ಬನ ಹತ್ಯೆ

ಕಪೂರ್ತಲಾ (ಪಿಟಿಐ): ಇಲ್ಲಿನ ಗುರುದ್ವಾರದಲ್ಲಿ ಭಾನುವಾರ ಸಿಖ್ಖರ ಧಾರ್ಮಿಕ ಬಾವುಟ 'ನಿಶಾನ್ ಸಾಹಿಬ್'ಗೆ ಅಗೌರವ ತೋರಿದ ಆರೋಪದಡಿ ನಿಜಾಂಪುರ ಗ್ರಾಮದಲ್ಲಿ ವ್ಯಕ್ತಿಯೊಬ್ಬರ ಮೇಲೆ ಹಲ್ಲೆ ನಡೆಸಿದ ಉದ್ರಿಕ್ತರು, ಅವರನ್ನು ಕೊಂದು ಹಾಕಿದ್ದಾರೆ.

ಅಮೃತಸರದ ಸ್ವರ್ಣಮಂದಿರದಲ್ಲಿ ಧರ್ಮಗ್ರಂಥಕ್ಕೆ ಅಗೌರವ ತೋರಿದರು ಎಂದು ವ್ಯಕ್ತಿಯೊಬ್ಬರನ್ನು ಥಳಿಸಿ ಕೊಂದು ಹಾಕಿದ ಮರುದಿನವೇ ಈ ಕೃತ್ಯವೂ ನಡೆದಿದೆ.

'ಗ್ರಾಮಸ್ಥರು ಮತ್ತು ಸಿಖ್ ಸಂಘಟನೆಯವರು ಪೊಲೀಸರ ಜೊತೆಗೆ ಸಂಘರ್ಷಕ್ಕಿಳಿದರು. ಇದರಿಂದ ಠಾಣಾಧಿಕಾರಿ ಸೇರಿ ಮೂವರು ಪೊಲೀಸರು ಗಾಯಗೊಂಡರು. ಗುರುದ್ವಾರದಲ್ಲಿ ಬಾವುಟಕ್ಕೆ ಅಪಮಾನ ಮಾಡಿದ ಯಾವುದೇ ಸೂಚನೆ ಕಂಡುಬಂದಿಲ್ಲ' ಎಂದು ಪೊಲೀಸರು ತಿಳಿಸಿದರು.

'ಅಪರಿಚಿತ ವ್ಯಕ್ತಿ ಅಡುಗೆಕೋಣೆಯಲ್ಲಿ ಚಪಾತಿ ತಿನ್ನುತ್ತಿದ್ದ. ಕಾರ್ಯಕರ್ತ ಗಮನಿಸಿದಾಗ ಓಡಲು ಯತ್ನಿಸಿದ್ದ' ಎಂದು ವ್ಯಕ್ತಿಯೊಬ್ಬರ ಹೇಳಿಕೆ ಉಲ್ಲೇಖಿಸಿ ಗುರುದ್ವಾರದ ವ್ಯವಸ್ಥಾಪಕ ಅಮರ್ ಜಿತ್ ಸಿಂಗ್ ಪೊಲೀಸರಿಗೆ ಹೇಳಿಕೆ ನೀಡಿದ್ದಾರೆ.

ಬೈಕ್‌ಗೆ ಟ್ಯಾಂಕರ್ ಡಿಕ್ಕಿ: ವೃದ್ಧ ಸಾವು

ಬೆಂಗಳೂರು: ನಾಗಸಂದ್ರ ಮೆಟ್ರೊ ನಿಲ್ದಾಣದ ಬಳಿ ಚಲಿಸುತ್ತಿದ್ದ ಬೈಕ್‌ಗೆ ಟ್ಯಾಂಕರ್‌ವೊಂದು ಡಿಕ್ಕಿ ಹೊಡೆದಿದ್ದರಿಂದ ನೆಲಮಂಗಲದ ಗಂಗಯ್ಯ (65) ಎಂಬುವರು ಮೃತಪಟ್ಟಿದ್ದಾರೆ. ಈ ಸಂಬಂಧ ಪೀಣ್ಯ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೃತರ ಸೊಸೆ ವಿಜಯಲಕ್ಷ್ಮಿ ಗಂಭೀರವಾಗಿ ಗಾಯಗೊಂಡಿದ್ದಾರೆ.

ಐಡಿಬಿಐ ಬ್ಯಾಂಕ್

58, ಮಿಷನ್ ರಸ್ತೆ, ಬೆಂಗಳೂರು–27

ಟೆಂಡರ್ ಪ್ರಕಟಣೆ

ಐಡಿಬಿಐ ಬ್ಯಾಂಕ್ ಕರ್ನಾಟಕ ಮತ್ತು ಕೇರಳದಲ್ಲಿರುವ ಬ್ಯಾಂಕಿನ ಶಾಖೆಗಳು / ಕಚೇರಿಗಳು / ಕ್ವಾರ್ಟರ್‌ಗಳಲ್ಲಿ ಸೇವೆಗಳನ್ನು ಒದಗಿಸಲು ಅರ್ಹ ಭದ್ರತಾ ಸೇವಾ ಪೂರೈಕೆದಾರರಿಂದ ಅರ್ಜಿಯನ್ನು ಆಹ್ವಾನಿಸುತ್ತದೆ. ಸಲ್ಲಿಕೆಗೆ ಕೊನೆಯ ದಿನಾಂಕ 10.01.2022. ಹೆಚ್ಚಿನ ವಿವರಗಳಿಗಾಗಿ, ದಯವಿಟ್ಟು 'ನೋಟಿಸ್‌ಗಳು ಮತ್ತು ಟೆಂಡರ್‌ಗಳು' ಅಡಿಯಲ್ಲಿ ಬ್ಯಾಂಕ್‌ನ ವೆಬ್‌ಸೈಟ್ www.idbibank.in ಗೆ ಭೇಟಿ ನೀಡಿ. (ಬ್ರೌಸರ್: ಗೂಗಲ್ ಕ್ರೋಮ್). ಮೇಲಿನವುಗಳಿಗೆ ಸಂಬಂಧಿಸಿದಂತೆ ಯಾವುದೇ ಸೇರ್ಪಡೆ/ತಿದ್ದುಪಡಿ/ ದಿನಾಂಕಗಳ ವಿಸ್ತರಣೆಯನ್ನು ಬ್ಯಾಂಕಿನ ವೆಬ್‌ಸೈಟ್‌ನಲ್ಲಿ ಮಾತ್ರ ಪೋಸ್ಟ್ ಮಾಡಲಾಗುವುದು ಮತ್ತು ದಿನಪತ್ರಿಕೆಗಳಲ್ಲಿ ಯಾವುದೇ ಪ್ರತ್ಯೇಕ ಅಧಿಸೂಚನೆಯನ್ನು ನೀಡಲಾಗುವುದಿಲ್ಲ.

ಸಹಿ/–

ದಿನಾಂಕ: 20.12.2021 ಡಿಜಿಎಂ –ಐಎಂಡಿ

ಕುಂದು ಕೊರತೆ | ಜನದನಿ

ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ಇ ಮೇಲ್ ಮಾಡಬೇಕಾದ ವಿಳಾಸ:
peoplesproblem@prajavani.co.in.
ಸಮಸ್ಯೆಗಳ ಕುರಿತ ಬರಹಗಳನ್ನು ವಾಟ್ಸ್ ಆ್ಯಪ್ (9606038256) ಸಹ ಮಾಡಬಹುದು.

ಸಿದ್ಧಗೊಂಡಿದ್ದ ಪಾದಚಾರಿ ಮಾರ್ಗ ಕೆಡವಿದರು

ಬಸವನಗುಡಿಯ ವಾಸವಿ ಜಂಕ್ಷನ್‌ನಿಂದ ಮಾಧವ ರಾವ್ ವೃತ್ತದವರೆಗಿನ ರಸ್ತೆ ಮಾರ್ಗದಲ್ಲಿ ಮೂರು ತಿಂಗಳಿನಿಂದ ವೈಟ್‌ಟಾಪಿಂಗ್ ಕಾಮಗಾರಿ ನಡೆಯುತ್ತಲೇ ಇದೆ. ತಿಂಗಳ ಹಿಂದಷ್ಟೇ ಇಲ್ಲಿ ಸುಂದರವಾದ ಪಾದಚಾರಿ ಮಾರ್ಗ ಸಿದ್ಧವಾಗಿತ್ತು. ಆದರೆ, ಜಲಮಂಡಳಿಯವರು ನೀರು ಪೂರೈಕೆ ಕೊಳವೆ ಅಳವಡಿಕೆಗಾಗಿ ಪಾದಚಾರಿ ಮಾರ್ಗವನ್ನು ಮತ್ತೆ ಕೆಡವಿದ್ದಾರೆ. ಸಾರ್ವಜನಿಕರ ಹಣವನ್ನು ಈ ರೀತಿ ಪೋಲು ಮಾಡುವುದು ಸರಿಯಲ್ಲ.

ಬಿ.ಎಸ್.ಮನೋಹರ್, ಬಸವನಗುಡಿ

ಕೆಂಪಾಪುರ ಅಗ್ರಹಾರದ ಏಳನೇ ಮುಖ್ಯರಸ್ತೆ ಹದಗೆಟ್ಟಿದೆ

ದೂಳಿನಿಂದ ಮುಕ್ತಿ ನೀಡಿ

ವಿಜಯನಗರ ವ್ಯಾಪ್ತಿಯ ಕೆಂಪಾಪುರ ಅಗ್ರಹಾರದ ಏಳನೇ ಮುಖ್ಯರಸ್ತೆಯನ್ನು ಒಳಚರಂಡಿ ಕಾಮಗಾರಿಗಾಗಿ ಆರು ತಿಂಗಳ ಹಿಂದೆ ಅಗೆಯಲಾಗಿತ್ತು. ಆದರೆ, ಸರಿಯಾಗಿ ಮುಚ್ಚದೆ ಇರುವುದರಿಂದ ರಸ್ತೆಯಲ್ಲಿ ಗುಂಡಿಗಳು ನಿರ್ಮಾಣವಾಗಿದ್ದು, ದೂಳುಮಯ ರಸ್ತೆಯಲ್ಲಿ ಸಂಚರಿಸುವ ವಾಹನ ಸವಾರರು ಹೈರಾಣಾಗಿದ್ದಾರೆ. ಅಧಿಕಾರಿಗಳಿಗೆ ಹಲವು ಬಾರಿ ದೂರು ನೀಡಿದ್ದರೂ ಯಾವುದೇ ಕ್ರಮ ಕೈಗೊಂಡಿಲ್ಲ. ವಾಹನ ಸವಾರರಿಗೆ ಯೋಗ್ಯವಾದ ರಸ್ತೆಯನ್ನು ಕಲ್ಪಿಸಿ, ದೂಳಿನಿಂದ ಮುಕ್ತಿ ನೀಡಿ.

ಎಂ.ಉಮಾಶಂಕರ ಬಾಬು, ಮಾಗಡಿ ರಸ್ತೆ

ಆರೋಗ್ಯ ಕೇಂದ್ರವೇ ಸಮಸ್ಯೆಗಳ ಆಗರ

ಚಾಮರಾಜಪೇಟೆಯ ಛಲವಾದಿ ಪಾಳ್ಯದಲ್ಲಿರುವ ಆರೋಗ್ಯ ಕೇಂದ್ರವು ಸಮಸ್ಯೆಗಳ ಆಗರವಾಗಿದೆ. ಮಳೆ ಬಂದರೆ ಆಸ್ಪತ್ರೆಯ ಚಾವಣಿಯಿಂದ ನೀರು ಸೋರಿಕೆಯಾಗುತ್ತದೆ. ಇದರಿಂದ ಗೋಡೆ ಯಾವಾಗ ಬೀಳುತ್ತದೆಯೋ ಎಂಬ ಆತಂಕದಲ್ಲೇ ಸಿಬ್ಬಂದಿ ಕಾರ್ಯನಿರ್ವಹಿಸುತ್ತಾರೆ. ವಿದ್ಯುತ್ ದೀಪಗಳು ಬೆಳಗುವುದೇ ಇಲ್ಲ. ಹೆಸರಿಗೆ ಮಾತ್ರ ನೀರಿನ ಸಂಪ್ ಇದ್ದು, ನೀರು ಪೂರೈಕೆ ವ್ಯವಸ್ಥೆಯಿಲ್ಲ. ಆಸ್ಪತ್ರೆ ಹೊರಭಾಗದ ಬೀದಿದೀಪಗಳೂ ಬೆಳಕು ನೀಡುವುದಿಲ್ಲ. ಈ ಬಗ್ಗೆ ಆಸ್ಪತ್ರೆ ಅಧಿಕಾರಿಗಳ ಹಾಗೂ ಸ್ಥಳೀಯ ಜನಪ್ರತಿನಿಧಿಗಳ ಗಮನಕ್ಕೆ ತಂದರೂ ಪ್ರಯೋಜನವಾಗಲಿಲ್ಲ. ಇದನ್ನು ಆರೋಗ್ಯ ಕೇಂದ್ರ ಎನ್ನುವ ಬದಲು 'ಅನಾರೋಗ್ಯ ಕೇಂದ್ರ' ಎಂದು ಕರೆಯುವುದೇ ಸೂಕ್ತ.

ಪ್ರಭಾಕರ್, ಚಾಮರಾಜಪೇಟೆ

ಛಲವಾದಿ ಪಾಳ್ಯದ ಸಾರ್ವಜನಿಕ ಆಸ್ಪತ್ರೆಯ ಗೋಡೆಯಲ್ಲಿ ನೀರು ಜಿನುಗುತ್ತಿದೆ

ಬಿಜೆಪಿ, ಎಸ್‌ಡಿಪಿಐ ಮುಖಂಡರು ಬಲಿ

ಕೇರಳದಲ್ಲಿ ಮತ್ತೆ ರಾಜಕೀಯ ಹತ್ಯೆ ಸರಣಿ: ಆಲಪ್ಪುಳ ಜಿಲ್ಲೆಯಲ್ಲಿ ಪ್ರಕ್ಷುಬ್ಧ ಸ್ಥಿತಿ

ಪ್ರಜಾವಾಣಿ ವಾರ್ತೆ

ತಿರುವನಂತಪುರ: ಕೇರಳದ ಆಲಪ್ಪುಳ ಜಿಲ್ಲೆಯಲ್ಲಿ ಸೋಶಿಯಲ್ ಡೆಮಾಕ್ರೆಟಿಕ್ ಪಾರ್ಟಿ ಆಫ್ ಇಂಡಿಯಾ (ಎಸ್‌ಡಿಪಿಐ) ಮತ್ತು ಬಿಜೆಪಿಯ ತಲಾ ಒಬ್ಬ ಮುಖಂಡರ ಹತ್ಯೆ ನಡೆದಿದೆ. 12 ಗಂಟೆಗಳ ಅಂತರದಲ್ಲಿ ನಡೆದಿರುವ ಈ ಹತ್ಯೆಗಳು ರಾಜಕೀಯ ಕಾರಣಕ್ಕೆ ನಡೆದಿವೆ ಎಂದು ಶಂಕಿಸಲಾಗಿದೆ.

ಹತ್ಯೆಗಳ ಬಳಿಕ ಜಿಲ್ಲೆಯಲ್ಲಿ ಪ್ರಕ್ಷುಬ್ಧ ಸ್ಥಿತಿ ಮನೆಮಾಡಿದೆ. 144ನೇ ಸೆಕ್ಷನ್ ಅಡಿ ಜಿಲ್ಲೆಯಲ್ಲಿ ಪ್ರತಿಬಂಧಕಾಜ್ಞೆ ಹೇರಲಾಗಿದೆ. ಈವರೆಗೆ ಸುಮಾರು 50 ಜನರನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಎಸ್‌ಡಿಪಿಐ ರಾಜ್ಯ ಕಾರ್ಯದರ್ಶಿ ಕೆ.ಎಸ್. ಶಾನ್ (36) ಅವರನ್ನು ಆಳಪ್ಪುಳ ಜಿಲ್ಲೆಯ ಮಣ್ಣಂಚೇರಿ ಎಂಬಲ್ಲಿ ಶನಿವಾರ ಸಂಜೆ ಹತ್ಯೆ ಮಾಡಲಾಗಿದೆ. ಅವರು ದ್ವಿಚಕ್ರ ವಾಹನದಲ್ಲಿ ಸಂಚರಿಸುತ್ತಿದ್ದರು. ಕಾರಿನಲ್ಲಿ ಬಂದ ಏಳು ಜನರು ಶಾನ್ ಅವರನ್ನು ಕೆಳಕ್ಕೆ ಬೀಳಿಸಿ, ಚೂರಿಯಿಂದ ಚುಚ್ಚಿದ್ದರು. ಅವರು ಶನಿವಾರ ರಾತ್ರಿ ಆಸ್ಪತ್ರೆಯಲ್ಲಿ ಮೃತಪಟ್ಟರು. ಅವರ ದೇಹದ ಮೇಲೆ 40ಕ್ಕೂ ಹೆಚ್ಚು ಇರಿತದ ಗಾಯಗಳಿದ್ದವು ಎನ್ನಲಾಗಿದೆ.

ಬಿಜೆಪಿ ಒಬಿಸಿ ಮೋರ್ಚಾದ ರಾಜ್ಯ ಘಟಕದ ಕಾರ್ಯದರ್ಶಿ ರಂಜಿತ್ ಶ್ರೀನಿವಾಸ್ (45) ಅವರನ್ನು ಭಾನುವಾರ ಬೆಳಿಗ್ಗೆ ಹತ್ಯೆ ಮಾಡಲಾಗಿದೆ. ಆಲಪ್ಪುಳದ ಅವರ ಮನೆಗೆ ನುಗ್ಗಿದ ಗುಂಪೊಂದು ಅವರ ಮೇಲೆ ದಾಳಿ ನಡೆಸಿತು. ರಂಜಿತ್ ಅವರ ತಾಯಿ ಮತ್ತು ಪತ್ನಿ ಈ ದಾಳಿಗೆ ಪ್ರತ್ಯಕ್ಷ ಸಾಕ್ಷಿಗಳು. ಆರೋಪಿಗಳು ಎಸ್‌ಡಿಪಿಐ ಕಾರ್ಯಕರ್ತರು, ಅವರು ಎಸ್‌ಡಿಪಿಐ ಚಿಹ್ನೆ ಇದ್ದ ಆ್ಯಂಬುಲೆನ್ಸ್‌ನಲ್ಲಿ ಬಂದಿದ್ದರು ಎನ್ನಲಾಗಿದೆ.

10 ಕಿ.ಮೀ. ವ್ಯಾಪ್ತಿಯೊಳಗಿನ ಪ್ರದೇಶದಲ್ಲಿ ಈ ಎರಡೂ ಘಟನೆಗಳು ನಡೆದಿವೆ. ಹಾಗಾಗಿ ಇದು ರಾಜಕೀಯ ಪ್ರತೀಕಾರದ ಹತ್ಯೆ ಎಂಬ ಬಲವಾದ ಶಂಕೆ ಇದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಪ್ರಕರಣದ ತನಿಖೆಗೆ ವಿಶೇಷ ಪೊಲೀಸ್ ತಂಡವನ್ನು ರಚಿಸಲಾಗಿದೆ. ಜಿಲ್ಲೆಯ ಸೂಕ್ಷ್ಮ ಪ್ರದೇಶಗಳಲ್ಲಿ ಭಾರಿ ಪೊಲೀಸ್ ಬಂದೋಬಸ್ತ್ ಒದಗಿಸಲಾಗಿದೆ.

ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು ಈ ಹತ್ಯೆಗಳನ್ನು ಖಂಡಿಸಿದ್ದಾರೆ. 'ಈ ಹತ್ಯೆಗಳ ಹಿಂದಿರುವ ಅಪರಾಧಿಗಳನ್ನು ಬಂಧಿಸಲು ಪೊಲೀಸರು ಕ್ರಮ ಕೈಗೊಳ್ಳುತ್ತಾರೆ. ಈ ರೀತಿಯ ಅಮಾನವೀಯ ಕೃತ್ಯಗಳು ದೇಶಕ್ಕೆ ಮಾರಕ. ಇಂಥ ಸಂಘಟನೆಗಳು ಮತ್ತು ಅವರ ದ್ವೇಷಪೂರ್ಣ ಚಟುವಟಿಕೆಗಳನ್ನು ಜನರು ದೂರ ಇಡಬೇಕು' ಎಂದಿದ್ದಾರೆ.

ರಂಜಿತ್ ಅವರ ಕೊಲೆಯನ್ನು ನಾಚಿಗೇಡಿನ ಕೃತ್ಯ ಎಂದು ಕರೆದಿರುವ ವಿದೇಶಾಂಗ ಮತ್ತು ಸಂಸದೀಯ ವ್ಯವಹಾರಗಳ ಖಾತೆಯ ರಾಜ್ಯ ಸಚಿವ ವಿ. ಮುರಳೀಧರನ್, 'ಎಸ್‌ಡಿಪಿಐ ನಾಯಕನ ಹತ್ಯೆ ನಡೆದ ಕೂಡಲೇ ಪೊಲೀಸರು ಸರಿಯಾದ ಕ್ರಮಗಳನ್ನು ಕೈಗೊಂಡಿದ್ದರೆ ಪರಿಸ್ಥಿತಿ ಕೈ ಮೀರುತ್ತಿರಲಿಲ್ಲ. ಎಸ್‌ಡಿಪಿಐ ನಾಯಕನ ಹತ್ಯೆ ಬಳಿಕ ರಾಜ್ಯ ಸರ್ಕಾರ ಮತ್ತು ಪೊಲೀಸರು ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳದಿರುವುದೇ ರಂಜಿತ್ ಹತ್ಯೆಗೆ ಕಾರಣ' ಎಂದಿದ್ದಾರೆ.

ಹತ್ಯೆಗಳಿಗೆ ಸಂಬಂಧಿಸಿದಂತೆ ಎಸ್‌ಡಿಪಿಐ ಮತ್ತು ಆರ್‌ಎಸ್‌ಎಸ್ ನಾಯಕರು ಪರಸ್ಪರ ಆರೋಪ–ಪ್ರತ್ಯಾರೋಪ ಮಾಡಿಕೊಂಡಿದ್ದಾರೆ.

ಓಮೈಕ್ರಾನ್ ಪ್ರಕರಣ: 151ಕ್ಕೆ ಏರಿಕೆ

ನವದೆಹಲಿ (ಪಿಟಿಐ): ಭಾರತದಲ್ಲಿ ಕೊರೊನಾ ವೈರಾಣುವಿನ ಹೊಸ ರೂಪಾಂತರ ತಳಿ ಓಮೈಕ್ರಾನ್ ಪ್ರಕರಣಗಳ ಸಂಖ್ಯೆ ಭಾನುವಾರ 151ಕ್ಕೆ ಏರಿದೆ. ಬ್ರಿಟನ್‌ನಿಂದ ಇತ್ತೀಚೆಗೆ ಬಂದ ಅನಿವಾಸಿ ಭಾರತೀಯ ಮತ್ತು ಹದಿಹರೆಯದ ಒಬ್ಬ ಬಾಲಕನಲ್ಲಿ ಸೋಂಕು ದೃಢಪಟ್ಟಿದೆ.

ಈಗ, 11 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶದಲ್ಲಿ ಓಮೈಕ್ರಾನ್ ಪ್ರಕರಣಗಳು ಇವೆ. ಮಹಾರಾಷ್ಟ್ರ (54), ದೆಹಲಿ (22), ರಾಜಸ್ಥಾನ (17), ಕರ್ನಾಟಕ (14), ತೆಲಂಗಾಣ (20), ಗುಜರಾತ್ (9), ಕೇರಳ (11) ಮತ್ತು ಆಂಧ್ರ ಪ್ರದೇಶ, ಚಂಡೀಗಡ, ತಮಿಳುನಾಡು, ಪಶ್ಚಿಮ ಬಂಗಾಳದಲ್ಲಿ ತಲಾ ಒಂದೊಂದು ಪ್ರಕರಣಗಳು ದೃಢಪಟ್ಟಿವೆ. ಓಮೈಕ್ರಾನ್‌ನ ಮೊದಲ ಪ್ರಕರಣವು ಕರ್ನಾಟಕದಲ್ಲಿ ಇದೇ 2ರಂದು ದೃಢಪಟ್ಟಿತ್ತು.

ಸಂಡೂರು ತಹಶೀಲ್ದಾರ್ ರಶ್ಮಿ ವರ್ಗಾವಣೆ

ಭೂಕಬಳಿಕೆ ತಡೆದಿದ್ದಕ್ಕೆ ಶಿಕ್ಷೆ?

ಪ್ರಜಾವಾಣಿ ವಾರ್ತೆ

ಪ್ರಜಾವಾಣಿ ವಿಶೇಷ

ಬಳ್ಳಾರಿ: 'ಮಾಜಿ ಸಚಿವ ಸಂತೋಷ್ ಲಾಡ್ ಮತ್ತು ಅವರ ಕುಟುಂಬದ ಸದಸ್ಯರು ಬಳ್ಳಾರಿ ಜಿಲ್ಲೆ ಸಂಡೂರು ತಾಲ್ಲೂಕು ತೋರಣಗಲ್ಲು ಹೋಬಳಿ ಮಾಳಾಪುರ ಗ್ರಾಮದ ಸರ್ವೆ ನಂಬರ್ 123ರಲ್ಲಿ ಹೊಂದಿದ್ದಾರೆನ್ನಲಾದ 47.63 ಎಕರೆ ಸರ್ಕಾರಿ ಭೂಮಿ ಮಂಜೂರಾತಿ ರದ್ದುಪಡಿಸುವಂತೆ ಶಿಫಾರಸು ಮಾಡಿದ್ದೇ ಸಂಡೂರು ತಹಶೀಲ್ದಾರ್ ಎಚ್.ಜೆ. ರಶ್ಮಿ ಅವರ ತಲೆದಂಡಕ್ಕೆ ಕಾರಣ' ಎಂಬ ಆರೋಪ ಕೇಳಿ ಬರುತ್ತಿದೆ.

ರಶ್ಮಿ, 2021ರ ಆಗಸ್ಟ್ 2ರಂದು ಬಳ್ಳಾರಿ ಸಹಾಯಕ ಆಯುಕ್ತರಿಗೆ ವರದಿ ಸಲ್ಲಿಸಿ, ಈ ಜಮೀನು ಮಂಜೂರಾತಿ ರದ್ದುಪಡಿಸುವಂತೆ ಶಿಫಾರಸು ಮಾಡಿದ್ದರು. ತಹಶೀಲ್ದಾರ್ ಮೇಲೆ ಕಾಂಗ್ರೆಸ್ ಶಾಸಕರು ಹಗೆ ಸಾಧಿಸುವುದಕ್ಕೆ ಇದೇ ಪ್ರಮುಖ ಕಾರಣ ಎಂದು ಹೇಳಲಾಗುತ್ತಿದೆ. ಎ.ಸಿ ಅವರಿಗೆ ರಶ್ಮಿ ಸಲ್ಲಿಸಿರುವ ವರದಿಯ ಪ್ರತಿ 'ಪ್ರಜಾವಾಣಿ'ಗೆ ಲಭ್ಯವಾಗಿದೆ.

ವರದಿಯಲ್ಲಿ ಏನಿದೆ?: ಸರ್ಕಾರದ ದಾಖಲೆಗಳಲ್ಲಿ ಮಾಳಾಪುರ ಸರ್ವೆ ನಂಬರ್ 123ರ 47.63 ಎಕರೆ ಜಮೀನು ಸರ್ಕಾರದ್ದು ಎಂದು ನಮೂದಾಗಿದೆ. 1968–69ನೇ ಸಾಲಿನ ಕೈಬರಹದ ಪಹಣಿ ಕಾಲಂ ಸಂಖ್ಯೆ 9ರಲ್ಲಿ 'ಎಡಬ್ಲ್ಯು'(ಬಂಜರು ಭೂಮಿ) ಎಂದು ನಮೂದಾಗಿದೆ. 1982ರ ವರೆಗಿನ ಕೈಬರಹದ ಪಹಣಿಯಲ್ಲೂ ಇದೇ ಪ್ರಸ್ತಾಪವಿದೆ. 1982–83ನೇ ಸಾಲಿನ ಕೈಬರಹದ ಪಹಣಿ ಪರಿಶೀಲಿಸಿದಾಗ ಸರ್ವೆ ನಂಬರ್ 123ರ ಜಮೀನು 47.63 ಎಕರೆ ವಿಸ್ತೀರ್ಣ 'ಹನುಮನ ಮಗ ಹೊನ್ನೂರ' ಎಂಬುವವರ ಹೆಸರಿಗೆ ಖಾತೆ ಆಗಿರುತ್ತದೆ. ಆ ಸಾಲಿನ ಪಹಣಿಯಲ್ಲಿ ಹಕ್ಕು ಬದಲಾವಣೆ ಸಂಖ್ಯೆ ನಮೂದಾಗಿರುವುದಿಲ್ಲ. ಖಾತೆ ಬದಲಾವಣೆ ಹಾಗೂ ಜಮೀನು ಮಂಜೂರಾದ ದಾಖಲೆ ಲಭ್ಯವಿರುವುದಿಲ್ಲ ಎಂದು ವರದಿಯಲ್ಲಿ ಹೇಳಿದ್ದಾರೆ.

1982–83ರಿಂದ 1990–91ರವರೆಗಿನ ಕೈಬರಹದ ಪಹಣಿಯಲ್ಲಿ 'ಹನುಮನ ಮಗ ಹೊನ್ನೂರ' ಅವರ ಹೆಸರಿನಲ್ಲಿ ಖಾತೆ ಮುಂದುವರಿದಿದೆ. ಆದರೆ, 1992–93ರಿಂದ 1996–97ರ ಕೈಬರಹದ ಪಹಣಿ ಕಾಲಂ ನಂಬರ್ 9ರಲ್ಲಿ ಅಶೋಕ್ ಲಾಡ್, ವಿನಾಯಕ ಲಾಡ್, ಸಂತೋಷ್ ಲಾಡ್, ಶಿವಾಜಿ ರಾವ್ ಪೋಳ್, ರೂಪಾ ಯು. ಲಾಡ್ ಅವರ ಹೆಸರಿಗೆ ಖಾತೆ ಬದಲಾವಣೆ ಆಗಿರುತ್ತದೆ. ಇವರೆಲ್ಲರೂ ಹೊನ್ನೂರ ಅವರಿಂದ ಜಮೀನನ್ನು ಕ್ರಯಕ್ಕೆ ಪಡೆದಿದ್ದು, ತದನಂತರ ಹಕ್ಕು ಬದಲಾವಣೆ ಆಗಿರುತ್ತದೆ ಎಂದು ವರದಿಯಲ್ಲಿ ತಿಳಿಸಿದ್ದಾರೆ.

ಆದರೆ, ಜಮೀನಿನ ಸ್ವಾಧೀನಾನುಭವದಲ್ಲಿ ಈರಮ್ಮ, ಹೊನ್ನೂರಸ್ವಾಮಿ, ಮಾರಕ್ಕ, ಬಸಾಪುರ ಹನುಮಂತ, ದೊಡ್ಡ ಮಾರಣ್ಣ, ಚೌಡಮ್ಮ, ಲಕ್ಷ್ಮೀ, ಮಾರಕ್ಕ, ಕಾಶಣ್ಣ, ಮಹೇಶ, ಮಾರಣ್ಣ, ಜಗದೀಶ, ದುರುಗಮ್ಮ, ಓದಣ್ಣ, ಅಲ್ಲಾಭಕ್ಷಿ ಸೇರಿದಂತೆ 16 ರೈತರಿದ್ದಾರೆ. ಆದ್ದರಿಂದ ಸರ್ವೆ ನಂಬರ್ 123ರ 47.63 ಎಕರೆ ಜಮೀನು ಕೇವಲ ಒಬ್ಬ ರೈತನ ಹೆಸರಿಗೆ ಮಂಜೂರಾಗಿರುವುದು ಭೂ ಮಂಜೂರಾತಿ ಅಧಿನಿಯಮದ ಉಲ್ಲಂಘನೆ ಆಗಿರುತ್ತದೆ ಎಂದು ತೋರಣಗಲ್ಲು ಕಂದಾಯ ನಿರೀಕ್ಷಕರು ವರದಿ ನೀಡಿದ್ದರು. ಈ ವರದಿ ಆಧರಿಸಿ ಜಮೀನು ಮಂಜೂರಾತಿ ರದ್ದತಿಗೆ ತಹಶೀಲ್ದಾರ್ ಶಿಫಾರಸು ಮಾಡಿದ್ದರು.

ಸರ್ಕಾರ ಭೂಮಿ ಕೊಟ್ಟಿದ್ದಲ್ಲ: ಲಾಡ್

'ಮಾಳಾಪುರ ಗ್ರಾಮದಲ್ಲಿರುವ 47 ಎಕರೆ ಸರ್ಕಾರದಿಂದ ಲಾಡ್ ಕುಟುಂಬಕ್ಕೆ ಕೊಟ್ಟಿದ್ದಲ್ಲ. ನಮ್ಮ ಸಹೋದರ ಅಕ್ಷಯ್ ಲಾಡ್ ಅವರು ಗ್ರಾಮದ ಜಮೀನಿನ ಒಡೆಯ ಹೊನ್ನೂರಪ್ಪನವರಿಂದ ಲಾಡ್ ಕುಟುಂಬದ ಸದಸ್ಯರ ಹೆಸರಿನಲ್ಲಿ ಖರೀದಿಸಿದ್ದಾರೆ. ಈ ಕುರಿತು ಸೇಲ್ ಡೀಡ್ ಆಗಿದೆ. ಇದರ ವಿಚಾರ ನ್ಯಾಯಾಲಯದಲ್ಲಿದೆ. ಇದಕ್ಕೂ ಶಾಸಕ ಈ. ತುಕಾರಾಂ ಅವರಿಗೂ ಯಾವುದೇ ಸಂಬಂಧವಿಲ್ಲ. ಶಾಸಕರ ಹಕ್ಕುಚ್ಯುತಿಯಾಗಿರುವುದನ್ನು ಗಮನಿಸಿ, ಸರ್ಕಾರವೇ ತಹಶೀಲ್ದಾರ್ ಅವರನ್ನು ವರ್ಗಾಯಿಸಿದೆ' ಎಂದು ಮಾಜಿ ಸಚಿವ ಸಂತೋಷ ಲಾಡ್ ಸ್ಪಷ್ಟನೆ ನೀಡಿದ್ದಾರೆ.

ಲಾಡ್ ಅವರ ಹಿತಾಸಕ್ತಿ ರಕ್ಷಣೆ ಮಾಡುವ ಉದ್ದೇಶದಿಂದ ಸರ್ಕಾರದ ಮೇಲೆ ಒತ್ತಡ ಹೇರಿ, ಒಳ್ಳೆಯ ಅಧಿಕಾರಿಯ ವಿರುದ್ಧ ಕ್ರಮ ಕೈಗೊಳ್ಳುವಂತೆ ಮಾಡಲಾಗಿದೆ

ವಿ.ಎಸ್. ಶಿವಶಂಕರ್, ಪ್ರಾಂತ ರೈತ ಸಂಘದ ಜಿಲ್ಲಾ ಘಟಕದ ಅಧ್ಯಕ್ಷ

ಸಂಸದರ ಅಮಾನತು: ಇಂದು ಸಭೆ

ಪ್ರಜಾವಾಣಿ ವಾರ್ತೆ

ನವದೆಹಲಿ: ರಾಜ್ಯಸಭೆಯ 12 ಸಂಸದರನ್ನು ಅಧಿವೇಶನದಿಂದ ಅಮಾನತುಗೊಳಿಸಿದ ನಂತರ ಉದ್ಭವಿಸಿರುವ ಬಿಕ್ಕಟ್ಟನ್ನು ಶಮನಗೊಳಿಸಲು ಕೇಂದ್ರ ಸರ್ಕಾರ ಮುಂದಾಗಿದೆ.

ಈ ಸಂಬಂಧ ಸೋಮವಾರ ಸಭೆಯನ್ನು ಆಯೋಜಿಸಿರುವ ಸರ್ಕಾರ, ಐದು ವಿರೋಧ ಪಕ್ಷಗಳ ಸಭಾನಾಯಕರನ್ನು ಸಭೆಗೆ ಆಹ್ವಾನಿಸಿದೆ. ಬೆಳಿಗ್ಗೆ 10ಕ್ಕೆ ಸಭೆ ನಿಗದಿಯಾಗಿದೆ. ಆದರೆ, ಸರ್ಕಾರದ ಈ ಆಹ್ವಾನವನ್ನು ವಿರೋಧ ಪಕ್ಷಗಳ ನಾಯಕರು ತಿರಸ್ಕರಿಸಿದ್ದಾರೆ.

ಸಚಿವ ಪ್ರಲ್ಹಾದ ಜೋಶಿ ಅವರು, ಈ ಸಂಬಂಧ ಕಾಂಗ್ರೆಸ್, ಟಿಎಂಸಿ, ಸಿಪಿಎಂ, ಶಿವಸೇನಾ ಹಾಗೂ ಸಿಪಿಐ ಪಕ್ಷಗಳ ಸಭಾನಾಯಕರಿಗೆ ಪತ್ರ ಬರೆದಿದ್ದಾರೆ.

ಕೆಲಸದ ಸ್ಥಳಗಳಲ್ಲಿ ಲೈಂಗಿಕ ದೌರ್ಜನ್ಯ ಪ್ರಕರಣಗಳು

ವಿಲೇವಾರಿಯಲ್ಲಿ ಕರ್ನಾಟಕ ಮುಂಚೂಣಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಅಧಿಕಾರಿಗಳ ವಿರುದ್ಧ ದಾಖಲಾಗಿದ್ದ, ಕೆಲಸದ ಸ್ಥಳಗಳಲ್ಲಿ ಲೈಂಗಿಕ ಕಿರುಕುಳ ಪ್ರಕರಣಗಳಲ್ಲಿ ಗರಿಷ್ಠ ಪ್ರಕರಣಗಳನ್ನು ಕರ್ನಾಟಕವು ವಿಲೇವಾರಿ ಮಾಡಿದೆ ಎಂದು ಸರ್ಕಾರ ನೀಡಿದ ಅಂಕಿ ಅಂಶಗಳು ಹೇಳಿವೆ. ಕರ್ನಾಟಕದಲ್ಲಿ ಇಂತಹ ಪ್ರಕರಣಗಳ ವಿಲೇವಾರಿ ಪ್ರಮಾಣವು ಶೇ 89ರಷ್ಟು ಇದೆ. 2020–21ರಲ್ಲಿ ಕರ್ನಾಟಕದಲ್ಲಿ ಅಧಿಕಾರಿಗಳ ವಿರುದ್ಧ 56 ಪ್ರಕರಣಗಳು ದಾಖಲಾಗಿದ್ದವು. ಅವುಗಳ ಪೈಕಿ 50 ಪ್ರಕರಣಗಳು ವಿಲೇವಾರಿ ಆಗಿವೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯವು ಸಂಸತ್ತಿಗೆ ನೀಡಿದ ಮಾಹಿತಿಯಲ್ಲಿ ಹೇಳಲಾಗಿದೆ.

ಮಹಾರಾಷ್ಟ್ರದಲ್ಲಿ ಇಂತಹ ಪ್ರಕರಣಗಳ ವಿಲೇವಾರಿ ಪ್ರಮಾಣವು ಶೇ 21ರಷ್ಟು ಮಾತ್ರ ಇದೆ. ಇದು ದೇಶದಲ್ಲಿಯೇ ಕನಿಷ್ಠ ಪ್ರಮಾಣ. ಈ ರಾಜ್ಯದಲ್ಲಿ ಗರಿಷ್ಠ ಅಂದರೆ 102 ಪ್ರಕರಣಗಳು ದಾಖಲಾಗಿದ್ದವು. 22 ಪ್ರಕರಣಗಳನ್ನು ಮಾತ್ರ ವಿಲೇವಾರಿ ಮಾಡಲಾಗಿದೆ. ದೆಹಲಿಯಲ್ಲಿ ಕೆಲಸದ ಸ್ಥಳದಲ್ಲಿ ಲೈಂಗಿಕ ಕಿರುಕುಳದ 62 ಪ್ರಕರಣಗಳು ದಾಖಲಾಗಿದ್ದವು. ಅವುಗಳ ಪೈಕಿ 21 ಪ್ರಕರಣ ವಿಲೇವಾರಿ ಆಗಿವೆ. ಪ್ರಮಾಣವು ಶೇ 34ರಷ್ಟು ಇದೆ.

ಅತಿ ಹೆಚ್ಚು ಜನಸಂಖ್ಯೆ ಹೊಂದಿರುವ ಉತ್ತರ ಪ್ರದೇಶದಲ್ಲಿ 2017ರಿಂದ ಈವರೆಗೆ 92 ಪ್ರಕರಣಗಳು ದಾಖಲಾಗಿದ್ದವು. 74 ವಿಲೇವಾರಿ ಆಗಿದ್ದು, ಪ್ರಮಾಣವು ಶೇ 80ರಷ್ಟಿದೆ.

ಲೋಕಸಭೆಯ ಹಲವು ಸಂಸದರು ಕೇಳಿದ ಪ್ರಶ್ನೆಗಳಿಗೆ ಪ್ರತಿಯಾಗಿ ಸಚಿವಾಲಯವು ಈ ಮಾಹಿತಿಯನ್ನು ನೀಡಿತ್ತು. ಸಂಸದರಾದ ಮೇನಕಾ ಗಾಂಧಿ, ರಾಜಾ ಅಮರೇಶ್ವರ ನಾಯಕ, ಸುಕಾಂತಾ ಮಜುಂದಾರ್, ಜನಾರ್ದನ ಸಿಂಗ್ ಸಿಗ್ರಿವಾಲ್, ವಿನೋದ್ ಕುಮಾರ್ ಸೋನ್ಕರ್ ಮತ್ತು ಭೋಲಾ ಸಿಂಗ್ ಅವರು ಪ್ರಶ್ನೆ ಕೇಳಿದ್ದರು.

ಕೆಲಸದ ಸ್ಥಳದಲ್ಲಿ ನಡೆಯುವ ಲೈಂಗಿಕ ದೌರ್ಜನ್ಯವನ್ನು ತಡೆಗಟ್ಟುವ ಸಲುವಾಗಿ, 'ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯ (ತಡೆ, ನಿಷೇಧ ಮತ್ತು ಪರಿಹಾರ) ಕಾಯ್ದೆ–2013ಯ ಅಡಿ 'ಸೆಕ್ಸುಯಲ್ ಹೆರಾಸ್‌ಮೆಂಟ್ ಎಲೆಕ್ಟ್ರಾನಿಕ್ ಬಾಕ್ಸ್ (ಶಿ–ಬಾಕ್ಸ್)' ಎಂಬ ಆನ್‌ಲೈನ್ ದೂರು ನೀಡಿಕೆ ವ್ಯವಸ್ಥೆಯನ್ನು ಆರಂಭಿಸಲಾಗಿತ್ತು. 2017ರ ನಂತರ ಈ ವ್ಯವಸ್ಥೆ ಜಾರಿಗೆ ಬಂದಿದ್ದು, ಆನಂತರ ದಾಖಲಾದ ದೂರುಗಳ ಮಾಹಿತಿ ಇದು ಎಂದು ಸರ್ಕಾರ ಹೇಳಿದೆ.

'ಶಿ–ಬಾಕ್ಸ್ ಮೂಲಕ ದೂರು ದಾಖಲಿಸಿದ ತಕ್ಷಣ ಅದು, ಸಂಬಂಧಿತ ಪ್ರಾಧಿಕಾರಕ್ಕೆ ವರ್ಗಾವಣೆಯಾಗುತ್ತದೆ. ಶಿ–ಬಾಕ್ಸ್ ಮೂಲಕ ಬಂದ ದೂರಿನ ವಿರುದ್ಧ ಕ್ರಮ ತೆಗೆದುಕೊಳ್ಳುವ ಮತ್ತು ಅದರ ಪ್ರಗತಿಯ ಸ್ಥಿತಿಯನ್ನು ಕಾಲಕಾಲಕ್ಕೆ ಬಹಿರಂಗಪಡಿಸುವ ಹೊಣೆ ಸಂಬಂಧಿತ ಪ್ರಾಧಿಕಾರದ್ದೇ ಆಗಿರುತ್ತದೆ' ಎಂದು ಸರ್ಕಾರವು ತನ್ನ ಉತ್ತರದಲ್ಲಿ ವಿವರಿಸಿದೆ.

'ಸದ್ಯಕ್ಕೆ ಈ ವ್ಯವಸ್ಥೆಯು ರಾಜ್ಯ ಸರ್ಕಾರಿ ಮತ್ತು ಕೇಂದ್ರ ಸರ್ಕಾರಿ ನೌಕರರಿಗೆ ಸಂಬಂಧಿಸಿದ ದೂರುಗಳನ್ನು ಮಾತ್ರ ನಿರ್ವಹಣೆ ಮಾಡುತ್ತಿದೆ. ಇದನ್ನು ಖಾಸಗಿ ಕಂಪನಿಗಳಿಗೆ ವಿಸ್ತರಿಸುವ ಯೋಚನೆಯೂ ಇದೆ' ಎಂದು ಸರ್ಕಾರವು ಹೇಳಿದೆ.

ಅಂಕಿ-ಅಂಶಗಳು

46% ಇಂತಹ ಪ್ರಕರಣಗಳ ವಿಲೇವಾರಿಯ ರಾಷ್ಟ್ರೀಯ ಸರಾಸರಿ

708 ದೇಶದಲ್ಲಿ ದಾಖಲಾಗಿದ್ದ ಒಟ್ಟು ಪ್ರಕರಣಗಳು

327 ವಿಲೇವಾರಿಯಾದ ಪ್ರಕರಣಗಳ ಸಂಖ್ಯೆ

ಪ್ರಜಾವಾಣಿ **ಕ್ಲಾಸಿಫೈಡ್ಸ್** ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

Form No. 22
General Notice in respect of Interlocutary Application
IN THE HIGH COURT OF KARNATAKA AT BENGALURU
WRIT APPEAL NO. 6902 / 2013 (LR)
(SUBSTITUTED SERVICE OF NOTICE TO THE RESPONDENT NO. 5 (j) BY WAY OF PAPER PUBLICATION VIDE COURT ORDER DATED 30.11.2021)

Appellants
SRI. NARAYANAPPA
S/o DODDAMUNISHAMAPPA
SINCE DECEASED BY HIS LRS
1. SMT. SANDHYA DEVI
Aged About 60 Years
D/o Late Narayanappa
W/o Sri Gunduramaiah R/a Kudulu Village Madiwala Post, Anekal Tq Bengaluru District, Bengaluru-560 068.
AND OTHERS
BY SRI.K.SHASHIKIRAN SHETTY, ADVOCATE FOR APPELLANTS
Vs
Respondents
1. THE STATE OF KARNATAKA REP. BY ITS CHIEF SECRETARY VIDHANA SOUDHA DR. AMBEDKAR VEEDHI, BENGALURU-560 001.
AND OTHERS.
[G.A. for R-1 TO R-3 VCO dated 17.06.2015, service of notice to R-4 is dispensed with Sri.R.Bhadrinath, Advocate for R5(f), R5(g) & R6 (VK filed) Sri.R.Shyama, Hemalatha. R.R, Advocates for R7 Sri.U.R.Nayak, Advocate for R8 R5(a), R5(b), R5(d), R5(e), R5(h) & R5(i) are served VCO dated 02.01.2020 R5 (c) is served)
To,
RESPONDENT NO 5 (j)
5 (j) SMT. K.SARASWATHAMMA
Aged About 53 Years
D/o Late Krishnappa
R/at Ramagondanahalli Village
Ramagondanahalli Village Post
Near Marama Temple Varhtur Hobli
HAL Main Road, K. R. Puram,
Bengaluru East Taluk

Whereas the above named SRI.NARAYANAPPA, SINCE DECEASED BY HIS LR's SMT. SANDHYA DEVI has filed Writ Appeal u/s 4 of The Karnataka High Court Act, 1961, praying to set aside the order dated 27.08.2013 passed in W.P.No.1671/2007.
Notice is hereby given to you to appear in this Court in person or through an advocate or through someone duly authorised to act for you in this matter on 25.01.2022 at 10.30 A.M. to show cause why the application should not be allowed. If you fail to appear, the application will be dealt with, heard and decided in your absence.
Issued under my hand and the seal of this court on TUESDAY THE 30TH DAY OF NOVEMBER 2021.
By order of the Court
Sd/-
Assistant Registrar
Place: Bangalore
Date: 10-12-2021

JOB OPPORTUNITIES

Teachers/ Professors

LECTURERS WANTED
PANCHAMI COLLEGE OF LAW
Sy. No. 80/1, Chikka Kodigehalli, Magadi Road, (Near Podar International School) Kodigehalli Post, Bangalore-560112.
Contact : 9880228653 (Principal) 9343799528 (Secretary)
1. Invites Applications for Full-Time faculty for Law. Qualification - LL.M, - No. of Post - 05. Knowledge of Kannada is Mandatory
2. Computer operator with knowledge of accounts and typing (English and Kannada) No. of Post - 01
Interested candidates may submit their resume to our office in person or mail the same to contact@panchamicollegeoflaw.com on or before 27/12/2021 5.00 pm

Engg/ Production Technical

URGENTLY WANTED experienced QA, QC personnel for Electromagnetic products supplied for Defence and Aerospace. Minimum experience of 10 years. Very competitive remuneration. Vita Technology Pvt. Ltd., Contact: 7899752257 / 9686203434 vitatech@vitatechindia.com

CONNECT

ಬೆಂಗಳೂರಿನ ನಾಗರಭಾವಿಯಲ್ಲಿ ಮಾರಾಟ
ಕಾಂಚೀಪುರಂ ಎ.ಜಿ. ಬಾಬು ಸಾಹ್ ರೇಷ್ಮೆ ಸೀರೆ ವ್ಯಾಪಾರಿಗಳು
ಮೇರಿ ಕ್ರಿಸ್‌ಮಸ್, ಹೊಸ ವರ್ಷ ಮತ್ತು ಸಂಕ್ರಾಂತಿ ಹಬ್ಬದ ಮಾರಾಟ
ತೆರಿಗೆ ಭವನ
6/9, 11ನೇ ಬ್ಲಾಕ್, ನಾಗರಭಾವಿ 2ನೇ ಹಂತ, ನಾಗರಭಾವಿ, ಬೆಂಗಳೂರು–560072. ಮೊ. : 6385697571
ದಿನಾಂಕ: 20,21,22,23,24 & 25ನೇ ಡಿಸೆಂಬರ್ 2021
ಕೊನೆಯ ದಿನ ಸಂಜೆ 5.00 ಗಂಟೆಗೆ ಮುಕ್ತಾಯ
ಬೆಳಿಗ್ಗೆ 11.00 ರಿಂದ ರಾತ್ರಿ 7.00 ರವರೆಗೆ
ಯಾವುದೇ ವಿನಿಮಯವಿಲ್ಲ, ಹಿಂತಿರುಗಿಸುವುದಿಲ್ಲ
ಮಾಸ್ಕ್ ಕಡ್ಡಾಯ
ಮಕ್ಕಳಿಗೆ ಹಾಗೂ 60 ವರ್ಷಕ್ಕಿಂತ ಮೇಲ್ಪಟ್ಟ ವ್ಯಕ್ತಿಗಳಿಗೆ ಪ್ರವೇಶವಿಲ್ಲ
ಒಂದು ಬಾರಿಗೆ 50 ಜನರಿಗೆ ಮಾತ್ರ ಪ್ರವೇಶ
ಕೈಚೀಲ ಮತ್ತು ಸಾಮಾನುಗಳನ್ನು ಒಳಗೆ ಅನುಮತಿಸಲಾಗುವುದಿಲ್ಲ
ನಮ್ಮ ಚಾನೆಲ್ ಅನ್ನು ಸಬ್‌ಸ್ಕ್ರೈಬ್ ಮಾಡಿ ಎ.ಜಿ. ಬಾಬು ಸಾಹ್ YouTube
ಹೊಸ ಮಾರಾಟ ಮತ್ತು ಮಾಹಿತಿಗಾಗಿ ಬೆಲ್ ಐಕಾನ್ ಅನ್ನು ಒತ್ತಲು ಮರೆಯದಿರಿ

Walk-in

SWIGGY FOOD DELIVERY APP
EXCITING JOB OPPORTUNITY IN BANGALORE !
₹ 20,000 to 25,000 Per Month
We want Delivery Executives
Full Time & Part Time
Weekly Payouts
Flexible Working Hours
Walk-in Interview
#6, AVS Compound, 80 ft Road, Koramangala, Blr-34
Near Sony Signal, GKB Opticals
Interested? Call: 080-45687736

Part-Time Jobs

REPUTED MNC Company Work From Home to Earn 30K to 35K at Malleswaram.: 7019215243/ 9886641282

RENTAL PROPERTIES

Accommodation Available

Flats

FLAT FOR Rent New 3 Bedroom apartment First Floor Kuvempunagar Apollo Hospital Main Road Mysore Contact 9845854588

OTHERS

Auction Sale

UNDER INSTRUCTION from National Institute of Animal Nutrition & Physiology, Adugodi, Bangalore-560030, auction will be held on 22.12.2021 at 11.00 am, for dispose of old items by public auction in NIANP Campus by Royal Auctioneers.

BUSINESS

Business Offers

Finance

NRI'S INVESTMENT And Finance Available On Low Interest Against Properties, Land & Building, Sites, Flats, Converted & Agriculture Lands Call: 7411265189

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

DH Classifieds
BOOK YOUR AD FOR SUNDAY & GET 50% OFF ON WEEKDAYS
For Lineage & Single/ Multi Column Classifieds Display ads
For more information contact:
9880856233 /9845114560
9886213331

ಪ್ರಥಮ ರ್‍ಯಾಂಕ್ ಪಡೆದ (ಎಡದಿಂದ) ಜಿ.ಎಸ್. ಗಣೇಶಮೂರ್ತಿ, ಆರ್.ಕೆ. ರಿತುಕುಮಾರ್, ಎಂ. ಅನುಷಾ, ಪಿ.ಎಮ್. ವರ್ಷಾ, ಎಂ. ಕಾವ್ಯಾ ಮತ್ತು ಜಿ. ಸುನೀತಾ ಅವರು ಚಿನ್ನದ ಪದಕಗಳೊಂದಿಗೆ ಸಂಭ್ರಮಿಸಿದರು.

365 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ

ಬೆಂಗಳೂರು: ಜಯನಗರದ ನ್ಯಾಷನಲ್ ಕಾಲೇಜು ನಗರದಲ್ಲಿ ಭಾನುವಾರ ಹಮ್ಮಿಕೊಂಡ 11ನೇ ಘಟಿಕೋತ್ಸವದಲ್ಲಿ ಆರು ವಿದ್ಯಾರ್ಥಿಗಳಿಗೆ ಬಂಗಾರದ ಪದಕ ಹಾಗೂ 365 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು.

ಗಣಿತ, ಭೌತ ವಿಜ್ಞಾನ ಮತ್ತು ಕಂಪ್ಯೂಟರ್ ಸೈನ್ಸ್ ಸೇರಿದಂತೆ ವಿವಿಧ ವಿಭಾಗಗಳಲ್ಲಿ 110 ವಿದ್ಯಾರ್ಥಿಗಳು ಸ್ನಾತಕೋತ್ತರ ಪದವಿ, 255 ವಿದ್ಯಾರ್ಥಿಗಳು ಸ್ನಾತಕ ಪದವಿ ಪ್ರಮಾಣಪತ್ರ ಪಡೆದುಕೊಂಡರು.

ಪ್ರಥಮ ರ್‍ಯಾಂಕ್ ಪಡೆದ ವಿದ್ಯಾರ್ಥಿಗಳಿಗೆ ಚಿನ್ನದ ಪದಕ ಪ್ರದಾನ ಮಾಡಿ ಮಾತನಾಡಿದ ರೈಲ್ವೆ ಪೊಲೀಸ್ ಎಡಿಜಿಪಿ ಭಾಸ್ಕರ್ ರಾವ್, ‘ಯುವಜನರಲ್ಲಿ ಆತ್ಮಸ್ಥೈರ್ಯದ ಕೊರತೆ ಎದ್ದುಕಾಣುತ್ತಿದೆ. ಬದುಕಿನ ಸಣ್ಣ ಸಮಸ್ಯೆಗಳನ್ನೂ ಎದುರಿಸಲಾಗದೆ ಆತ್ಮಹತ್ಯೆಗೆ ಶರಣಾಗುತ್ತಿದ್ದಾರೆ. ಗಟ್ಟಿ ವ್ಯಕ್ತಿತ್ವವನ್ನು ಕಟ್ಟಿಕೊಳ್ಳುವ ಸೂಕ್ತ ಶಿಕ್ಷಣ ಅವರಿಗೆ ಲಭ್ಯವಾಗುತ್ತಿಲ್ಲ’ ಎಂದು ಕಳವಳ ವ್ಯಕ್ತಪಡಿಸಿದರು.

ನ್ಯಾಷನಲ್ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಎ.ಎಚ್. ರಾಮರಾವ್, ಕಾರ್ಯದರ್ಶಿ ಪ್ರೊ.ಎಸ್.ಎನ್. ನಾಗರಾಜ ರೆಡ್ಡಿ, ಪ್ರಾಂಶುಪಾಲರಾದ ವೈ.ಸಿ. ಕಮಲಾ, ಉಪಪ್ರಾಂಶುಪಾಲ ಪ್ರೊ.ಎಚ್.ಸಿ. ಬೆಲ್ಲದ ಇದ್ದರು.

ಪುನುಗಮಾರನಹಳ್ಳಿಯಲ್ಲಿ ಬೋನಿಗೆ ಬಿದ್ದ ಚಿರತೆ

ಪುನುಗಮಾರನಹಳ್ಳಿ: ಬಲೆಗೆ ಬಿದ್ದ ಚಿರತೆ

ಕೆಂಗೇರಿ: ಪುನುಗಮಾರನಹಳ್ಳಿ, ಮಾಳಗೊಂಡನಹಳ್ಳಿ, ಗಣಪತಿ ಹಳ್ಳಿ, ಪೆದ್ದಮಾರನಹಳ್ಳಿ ಸೇರಿದಂತೆ ಸುತ್ತಮುತ್ತಲಿನ ಹಳ್ಳಿಗಳಲ್ಲಿ ಹಲವಾರು ದಿನಗಳಿಂದ ಜನರಲ್ಲಿ ಆತಂಕ ಮೂಡಿಸಿದ್ದ ಚಿರತೆ ಭಾನುವಾರ ಬೋನಿಗೆ ಬಿದ್ದಿದೆ. ಹತ್ತಾರು ಕುರಿಗಳು, ನಾಯಿಗಳು ಚಿರತೆ ದಾಳಿಗೆ ಬಲಿಯಾಗಿದ್ದವು.

ಮೂರು ದಿನಗಳ ಹಿಂದೆ ಗಣಪತಿಹಳ್ಳಿಯ ಮನೆಯೊಂದಕ್ಕೆ ನುಗ್ಗಿ ಟಗರೊಂದನ್ನು ಚಿರತೆ ಒಯ್ದಿತ್ತು. ಇದರಿಂದ ರೋಸಿ ಹೋಗಿದ್ದ ಗ್ರಾಮಸ್ಥರು ಅದರ ಬಂಧನಕ್ಕೆ ಆಗ್ರಹಿಸಿದ್ದರು.

15 ದಿನಗಳ ಹಿಂದೆ ಪುನುಗಮಾರನಹಳ್ಳಿರುವ ಪ್ರಾಣಿ ಕಲ್ಯಾಣ ಮಂಡಳಿಯ ಸದಸ್ಯೆ ರಶ್ಮಿ ಡಿಸೋಜ ಅವರ ತೋಟದಲ್ಲಿ ಬೋನು ಇಡಲಾಗಿತ್ತು. ‘ಭಾನುವಾರ ಬೆಳಿಗ್ಗೆ 10 ಗಂಟೆ ಸುಮಾರಿಗೆ ಆಹಾರ ಅರಸಿ ಬಂದ 3 ವರ್ಷದ ಗಂಡು ಚಿರತೆ ಬೋನಿಗೆ ಬಿದ್ದಿದೆ’ ಎಂದು ಕಗ್ಗಲೀಪುರ ವಲಯ ಅರಣ್ಯ ಸಿಬ್ಬಂದಿ ತಿಳಿಸಿದ್ದಾರೆ.

ಗಣಪತಿಹಳ್ಳಿ ಬೆಟ್ಟ ಗುಡ್ಡಗಳಿಂದ ಆವೃತವಾದ ಅರಣ್ಯ ಪ್ರದೇಶವಾಗಿತ್ತು. ಇಲ್ಲಿ ರಾಜೀವಗಾಂಧಿ ಆಶ್ರಯ ನಿವಾಸ ಯೋಜನೆಯಡಿ ಮನೆ ನಿರ್ಮಾಣ ಕಾರ್ಯ ನಡೆಯುತ್ತಿದೆ.

ಇದರಿಂದ ಇಲ್ಲಿದ್ದ ಚಿರತೆಗಳಿಗೆ ಆಹಾರ ದೊರಕದ ಸ್ಥಿತಿ ನಿರ್ಮಾಣವಾಗಿದೆ ಎಂಬುದು ಪ್ರಾಣಿಪ್ರಿಯರ ಆರೋಪ.

ಪರಸ್ಪರ ಅಂತರ ಕಾಯ್ದುಕೊಳ್ಳಿ

ಆಗಾಗ ಸಾಬೂನಿನಿಂದ ಕೈ ತೊಳೆಯುತ್ತಿರಿ

ನಿಮಗೆ ಹೈನುಗಾರಿಕೆಯಲ್ಲ ಆಸಕ್ತಿ ಇದೆಯೇ?
ನಿಮ್ಮ ಡೈರಿ ಫಾರ್ಮ್ ಲಾಭದಾಯಕವಾಗಬೇಕೇ?
ಇಲ್ಲಿದೆ ಸುವರ್ಣಾವಕಾಶ!
ಪ್ರಾತ್ಯಕ್ಷಿಕೆಯೊಂದಿಗೆ ತರಬೇತಿ
• ಗಿರ್ ಹಾಗೂ ದೇಸಿ ಗೋ ತಳಿಗಳ ಆಯ್ಕೆ
• ನೈಸರ್ಗಿಕ ಪರಿಸರ ನಿರ್ಮಾಣ
• ವಿಶಾಲ ಕೊಟ್ಟಿಗೆ
• ಗೋ ಆಹಾರ ತಯಾರಿಕೆ
• ಮೇವು ತಯಾರಿಕೆ
• ಅಧಿಕ ಹಾಲಿನ ಇಳುವರಿ
• ಹೈನುಗಾರಿಕೆಯಲ್ಲಿ ಪರಿಣತಿ ಹೊಂದಿದವರಿಂದ ತರಬೇತಿ
1 ಲೀ. ಹಾಲಿಗೆ ನೀವು ಪಡೆಯುತ್ತಿರುವುದು ₹30
ಅದೇ 1 ಲೀ. ಹಾಲಿಗೆ ನೀವು ಪಡೆಯಬಹುದು ₹150
ಆಧುನಿಕ ಪ್ರಯೋಗಾಲಯದಲ್ಲಿ ತುಪ್ಪ, ಪನೀರ್, ಬೆಣ್ಣೆ, ಮಜ್ಜಿಗೆ ಲಸ್ಸಿ ತಯಾರಿಸುವ ತರಬೇತಿ
ಗೋ ಆಧಾರಿತ ಸಾವಯವ ಕೃಷಿಯ ತರಬೇತಿ ಲಭ್ಯ
ಆಸಕ್ತರು ಸಂಪರ್ಕಿಸಿ ಗೋಧಾಮ ಸಂಜೀವಿನಿ ಫಾರ್ಮ್ & ಡೈರಿ ಟ್ರಸ್ಟ್ (ರಿ)
ಮುನಿಯಾಲ್ – 574108, ಕಾರ್ಕಳ ತಾಲೂಕು, ಉಡುಪಿ
93537 56706

AMALGAMATION OF LUXURIOUS PRODUCTS INSPIRED BY DAZZLING WORKS OF DESIGNERS UNDER ONE ROOF
sutraa™ Indian•Fashion•Exhibition
20th & 21st
DEC. | 2021 | 10AM-8PM
THE LaLiT ASHOK BANGALORE
WEDDING SPECIAL
Opens Today
+91 9831229017 / 9123785425
ALL GOVT. SAFETY PROTOCOLS IN PLACE
ETHNICS | TUNICS | GOWNS | DECORS | FOOTWEAR
PURSES | FABRICS | COSTUMES | JEWELLERY

ರಾಮ್ಕೋ ಸೂಪರ್ ಪ್ಲಾಸ್ಟರ್
ನಾನ್-ರಿಫ್ರ್ಯಾಕ್ಟರೀ ಪ್ಲಾಸ್ಟರ್ & ಬ್ರಿಕ್ ಮೋರ್ಟಾರ್ ಕಾನ್ಸಂಟ್ರೇಟ್
ಹೊಸ
RAMCO SUPER PLASTER
NON-REFRACTORY PLASTER & BRICK MORTAR CONCENTRATE
25Kg
ಭಾರತದ ಮೊದಲನೇ 25ಕೆ.ಜಿ. ಪ್ಯಾಕ್
THE RAMCO CEMENTS LIMITED
ಅತ್ಯುತ್ತಮ ಕವರೇಜ್! ಸೂಪರ್ ಫಿನಿಷ್! ಬಿರುಕುಗಳಿಲ್ಲ!
ಕೇವಲ ಪ್ಲಾಸ್ಟರಿಂಗ್ ಹಾಗೂ ಬ್ರಿಕ್ ಲೇಯಿಂಗ್‌ಗಾಗಿ ಮಾತ್ರ!
080-40750000/03/11/15/21
(Mon-Sat 9 am to 6 pm)
Scan & Connect with us
Fountainhead 7274 - 2021

ಬಿಡಿಎ
ಮೂಲೆ ನಿವೇಶನಗಳ ಇ-ಹರಾಜು
ನಿವೇಶನ ಖರೀದಿ ಬಿಡ್ಡಿಂಗ್ ಆರಂಭಗೊಂಡಿದೆ
ಈ ಸದವಕಾಶ ತಪ್ಪಿಸಿಕೊಳ್ಳಬೇಡಿ
ನೀವೂ ಖರೀದಿಸಿ!
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ BDA
• ಅಂಜನಾಪುರ • ಜೆ.ಪಿ.ನಗರ
• ಬನಶಂಕರಿ • ಅರ್ಕಾವತಿ
• ನಾಗರಭಾವಿ • ಹೆಚ್.ಬಿ.ಆರ್.
• ನಾಡಪ್ರಭು ಕೆಂಪೇಗೌಡ
• ಸರ್. ಎಂ. ವಿಶ್ವೇಶ್ವರಯ್ಯ
ಸೇರಿದಂತೆ ಹಲವು ಪ್ರತಿಷ್ಠಿತ ಬಡಾವಣೆಗಳ ಮೂಲೆ ನಿವೇಶನಗಳು ಲಭ್ಯ

ನಿವೇಶನಗಳ ಇ-ಬಿಡ್ಡಿಂಗ್ ಪ್ರಾರಂಭವಾಗಿದೆ

ಪ್ರಕಟಣೆ ಕ್ರಮ ಸಂಖ್ಯೆ	ಇ-ಹರಾಜನ್ನು ತೆರೆಯುವ/ ನೇರ ಬಿಡ್ಡಿಂಗ್ ಆರಂಭಿಸುವ ದಿನಾಂಕ ಮತ್ತು ಸಮಯ	ಇ-ಹರಾಜಿನಲ್ಲಿ ಪಾಲ್ಗೊಳ್ಳಲು ಆಸಕ್ತಿ ವ್ಯಕ್ತಪಡಿಸಲು ಕೊನೆಯ ದಿನಾಂಕ ಮತ್ತು ಸಮಯ	ಇ-ಹರಾಜನ್ನು ಮುಕ್ತಾಯಗೊಳಿಸುವ ದಿನಾಂಕ ಮತ್ತು ಸಮಯ
01 TO 62	08.12.2021; 11.00 am IST	22.12.2021 ; 6.00 pm IST	23.12.2021 ; 6.00 pm IST
63 TO 124	09.12.2021; 11.00 am IST	23.12.2021 ; 6.00 pm IST	24.12.2021 ; 6.00 pm IST
124 TO 186	10.12.2021; 11.00 am IST	24.12.2021 ; 6.00 pm IST	27.12.2021 ; 6.00 pm IST
187 TO 249	13.12.2021; 11.00 am IST	27.12.2021 ; 6.00 pm IST	28.12.2021 ; 6.00 pm IST
250 TO 310	14.12.2021; 11.00 am IST	28.12.2021 ; 6.00 pm IST	29.12.2021 ; 6.00 pm IST
311 TO 373	15.12.2021; 11.00 am IST	29.12.2021 ; 6.00 pm IST	30.12.2021 ; 6.00 pm IST

ಪ್ರಪಂಚದ ಯಾವುದೇ ಮೂಲೆಯಲ್ಲಿ ಕುಳಿತು ನಿಮ್ಮ ಕನಸಿನ ನಿವೇಶನ ವೀಕ್ಷಿಸಬಹುದು ಮತ್ತು ಖರೀದಿಸಬಹುದು.
ಇ-ಹರಾಜಿನಲ್ಲಿ ಭಾಗವಹಿಸಲು ಮತ್ತು ಬಿಡ್ಡಿಂಗ್‌ಗಾಗಿ
https://eproc.karnataka.gov.in
080-46010000 / 22631200 / 68948777
ಇ-ಹರಾಜಿನ ಡೆಮೊ ವೀಡಿಯೊ ಹಾಗೂ ಹೆಚ್ಚಿನ ಮಾಹಿತಿಗಾಗಿ
www.bdabangalore.org
080-23368423 / 23368036
ಮಧ್ಯವರ್ತಿಗಳ ತೊಂದರೆಯಿಲ್ಲ, ನೇರವಾಗಿ ಇ ಹರಾಜಿನಲ್ಲಿ ಭಾಗವಹಿಸಿ.
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು-560 020.
ಕೋವಿಡ್-19 ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.

ಸ್ವಾತಂತ್ರ್ಯದ ಅಮೃತ ಮಹೋತ್ಸವ
ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಕರ್ನಾಟಕ ಸರ್ಕಾರ
ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು ಕರ್ನಾಟಕ ಸರ್ಕಾರ
ಅಮೃತ ಸ್ಟಾರ್ಟ್‌ಅಪ್ಸ್ 2021
(ಒಬಿಸಿ ಮತ್ತು ಅಲ್ಪಸಂಖ್ಯಾತ ನವೋದ್ಯಮಗಳಿಗೆ Idea2PoC ಅನುದಾನ)
ಕರ್ನಾಟಕ ಸರ್ಕಾರವು ಸ್ವಾತಂತ್ರ್ಯದ ಅಮೃತ ಮಹೋತ್ಸವದ ಸಂದರ್ಭದಲ್ಲಿ, ಒಬಿಸಿ ಮತ್ತು ಅಲ್ಪಸಂಖ್ಯಾತ ಸಮುದಾಯದ ನವೋದ್ಯಮಗಳಿಗೆ ಆರ್ಥಿಕ ಬೆಂಬಲ ನೀಡಲಿದೆ.
ಮಹತ್ವಾಕಾಂಕ್ಷೆಯ ನವೋದ್ಯಮಗಳ ಸಬಲೀಕರಣಕ್ಕೆ ಕರ್ನಾಟಕ ಸರ್ಕಾರದ ವತಿಯಿಂದ ಆರ್ಥಿಕ ಬೆಂಬಲ ಹಾಗೂ ಪರಿಪೋಷಣ ಸೌಲಭ್ಯ
BANGALORE BIOINNOVATION CENTRE | STARTUP KARNATAKA | K-tech INNOVATION HUB POWERED BY NASSCOM
ಅರ್ಜಿ ಸಲ್ಲಿಸಲು ಸಮಯಾವಕಾಶ:
ಡಿಸೆಂಬರ್ 20, 2021 (ಬೆಳಗ್ಗೆ 10 ಗಂಟೆ) ರಿಂದ ಜನವರಿ 15, 2022 (ಸಂಜೆ 5.00 ಗಂಟೆ) ರವರೆಗೆ.
ಅರ್ಜಿ ಸಲ್ಲಿಸಲು ಮತ್ತು ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿರಿ
https://www.missionstartupkarnataka.org/amrita2021?Kn
ನವೋದ್ಯಮದ ಅರ್ಹತಾ ಮಾನದಂಡಗಳು :
1. ಕರ್ನಾಟಕದಲ್ಲಿ ನೋಂದಣಿಯಾಗಿರುವ ಅಥವಾ ನಿಗಮಿತಗೊಂಡ ಸಂಸ್ಥೆಯಾಗಿರಬೇಕು (ಪ್ರೈ.ಲಿ/OPC/LLP/ಪಾಲುದಾರಿಕೆ ಸಂಸ್ಥೆ).
2. ನಿಗಮಿತಗೊಂಡ ದಿನಾಂಕದಿಂದ ವಹಿವಾಟಿನ ರೂಪದಲ್ಲಿ ಉತ್ಪತ್ತಿಯಾದ ಒಟ್ಟು ಆದಾಯವು ರೂ. 100 ಕೋಟಿಗಿಂತ ಕಡಿಮೆ ಇರಬೇಕು.
3. ನವೋದ್ಯಮಗಳು ನಿಗಮಿತಗೊಂಡ/ನೋಂದಣಿ ದಿನಾಂಕದಿಂದ 10 ವರ್ಷಗಳ ಅಸ್ತಿತ್ವವನ್ನು ಮೀರಿರಕೂಡದು.
4. ನಿರ್ದೇಶಕರು(ಗಳು)/ಪಾಲುದಾರ(ರು) ಕರ್ನಾಟಕ ಸರ್ಕಾರದ ಕಂದಾಯ ಇಲಾಖೆಯಿಂದ ನೀಡಲ್ಪಟ್ಟ ಡಿಜಿಟಲ್ ಜಾತಿ ಪ್ರಮಾಣಪತ್ರ ಜೊತೆಗೆ ಆರ್ ಡಿ ಸಂಖ್ಯೆಯನ್ನು ಹೊಂದಿರಬೇಕು.
ಡಾ|| ಸಿ.ಎನ್. ಅಶ್ವತ್ಥ್ ನಾರಾಯಣ್, ಮಾನ್ಯ ಉನ್ನತ ಶಿಕ್ಷಣ, ಐಟಿ-ಬಿಟಿ ಮತ್ತು ಎಸ್&ಟಿ ಹಾಗೂ ಕೌಶಲ್ಯಾಭಿವೃದ್ಧಿ ಮಂತ್ರಿಗಳು, ಎಲಿವೇಟ್ ಉನ್ನತಿ ವಿಜೇತರನ್ನು ಸನ್ಮಾನಿಸುತ್ತಿರುವುದು
ಕನಿಷ್ಠ ಒಬ್ಬರಂತೆ ನಿರ್ದೇಶಕ(ರು) / ಪಾಲುದಾರ(ರು) (ಅಲ್ಪಸಂಖ್ಯಾತರು ಅಥವಾ ಹಿಂದುಳಿದ ವರ್ಗಗಳ ಸಮುದಾಯ) ವರ್ಗಕ್ಕೆ ಸೇರಿದವರಾಗಿರಬೇಕು ಹಾಗೂ ಕಂಪನಿ/ಸಂಸ್ಥೆಯಲ್ಲಿ ಕನಿಷ್ಠ 51% ರಷ್ಟು ಷೇರನ್ನು ಹೊಂದಿರಬೇಕು.
ಸೂಚನೆ : ವಿವರವಾದ ನಿಯಮ ಹಾಗೂ ಷರತ್ತುಗಳಿಗೆ ಭೇಟಿ ನೀಡಿ:
https://www.missionstartupkarnataka.org/amrita2021?Kn
ವಿಚಾರಣೆಗಳಿಗಾಗಿ 080-22231007 ಗೆ ಕರೆ ಮಾಡಿ ಅಥವಾ elevate-ktech@ka.gov.in ಗೆ ಇ-ಮೇಲ್ ಮಾಡಿರಿ. ಸಮಯ: ಬೆಳಗ್ಗೆ 10.30ರಿಂದ ಸಂಜೆ 5.30 ಗಂಟೆ
ಅಮೃತ ಸ್ಟಾರ್ಟ್‌ಅಪ್ಸ್ ಅನುದಾನ : ಅಲ್ಪಸಂಖ್ಯಾತರ ಇಲಾಖೆ, ಹಿಂದುಳಿದ ವರ್ಗಗಳ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಕರ್ನಾಟಕ ಸರ್ಕಾರ
“ನಮ್ಮ ವೈವಿಧ್ಯಮಯ ಸಂಸ್ಕೃತಿಯ ಶ್ರೇಷ್ಠ ಪರಂಪರೆಯನ್ನು ಗೌರವಿಸುವುದು ಮತ್ತು ರಕ್ಷಿಸುವುದು” – ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ
ಕೋವಿಡ್-19 - ಭಯ ಬೇಡ ಎಚ್ಚರವಿರಲಿ
ಮಾಸ್ಕ್ ಧರಿಸಿ | ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ | ಸ್ವಯಂಪ್ರೇರಿತವಾಗಿ ಲಸಿಕೆ ಪಡೆಯಿರಿ

ವಿಚಾರ ಮಂಥನ, ಒಳನೋಟಗಳ ಅನಾವರಣ: ಚಿಂತನೆಗೆ ಹೊಸ ಹೊಳಪು ನೀಡಿದ ಗೋಷ್ಠಿಗಳು

ಹೊಸ ವಿಚಾರಗಳ ಬುತ್ತಿ ಕಟ್ಟಿಕೊಟ್ಟ ಸಾಹಿತ್ಯ ಉತ್ಸವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಹಿತ್ಯ, ಸಿನಿಮಾ, ರಾಜಕೀಯ, ವಿಜ್ಞಾನ, ಭಾಷೆಗಳ ಒಳನೋಟದ ಹೂರಣಗಳ ಚರ್ಚೆಗೆ ವೇದಿಕೆಯಾದ ಬೆಂಗಳೂರು ಸಾಹಿತ್ಯ ಉತ್ಸವ ಭಾನುವಾರ ಸಂಪನ್ನವಾಯಿತು. ಈ ‘ಚಿಂತಕರ ಚಾವಡಿ’ಯಲ್ಲಿ ಹತ್ತು ಹಲವು ವಿಚಾರಗಳ ಕುರಿತ ಗಹನವಾದ ಚರ್ಚೆಗಳಲ್ಲಿ ಪಾಲ್ಗೊಂಡ ಸಾಹಿತ್ಯಾಸಕ್ತರು ತಮ್ಮ ಜ್ಞಾನದ ಹರವನ್ನು ವಿಸ್ತರಿಸಿಕೊಂಡರು. ಹೊಸ ಅನುಭವಗಳ ಬುತ್ತಿಯೊಂದಿಗೆ ನಿರ್ಗಮಿಸಿದರು.

ಈ ಉತ್ಸವದ 10ನೇ ಆವೃತ್ತಿಯು ಕನ್ನಡ ನೆಲದ ಹಲವು ಭಾಷೆಗಳ ವೈಶಿಷ್ಟ್ಯಗಳನ್ನು ಅನಾವರಣಗೊಳಿಸಿತು. ಭಾಷಾ ಸಿರಿವಂತಿಕೆ ಕುರಿತ ಗೋಷ್ಠಿಗಳು ಉತ್ಸವಕ್ಕೆ ಮೆರುಗು ನೀಡಿದವು. ಬಹುಭಾಷೆಗಳ ಸಾಮರಸ್ಯ ಹೇಗೆ ಈ ನಾಡಿನಲ್ಲಿ ಬಹುತ್ವ ಸಂಸ್ಕೃತಿಗೆ ತಳಹದಿಯಾಗಿದೆ ಎಂಬುದನ್ನು ಸೊಗಸಾಗಿ ಕಟ್ಟಿಕೊಟ್ಟವು.

ವಾರಾಂತ್ಯದಲ್ಲಿ ನಡೆದ ಈ ಉತ್ಸವದಲ್ಲಿ ರಾಜಕೀಯ ಸ್ಥಿತ್ಯಂತರ, ಸಾಮಾಜಿಕ ವ್ಯವಸ್ಥೆಗೆ ಧಕ್ಕೆ ತರುವ ವಿಷಯಗಳು, ಆರ್ಥಿಕತೆ, ಸಾಹಿತ್ಯ ಕ್ಷೇತ್ರಕ್ಕೂ ತಟ್ಟಿದ ಡಿಜಿಟಲ್ ಕ್ರಾಂತಿ, ಮಹಿಳೆಯರ ಸ್ಥಿತಿಗತಿ ಕುರಿತ ಚರ್ಚೆಗಳು ಗಮನಸೆಳೆದವು.

ಜಗತ್ತನ್ನೇ ಆತಂಕಕ್ಕೆ ತಳ್ಳಿದ ಕೊರೊನಾ ವೈರಸ್ ಹಿಂದಿನ ಮರ್ಮಗಳ, ವಿಜ್ಞಾನಿ ಜೆಬಿಎಸ್. ಹಲ್ದಾನೆ ಅವರ ಜೀವನ ಕುರಿತ ಚರ್ಚೆಗಳು ವಿಜ್ಞಾನದ ರೋಚಕ ಸಂಗತಿಗಳನ್ನು ತೆರೆದಿಟ್ಟವು. ಭಾರತಕ್ಕೆ ಭೇಟಿ ನೀಡಿದ್ದ ಹಲ್ದಾನೆ, ಇಲ್ಲಿನ ಸಂಸ್ಕೃತಿ ಮತ್ತು ಜನ ಜೀವನವನ್ನು ಬಹುವಾಗಿ ಮೆಚ್ಚಿಕೊಂಡಿದ್ದ ವಿಷಯವನ್ನು ಲೇಖಕ ಸಮಂತ ಸುಬ್ರಮಣಿಯನ್ ವಿವರಿಸಿದರು.

ದೇಶದ ವಿವಿಧೆಡೆಯ ವಿದ್ವಾಂಸರು, ಲೇಖಕರು ಹಂಚಿಕೊಂಡ ಚಿಂತನೆಗಳಿಂದ ಸಾಹಿತ್ಯ ಜಾತ್ರೆ ಕಳೆಗಟ್ಟಿತು. ನಾಲ್ಕು ವೇದಿಕೆಗಳಲ್ಲಿ ನಡೆದ ಗೋಷ್ಠಿಗಳಲ್ಲಿ ಸಭಿಕರ ಪ್ರಶ್ನೆಗಳು ವಿಚಾರ ಮಂಥನಕ್ಕೆ ಪುಟ್ಟವಿಟ್ಟಂತಿದ್ದವು. ಇನ್ನೊಂದೆಡೆ ಹೊಸ ಪುಸ್ತಕಗಳ ಖರೀದಿ ಭರಾಟೆಯೂ ಜೋರಾಗಿತ್ತು.

ಭಾನುವಾರದ ಗೋಷ್ಠಿಯೊಂದರಲ್ಲಿ ಪಾಲ್ಗೊಂಡ ಸಾಹಿತ್ಯ ಆಸಕ್ತರು ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್‌ಜಿ.

‘ಮಾರುಕಟ್ಟೆ ಕಂಡುಕೊಳ್ಳುವುದು ಹೊಸ ಲೇಖಕರಿಗೆ ಸವಾಲು’

ಗಾಯತ್ರಿ

ಬೆಂಗಳೂರು: ‘ಹೊಸ ಲೇಖಕರು ಮಾರುಕಟ್ಟೆ ಕಂಡುಕೊಳ್ಳುವುದು ನಿಜಕ್ಕೂ ಸವಾಲು’ ಎಂದು ಲೇಖಕಿ ಗಾಯತ್ರಿ ಚಂದ್ರಶೇಖರನ್ ಅಭಿಪ್ರಾಯಪಟ್ಟರು.

ಅನಿಲ್ ಅಬ್ರಹಾಂ ಅವರು ನಡೆಸಿಕೊಟ್ಟ ಸಂವಾದದಲ್ಲಿ ಗಾಯತ್ರಿ ಅವರು ತಮ್ಮ ‘ಬ್ಯಾಂಗಲೂರ್ಡ್’ ಕಾದಂಬರಿಯ ಕುರಿತು ಭಾನುವಾರ ಅನಿಸಿಕೆ ಹಂಚಿಕೊಂಡರು.

‘ಸಾಮಾಜಿಕ ಮಾಧ್ಯಮಗಳಲ್ಲಿ ನಾನು ಅಷ್ಟಾಗಿ ಸಕ್ರಿಯಳಾಗಿರಲಿಲ್ಲ. ನನ್ನ ಮೊದಲ ಕೃತಿ ಇದು. ಇದರ ಪ್ರಚಾರಕ್ಕೆ ಇನ್‌ಸ್ಟಾಗ್ರಾಂ, ಫೇಸ್‌ಬುಕ್‌ಗಳ ಮೊರೆ ಹೋಗಬೇಕಾಯಿತು’ ಎಂದರು.

‘ಜನರಲ್ಲಿ ಓದುವ ಪ್ರವೃತ್ತಿ ಕಡಿಮೆಯಾಗುತ್ತಿದೆ ಎಂಬುದನ್ನು ನಾನೂ ಒಪ್ಪುತ್ತೇನೆ. ನಾನು ಕೂಡ ಹೆಚ್ಚು ಓದುವುದಿಲ್ಲ. ನಮಗೆ ಸಂಬಂಧವೇ ಇಲ್ಲದ ವಿಚಾರಗಳ ಬಗ್ಗೆ ಸಾಮಾಜಿಕ ಮಾಧ್ಯಮಗಳಲ್ಲಿ ನಡೆಯುವ ಚರ್ಚೆಯಲ್ಲಿ ಜನ ಹೆಚ್ಚು ಸಮಯ ಕಳೆಯುತ್ತಿದ್ದಾರೆ. ಮನರಂಜನೆಗೆ ಕೆಲವು ಸುಲಭ ಮಾರ್ಗಗಳಿವೆ. ಹಾಗಾಗಿ ಜನ ಪುಸ್ತಕಗಳನ್ನು ಕೈಗೆತ್ತಿಕೊಳ್ಳುತ್ತಿಲ್ಲ’ ಎಂದು ಅಭಿಪ್ರಾಯಪಟ್ಟರು.

‘ಪ್ರತಿಯೊಬ್ಬರೂ ವಿಭಿನ್ನ ಚಿಂತನೆಗಳನ್ನು ಹೊಂದಿರುತ್ತಾರೆ. ಹಾಗಾಗಿ ಭಿನ್ನಾಭಿಪ್ರಾಯಗಳೂ ಸಹಜ. ಕೆಲವರು ಸಮಾಜ ಸುಧಾರಣೆಯ ದೃಷ್ಟಿಯಿಂದ ಆಲೋಚಿಸಿದರೆ, ಇನ್ನು ಕೆಲವರದು ಬೇರೆಯೇ ಹಾದಿ. ಜನರ ಮನಸುಗಳನ್ನು ಬದಲಾಯಿಸುವುದು ತೀರಾ ಕಷ್ಟದ ಕೆಲಸ. ಒಬ್ಬ ಸಾಹಿತಿಯು ಕೃತಿಯಲ್ಲಿ ಸಂದೇಶಗಳನ್ನು ನೀಡುವ ಮೂಲಕ ಪರೋಕ್ಷವಾಗಿ ಈ ಪ್ರಯತ್ನ ಮಾಡಬಹುದು ಅಷ್ಟೇ’ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಸುದ್ದಿ 2 ನಿಮಿಷ

ಪ್ರಾದೇಶಿಕ ಭಾಷೆಯಾಗಿ ಅರೆಭಾಷೆ: ಸೀತಾರಾಮ ಕೇವಳ

ಬೆಂಗಳೂರು: ‘ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ಹಾಗೂ ಇತರೆಡೆ, ಕೊಡಗು ಜಿಲ್ಲೆಯ ಮಡಿಕೇರಿ ಮತ್ತು ಉತ್ತರ ಕಾಸರಗೋಡು ಪ್ರದೇಶದಲ್ಲಿ ಗೌಡ ಸಮುದಾಯದವರ ಆಡುಭಾಷೆಯಾಗಿರುವ ಅರೆಭಾಷೆ ಕೆಲವೆಡೆ ಪ್ರಾದೇಶಿಕ ಭಾಷೆಯಾಗಿಯೂ ಬೆಳೆದಿದೆ’ ಎಂದು ವಿದ್ವಾಂಸ ಸೀತಾರಾಮ ಕೇವಳ ಹೇಳಿದರು.

ಭಾನುವಾರ ಅರೆಭಾಷೆ ಕುರಿತು ವರ್ಚುವಲ್ ಆಗಿ ಹಮ್ಮಿಕೊಂಡಿದ್ದ ಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಸುಳ್ಯ ಪ್ರದೇಶದಲ್ಲಿ ಮುಸ್ಲಿಂ, ಕ್ರೈಸ್ತ ಮತ್ತು ಬಂಟ ಸಮುದಾಯದವರಿಗೂ ಅರೆಭಾಷೆ ಗೊತ್ತಿದೆ. ವ್ಯವಹಾರಿಕವಾಗಿ ಅವರು ಈ ಭಾಷೆಯನ್ನೂ ಬಳಸುತ್ತಿದ್ದಾರೆ. ಭಾಷೆಯ ದೃಷ್ಟಿಯಿಂದ ಇದು ಉತ್ತಮ ಬೆಳವಣಿಗೆ’ ಎಂದರು.

‘ಕನ್ನಡದಲ್ಲಿ ಅರೆಭಾಷೆ ಅಂದರೆ ಅರ್ಧ ಭಾಷೆ ಎಂದರ್ಥ. ಸಂವಹನದ ಸಂದರ್ಭದಲ್ಲಿ ಬಳಸುವ ಕನ್ನಡ ಪದದ ಅರ್ಧ ಪದವನ್ನು ಮಾತ್ರ ಅರೆಭಾಷೆಯಲ್ಲಿ ಬಳಸಲಾಗುತ್ತಿದೆ. ಈ ಭಾಷೆಯು ಪ್ರದೇಶದಿಂದ ಪ್ರದೇಶಕ್ಕೆ ಬದಲಾಗುತ್ತದೆ. ಇದಕ್ಕೆ ಲಿಪಿ ಇಲ್ಲದ ಕಾರಣ ಕನ್ನಡವನ್ನೇ ಬಳಸುತ್ತಾರೆ’ ಎಂದು ವಿವರಿಸಿದರು.

‘ಅರೆ ಭಾಷೆಯ ನಿಘಂಟು ರಚನೆಯ ಕೆಲಸ ನಡೆಯುತ್ತಿದ್ದು, ಈಗಾಗಲೇ 16,000ಕ್ಕೂ ಹೆಚ್ಚು ಪದಗಳನ್ನು ಸಂಗ್ರಹಿಸಲಾಗಿದೆ’ ಎಂದು ವಿದ್ವಾಂಸ ಡಾ.ವಿಶ್ವನಾಥ ಬದಿಕಾನ ತಿಳಿಸಿದರು.

‘ದೆಹಲಿಯ ಕಪಿಮುಷ್ಟಿಯಿಂದ ಶಿಕ್ಷಣವನ್ನು ಮುಕ್ತಗೊಳಿಸಿ’

ಬೆಂಗಳೂರು: ‘ಶಿಕ್ಷಣ ವ್ಯವಸ್ಥೆ ಇಂದು ದೆಹಲಿಯಲ್ಲಿರುವ ಕೆಲವೇ ಪುಟ್ಟ ಗುಂಪುಗಳ ಕಪಿಮುಷ್ಟಿಯಲ್ಲಿದೆ. ಅದನ್ನು ಮುಕ್ತಗೊಳಿಸಬೇಕು’ ಎಂದು ಮಣಿಪಾಲ ಗ್ಲೋಬಲ್ ಎಜುಕೇಷನ್‌ನ ಅಧ್ಯಕ್ಷ ಟಿ.ವಿ.ಮೋಹನದಾಸ ಪೈ ಆಗ್ರಹಿಸಿದರು.

ಲೇಖಕಿ ಸಹನಾ ಸಿಂಗ್ ಅವರ ‘ರಿವಿಸಿಟಿಂಗ್ ದಿ ಎಜುಕೇಷನಲ್ ಹೆರಿಟೇಜ್ ಆಫ್ ಇಂಡಿಯಾ’ ಕೃತಿಯ ಕುರಿತ ಗೋಷ್ಠಿಯಲ್ಲಿ ಅವರು ಭಾನುವಾರ ಮಾತನಾಡಿದರು.

‘ದೆಹಲಿಯ ರಾಷ್ಟ್ರೀಯ ಶೈಕ್ಷಣಿಕ ಸಂಶೋಧನಾ ಮತ್ತು ತರಬೇತಿ ಸಂಸ್ಥೆಯಂತಹ (ಎನ್‌ಸಿಇಆರ್‌ಟಿ) ಸಂಸ್ಥೆಗಳು ಹಾಗೂ ಶಿಕ್ಷಣ ತಜ್ಞರೆನಿಸಿಕೊಂಡ ಸೀಮಿತ ಸಂಖ್ಯೆಯ ಜನರು ರೂಪಿಸುವ ಶಿಕ್ಷಣ ಪದ್ಧತಿ ದೇಶದಾದ್ಯಂತ ಜಾರಿಗೊಳ್ಳುತ್ತಿದೆ. ಇದು ಬದಲಾಗಬೇಕು. ಸ್ಥಳೀಯತೆ ಹಾಗೂ ವಿದ್ಯಾರ್ಥಿ ಕೇಂದ್ರಿತ ಕಲಿಕೆ ಜಾರಿಯಾಗಬೇಕು. ಕರ್ನಾಟಕದಲ್ಲಿ ಎಂಥ ಶಿಕ್ಷಣ ಕೊಡಬೇಕು ಎಂಬುದನ್ನು ದೆಹಲಿಯಲ್ಲಿ ಕುಳಿತು ನಿರ್ಧರಿಸಬಾರದು’ ಎಂದರು.

‘ವಿಜ್ಞಾನ ಸಾಹಿತ್ಯಕ್ಕೆ ಕನ್ನಡದಲ್ಲಿ ಮಹತ್ವ ಕಮ್ಮಿ’

• ಸುಕೃತ ಎಸ್.

ಬೆಂಗಳೂರು: ‘ವಿಜ್ಞಾನ ಸಾಹಿತ್ಯಕ್ಕೆ ಬೆಂಗಾಲಿ, ಮರಾಠಿ ಭಾಷೆಯಲ್ಲಿ ಇರುವಷ್ಟು ಮಹತ್ವ ಕನ್ನಡದಲ್ಲಿ ಇಲ್ಲ. ಕನ್ನಡ ಮನಸ್ಸುಗಳೂ ವಿಜ್ಞಾನ ಸಾಹಿತ್ಯವನ್ನು ಗಂಭೀರವಾಗಿ ಪರಿಗಣಿಸಬೇಕು’ ಎಂದು ಲೇಖಕಿ ಶಾಂತಲಾ ಅನಿಲ್ ಹೇಳಿದರು.

‘3019 AD’ ವಿಜ್ಞಾನ ಪುಸ್ತಕದ ಲೇಖಕಿಯಾಗಿರುವ ಅವರು ‘ಎಲ್ಲೆ ಇಲ್ಲದ ಕಲ್ಪನೆ’ ಎಂಬ ಗೋಷ್ಠಿಯಲ್ಲಿ ಅನಿಸಿಕೆ ಹಂಚಿಕೊಂಡರು.

‘ವಿಜ್ಞಾನದ ಸಾಹಿತ್ಯ ರಚನೆ ಸವಾಲಿನಿಂದ ಕೂಡಿದೆ. ಇಂಗ್ಲಿಷ್‌ನಲ್ಲಿ ಇರುವಷ್ಟು ವಿಜ್ಞಾನ ಪದ ಸಂಪತ್ತು ಕನ್ನಡದಲ್ಲಿ ಇಲ್ಲ. ಪುಸ್ತಕ ಬರೆಯುವ ಹೊತ್ತಿಗೆ ಈ ಸಮಸ್ಯೆ ತುಂಬಾ ಕಾಡಿತು’ ಎಂದರು.

‘ವಿಜ್ಞಾನ ಸಾಹಿತ್ಯ ಎಂದರೆ, ಗೊತ್ತಿರುವ ಕೆಲವು ವಿಷಯಗಳನ್ನೇ ಇಟ್ಟುಕೊಂಡು ಮುಂದೊಂದು ದಿನ ಹೀಗೂ ಆಗಬಹುದು ಎನ್ನುವ ಕಲ್ಪನೆಯೊಂದಿಗೆ ಬರೆಯುವುದು. ಅದರರ್ಥ ಹಾಗೆಯೇ ಆಗುತ್ತದೆ ಎಂದಲ್ಲ. ನನ್ನ ‘3019 AD’ ಪುಸ್ತಕವೂ ಅಂತಹದ್ದೇ. 1000 ವರ್ಷದ ನಂತರ ಭೂಮಿ ಹೇಗಿರಬಹುದು. ವಿಜ್ಞಾನ, ತಂತ್ರಜ್ಞಾನ ಇನ್ನಷ್ಟು ವಿಕಾಸಗೊಂಡಂತೆ ಜನರ ಬದುಕು ಹೇಗೆಲ್ಲಾ ಬದಲಾಗಬಹುದು ಎಂಬುದರ ಕುರಿತ ವಿವರ ಈ ಕೃತಿಯಲ್ಲಿ ಇದೆ’ ಎಂದರು.

‘ವಿಜ್ಞಾನ ಕುರಿತ ಸಾಹಿತ್ಯ ಎಂದರೆ, ಅಲ್ಲಿ ವಿಜ್ಞಾನಕ್ಕೆ ಸಂಬಂಧಿಸಿದ ವಿಚಾರಗಳು ಮಾತ್ರ ಇರುವುದಿಲ್ಲ, ಸಾಮಾಜಿಕ ವಿಷಯವನ್ನು ಇಟ್ಟುಕೊಂಡೇ ಈ ಪುಸ್ತಕ ಬರೆದಿದ್ದೇನೆ’ ಎಂದರು.

ಕ್ರಿಪ್ಟೊ ಕರೆನ್ಸಿ ಕುರಿತಾದ ‘ನಿಗೂಢ ನಾಣ್ಯ’ ಪುಸ್ತಕದ ಲೇಖಕ ವಿಠಲ್ ಶೆಣೈ, ‘ವಿಜ್ಞಾನ ಮತ್ತು ತಂತ್ರಜ್ಞಾನ ವಿಷಯಗಳನ್ನು ಜನರಿಗೆ ತಿಳಿಯುವಂತೆ ಕಟ್ಟಿಕೊಡುವುದು ಸುಲಭವಲ್ಲ. ಆದ್ದರಿಂದ ಕಥೆಯ ಮೂಲಕ ತಂತ್ರಜ್ಞಾನದ ವಿಷಯವನ್ನು ಹೇಳುವ ಮಾದರಿಯನ್ನು ಅನುಸರಿಸಿದೆ’ ಎಂದರು.

ಗೋಷ್ಠಿಯಲ್ಲಿ ವಿಠಲ್ ಶೆಣೈ ಮಾತನಾಡಿದರು. ಶಾಂತಲಾ ಅನಿಲ್ ಇದ್ದಾರೆ – ಪ್ರಜಾವಾಣಿ ಚಿತ್ರ

ಕುಗ್ಗುತ್ತಿದೆ ದೇಸಿ ಭಾಷೆಗಳ ಪದಕೋಶ

• ಅಭಿಲಾಷ ಬಿ.ಸಿ.

ಬೆಂಗಳೂರು: ‘ಇಂಗ್ಲಿಷ್ ನಿಘಂಟುಗಳ ಗಾತ್ರ ವರ್ಷದಿಂದ ವರ್ಷಕ್ಕೆ ಹಿಗ್ಗುತ್ತಿದ್ದರೆ, ಭಾರತೀಯ ದೇಸಿ ಭಾಷೆಗಳ ಹಲವು ಪದಗಳು ಬಳಕೆಯಾಗದೆ ನಶಿಸುತ್ತಿವೆ’ ಎಂದು ವ್ಯಂಗ್ಯಚಿತ್ರಕಾರ ಹಾಗೂ ಲೇಖಕ ಪಂಜು ಗಂಗೊಳ್ಳಿ ಕಳವಳ ವ್ಯಕ್ತಪಡಿಸಿದರು.

‘ಕುಂದಾಪ್ರ ಕನ್ನಡ’ ಕುರಿತ ಸಂವಾದದಲ್ಲಿ ಭಾನುವಾರ ಅವರು ಮಾತನಾಡಿದರು.

ಕುಂದಾಪ್ರ ಕನ್ನಡದಲ್ಲಿ ಶಬ್ದವನ್ನು ಸಂಕ್ಷಿಪ್ತಗೊಳಿಸುವ ಸಾಧ್ಯತೆ ಹಾಗೂ ನುಡಿಗಟ್ಟುಗಳಿಗೆ ಇರುವ ಶಕ್ತಿಯನ್ನು ಅವರು ವಿವರಿಸಿದ ಅವರು, ‘ಓಡ್ಸುವವ ಸೋತಷ್ಟೇ, ಬೆರ್ಸುವವನೂ ಸೋಲ್ತಾ’ ಎಂಬ ನುಡಿಗಟ್ಟು ಹೇಗೆ ಯುದ್ಧದ ನಿಷ್ಪ್ರಯೋಜಕವನ್ನು, ಅದರ ಅಗಾಧ ಪರಿಣಾಮವನ್ನು ನಾಲ್ಕೇ ಪದಗಳಲ್ಲಿ ಕಟ್ಟಿಕೊಡುತ್ತದೆ ಎಂದು ಉದಾಹರಣೆ ನೀಡಿದರು.

‘ಕುಂದಾಪುರ ಪರಿಸರದ ವ್ಯಾಪ್ತಿಗೆ ಈ ಭಾಷೆ ಸೀಮಿತವಾಗಿದ್ದರೂ, ಇದರ ಆಳ, ವಿಸ್ತಾರ ಅಗಾಧ. ಊರಿಂದ ಊರಿಗೆ, ಸಮುದಾಯದಿಂದ ಸಮುದಾಯಕ್ಕೆ ಶಬ್ದಗಳ ಬಳಕೆಯಲ್ಲಿ ವೈವಿಧ್ಯವಿದೆ. ಸಾಮಾನ್ಯವಾಗಿ ಪ್ರತಿ 20 ಕಿ.ಮೀ ಪ್ರದೇಶಕ್ಕೆ ಬಬ್ದಗಳ ಬಳಕೆ, ಅರ್ಥ ಬದಲಾಗುತ್ತದೆ ಎನ್ನಲಾಗುತ್ತದೆ. ಆದರೆ ಕುಂದಾಪುರ ಕನ್ನಡದಲ್ಲಿ ಪ್ರತಿ 2 ಕಿ.ಮೀ ಪ್ರದೇಶದಲ್ಲೇ ಈ ಬದಲಾವಣೆ ಕಾಣಬಹುದು’ ಎಂದು ನಿದರ್ಶನ ಸಹಿತ ನಿರೂಪಿಸಿದರು.

ಉಡುಪಿ ಜಿಲ್ಲೆಯ ಕುಂದಾಪುರ, ಬೈಂದೂರು ತಾಲ್ಲೂಕು ಹಾಗೂ ಸುತ್ತಮುತ್ತಲಿನ 8 ಲಕ್ಷ ಜನರು ಮಾತನಾಡುವ ಈ ಭಾಷೆಯು, ಪ್ರಾದೇಶಿಕ ರೂಪ ಪಡೆದ ಹಳಗನ್ನಡವೇ ಆಗಿದೆ. ಬೆಂಗಳೂರು, ಮೈಸೂರು ಮೊದಲಾದೆಡೆ, ಇದು ‘ಕೋಟಾ ಕನ್ನಡ’ ಎಂದು ಪರಿಚಿತ. ಕೆಲವರು ಇದನ್ನು ಕುಂದಗನ್ನಡ ಎಂದು ಕರೆಯುವುದೂ ಇದೆ. ಆದರೆ ಸ್ಥಳೀಯರು ಕುಂದಾಪ್ರ ಕನ್ನಡ ಎಂದೇ ಕರೆಯುತ್ತಾರೆ ಎಂದು ವಿವರಿಸಿದರು.

ತಾವು ‘ಕುಂದಾಪ್ರ ಕನ್ನಡ ನಿಘಂಟು’ ರಚಿಸಿದ ಪರಿಯನ್ನು ಅವರು ವಿವರಿಸಿದರು. 2001ರ ಜುಲೈನಲ್ಲಿ ಮುಂಬೈನಲ್ಲಿ ಶುರುವಾದ ಪ್ರಯತ್ನ ಮುಂದಿನ 20 ವರ್ಷಗಳಲ್ಲಿ ಕುಂದಾಪ್ರ ಕನ್ನಡದ 10 ಸಾವಿರಕ್ಕೂ ಹೆಚ್ಚು ಶಬ್ದ, 1,700ಕ್ಕೂ ಹೆಚ್ಚು ನುಡಿಗಟ್ಟುಗಳು ಮತ್ತು ಸಾವಿರಾರು ಹಾಡುಗಳ ಸಂಗ್ರಹದವರೆಗೆ ಹೇಗೆ ಸಾಗಿ ಬಂತು ಎಂಬ ಅನುಭವ ಹಂಚಿಕೊಂಡರು.

ಜಾನಪದ ತಜ್ಞ, ಲೇಖಕ ಎಸ್.ಎ. ಕೃಷ್ಣಯ್ಯ ಅವರು ಕುಂದಾಪುರದ ಸಂಸ್ಕೃತಿಯೊಂದಿಗೆ ಬೆರೆತ ನಾಗಮಂಡಲ, ಕಂಬಳ, ಕೋಳಿ ಅಂಕ, ಕದಿರು ಕಟ್ಟುವುದು ಸೇರಿದಂತೆ ಹಲವು ಆಚರಣೆಗಳು ಮತ್ತು ಅವುಗಳ ಜೊತೆಗೆ ಪಾಕೃತಿಕ ಮತ್ತು ಜನಪದ ಮಹತ್ವವನ್ನ ವಿವರಿಸಿದರು.

ಲೇಖಕಿ ಸುಶೀಲಾ ಪುನೀತಾ ಅವರು ಕನ್ನಡ ಪುಸ್ತಕಗಳ ಇಂಗ್ಲಿಷ್ ಭಾಷಾಂತರ ಕಾರ್ಯದ ಸವಾಲುಗಳನ್ನು ಹಂಚಿಕೊಂಡರು.

ಮಕ್ಕಳಿಂದ ಬ್ಯಾರಿ ಭಾಷೆ ಉಳಿವು

• ವಿಠಲ

ಬೆಂಗಳೂರು: ‘ಮನೆಯಿಂದಲೇ ಮಕ್ಕಳೊಂದಿಗೆ ಬ್ಯಾರಿ ಭಾಷೆಯಲ್ಲಿ ವ್ಯವಹರಿಸಿದರೆ ಮಾತ್ರವೇ ಬ್ಯಾರಿ ಭಾಷೆ ಉಳಿಸಲು ಸಾಧ್ಯ’ ಎಂದು ‘ಪ್ರಜಾವಾಣಿ’ ಸಹ ಸಂಪಾದಕ ಬಿ.ಎಂ ಹನೀಫ್ ಅಭಿಪ್ರಾಯಪಟ್ಟರು.

‘ಬ್ಯಾರಿ ಭಾಷೆ’ ಕುರಿತ ಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಕ್ರಿ.ಶ. 640ರಲ್ಲಿ ಕರಾವಳಿಗೆ ಇಸ್ಲಾಂ ಧರ್ಮ ಪ್ರಚಾರ ಆರಂಭವಾಯಿತು. ಅರಬ್ಬರು ವ್ಯಾಪಾರಿಗಳಾಗಿ ಬಂದ ನಂತರ ಬ್ಯಾರಿ ಭಾಷೆ ಬೆಳೆಯಲು ಆರಂಭವಾಯಿತು. ಕರಾವಳಿಯಲ್ಲಿ ಶೇ 99 ಬ್ಯಾರಿಗಳು ಮುಸ್ಲಿಂ ಭಾಷೆ ಮಾತನಾಡುತ್ತಾರೆ’ ಎಂದರು.

ತುಳು ಮತ್ತು ಬ್ಯಾರಿಗೆ ಹಲವು ಸಾಮ್ಯತೆ ಇವೆ. ಬ್ಯಾರಿಗಳಲ್ಲಿ ಪುದಿಯರಿ (ಹೊಸ ಅಕ್ಕಿ ಊಟ) ಎನ್ನುವುದು ಇದೆ. ಇದು ತುಳುವರಲ್ಲೂ ಇದೆ. ಇತ್ತೀಚಿನ ದಿನಗಳಲ್ಲಿ ಧರ್ಮದ ಮೇಲೆ ಸಾಂಸ್ಕೃತಿಕ ವಿಚಾರಗಳು ಸವಾರಿ ಮಾಡುತ್ತಿವೆ ಎಂದು ಕಳವಳ ವ್ಯಕ್ತಪಡಿಸಿದರು.

‘ವಿದೇಶ ಹಾಗೂ ನಗರ ಜೀವನಕ್ಕೆ ಬ್ಯಾರಿಗಳು ಹೊಂದಿಕೊಂಡ ನಂತರ ಬ್ಯಾರಿ ಭಾಷೆ ಮಾತನಾಡುವವರ ಸಂಖ್ಯೆ ಕಡಿಮೆಯಾಗಿದೆ. ಭಾಷೆ ಉಳಿಸುವಲ್ಲಿ ಅಕಾಡೆಮಿಯೂ ಬಹಳಷ್ಟು ಕೆಲಸ ಮಾಡಿದೆ. ಆದರೆ ಈಚೆಗೆ ಮೂವರನ್ನು ಬ್ಯಾರಿ ಅಕಾಡೆಮಿಗೆ ಆಯ್ಕೆ ಮಾಡಲಾಗಿತ್ತು. ಅವರಿಗೆ ಬ್ಯಾರಿ ಭಾಷೆಯೇ ತಿಳಿದಿಲ್ಲ’ ಎಂದರು. ಪತ್ರಕರ್ತ ಎನ್.ಎ. ಎಂ. ಇಸ್ಮಾಯಿಲ್ ಇದ್ದರು.

‘ದೇವೇಗೌಡರ ನಿದ್ರೆಯನ್ನೇ ವಿಜೃಂಭಿಸಿದ ಮಾಧ್ಯಮ’

• ಸಚ್ಚಿದಾನಂದ ಕುರಗುಂದ

ಬೆಂಗಳೂರು: ‘ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡ ಅವರ ತೀಕ್ಷ್ಣಗ್ರಹಿಕಾ ಶಕ್ತಿಯನ್ನು ಗುರುತಿಸದ ಮಾಧ್ಯಮಗಳು, ಅವರು ಕಣ್ಮುಚ್ಚಿ ಕುಳಿತಿರುವುದನ್ನೇ ನಿದ್ರೆ ಎಂಬಂತೆ ಬಿಂಬಿಸಿ ಪ್ರಚಾರ ಮಾಡಿದವು’ ಎಂದು ಪತ್ರಕರ್ತ ಸುಗತ ಶ್ರೀನಿವಾಸರಾಜು ಬೇಸರ ವ್ಯಕ್ತಪಡಿಸಿದರು.

‘ಜೀವನ ಚರಿತ್ರೆಗಳ ಲೇಖಕನ ಆಂತರಿಕ ಮನಸ್ಸು’ ಕುರಿತ ಗೋಷ್ಠಿಯಲ್ಲಿ ಎಚ್.ಡಿ. ದೇವೇಗೌಡರ ಜೀವನ ಚರಿತ್ರೆ ಆಧರಿಸಿದ ‘ಫರೋಸ್ ಇನ್ ಎ ಫೀಲ್ಡ್’ ಕೃತಿ ರಚನೆಯ ಸಂದರ್ಭದಲ್ಲಿನ ಕೆಲ ಸಂಗತಿಗಳನ್ನು ವಿವರಿಸಿದರು.

‘ದಿನಪತ್ರಿಕೆಯೊಂದರಲ್ಲಿ ನಿದ್ರೆ ಮಾಡುತ್ತಿದ್ದ ಚಿತ್ರ ಪ್ರಕಟವಾಗಿದ್ದನ್ನು ಅವರಿಗೆ ತೋರಿಸಿದ್ದೆ. ತಕ್ಷಣವೇ ಪ್ರತಿಕ್ರಿಯಿಸಿದ್ದ ದೇವೇಗೌಡರು, ನೆಹರೂ ಅವರೂ ನಿದ್ರೆ ಮಾಡುತ್ತಿದ್ದರು ಎಂದರು. ಅವರಿಗೂ ಕಣ್ಣಿನ ಸಮಸ್ಯೆಯೂ ಇತ್ತು. ದೀಪದ ಪ್ರಖರತೆಗೂ ಕಣ್ಣು ಮುಚ್ಚುತ್ತಿದ್ದರು. ಆದರೆ, ಈ ಬಗ್ಗೆ ಅವರ ನಿಷ್ಪ್ರಯೋಜಕ ಮಾಧ್ಯಮ ಕಾರ್ಯದರ್ಶಿಯವರು ಮಾಧ್ಯಮಗಳಿಗೆ ಮನವರಿಕೆ ಮಾಡುವ ಪ್ರಯತ್ನವನ್ನೇ ಮಾಡಲಿಲ್ಲ’ ಎಂದರು.

‘ದೇವೇಗೌಡರ ನಿದ್ರೆ ಕುರಿತು ಪಿ. ಚಿದಂಬರಂ ಅವರಲ್ಲೂ ವಿಚಾರಿಸಿದ್ದೆ. ಆಗ ಅವರು, ಇದನ್ನು ನೀವು ನಂಬುತ್ತೀರಾ ಎಂದು ಮರುಪ್ರಶ್ನೆ ಹಾಕಿದರು’ ಎಂದು ತಿಳಿಸಿದರು.

ಸೇನಾಧಿಕಾರಿಗಳ ಜತೆಗಿನ ಸಭೆಯೊಂದರ ಉದಾಹರಣೆ ನೀಡಿದ ಅವರು, ‘ತಾಳ್ಮೆಯಿಂದ ಎಲ್ಲವನ್ನೂ ಆಲಿಸಿದ ದೇವೇಗೌಡರು, ಸಭೆಯ ಸಾರಾಂಶವನ್ನು ವಿವರಿಸಿದರು. ಆದರೆ, ಕೆಲವರು ಇವರು ಸಭೆಯಲ್ಲೇ ನಿದ್ರೆ ಮಾಡಿದ್ದಾರೆ ಎಂದೇ ಭಾವಿಸಿದ್ದರು. ಪ್ರತಿ ದಿನ ಹತ್ತಾರು ಸಭೆಗಳನ್ನು ನಡೆಸುತ್ತಿದ್ದ ಅವರು ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದು ಸಹ ಕಡಿಮೆ. ಹೀಗಾಗಿ, ನಿದ್ರಾಹೀನತೆಯೂ ಅವರನ್ನು ಕಾಡುತ್ತಿತ್ತು’ ಎಂದು ವಿವರಿಸಿದರು.

‘ನಾನು ಅವರ ಜೀವನ ಚರಿತ್ರೆಯನ್ನು ಬರೆಯುವಾಗ ದೇವೇಗೌಡರು ಯಾವುದೇ ರೀತಿಯಲ್ಲಿ ಹಸ್ತಕ್ಷೇಪ ಮಾಡಲಿಲ್ಲ. ಪ್ರಜಾಸತ್ತಾತ್ಮಕ ರೀತಿಯಲ್ಲಿ ವರ್ತಿಸಿದರು’ ಎಂದು ಹೇಳಿದರು.

ಹಿಂದಿ ಚಿತ್ರರಂಗದ ಲಕ್ಷ್ಮೀಕಾಂತ್ – ಪ್ಯಾರೇಲಾಲ್ ಜೋಡಿ ಕುರಿತ ಕೃತಿ ರಚನೆಯ ಸಂದರ್ಭಗಳನ್ನು ಪತ್ರಕರ್ತ ರಾಜೀವ್ ವಿಜಯಕರ್ ನೆನಪಿಸಿಕೊಂಡರು. ‘ಡಿಸ್‌ರಪ್ಟರ್: ಹೌ ವಿ.ಪಿ. ಸಿಂಗ್ ಶೂಕ್ ಇಂಡಿಯಾ’ ಕೃತಿ ರಚಿಸಿರುವ ಪತ್ರಕರ್ತ ದೇಬಾಶಿಶ್ ಮುಖರ್ಜಿ ಅವರು, ವಿ.ಪಿ. ಸಿಂಗ್ ಮತ್ತು ರಾಜೀವ್ ಗಾಂಧಿ ಅವರ ಒಡನಾಟ ಹಂಚಿಕೊಂಡರು.

‘ಜಾನಕಿ’-‘ಊರ್ಮಿಳೆ’ಯ ಕುಶಲೋಪರಿ

• ನವೀನ್ ಕುಮಾರ್ ಜಿ.

ಬೆಂಗಳೂರು: ‘ಬರಹ ಮತ್ತು ನನ್ನ ನಡುವೆ ಅಂತರ ಬೇಕಿತ್ತು ಹಾಗೂ ಉದ್ಯೋಗದ ಕಾರಣಕ್ಕೆ ನಿಜವಾದ ಹೆಸರನ್ನು ಅಡಗಿಸಬೇಕಾದ ಅನಿವಾರ್ಯ ಇತ್ತು ಈ ಕಾರಣಗಳಿಂದಾಗಿ ‘ಜಾನಕಿ’ ಹೆಸರಿನಲ್ಲಿ ಸಾಹಿತ್ಯ ರಚನೆ ಮಾಡಿದೆ’ ಎಂದು ಪತ್ರಕರ್ತ ಜೋಗಿ ಹೇಳಿದರು.

‘ಓದುಗರು ಕೃತಿಗಳಲ್ಲಿ ಲೇಖಕರನ್ನು ಹುಡುಕುವ ಪ್ರಯತ್ನ ಮಾಡುತ್ತಾರೆ. 'ಊರ್ಮಿಳೆ' ಹೆಸರು ನನ್ನ ನಿಜವಾದ ಗುರುತನ್ನು ಮರೆಮಾಚಲು ಸಹಕಾರಿಯಾಯಿತು’ ಎಂದು ಪತ್ರಕರ್ತ ಜಿ.ಎನ್. ಮೋಹನ್ ತಿಳಿಸಿದರು.

ಬೆಂಗಳೂರು ಸಾಹಿತ್ಯ ಉತ್ಸವದಲ್ಲಿ ಭಾನುವಾರ ನಡೆದ ‘ಕಥೆಯೆಂಬುದು ಆತ್ಮಕಥೆಯೂ ಹೌದು’ ಸಂವಾದ ಕಾರ್ಯಕ್ರಮದಲ್ಲಿ ಈ ಇಬ್ಬರು ತಮ್ಮ ಕಾವ್ಯನಾಮದ ಸ್ವಾರಸ್ಯ ಬಿಚ್ಚಿಟ್ಟರು.

‘ಜಾನಕಿ’ ಹೆಸರಿನಿಂದಾಗಿ ನನಗೆ ಅನಾಮಿಕತೆ ಸಿಕ್ಕಿತು. ಅನಾಮಿಕತೆ ಒಬ್ಬ ಲೇಖಕನನ್ನು ಗಹನವಾಗಿ ನೋಡುವಂತೆ ಮಾಡುತ್ತದೆ. ನನ್ನ ‘ಕಾಡ ಬೆಳದಿಂಗಳು’ ಕಾದಂಬರಿ ಸಿನಿಮಾ ಆದಾಗ ಅದರಲ್ಲಿ ನಾನು ನಿರೂಪಕನಾಗಿರಲಿಲ್ಲ. ಅದು ನಿರ್ದೇಶಕನ ಆತ್ಮಕಥೆಯೂ ಆಯಿತು. ಹೀಗೆ ಒಂದೇ ಕೃತಿಯು ಹಲವರ ಆತ್ಮಕಥೆಯಾಗಲು ಸಾಧ್ಯವಿದೆ ಎಂದು ಜೋಗಿ ಅಭಿಪ್ರಾಯಪಟ್ಟರು.

‘ಯಾವ ಕೃತಿಯಲ್ಲಿ ಒಬ್ಬ ಲೇಖಕ ಸತ್ಯ ಹೇಳುತ್ತಾನೋ ಆ ಕೃತಿ ಓದುಗನನ್ನು ಬಹುಬೇಗ ತಲುಪುತ್ತದೆ’. ಎಂದರು.

‘ಮೊದಲು ನಾನು ಪ್ರಬಂಧಗಳನ್ನು ಬರೆದಿದ್ದೆ. ಅದು ಅನಂತರ ಪುಸ್ತಕವಾಗಿದೆ. ಈ ಬರಹಗಳನ್ನು ಪ್ರಕಟಣೆ ಮಾಡುವಾಗ ಪ್ರಕಾಶಕರು ಆತ್ಮಕಥನಾತ್ಮಕ ಬರಹಗಳು ಎಂದು ಉಲ್ಲೇಖಿಸಿದರು. ನಾನು ಎಲ್ಲೂ ಇವು ಆತ್ಮಕಥನಾತ್ಮಕ ಬರಹಗಳು ಎಂದು ಹೇಳಿರಲಿಲ್ಲ. ಆದರೂ ಈ ರೀತಿ ಉಲ್ಲೇಖಿಸಲು ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿನ ಬರಹಗಳಲ್ಲಿ ಲೇಖಕನನ್ನು ಹೆಕ್ಕುವ ಪ್ರವೃತ್ತಿ ಕಾರಣ’ ಎಂದು ಜಿ.ಎನ್. ಮೋಹನ್ ಹೇಳಿದರು.

ಬೇರೆ ಹೆಸರಲ್ಲಿ ಬರೆದಾಗ ಮತ್ತು ನನ್ನದೇ ಹೆಸರಲ್ಲಿ ಬರೆದಾಗ ಓದುಗರಿಗೆ ಭಿನ್ನರೀತಿಯ ಓದುಗಳು ಸಿಗುತ್ತವೆ. ಬರಹ ಮತ್ತು ಬರಹಗಾರನ ನಡುವೆ ಬಹಳ ತೆಳುವಾದ ಗೆರೆ ಇದೆ ಎಂದರು.

ಕೋವಿಡ್: 19 ಜಿಲ್ಲೆಗಳಲ್ಲಿ ಪ್ರಕರಣ ಪತ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಭಾನುವಾರ 19 ಜಿಲ್ಲೆಗಳಲ್ಲಿ ಹೊಸದಾಗಿ ಕೋವಿಡ್ ಪ್ರಕರಣಗಳು ಪತ್ತೆಯಾಗಿದ್ದು, 300 ಮಂದಿ ಸೋಂಕಿತರಾಗಿರುವುದು ದೃಢಪಟ್ಟಿದೆ.

ಒಂದು ದಿನದ ಅವಧಿಯಲ್ಲಿ 1.12 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ಸೋಂಕು ದೃಢ ಪ್ರಮಾಣ ಶೇ 0.26ರಷ್ಟಿದೆ. ನಾಲ್ಕು ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಎರಡಂಕಿ, 14 ಜಿಲ್ಲೆಗಳಲ್ಲಿ ಒಂದಂಕಿಯಲ್ಲಿದೆ. ಬಾಗಲಕೋಟೆ, ಬೀದರ್ ಸೇರಿ 11 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು ವರದಿಯಾಗಿಲ್ಲ. ಬೆಂಗಳೂರು ನಗರದಲ್ಲಿ 168 ಮಂದಿ ಕೋವಿಡ್ ಪೀಡಿತರಾಗಿದ್ದಾರೆ. ದಕ್ಷಿಣ ಕನ್ನಡದಲ್ಲಿ 37, ಮೈಸೂರಿನಲ್ಲಿ 13, ಹಾಸನದಲ್ಲಿ 11 ಹಾಗೂ ಕೊಡಗಿನಲ್ಲಿ 10 ಪ್ರಕರಣಗಳು ವರದಿಯಾಗಿವೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 10ಕ್ಕಿಂತ ಕಡಿಮೆ ಇವೆ. ಈವರೆಗೆ ವರದಿಯಾದ ಒಟ್ಟು ಪ್ರಕರಣಗಳ ಸಂಖ್ಯೆ 30.02 ಲಕ್ಷಕ್ಕೆ ಏರಿಕೆಯಾಗಿದೆ.

ಸೋಂಕಿತರಲ್ಲಿ 279 ಮಂದಿ ಚೇತರಿಸಿಕೊಂಡಿದ್ದಾರೆ. ಗುಣಮುಖರಾದವರ ಸಂಖ್ಯೆ 29.56 ಲಕ್ಷ ದಾಟಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ 7,140ಕ್ಕೆ ಏರಿಕೆಯಾಗಿದೆ. ಬೆಂಗಳೂರಿನಲ್ಲಿ 5,660 ಸೋಂಕಿತರಿದ್ದಾರೆ. ಯಾದಗಿರಿ ಹಾಗೂ ಬೀದರ್‌ನಲ್ಲಿ ಸಕ್ರಿಯ ಪ್ರಕರಣಗಳಿಲ್ಲ. ಹಾವೇರಿ, ಬಾಗಲಕೋಟೆ ಸೇರಿ 7 ಜಿಲ್ಲೆಗಳಲ್ಲಿ ಸಕ್ರಿಯ ಪ್ರಕರಣಗಳ ಸಂಖ್ಯೆ 10ಕ್ಕಿಂತ ಕಡಿಮೆಯಿದೆ. ಉಡುಪಿಯಲ್ಲಿ ಒಬ್ಬರು ಮೃತಪಟ್ಟಿದ್ದಾರೆ.





‘ಇಂಟರ್ನೆಟ್ ದುರ್ಬಳಕೆ: ಕಾನೂನು ರಚನೆಯಾಗಲಿ’

ಬೆಂಗಳೂರು: ‘ಇಂಟರ್ನೆಟ್ ವ್ಯವಸ್ಥೆಯಲ್ಲಿ ಅಕ್ರಮ ನಡೆಸಲು ಅವಕಾಶ ಕಲ್ಪಿಸುವ ಹೊಸ ಹೊಸ ‘ಕುತಂತ್ರ’ಗಳಿಗೆ ಕೊನೆ ಎಂಬುದಿಲ್ಲ. ಇವುಗಳಿಗೆ ಕಡಿವಾಣ ಹಾಕಲು ಸಮರ್ಥ ಕಾನೂನುಗಳನ್ನು ತ್ವರಿತವಾಗಿ ರಚಿಸಿ ಜಾರಿಗೊಳಿಸಬೇಕು. ಈ ಪ್ರಕ್ರಿಯೆ ವಿಳಂಬ ಆದಷ್ಟೂ ಸವಾಲುಗಳು ಜಾಸ್ತಿ’ ಎಂದು ವಿಜ್ಞಾನಿ ಹಾಗೂ ಲೇಖಕ ಮೆಹ್ರಾನ್ ಸಹಮಿ ಅಭಿಪ್ರಾಯಪಟ್ಟರು.

ರಾಹುಲ್ ಮಥಾನ್ ನಡೆಸಿಕೊಟ್ಟ ಸಂವಾದ ಕಾರ್ಯಕ್ರಮದಲ್ಲಿ ಮೆಹ್ರಾನ್ ಅವರು ತಮ್ಮ ‘ಸಿಸ್ಟಮ್ ಎರರ್: ವೇರ್ ಬಿಗ್ ಟೆಕ್ ವೆಂಟ್ ರಾಂಗ್ ಆ್ಯಂಡ್ ಹೌ ವಿ ಕ್ಯಾನ್ ರಿಬೂಟ್’ ಕೃತಿಯ ಬಗ್ಗೆ ಮಾತನಾಡಿದರು. ಪ್ರಶ್ನೆಗೆ ಉತ್ತರಿಸಿದ ಮೆಹ್ರಾನ್, ‘ಇಂಟರ್ನೆಟ್‌ನಲ್ಲಿ ಪ್ರಕಟವಾಗಿದ್ದನ್ನು ನಕಲು ಮಾಡುವುದನ್ನು ತಡೆಯುವುದು ಕ್ಲಿಷ್ಟಕರ ಸವಾಲು. ಬೌದ್ಧಿಕ ಹಕ್ಕು ಸಂರಕ್ಷಣೆಗೆ ಕಠಿಣ ಕಾನೂನು ಜತೆಗೆ ತಂತ್ರಜ್ಞಾನದ ಪರಿಹಾರಗಳ ಮೊರೆ ಹೋಗುವ ಅನಿವಾರ್ಯವಿದೆ’ ಎಂದರು.

ಚಿತ್ರಾವಳಿ

ಶ್ರೀ ರಾಮಸೇವಾ ಮಂಡಲಿ ಟ್ರಸ್ಟ್ ನಗರದ ಗಾಯನ ಸಮಾಜದಲ್ಲಿ ಹಮ್ಮಿಕೊಂಡಿರುವ 27ನೇ ವರ್ಷದ ಎಸ್‌.ವಿ.ನಾರಾಯಣಸ್ವಾಮಿ ರಾವ್ ಸ್ಮಾರಕ ಸಂಗೀತೋತ್ಸವ ಕಾರ್ಯಕ್ರಮದಲ್ಲಿ ಗಾಯಕ ಟಿ.ಎನ್‌. ಶೇಷಗೋಪಾಲನ್ ಮತ್ತು ಸಂಗಡಿಗರು ಕರ್ನಾಟಕ ಶಾಸ್ತ್ರೀಯ ಸಂಗೀತ ಕಛೇರಿಯನ್ನು ಭಾನುವಾರ ಪ್ರಸ್ತುತಪಡಿಸಿದರು –ಪ್ರಜಾವಾಣಿ ಚಿತ್ರ

ಭೀಮಸೇನ್ ಜೋಶಿ ಅವರ ಜನ್ಮ ಶತಮಾನೋತ್ಸವದ ಅಂಗವಾಗಿ ಜಿ.ಬಿ.ಜೋಶಿ ಮೆಮೊರಿಯಲ್ ಟ್ರಸ್ಟ್ ವತಿಯಿಂದ ಚೌಡಯ್ಯ ಸ್ಮಾರಕ ಭವನದಲ್ಲಿ ಭಾನುವಾರ ಆಯೋಜಿಸಿದ್ದ ‘ಭೀಮಪಲಾಸ’ ಸಂಗೀತೋತ್ಸವದಲ್ಲಿ ಕೊಳಲು ವಾದಕರಾದ ಪಂಡಿತ್ ಪ್ರವೀಣ್ ಗೋಡ್ಖಿಂಡಿ ಹಾಗೂ ಷಡಜ್ ಗೋಡ್ಖಿಂಡಿ ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟರು –ಪ್ರಜಾವಾಣಿ ಚಿತ್ರ

ಸಂಕ್ಷಿಪ್ತ ಸುದ್ದಿ

ಡಿಸೈನೂರು:ವಿನ್ಯಾಸ ಮತ್ತು ಸಂವಹನ ಕುರಿತು ಚರ್ಚೆ:ಪ್ರೇಮ್ ಚಂದಾವರ್ಕರ್, ಆಯೋಜನೆ–ಇನ್‌ಸ್ಟಿಟ್ಯೂಟ್ ಆಫ್ ಇಂಡಿಯನ್ ಇಂಟೀರಿಯರ್ ಡಿಸೈನರ್ಸ್ (ಐಐಐಡಿ), ಸ್ಥಳ–ರಂಗೋಲಿ ಕೇಂದ್ರ, ಎಂ.ಜಿ.ರಸ್ತೆ, ಬೆಳಿಗ್ಗೆ 9ರಿಂದ

‘ಎಸ್.ಸಿ–ಎಸ್.ಟಿ ಅಲೆಮಾರಿ ಸಮುದಾಯಗಳ ಪ್ರಸ್ತುತ ಸವಾಲುಗಳು ಹಾಗೂ ಪರಿಹಾರೋಪಾಯಗಳು’ ಸಂವಾದ:ಉದ್ಘಾಟನೆ–ಬಿ.ಎಸ್. ಶಿವಣ್ಣ, ಅಧ್ಯಕ್ಷತೆ–ವೆಂಕಟರಮಣಯ್ಯ, ಪ್ರಾಸ್ತಾವಿಕ ನುಡಿ–ಆದರ್ಶ್ ಯಲ್ಲಪ್ಪ, ಮಾತನಾಡುವವರು–ಕಿರಣ್ ಕುಮಾರ್ ಕೊತ್ತಗೆರೆ, ಲೋಹಿತಾಶ್ವ, ಕೃಷ್ಣಮೂರ್ತಿ, ಸುಶೀಲ ಕೊರಗ, ಆಯೋಜನೆ–ಎಸ್‌ಸಿ–ಎಸ್‌ಟಿ ಅಲೆಮಾರಿ ವಿಮುಕ್ತ ಬುಡಕಟ್ಟು ಮಹಾಸಭಾ, ಸ್ಥಳ–ಗಾಂಧಿ ಭವನ, ಬೆಳಿಗ್ಗೆ 10

ದೇಸಿ ಪ್ರಮಾಣಪತ್ರ ಪ್ರದಾನ:ಉದ್ಘಾಟನೆ–ಎಸ್.ರಾಜೇಂದ್ರ ಪ್ರಸಾದ್, ಅತಿಥಿಗಳು–ಜಿ.ಎಸ್.ಜಯಸ್ವಾಮಿ, ಜಿ.ಆರ್.ಪೆನ್ನೋಬಳಿಸ್ವಾಮಿ, ಎನ್. ದೇವಕುಮಾರ್, ಆಯೋಜನೆ–ಬೆಂಗಳೂರು ಕೃಷಿ ವಿಶ್ವವಿದ್ಯಾಲಯ, ಸ್ಥಳ–ಬಾಬುರಾಜೇಂದ್ರ ಪ್ರಸಾದ್ ಅಂತರರಾಷ್ಟ್ರೀಯ ಸಮಾವೇಶ ಭವನ, ಜಿಕೆವಿಕೆ, ಬೆಳಿಗ್ಗೆ 11.30

ಎಸ್.ವಿ.ನಾರಾಯಣಸ್ವಾಮಿ ರಾವ್ ಸ್ಮಾರಕ ಅಂತರರಾಷ್ಟ್ರೀಯ ಸಂಗೀತ ಉತ್ಸವ:ವಿ.ಶ್ರೀಕೃಷ್ಣನ್ (ಬೆ.9.15), ಎನ್.ಎಚ್.ಶ್ರೀಹರಿ ಭಟ್ (10.20), ಸೌಮ್ಯಾ ಆಚಾರ್ಯ (11.25), ಶಶಾಂಕ್ ವಿ. (12.30), ಶಂಕರ್ ಶಾನಭೋಗ (2.30), ಆರ್.ಎಸ್.ರಮಾಕಾಂತ್ (ಸಂಜೆ 4), ಶಶಾಂಕ್ ಸುಬ್ರಹ್ಮಣ್ಯ ಹಾಗೂ ಪ್ರವೀಣ್ ಗೋಡ್ಖಿಂಡಿ ಅವರಿಂದ ಸಂಗೀತ ಕಾರ್ಯಕ್ರಮಗಳು (6.45), ಆಯೋಜನೆ–ಶ್ರೀರಾಮಸೇವಾ ಮಂಡಲಿ ಟ್ರಸ್ಟ್, ಸ್ಥಳ–ಬೆಂಗಳೂರು ಗಾಯನ ಸಮಾಜದ ಸಭಾಂಗಣ, ಕೆ.ಆರ್.ರಸ್ತೆ

47ನೇ ವಾರ್ಷಿಕ ಕೇಕ್ ಶೋ:ಸ್ಥಳ–ಸೇಂಟ್ ಜೋಸೆಫ್ ಶಾಲೆಯ ಮೈದಾನ, ಸಂಜೆ 4

ಎಚ್.ಎಸ್.ಪಾರ್ವತಿ ಪ್ರಶಸ್ತಿ ಪ್ರದಾನ:ವಿಜಯಾ, ಪುರಸ್ಕೃತರು–ಎಸ್.ವಿ.ಪ್ರಭಾವತಿ, ವೈ.ಸಿ.ಭಾನುಮತಿ, ಅಭಿನಂದನಾ ನುಡಿ–ಎಚ್.ಎಲ್.ಪುಷ್ಪಾ, ಎಂ.ಎಸ್.ವಿದ್ಯಾ, ಅಧ್ಯಕ್ಷತೆ–ವನಮಾಲಾ ಸಂಪನ್ನಕುಮಾರ್, ಆಯೋಜನೆ–ಕರ್ನಾಟಕ ಲೇಖಕಿಯರ ಸಂಘ, ಸ್ಥಳ–ಬಿಎಂಶ್ರೀ ಪ್ರತಿಷ್ಠಾನ, ಎನ್.ಆರ್. ಕಾಲೊನಿ, ಸಂಜೆ 4

ಸುಗತಾ ಶ್ರೀನಿವಾಸರಾಜು ಅವರ ‘ಫರೋಸ್ ಇನ್ ಎ ಫೀಲ್ಡ್’ ಪುಸ್ತಕ ಮರುಬಿಡುಗಡೆ:ಸುಪ್ರೀಂ ಕೋರ್ಟ್‌ನ ನಿವೃತ್ತ ಮುಖ್ಯ ನ್ಯಾಯಮೂರ್ತಿ ಎಂ.ಎನ್. ವೆಂಕಟಾಚಲಯ್ಯ, ಅತಿಥಿಗಳು–ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡ, ಚಿರಂಜೀವಿ ಸಿಂಗ್, ಎಸ್.ಎಸ್.ಮೀನಾಕ್ಷಿ ಸುಂದರಂ, ಬಿ.ಎಲ್.ಶಂಕರ್, ಸ್ಥಳ–ತಾಜ್ ವೆಸ್ಟ್‌ಎಂಡ್, ಸಂಜೆ 6

ಹುಣ್ಣಿಮೆ ಹಾಡಿನ 151ನೇ ಸಂಚಿಕೆ–ಸಿದ್ದಲಿಂಗಯ್ಯ ನೆನಪಿನ ಕವಿ ಕಾವ್ಯ ನಮನ:ಅತಿಥಿಗಳು–ಸುಬ್ಬು ಹೊಲೆಯಾರ್, ಡಾ.ಮಾನಸ, ಆಯೋಜನೆ–ಮಲ್ಲೇಶ್ವರ ಗೆಳೆಯರ ಬಳಗ, ಸ್ಥಳ–ಕಾಡುಮಲ್ಲೇಶ್ವರ ಬಯಲು ರಂಗಮಂದಿರ, ಮಲ್ಲೇಶ್ವರ, ಸಂಜೆ 6.30

ಮಾರ್ಗಶೀರ್ಷೋತ್ಸವ:ಉಡೈಯಲೂರು ಕಲ್ಯಾಣರಾವ್ ಭಾಗವತರ್ ಮತ್ತು ತಂಡದಿಂದ ನಾಮಸಂಕೀರ್ತನೆ, ಆಯೋಜನೆ ಮತ್ತು ಸ್ಥಳ–ಸುರಭಾರತಿ ಸಂಸ್ಕೃತ ಮತ್ತು ಸಾಂಸ್ಕೃತಿಕ ಪ್ರತಿಷ್ಠಾನ, ಎಚ್‌ಆರ್‌ಬಿಆರ್ ಬಡಾವಣೆ,ಸಂಜೆ 6.30

ವಕೀಲರ ಸಂಘಕ್ಕೆ ವಿವೇಕ್ ಅಧ್ಯಕ್ಷ

ಬೆಂಗಳೂರು: ತೀವ್ರ ಜಿದ್ದಾಜಿದ್ದಿನಿಂದ ಕೂಡಿದ್ದ ಬೆಂಗಳೂರು ವಕೀಲರ ಸಂಘದ ಚುನಾವಣೆಯಲ್ಲಿ ನ್ಯಾಯವಾದಿ ವಿವೇಕ್ ಸುಬ್ಬಾರೆಡ್ಡಿ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಪ್ರಧಾನ ಕಾರ್ಯದರ್ಶಿಯಾಗಿ ಟಿ.ಜಿ.ರವಿ ಮತ್ತು ಖಜಾಂಚಿಯಾಗಿ ಹರೀಶ್ ಎಂ.ಟಿ. ಚುನಾಯಿತರಾಗಿದ್ದಾರೆ.

2021-24ರ ಅವಧಿಗೆ ಬೆಂಗಳೂರು ವಕೀಲರ ಸಂಘಕ್ಕೆ ಭಾನುವಾರ ಮತದಾನ ನಡೆಯಿತು. ಸುಮಾರು 16,500 ವಕೀಲರು ಮತದಾನದ ಹಕ್ಕು ಹೊಂದಿದ್ದರು, ಈ ಪೈಕಿ ಸುಮಾರು 11,500 ಮಂದಿ ಮತ ಚಲಾಯಿಸಿದ್ದರು.

ಸಂಘದ ಮಾಜಿ ಅಧ್ಯಕ್ಷ ಕೆ.ಎನ್. ಸುಬ್ಬಾರೆಡ್ಡಿ ಅವರ ಪುತ್ರರಾಗಿರುವ ಮತ್ತು ಬಿಜೆಪಿಯಲ್ಲಿ ಸಕ್ರಿಯವಾಗಿ ಗುರುತಿಸಿಕೊಂಡಿರುವ ವಿವೇಕ್ 1,900ಕ್ಕೂ ಅಧಿಕ ಮತಗಳ ಅಂತರದಿಂದ ಗೆಲುವು ಸಾಧಿಸಿದ್ದಾರೆ.

ಚಲಾವಣೆಯಾಗಿರುವ ಮತಗಳ ಪೈಕಿ ವಿವೇಕ್ ರೆಡ್ಡಿ 4,804 ಮತಗಳನ್ನು ಪಡೆದರೆ, ಅವರ ಪ್ರತಿಸ್ಪರ್ಧಿ ಮತ್ತು ಹಾಲಿ ಅಧ್ಯಕ್ಷರಾಗಿದ್ದ ಎ.ಪಿ.ರಂಗನಾಥ್ 2,894 ಮತಗಳನ್ನು ಪಡೆದಿದ್ದಾರೆ. ಆರ್.ರಾಜಣ್ಣ 2,545 ಹಾಗೂ ಎಚ್.ಸಿ.ಶಿವರಾಮ್ 876 ಮತಗಳನ್ನು ಗಳಿಸಿದ್ದಾರೆ.

ಟಿ.ಜಿ.ರವಿ ಅವರು ತಮ್ಮ ಪ್ರತಿಸ್ಪರ್ಧಿ ಎಚ್.ವಿ. ಪ್ರವೀಣ್ ಗೌಡ ಅವರನ್ನು 496 ಮತಗಳ ಅಂತರದಿಂದ ಸೋಲಿಸಿದರು. ರವಿ 3,030 ಮತಗಳನ್ನು ಪಡೆದರೆ, ಪ್ರವೀಣ್ ಗೌಡ 2,534 ಮತಗಳನ್ನು ಗಳಿಸಿದರು. ಬೆಂಗಳೂರು ವಕೀಲರ ಸಂಘದ ಅಧ್ಯಕ್ಷ, ಪ್ರಧಾನ ಕಾರ್ಯದರ್ಶಿ, ಖಜಾಂಚಿ ಸ್ಥಾನಕ್ಕೆ ಮಾತ್ರವಲ್ಲದೆ, ಹೈಕೋರ್ಟ್‌ನ 7, ಮೇಯೋಹಾಲ್ ಮತ್ತು ಮ್ಯಾಜಿಸ್ಟ್ರೇಟ್ ಕೋರ್ಟ್‌ನ ತಲಾ 5 ಹಾಗೂ ಸಿಟಿ ಸಿವಿಲ್ ಕೋರ್ಟ್‌ನ 12 ಕಾರ್ಯಕಾರಿ ಸಮಿತಿ ಸದಸ್ಯ ಸ್ಥಾನಗಳಿಗೂ ಮತದಾನ ನಡೆದು, ಕಾರ್ಯಕಾರಿ ಸಮಿತಿ ಸದಸ್ಯರು ಆಯ್ಕೆಯಾಗಿದ್ದಾರೆ.

‘ತುಳು–ಕೊಡವ ಅಳಿವು ಉಳಿವು’ ಪುಸ್ತಕವನ್ನು (ಎಡದಿಂದ ನಾಲ್ಕನೆಯವರು) ಪುರುಷೋತ್ತಮ ಬಿಳಿಮಲೆ ಬಿಡುಗಡೆ ಮಾಡಿದರು. ವಿಧಾನ ಪರಿಷತ್ ಸದಸ್ಯ ಯು.ಬಿ.ವೆಂಕಟೇಶ್, ಎನ್.ಯು.ನಾಚಪ್ಪ ಕೊಡವ, ಎಲ್.ಹನುಮಂತಯ್ಯ, ಬಿ.ಕೆ.ಹರಿಪ್ರಸಾದ್ ಇದ್ದಾರೆ —ಪ್ರಜಾವಾಣಿ ಚಿತ್ರ

ಭಾಷೆಗಳನ್ನು ಉಳಿಸಲು ರಾಷ್ಟ್ರೀಯ ನೀತಿ ಅಗತ್ಯ: ಬಿಳಿಮಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಭಾಷೆಯೊಂದು ಸತ್ತರೆ, ಅದರಲ್ಲಿ ಅಡಗಿರುವ ಶ್ರೀಮಂತ ಸಂಸ್ಕೃತಿಯೂ ನಶಿಸುತ್ತದೆ. ನೆಲದ ಭಾಷೆಗಳ ಉಳಿವಿಗಾಗಿ ರಾಷ್ಟ್ರೀಯ ಭಾಷಾ ನೀತಿಯನ್ನು ರೂಪಿಸುವ ಅಗತ್ಯವಿದೆ’ ಎಂದು ವಿದ್ವಾಂಸ ಪುರುಷೋತ್ತಮ ಬಿಳಿಮಲೆ ಪ್ರತಿಪಾದಿಸಿದರು.

ಪ್ರಜಾ ಪ್ರಕಾಶನವು ಭಾನುವಾರ ಆಯೋಜಿಸಿದ್ದ ಆರ್.ಜಯಕುಮಾರ್ ಸಂಪಾದಕತ್ವದ ‘ತುಳು–ಕೊಡವ ಅಳಿವು ಉಳಿವು’ ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಕೊಡವ ಭಾಷೆ ಮಾತನಾಡುವವರ ಸಂಖ್ಯೆ ಕ್ಷೀಣಿಸಿರುವುದಾಗಿ 2011ರ ಜನಗಣತಿ ಹೇಳುತ್ತದೆ. ದೇಶದಲ್ಲಿರುವ 19,569 ಭಾಷೆಗಳನ್ನೂ ಜೋಪಾನವಾಗಿ ಕಾಪಾಡಲು ನೆರವಾಗುವ ಸಮಗ್ರ ಭಾಷಾ ನೀತಿಯನ್ನು ಜಾರಿಗೊಳಿಸಬೇಕು’ ಎಂದು ಒತ್ತಾಯಿಸಿದರು.

ರಾಜ್ಯಸಭಾ ಸದಸ್ಯ ಎಲ್. ಹನುಮಂತಯ್ಯ, ‘ಕನ್ನಡದಂತೆ ಹಿಂದಿಯೂ ಒಂದು ಭಾಷೆ. ಅದನ್ನು ಭಾಷೆಯಾಗಿ ಕಲಿಯಲು ಅಡ್ಡಿಯಿಲ್ಲ. ಆದರೆ, ನಮ್ಮ ತಾಯಿ ನುಡಿಯನ್ನೂ ಹಿಂದಿಕ್ಕಿ ಸ್ವೀಕರಿಸುವ ಹಾಗೂ ಒತ್ತಾಯಪೂರ್ವಕ ಹೇರಿಕೆ ಸಹಿಸಲಾಗದು’ ಎಂದರು.

ವಿಧಾನ ಪರಿಷತ್ ಸದಸ್ಯ ಬಿ.ಕೆ. ಹರಿಪ್ರಸಾದ್, ‘ಸಂವಿಧಾನವು ಡಾ.ಬಿ. ಆರ್.ಅಂಬೇಡ್ಕರ್ ನೀಡಿದ ಮಹತ್ವದ ಕೊಡುಗೆ. ಅದರ ಆಶಯಗಳ ಮೇಲೆ ಇತ್ತೀಚೆಗೆ ಆಕ್ರಮಣ ನಡೆಯುತ್ತಿದೆ. ಸಂವಿಧಾನವನ್ನು ರಕ್ಷಿಸುವುದು ನಮ್ಮೆಲ್ಲರ ಹೊಣೆ. ಅದನ್ನು ಕಳೆದುಕೊಂಡರೆ ಪಟೇಲರು, ಜಮೀನ್ದಾರರು ಮಾತ್ರ ಇರುತ್ತಾರೆ. ಉಳಿದವರು ಕೂಲಿಕಾರ್ಮಿಕರಾಗಿ ಉಳಿಯುತ್ತಾರೆ’ ಎಂದರು.

ಕೊಡವ ನ್ಯಾಷನಲ್ ಕೌನ್ಸಿಲ್ ಅಧ್ಯಕ್ಷ ಎನ್.ಯು.ನಾಚಪ್ಪ ಕೊಡವ, ‘ಕೊಡವ ಸಮುದಾಯವನ್ನು ನಿರ್ನಾಮ ಮಾಡುವ ಹುನ್ನಾರಗಳು ನಡೆಯುತ್ತಲೇ ಇವೆ. ಅಪರೂಪದ ಕೊಡವ ಸಂಸ್ಕೃತಿ ಹಾಳಾಗುವ ಸ್ಥಿತಿಯಲ್ಲಿದೆ’ ಎಂದು ಕಳವಳ ವ್ಯಕ್ತಪಡಿಸಿದರು.

‘ವೈದಿಕ ಸಂಪ್ರದಾಯ ಪಾಲಿಸದ ಕೊಡವರು’: ‘ಕೊಡವರು ವೈದಿಕ ಸಂಪ್ರದಾಯಗಳನ್ನು ಆಚರಿಸುವುದಿಲ್ಲ. ಸಮುದಾಯದಲ್ಲಿ ಅಸ್ಪೃಶ್ಯತೆ ಹಾಗೂ ಜಾತಿ ಭೇದ ಎನ್ನುವುದೇ ಇಲ್ಲ. ರಾಜಕೀಯ ಬೆನ್ನೆಲುಬಿಲ್ಲದೇ ಹೋದರೆ ಈ ಭಾಷೆ ಸಂವಿಧಾನದ ಎಂಟನೇ ಪರಿಚ್ಛೇದಕ್ಕೆ ಸೇರುವುದು ಕಷ್ಟ’ ಎಂದು ಎಲ್.ಹನುಮಂತಯ್ಯ ಹೇಳಿದರು.

‘ಕೊಡವರು ಯೋಧರಾಗಲು ಲಾಯಕ್ಕು ಎಂದು ತೀರ್ಮಾನಿಸಿಬಿಟ್ಟಿದ್ದೇವೆ. ಆದರೆ, ಆ ಮುಖಂಡನ ಸಮುದಾಯದಿಂದ ಒಬ್ಬ ಯೋಧರೂ ಇಲ್ಲ’ ಎಂದೂ ಟೀಕಿಸಿದರು.

ಪುಸ್ತಕ ಪರಿಚಯ

ಪುಸ್ತಕ: ತುಳು–ಕೊಡವ ಅಳಿವು ಉಳಿವು (ಸಂಸತ್ತಿನಲ್ಲಿ ಬಿ.ಕೆ. ಹರಿಪ್ರಸಾದ್ ಭಾಗ–1)
ಸಂಪಾದಕರು: ಆರ್. ಜಯಕುಮಾರ್
ಪ್ರಕಾಶಕರು: ಪ್ರಜಾ ಪ್ರಕಾಶನ
ಪುಟಗಳು: 96
ಬೆಲೆ: ₹100

ಸಹಾಯಕ ಪ್ರಾಧ್ಯಾಪಕರ ನೇಮಕಾತಿ: ಜನವರಿ ಅಂತ್ಯದಲ್ಲಿ ಲಿಖಿತ ಪರೀಕ್ಷೆ

1,242 ಹುದ್ದೆ: 33,379 ಅರ್ಜಿ

• ರಾಜೇಶ್ ರೈ ಚಟ್ಲ

ಬೆಂಗಳೂರು: ರಾಜ್ಯದ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿನ 26 ವಿಷಯಗಳಿಗೆ ಸಂಬಂಧಿಸಿದ 1,242 ಸಹಾಯಕ ಪ್ರಾಧ್ಯಾಪಕರ ಹುದ್ದೆಗಳಿಗೆ ಒಟ್ಟು 47,103 ಅರ್ಜಿಗಳು ಸಲ್ಲಿಕೆಯಾಗಿವೆ. ಆದರೆ, ಈ ಪೈಕಿ, 33,379 ಅಭ್ಯರ್ಥಿಗಳು ಮಾತ್ರ ಶುಲ್ಕ ಪಾವತಿಸಿ ಸ್ಪರ್ಧಾತ್ಮಕ ಪರೀಕ್ಷೆ ಬರೆಯಲು ಅರ್ಹರಾಗಿದ್ದಾರೆ.

ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಈ ಹುದ್ದೆಗಳಿಗೆ ನೇಮಕಾತಿ ಪ್ರಾಧಿಕಾರವಾಗಿದ್ದು, ಜನವರಿ ಕೊನೆಯ ವಾರದಲ್ಲಿ ಸ್ಪರ್ಧಾತ್ಮಕ ಪರೀಕ್ಷೆ ನಡೆಸಲಿದೆ. ಅದರಲ್ಲಿ ಪಡೆದ ಅಂಕಗಳ ಆಧಾರದಲ್ಲಿ ಆಯ್ಕೆ ನಡೆಯಲಿದೆ. ಸಂದರ್ಶನ ಇರುವುದಿಲ್ಲ.

1,242 ಹುದ್ದೆಗಳ ಪೈಕಿ 16 ವಿಷಯಗಳಿಗೆ ಸಂಬಂಧಿಸಿದ 145 ಹುದ್ದೆಗಳು (ಕಲ್ಯಾಣ ಕರ್ನಾಟಕದ 63) 2015ರಲ್ಲಿ ಭರ್ತಿಯಾಗದ ಹುದ್ದೆಗಳಾಗಿವೆ. ಉಳಿದಂತೆ, ಪ್ರಸಕ್ತ ಸಾಲಿಗೆ 25 ವಿಷಯಗಳಿಗೆ 1,097 (ಕಲ್ಯಾಣ ಕರ್ನಾಟಕದ 158) ಹುದ್ದೆಗಳಿಗೆ ನೇಮಕಾತಿ ನಡೆಯಲಿದೆ. ಒಟ್ಟು ಹುದ್ದೆಗಳಲ್ಲಿ ಶೇಕಡ 5ರಷ್ಟು ಹುದ್ದೆಗಳನ್ನು (60 ಹುದ್ದೆಗಳು) ಇಲಾಖೆಯ ಗ್ರೂಪ್ ‘ಸಿ’ ವೃಂದದಿಂದ ನೇರ ನೇಮಕಾತಿ ಮಾಡಿಕೊಳ್ಳಲಾಗುತ್ತದೆ.

ಅರ್ಜಿ ಶುಲ್ಕ ಪಾವತಿಸಿದವರು: ಕನ್ನಡ, ಇತಿಹಾಸ, ಅರ್ಥಶಾಸ್ತ್ರ ಮತ್ತು ವಾಣಿಜ್ಯ ವಿಷಯಗಳಲ್ಲಿ 100ಕ್ಕೂ ಹೆಚ್ಚು ಹುದ್ದೆಗಳಿಗೆ ನೇಮಕಾತಿ ನಡೆಯಲಿದೆ. ಕನ್ನಡ ವಿಷಯದ 107 ಹುದ್ದೆಗಳಿಗೆ ಅತೀ ಹೆಚ್ಚು 9,928 ಅರ್ಜಿಗಳು ಸಲ್ಲಿಕೆ ಆಗಿವೆ. ಆ ಪೈಕಿ 7,148 ಮಂದಿ ಮಾತ್ರ ಶುಲ್ಕ ಪಾವತಿಸಿದ್ದಾರೆ. ವಾಣಿಜ್ಯ ವಿಷಯದಲ್ಲಿ ಅತೀ ಹೆಚ್ಚು 198 ಹುದ್ದೆಗಳಿದ್ದು ಅರ್ಜಿ ಸಲ್ಲಿಸಿದ್ದ 6,801 ಅಭ್ಯರ್ಥಿಗಳ ಪೈಕಿ 5,015 ಅಭ್ಯರ್ಥಿಗಳು ಶುಲ್ಕ ಪಾವತಿಸಿದ್ದಾರೆ.

ಫ್ಯಾಷನ್ ಟೆಕ್ನಾಲಜಿ, ಸ್ಟ್ಯಾಟಿಸ್ಟಿಕ್ಸ್, ಎಲೆಕ್ಟ್ರಾನಿಕ್ಸ್, ಮೈಕ್ರೋ ಬಯಾಲಜಿ, ಭೂಗೋಳ ವಿಜ್ಞಾನ, ಭೂಗರ್ಭ ವಿಜ್ಞಾನ, ಸಾಮಾಜಿಕ ಕಾರ್ಯ, ಶಿಕ್ಷಣ, ಉರ್ದು ವಿಷಯಗಳಲ್ಲಿ 10 ಕ್ಕೂ ಕಡಿಮೆ ಹುದ್ದೆಗಳಿವೆ. ಕೇವಲ 2 ಹುದ್ದೆಗಳಿರುವ ಶಿಕ್ಷಣ ವಿಷಯಕ್ಕೆ 583 ಮಂದಿ ಅರ್ಜಿ ಸಲ್ಲಿಸಿದ್ದು, ಈ ಪೈಕಿ 461 ಮಂದಿ ಶುಲ್ಕ ಪಾವತಿಸಿದ್ದಾರೆ. 3 ಹುದ್ದೆಗಳಿರುವ ಫ್ಯಾಷನ್ ಟೆಕ್ನಾಲಜಿ ವಿಷಯಕ್ಕೆ 21 ಮಂದಿ ಅರ್ಜಿ ಸಲ್ಲಿಸಿದ್ದು, 14 ಅಭ್ಯರ್ಥಿಗಳು ಶುಲ್ಕ ಪಾವತಿಸಿದ್ದಾರೆ, 4 ಹುದ್ದೆಗಳಿರುವ ಎಲೆಕ್ಟ್ರಾನಿಕ್ಸ್ ವಿಷಯಕ್ಕೆ ಅರ್ಜಿ ಸಲ್ಲಿಸಿದ್ದ 244 ಮಂದಿಯಲ್ಲಿ 146 ಮಂದಿ ಮಾತ್ರ ಶುಲ್ಕ ಪಾವತಿಸಿದ್ದಾರೆ.

ಈ ಹುದ್ದೆಗಳಿಗೆ ಕೆಇಎ ಆನ್ ಲೈನ್ ಮೂಲಕ ಅ. 7ರಿಂದ ನ. 6ರವರೆಗೆ ಅರ್ಜಿ ಸಲ್ಲಿಸಲು ಮೊದಲು ಅವಕಾಶ ನೀಡಿತ್ತು. ಕೆ– ಸೆಟ್ (ಕರ್ನಾಟಕ ರಾಜ್ಯಮಟ್ಟದ ಅರ್ಹತಾ ಪರೀಕ್ಷೆ) ಫಲಿತಾಂಶ ನ. 2ರಂದು ಪ್ರಕಟವಾಗಿದ್ದರಿಂದ ಕೊನೆ ದಿನವನ್ನು ನ. 20ರವರೆಗೆ ವಿಸ್ತರಿಸಲಾಗಿತ್ತು. ರಾಜ್ಯ ಸರ್ಕಾರ ನ. 18ರಂದು ಅಧಿಸೂಚನೆ ಹೊರಡಿಸಿ ಕಂಪ್ಯೂಟರ್ ವಿಜ್ಞಾನ, ರಾಜ್ಯಶಾಸ್ತ್ರ, ರಸಾಯನವಿಜ್ಞಾನ, ಎಲೆಕ್ಟ್ರಾನಿಕ್ಸ್, ಸಸ್ಯವಿಜ್ಞಾನ, ಪ್ರಾಣಿವಿಜ್ಞಾನ, ಅರ್ಥಶಾಸ್ತ್ರ ಮತ್ತು ಭೌತವಿಜ್ಞಾನ ವಿಷಯಗಳ ಹುದ್ದೆಗಳಿಗೆ ತತ್ಸಮಾನ ವಿಷಯಗಳ ವಿದ್ಯಾರ್ಹತೆ ನಿಗದಿಪಡಿಸಿದ್ದರಿಂದ ಮತ್ತೆ ಕೊನೆಯ ದಿನ ಮತ್ತೆ ವಿಸ್ತರಿಸಿ ಡಿ. 30ರವರೆಗೆ ಅರ್ಜಿ ಸಲ್ಲಿಸಲು ಮತ್ತು ಶುಲ್ಕ ಪಾವತಿಸಲು ಡಿ. 6 ಕೊನೆಯ ದಿನ ನೀಡಲಾಗಿತ್ತು. 2017ರ ಬಳಿಕ ಸಹಾಯಕ ಪ್ರಾಧ್ಯಾಪಕರ ನೇಮಕಾತಿ ನಡೆದಿಲ್ಲ.

ಪಾರದರ್ಶಕವಾಗಿ ನೇಮಕಾತಿ ನಡೆಯಲಿದೆ. ಮುಂದಿನ ದಿನಗಳಲ್ಲಿ ಪ್ರತಿ ವರ್ಷ ನೇಮಕಾತಿ ಮಾಡಿಕೊಳ್ಳಲು ತೆಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆ ಅಧ್ಯಯನ ನಡೆಸಲು ಅಧಿಕಾರಿಗಳಿಗೆ ಸೂಚಿಸಲಾಗಿದೆ

ಡಾ. ಸಿ.ಎನ್. ಅಶ್ವತ್ಥನಾರಾಯಣ
ಉನ್ನತ ಶಿಕ್ಷಣ ಸಚಿವ

ಸಹಾಯಕ ಪ್ರಾಧ್ಯಾಪಕ ಹುದ್ದೆಗೆ ಅರ್ಜಿ

ವಿಷಯ	ಹುದ್ದೆಗಳು	ಅರ್ಜಿಗಳು (ಶುಲ್ಕ ಸಹಿತ)
ಕನ್ನಡ	107	7,148
ಇಂಗ್ಲಿಷ್	84	1,377
ಹಿಂದಿ	10	370
ಉರ್ದು	9	123
ಇತಿಹಾಸ	109	3,209
ಅರ್ಥಶಾಸ್ತ್ರ	122	3,233
ರಾಜ್ಯಶಾಸ್ತ್ರ	98	2,239
ಸಮಾಜ ವಿಜ್ಞಾನ	49	1,173
ಶಿಕ್ಷಣ	2	461
ಕಾನೂನು	17	142
ಸಾಮಾಜಿಕ ಕಾರ್ಯ	5	455
ಭೂಗೋಳ ವಿಜ್ಞಾನ	8	231
ಭೂಗರ್ಭ ವಿಜ್ಞಾನ	5	95
ವಾಣಿಜ್ಯ	198	5,015
ಮ್ಯಾನೇಜ್‌ಮೆಂಟ್	15	795
ಭೌತವಿಜ್ಞಾನ	76	1,071
ರಸಾಯನವಿಜ್ಞಾನ	85	1,786
ಜೈವಿಕ ರಸಾಯನವಿಜ್ಞಾನ	5	296
ಗಣಿತ	75	919
ಮೈಕ್ರೋ ಬಯಾಲಜಿ	5	262
ಪ್ರಾಣಿವಿಜ್ಞಾನ	31	808
ಸಸ್ಯವಿಜ್ಞಾನ	51	841
ಎಲೆಕ್ಟ್ರಾನಿಕ್ಸ್	4	146
ಕಂಪ್ಯೂಟರ್ ವಿಜ್ಞಾನ	63	1,133
ಸ್ಟ್ಯಾಟಿಸ್ಟಿಕ್ಸ್	6	37
ಫ್ಯಾಷನ್ ಟೆಕ್ನಾಲಜಿ	3	14
ಒಟ್ಟು	1,242	33,379

‘ಕನ್ನಡ, ಇಂಗ್ಲಿಷ್ ಉತ್ತೀರ್ಣ ಕಡ್ಡಾಯ’

‘ಅಭ್ಯರ್ಥಿಗಳು ಕನ್ನಡ ಮತ್ತು ಇಂಗ್ಲಿಷ್ ವಿಷಯದಲ್ಲಿ ತಲಾ 100 ಅಂಕಗಳಿಗೆ ನಡೆಯಲಿರುವ ಪರೀಕ್ಷೆಯಲ್ಲಿ ತೇರ್ಗಡೆಯಾಗುವುದು ಕಡ್ಡಾಯ. ಈ ವಿಷಯಗಳಲ್ಲಿ ವಿವರಣಾತ್ಮಕ ಉತ್ತರ ಬರೆಯಬೇಕು. ಉಳಿದಂತೆ 50 ಅಂಕಗಳ ಸಾಮಾನ್ಯ ಜ್ಞಾನ ಮತ್ತು ಐಚ್ಛಿಕ ವಿಷಯದಲ್ಲಿ 250 ಅಂಕಗಳ ಬಹುಆಯ್ಕೆಯ ಪರೀಕ್ಷೆ ಬರೆಯಬೇಕು. ಬಹುಆಯ್ಕೆಯ ಪರೀಕ್ಷೆಯಲ್ಲಿ ತಪ್ಪು ಉತ್ತರಕ್ಕೆ ಅಂಕ ಕಡಿತ (ಒಂದು ಅಂಕಕ್ಕೆ 0.25 ಅಂಕ) ಆಗಲಿದೆ. ಕನ್ನಡ ಮತ್ತು ಇಂಗ್ಲಿಷ್‌ನಲ್ಲಿ ಪ್ರತೀ ವಿಷಯದಲ್ಲಿ ಕನಿಷ್ಠ 30, ಎರಡೂ ಸೇರಿ 70 ಅಂಕ ಪಡೆಯಲೇಬೇಕು. ಅದರಲ್ಲಿ ಅನುತ್ತೀರ್ಣರಾಗಿ, ಬಹುಆಯ್ಕೆಯ ಪರೀಕ್ಷೆಯಲ್ಲಿ (ಐಚ್ಛಿಕ ಮತ್ತು ಸಾಮಾನ್ಯ ಜ್ಞಾನ) ಹೆಚ್ಚು ಅಂಕ ಗಳಿಸಿದ್ದರೂ ಪ್ರಯೋಜನ ಇಲ್ಲ. ಹೀಗಾಗಿ ಅಭ್ಯರ್ಥಿಗಳು ಕನ್ನಡ ಮತ್ತು ಇಂಗ್ಲಿಷ್ ಪರೀಕ್ಷೆಗೂ ಹೆಚ್ಚಿನ ಮಹತ್ವ ಕೊಡಬೇಕು’ ಎಂದು ಕೆಇಎ ಕಾರ್ಯನಿರ್ವಾಹಕ ನಿರ್ದೇಶಕಿ ಎಸ್. ರಮ್ಯಾ ತಿಳಿಸಿದರು.

‘ಅಂಧ ಅಭ್ಯರ್ಥಿಗಳು ಪರೀಕ್ಷೆ ಬರೆಯಲು ಲಿಪಿಕಾರರನ್ನು ಆಯ್ಕೆ ಮಾಡಿಕೊಳ್ಳಲು ವಾರದೊಳಗೆ ವೆಬ್‌ಸೈಟ್‌ನಲ್ಲಿ ಲಿಂಕ್ ನೀಡಲಾಗುವುದು. ಲಿಪಿಕಾರರನ್ನು ಅಭ್ಯರ್ಥಿಗಳೇ ಸೂಚಿಸಬಹುದು. ಅಥವಾ ಇಲಾಖೆ ನೀಡುವವರನ್ನು ಆಯ್ಕೆ ಮಾಡಿಕೊಳ್ಳಬಹುದು. ಅಭ್ಯರ್ಥಿಗಳೇ ಸೂಚಿಸಿದವರು ಕಡಿಮೆ ಓದಿದವರಾಗಿರಬೇಕಿದ್ದು, ಅದರ ಆಧಾರದಲ್ಲಿ ಅವಕಾಶ ನೀಡಲಾಗುವುದು’ ಎಂದರು.

ರಾಯಣ್ಣ ಪ್ರತಿಮೆಗೆ ಹಾನಿ: ಕ್ರಮಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಭಾರತದ ಸ್ವಾತಂತ್ರ್ಯಕ್ಕೆ ಹೋರಾಡಿ ನಾಡಿನ ಕೀರ್ತಿ ಪತಾಕೆ ಹಾರಿಸಿದ ಸಂಗೊಳ್ಳಿ ರಾಯಣ್ಣ ಕನ್ನಡಿಗರ ಹೆಮ್ಮೆ. ಅವರ ಪ್ರತಿಮೆಯನ್ನು ಹಾಳುಗೆಡವಿದ ಕಿಡಿಗೇಡಿಗಳ ವಿರುದ್ಧ ಸರ್ಕಾರ ಕಠಿಣ ಕ್ರಮ ಕೈಗೊಳ್ಳಬೇಕು’ ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರ ಆಗ್ರಹಿಸಿದೆ.

‘ಪ್ರತಿಮೆಯನ್ನು ಹಾನಿಗೊಳಿಸುವ ಮೂಲಕ ಭಾಷೆ ಮತ್ತು ಸಹೋದರತ್ವಕ್ಕೆ ಎಂ.ಇ.ಎಸ್ ಕಾರ್ಯಕರ್ತರು ಧಕ್ಕೆ ತಂದಿದ್ದಾರೆ. ಕರ್ನಾಟಕ ಮತ್ತು ಮಹಾರಾಷ್ಟ್ರ ನಡುವೆ ಸಂಘರ್ಷ ಉಂಟಾಗುವಂತೆ ಮಾಡಿದ್ದಾರೆ. ನಿಷೇಧಾಜ್ಞೆ ಜಾರಿಯಲ್ಲಿರುವಾಗಲೂ ಸಂಘಟನೆಯ ಮಹಿಳಾ ಕಾರ್ಯಕರ್ತರು ಪೊಲೀಸರಿಗೆ ಮಾತಿಗೆ ಬೆಲೆ ನೀಡದೆ ಶಿವಾಜಿ ಗಾರ್ಡನ್ ಬಳಿ ಶಾಂತಿ ಭಂಗ ಮಾಡಲು ಪ್ರಯತ್ನಿಸುತ್ತಿದ್ದಾರೆ’ ಎಂದು ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್. ನಾಗಾಭರಣ ಆರೋಪಿಸಿದ್ದಾರೆ.

‘ಸತ್ತ ಹಾವಿನಂತಾಗಿರುವ ಎಂ.ಇ.ಎಸ್ ಜೀವ ತುಂಬಿಸಿಕೊಳ್ಳಲು ಪ್ರಯತ್ನಿಸುತ್ತಿದೆ. ಬೆಳಗಾವಿಯಲ್ಲಿ ರಾಜಕೀಯವಾಗಿ ಅಸ್ತಿತ್ವ ಕಳೆದುಕೊಂಡಿದೆ. ಅಸ್ತಿತ್ವ ಸಾಬೀತುಪಡಿಸಲು ಇಂತಹ ಹೇಯ ಕೃತ್ಯಗಳನ್ನು ನಡೆಸುತ್ತಿದೆ’ ಎಂದೂ ಅವರು ದೂರಿದ್ದಾರೆ.

‘ಕರ್ನಾಟಕ ಮತ್ತು ಮಹಾರಾಷ್ಟ್ರ ಸರ್ಕಾರಗಳು ಬೆಳಗಾವಿಯ ಸಮಸ್ಯೆಗೆ ಶಾಶ್ವತ ಪರಿಹಾರವನ್ನು ಕಂಡುಕೊಳ್ಳಬೇಕು. ಕನ್ನಡಿಗರು ಮತ್ತು ಮರಾಠಿಗರ ನಡುವಿನ ಸಾಮರಸ್ಯಕ್ಕೆ ಹುಳಿ ಹಿಂಡಲು ಪ್ರಯತ್ನಿಸುತ್ತಿರುವವರ ವಿರುದ್ಧ ಕ್ರಮ ಕೈಗೊಳ್ಳಬೇಕು’ ಎಂದು ಅವರು ಒತ್ತಾಯಿಸಿದ್ದಾರೆ.

ರಾಯಣ್ಣ ಯುವ ಗರ್ಜನೆ ಹಾಗೂ ಕರ್ನಾಟಕ ಪ್ರದೇಶ ಕುರುಬರ ಸಂಘದ ಕಾರ್ಯಕರ್ತರು ಎಂ.ಇ.ಎಸ್ ಪುಂಡರ ಕೃತ್ಯ ಖಂಡಿಸಿ ಮೆಜೆಸ್ಟಿಕ್‌ನಲ್ಲಿರುವ ಸಂಗೊಳ್ಳಿ ರಾಯಣ್ಣ ಪ್ರತಿಮೆ ಬಳಿ ಪ್ರತಿಭಟನೆ ನಡೆಸಿದರು —ಪ್ರಜಾವಾಣಿ ಚಿತ್ರ

ಪ್ರತಿಮೆ ಧ್ವಂಸ: ಖಂಡನೆ

ಬೆಂಗಳೂರು: ಎಂ.ಇ.ಎಸ್ ಸಂಘಟನೆಯ ಕಾರ್ಯಕರ್ತರು ಸಂಗೊಳ್ಳಿ ರಾಯಣ್ಣ ಪ್ರತಿಮೆಯನ್ನು ವಿರೂಪಗೊಳಿಸಿ ದಾಂದಲೆ ನಡೆಸಿರುವುದನ್ನು ಬಂಡಾಯ ಸಾಹಿತ್ಯ ಸಂಘಟನೆ ಖಂಡಿಸಿದೆ.

‘ಶಾಂತಿ ಮತ್ತು ಸೌಹಾರ್ದ ಕದಡುವ ಇಂತಹ ಪುಂಡಾಟಿಕೆ ಸಂವಿಧಾನದ ಮೌಲ್ಯಗಳ ವಿರೋಧಿಯಾಗಿದೆ. ಹೊರರಾಜ್ಯದಲ್ಲಿ ವಾಸಿಸುತ್ತಿರುವ ಕನ್ನಡಿಗರು ಸಾಮರಸ್ಯದಿಂದ ಬದುಕುತ್ತಿರುವುದು ಇಂತಹ ಕಿಡಿಗೇಡಿಗಳಿಗೆ ಮಾದರಿಯಾಗಬೇಕು. ಸರ್ಕಾರ ಈಗಾಗಲೇ ಕೆಲವರನ್ನು ಬಂಧಿಸಿರುವುದು ಸ್ವಾಗತಾರ್ಹ. ಸರ್ಕಾರ ಮತ್ತು ಸಮಾಜದ ನೇತಾರರು ಸೇರಿ ಶಾಂತಿ–ಸೌಹಾರ್ದ ನೆಲೆಗೊಳಿಸಲು ಮುಂದಾಗಬೇಕು’ ಎಂದು ಸಂಘಟನೆಯ ಪ್ರೊ.ಬರಗೂರು ರಾಮಚಂದ್ರಪ್ಪ ಶನಿವಾರ ಒತ್ತಾಯಿಸಿದ್ದಾರೆ.

ಎಂಇಎಸ್ ನಿಷೇಧಕ್ಕೆ ನಟ ಪ್ರೇಮ್ ಆಗ್ರಹ

ಹುಬ್ಬಳ್ಳಿ: ‘ಮಹಾರಾಷ್ಟ್ರ ಏಕೀಕರಣ ಸಮಿತಿ (ಎಂಇಎಸ್) ಪುಂಡಾಟ ಹೀಗೆ ಮುಂದುವರಿದರೆ ಅದನ್ನು ರಾಜ್ಯದಲ್ಲಿ ನಿಷೇಧಿಸಬೇಕು’ ಎಂದು ಚಿತ್ರ ನಟ ಪ್ರೇಮ್ ಸರ್ಕಾರವನ್ನು ಆಗ್ರಹಿಸಿದರು.

ಭಾನುವಾರ ಸಿದ್ಧಾರೂಢ ಮಠಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ‘ರಾಜ್ಯದಲ್ಲಿ ಕನ್ನಡಿಗರು ಮತ್ತು ಮರಾಠಿಗರು ಪ್ರೀತಿ, ವಿಶ್ವಾಸದಿಂದ ಇದ್ದಾರೆ. ಅದನ್ನು ಹಾಳು ಮಾಡುವ ಕೆಲಸಕ್ಕೆ ಎಂಇಎಸ್ ಕೈ ಹಾಕಬಾರದು. ರಾಜ್ಯದಲ್ಲಿ ಮರಾಠಿ ಮತ್ತು ಹಿಂದಿ ಚಿತ್ರಗಳಿಗೂ ಅವಕಾಶ ನೀಡಲಾಗಿದೆ. ಇದನ್ನು ಅರ್ಥ ಮಾಡಿಕೊಳ್ಳಬೇಕು’ ಎಂದರು.

‘ಎಂಇಎಸ್ ಸಾರ್ವಜನಿಕ ಆಸ್ತಿಪಾಸ್ತಿ ಹಾಳು ಮಾಡುವುದರಿಂದ ಏನನ್ನೂ ಸಾಧಿಸುವುದಿಲ್ಲ. ಅಲ್ಲದೆ, ಎಂಇಎಸ್ ಬಗ್ಗೆ ಸರ್ಕಾರದ ನಿಲುವು ಏನಿದೆಯೋ ಗೊತ್ತಿಲ್ಲ. ಆದರೆ, ಕನ್ನಡಿಗರ ಮೇಲಿನ ದಬ್ಬಾಳಿಕೆ ಸಹಿಸುವುದಿಲ್ಲ. ನಾವು ಶಾಂತಿ ಪ್ರಿಯರು. ಇದನ್ನು ವಿರೋಧಿಸಿ ಕನ್ನಡ ಚಿತ್ರರಂಗ ಹೋರಾಟಕ್ಕೆ ಇಳಿದರೆ, ನಮ್ಮವರಿಗೆ ತೊಂದರೆಯಾಗಲಿದೆ’ ಎಂದು ಅಭಿಪ್ರಾಯಪಟ್ಟರು.

‘ದೇಶದ್ರೋಹಿಗಳಿಗೆ ಕಠಿಣ ಶಿಕ್ಷೆ ನೀಡಿ’

ಬೆಂಗಳೂರು: ‘ಸಂಗೊಳ್ಳಿ ರಾಯಣ್ಣ ಅವರ ಪ್ರತಿಮೆಯನ್ನು ವಿಕೃತಗೊಳಿಸಿ ಅಪಮಾನ ಮಾಡಿರುವ ಕಿಡಿಗೇಡಿಗಳು ದೇಶದ್ರೋಹಿಗಳು. ಈ ಕೃತ್ಯವನ್ನು ಕನ್ನಡಿಗರು ಹಾಗೂ ಸಂವಿಧಾನದಲ್ಲಿ ಶ್ರದ್ಧೆ ಹಾಗೂ ದೇಶಭಕ್ತಿ ಇರುವ ಎಲ್ಲರೂ ಖಂಡಿಸಲೇ ಬೇಕು’ ಎಂದು ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ.ಸಿ.ಸೋಮಶೇಖರ ಹೇಳಿದ್ದಾರೆ.

‘ಛತ್ರಪತಿ ಶಿವಾಜಿ ಮಹಾರಾಜರ ಪ್ರತಿಮೆಗೆ ಮಾಡಿರುವ ಅವಮಾನವೂ ಖಂಡನಾರ್ಹ. ಕನ್ನಡಿಗರ ಹಾಗೂ ಮರಾಠಿಗರ ನಡುವಿನ ಸಹಬಾಳ್ವೆಗೆ ಧಕ್ಕೆ ತರುವ ದೇಶದ್ರೋಹಿಗಳಿಗೆ ಕಠಿಣ ಶಿಕ್ಷೆಯನ್ನು ನೀಡಬೇಕು’ ಎಂದು ಅವರು ಒತ್ತಾಯಿಸಿದ್ದಾರೆ.

ಶಿವಾಜಿ ಪ್ರತಿಮೆಗೆ ಮಸಿ: ನಾಲ್ಕು ದಿನಗಳ ಹಿಂದೆಯೇ ಸಂಚು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ಯಾಂಕಿ ಕೆರೆ ಬಳಿಯ ಶಿವಾಜಿ ಪ್ರತಿಮೆಗೆ ಮಸಿ ಬಳಿದು ಬಂಧನಕ್ಕೊಳಪಟ್ಟಿರುವ 7 ಮಂದಿ ಆರೋಪಿಗಳು ಕೃತ್ಯ ಎಸಗಲು ನಾಲ್ಕು ದಿನಗಳ ಹಿಂದೆಯೇ ತಯಾರಿ ಆರಂಭಿಸಿದ್ದರು ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಇದೇ 13 ಮತ್ತು 14ರಂದು ಸ್ಯಾಂಕಿ ಕೆರೆಗೆ ಬಂದಿದ್ದ ಆರೋಪಿಗಳು ಸ್ಥಳ ಪರಿಶೀಲಿಸಿದ್ದರು. ಮೂರನೇ ದಿನವೂ ಸ್ಥಳಕ್ಕೆ ಬಂದಿದ್ದರು. ಆಗ ಪ್ರತಿಮೆ ಬಳಿ ಗಸ್ತಿನಲ್ಲಿದ್ದ ಪೊಲೀಸರು ಅವರನ್ನು ಹಿಂದಕ್ಕೆ ಕಳುಹಿಸಿದ್ದರು. ಶಿವಾಜಿ ಪ್ರತಿಮೆ ಎತ್ತರವಾಗಿರುವುದನ್ನು ಗಮನಿಸಿದ್ದ ಆರೋಪಿಗಳು, ಅದನ್ನು ಏರಲು ಅಗತ್ಯವಿರುವ ಎತ್ತರದ ಏಣಿಯೊಂದನ್ನು ಯಾರೂ ಇಲ್ಲದ ಹೊತ್ತಿನಲ್ಲಿ ಸ್ಥಳಕ್ಕೆ ತಂದು ಅಲ್ಲೇ ಇಟ್ಟು ಹೋಗಿದ್ದರು’ ಎಂದು ಮೂಲಗಳು ವಿವರಿಸಿವೆ.

‘ಪೂರ್ವ ನಿಗದಿಯಂತೆ ಡಿ.16ರ ಮಧ್ಯರಾತ್ರಿ ಕಾರು, ಎರಡು ಆಟೊ ಹಾಗೂ ಬೈಕಿನಲ್ಲಿ ಸ್ಥಳಕ್ಕೆ ಬಂದಿದ್ದ ಕರ್ನಾಟಕ ರಣಧೀರ ಪಡೆಯ ಕಾರ್ಯಕರ್ತರು ಪ್ರತಿಮೆ ಮೇಲೆ ಮಸಿ ಸುರಿದು ಪರಾರಿಯಾಗಿದ್ದರು. ಆರೋಪಿ ನವೀನ್ ಈ ದೃಶ್ಯವನ್ನು ತನ್ನ ಮೊಬೈಲ್‌ನಲ್ಲಿ ಚಿತ್ರೀಕರಿಸಿದ್ದ. ಆರೋಪಿಗಳು ಕೃತ್ಯಕ್ಕೆ ಬಳಸಿದ್ದ ವಸ್ತುಗಳು ಹಾಗೂ ವಾಹನಗಳನ್ನು ಜಪ್ತಿ ಮಾಡಲಾಗಿದೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಆರೋಪಿ ‘ಕೈ’ ಕಾರ್ಯಕರ್ತ: ಬಿಜೆಪಿ

ಬೆಂಗಳೂರು: ನಗರದ ಶಿವಾಜಿ ಪ್ರತಿಮೆಗೆ ಮಸಿ ಬಳಿದ ಆರೋಪಿಗಳಲ್ಲಿ ಒಬ್ಬನಾದ ನವೀನ್‌ಗೌಡ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಮತ್ತು ಶಾಸಕ ಜಮೀರ್ ಅಹಮದ್ ಅವರ ನಿಕಟವರ್ತಿ ಎಂದು ಬಿಜೆಪಿ ಮುಖ್ಯ ವಕ್ತಾರ ಗಣೇಶ್ ಕಾರ್ಣಿಕ್ ಹೇಳಿದ್ದಾರೆ.

ಆರೋಪಿ ಕಾಂಗ್ರೆಸ್ ಕಾರ್ಯಕರ್ತನೂ ಆಗಿದ್ದು, ಈ ಕೃತ್ಯ ಷಡ್ಯಂತ್ರವಾಗಿದೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಸೇರಿದಂತೆ ಆ ಪಕ್ಷದ ನಾಯಕರು ರಾಜ್ಯದಲ್ಲಿ ಕ್ಷೋಭೆಯ ವಾತಾವರಣ ನಿರ್ಮಾಣ ಮಾಡುವ ಟ್ವೀಟ್‌ಗಳನ್ನು ಮಾಡುತ್ತಿದ್ದಾರೆ. ಇದಕ್ಕೆ ಪೂರಕವಾಗಿ ಕಾಂಗ್ರೆಸ್, ಎನ್‌ಸಿಪಿ ಮತ್ತು ಶಿವಸೇನೆ ಆಡಳಿತವಿರುವ ಮಹಾರಾಷ್ಟ್ರದಲ್ಲಿ ದುಷ್ಟ ಶಕ್ತಿಗಳು ಕನ್ನಡ ಧ್ವಜವನ್ನು ಸುಟ್ಟು ಹಾಕಿ ಪರಿಸ್ಥಿತಿ ಇನ್ನಷ್ಟು ಬಿಗಡಾಯಿಸುತ್ತಿರುವುದು ಷಡ್ಯಂತ್ರದ ಭಾಗವಾಗಿದೆ ಎಂದು ಕಾರ್ಣಿಕ್ ದೂರಿದ್ದಾರೆ.

455 ಮತಗಳ ಅಂತರದಿಂದ ಗೆಲುವು: 2024ರ ಡಿಸೆಂಬರ್‌ವರೆಗೆ ಅಧಿಕಾರ ಅವಧಿ

ಬ್ರಾಹ್ಮಣ ಮಹಾಸಭಾ ಅಧ್ಯಕ್ಷರಾಗಿ ಹಾರನಹಳ್ಳಿ ಆಯ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ನೂತನ ಅಧ್ಯಕ್ಷರಾಗಿ ಅಶೋಕ್ ಹಾರನಹಳ್ಳಿ ಆಯ್ಕೆಯಾಗಿದ್ದಾರೆ.

ಅಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಅಶೋಕ್ ಹಾರನಹಳ್ಳಿ, ಎಸ್. ರಘುನಾಥ್ ಮತ್ತು ಆರ್. ಲಕ್ಷ್ಮೀಕಾಂತ್ ಸ್ಪರ್ಧಿಸಿದ್ದರು. ಅಶೋಕ್ ಹಾರನಹಳ್ಳಿ ಮತ್ತು ರಘುನಾಥ್ ನಡುವೆ ತೀವ್ರ ಪೈಪೋಟಿ ಏರ್ಪಟ್ಟಿತ್ತು. ಹಾರನಹಳ್ಳಿ ಅವರು 455 ಮತಗಳ ಅಂತರದಿಂದ ಜಯಶಾಲಿಯಾಗಿದ್ದಾರೆ.

ಅಶೋಕ್ ಹಾರನಹಳ್ಳಿ 4,424 ಮತಗಳನ್ನು ಪಡೆದರು. ಪ್ರತಿಸ್ಪರ್ಧಿಗಳಾದ ಎಸ್. ರಘುನಾಥ್ 3,969 ಮತಗಳು ಮತ್ತು ಆರ್.ಲಕ್ಷ್ಮೀಕಾಂತ್ 2,239 ಮತಗಳನ್ನು ಪಡೆದರು.

ಮೊದಲ ಸುತ್ತಿನಿಂದಲೇ ಅಶೋಕ್ ಹಾರನಹಳ್ಳಿ ಅವರು ಮುನ್ನಡೆ ಪಡೆದರು. ಮೂರನೇ ಸುತ್ತಿನಲ್ಲಿ ರಘುನಾಥ್ ಅವರು ಮುನ್ನಡೆ ಪಡೆದರು. ಹಾವು ಏಣಿ ಆಟದಲ್ಲಿ ಅಶೋಕ್ ಹಾರನಹಳ್ಳಿ ಮುನ್ನಡೆ ಸಾಧಿಸಿ ಗೆಲುವಿನ ನಗೆ ಬೀರಿದರು.

ನೂತನ ಅಧ್ಯಕ್ಷರ ಅಧಿಕಾರ ಅವಧಿ 2022ರ ಜನವರಿಯಿಂದ 2024ರ ಡಿಸೆಂಬರ್‌ವರೆಗೆ ಇರಲಿದೆ.

ಭಾನುವಾರ ಕೊನೆಯ ಹಂತದ ಮತದಾನ ನಗರದಲ್ಲಿ ನಡೆಯಿತು. ನಗರದ ಪಂಪ ಮಹಾಕವಿ ರಸ್ತೆಯ ಶಂಕರಪುರದಲ್ಲಿನ ಚಂದ್ರಶೇಖರ ಭಾರತೀ ಕಲ್ಯಾಣ ಮಂಟಪದಲ್ಲಿ ಮತದಾನಕ್ಕೆ 20 ಮತಗಟ್ಟೆಗಳ ವ್ಯವಸ್ಥೆ ಮಾಡಲಾಗಿತ್ತು.

ಬೆಳಿಗ್ಗೆ 10ರಿಂದ ಮಧ್ಯಾಹ್ನ 3ರವರೆಗೆ ಮತದಾನಕ್ಕೆ ಸಮಯ ನಿಗದಿಪಡಿಸಲಾಗಿತ್ತು. ಆದರೆ, ಮತದಾರರು ಹೆಚ್ಚಿನ ಸಂಖ್ಯೆಯಲ್ಲಿ ಸರತಿ ಸಾಲಿನಲ್ಲಿ ನಿಂತಿದ್ದರಿಂದ ಮತ್ತೆ ಒಂದು ಗಂಟೆ ಕಾಲ ಹೆಚ್ಚು ಸಮಯಾವಕಾಶ ನೀಡಲಾಯಿತು.

ಮೈಸೂರು, ಹಾಸನ, ಶಿವಮೊಗ್ಗ, ಹುಬ್ಬಳ್ಳಿ, ರಾಯಚೂರು ಕೇಂದ್ರಗಳಲ್ಲಿ ಡಿ.12ರಂದು ಮತದಾನ ನಡೆದಿತ್ತು. ಈ ಎಲ್ಲ ಕೇಂದ್ರಗಳಲ್ಲಿನ ಮತಗಳನ್ನು ಕ್ರೋಡೀಕರಿಸಿದ ಬಳಿಕ ಮತ ಎಣಿಕೆ ನಡೆಯಿತು. ಬೆಂಗಳೂರು ಸೇರಿದಂತೆ ಎಲ್ಲ ಆರು ಕೇಂದ್ರಗಳಲ್ಲಿ 10,711 ಮತದಾರರು ತಮ್ಮ ಮತ ಚಲಾಯಿಸಿದ್ದರು.

ರಾಜ್ಯದಲ್ಲಿ ಒಟ್ಟು 41 ಸಾವಿರ ಮಂದಿ ಮತದಾರರಿದ್ದಾರೆ. ಇದರಲ್ಲಿ 27 ಸಾವಿರ ಮತದಾರರು ಬೆಂಗಳೂರಿನಲ್ಲೇ ಇದ್ದಾರೆ. ಆದರೆ, ಇವರಲ್ಲಿ 7,054 ಮಂದಿ ಮಾತ್ರ ಮತ ಚಲಾಯಿಸಿದರು.

ಅಖಿಲ ಕರ್ನಾಟಕ ಮಹಾಸಭಾದ ನೂತನ ಅಧ್ಯಕ್ಷರಾಗಿ ಆಯ್ಕೆಯಾದ ಅಶೋಕ್ ಹಾರನಹಳ್ಳಿ (ಎಡದಿಂದ ಮೂರನೆಯವರು) ಬೆಂಬಲಿಗರೊಂದಿಗೆ ವಿಜಯದ ಸಂಕೇತ ತೋರಿಸಿದರು – ಪ್ರಜಾವಾಣಿ ಚಿತ್ರ

ಅಭ್ಯರ್ಥಿಗಳು ಪಡೆದ ಮತಗಳ ವಿವರ

ಅಶೋಕ್ ಹಾರನಹಳ್ಳಿ	4,424
ಎಸ್. ರಘುನಾಥ್	3,969
ಆರ್. ಲಕ್ಷ್ಮಿಕಾಂತ್	2,239

ಮತದಾನದ ವಿವರ

ಶಿವಮೊಗ್ಗ	1083
ಹಾಸನ	619
ಹುಬ್ಬಳ್ಳಿ	355
ಮೈಸೂರು	1221
ರಾಯಚೂರು	379
ಬೆಂಗಳೂರು	7054
ಒಟ್ಟು ಮತಗಳು	10711

ನಕ್ಸಲ್: ಮಹಿಳೆ ಶರಣು

ವೆಲ್ಲೂರು (ಪಿಟಿಐ): ನಿಷೇಧಿತ ನಕ್ಸಲೀಯ ಗುಂಪಿಗೆ ಸೇರಿದ ಮಹಿಳೆ, ಕರ್ನಾಟಕದ ಪ್ರಭಾ ಅಲಿಯಾಸ್ ಸಂಧ್ಯಾ ಎಂಬಾಕೆ ತಮಿಳುನಾಡಿನ ತಿರುಪತ್ತೂರು ಪೊಲೀಸ್ ಠಾಣೆಯಲ್ಲಿ ಶರಣಾಗಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

‘ಪ್ರಭಾ ವಿರುದ್ಧ ಕರ್ನಾಟಕದಲ್ಲಿ 44 ಪ್ರಕರಣಗಳು ದಾಖಲಾಗಿವೆ. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎದುರು ಅವರು ಶನಿವಾರ ಶರಣಾಗಿದ್ದಾರೆ’ ಎಂದು ಡಿಐಜಿಪಿ (ವೆಲ್ಲೂರು ವಲಯ) ಎ.ಜಿ.ಬಾಬು ತಿಳಿಸಿದ್ದಾರೆ.

ಸ್ಕೂಟರ್‌ಗೆ ಹಿಂದಿನಿಂದ ಟಿಪ್ಪರ್ ಡಿಕ್ಕಿ: ಮಹಿಳೆ ಸಾವು

ಬೆಂಗಳೂರು: ಚಲಿಸುತ್ತಿದ್ದ ಸ್ಕೂಟರ್‌ಗೆ ಹಿಂಬದಿಯಿಂದ ಬಂದ ಟಿಪ್ಪರ್ ವಾಹನ ಡಿಕ್ಕಿ ಹೊಡೆದಿದ್ದರಿಂದ ಲಕ್ಷ್ಮಿ (42) ಎಂಬುವರು ಮೃತಪಟ್ಟಿದ್ದಾರೆ. ಈ ಸಂಬಂಧ ಯಶವಂತಪುರ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಚಿಕ್ಕಮಾರನಹಳ್ಳಿಯ ಎಂ.ಎಸ್. ಆರ್.ನಗರ ನಿವಾಸಿಯಾಗಿರುವ ಲಕ್ಷ್ಮಿ, ಶನಿವಾರ ರಾತ್ರಿ ರಾಜರಾಜೇಶ್ವರಿ ನಗರದಲ್ಲಿರುವ ಅಣ್ಣನ ಮನೆಯಿಂದ ಮರಳುತ್ತಿದ್ದರು. ಯಶವಂತಪುರ ಮೇಲ್ಸೇತುವೆಯ ಇಳಿಜಾರು ಭಾಗದಲ್ಲಿ ಸಾಗುತ್ತಿದ್ದ ವೇಳೆ ಹಿಂಬದಿಯಿಂದ ಬಂದ ಟಿಪ್ಪರ್ ವಾಹನ ಡಿಕ್ಕಿ ಹೊಡೆದಿದೆ. ಗಂಭೀರವಾಗಿ ಗಾಯಗೊಂಡಿದ್ದ ಅವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದ್ದಾರೆ.

‘ಘಟನೆ ನಡೆದ ಬೆನ್ನಲ್ಲೇ ಚಾಲಕನು ಟಿಪ್ಪರ್ ವಾಹನವನ್ನು ಸ್ಥಳದಲ್ಲೇ ಬಿಟ್ಟು ಪರಾರಿಯಾಗಿದ್ದಾನೆ. ಆತನಿಗಾಗಿ ಶೋಧ ನಡೆಸಲಾಗುತ್ತಿದೆ. ಮೃತದೇಹವನ್ನು ಮರಣೋತ್ತರ ಪರೀಕ್ಷೆಗೆ ಒಳಪಡಿಸಿ ಅವರ ಕುಟುಂಬದವರಿಗೆ ಹಸ್ತಾಂತರಿಸಲಾಗಿದೆ’ ಎಂದು ತಿಳಿಸಿದರು.

ಕ್ರೇನ್‌ಹರಿದುಕ್ಲೀನರ್‌ಸಾವು: ವಿದ್ಯಾರಣ್ಯಪುರದ ಹನುಮಾನ್ ಲೇಔಟ್ ಬಳಿ ಕ್ರೇನ್ ಹರಿದು ಅದರ ಕ್ಲೀನರ್ ಸ್ಟೀಫನ್ ಸೆಲ್ವಕುಮಾರ್ (29) ಎಂಬುವರು ಮೃತಪಟ್ಟಿದ್ದಾರೆ. ಈ ಸಂಬಂಧ ಯಲಹಂಕ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಸ್ಟೀಫನ್ ಅವರಿದ್ದ ಕ್ರೇನ್ ವಿದ್ಯುತ್ ಕೇಬಲ್‌ಗಳನ್ನು ಹೊತ್ತು ಹನುಮಾನ್ ದೇವಾಲಯದ ಬಳಿ ಇರುವ ತಿಂಡ್ಲು–ನಂಜಪ್ಪ ವೃತ್ತದತ್ತ ಸಾಗುತ್ತಿತ್ತು. ಸ್ಟೀಫನ್, ಈ ಕ್ರೇನ್‌ನಿಂದ ಇಳಿದು ಉಳಿದ ವಾಹನ ಸವಾರರಿಗೆ ಪಕ್ಕಕ್ಕೆ ಹೋಗುವಂತೆ ಸೂಚಿಸುತ್ತಿದ್ದ. ಈ ವೇಳೆ ಹಿಂದಿನಿಂದ ಬಂದ ಕ್ರೇನ್ ಆತನ ಮೇಲೆ ಹರಿದಿದೆ. ಚಾಲಕನ ನಿರ್ಲಕ್ಷ್ಯವೇ ಘಟನೆಗೆ ಕಾರಣ. ಆತನನ್ನು ಬಂಧಿಸಿ ವಿಚಾರಣೆ ನಡೆಸಲಾಗುತ್ತಿದೆ’ ಎಂದು ಪೊಲೀಸರು ಹೇಳಿದ್ದಾರೆ.

1999ರ ಪರಿಸ್ಥಿತಿ ಮರುಕಳಿಸುವತ್ತ ಡಿಕೆಶಿ ನೋಟ • ಕಾಂಗ್ರೆಸ್‌ನಲ್ಲಿ ಮತ್ತೆ ಅಧಿಕಾರಕ್ಕೇರುವ ಭರವಸೆ

ಒಕ್ಕಲಿಗರ ಮತ ಕ್ರೋಡೀಕರಣ: ಕಾಂಗ್ರೆಸ್ ವಿಶ್ವಾಸ

• ವೈ.ಗ. ಜಗದೀಶ್

ಪ್ರಜಾವಾಣಿ ವಿಶೇಷ

ಬೆಳಗಾವಿ: ಮೇಲ್ಮನೆ ಚುನಾವಣೆಯಲ್ಲಿ ಒಗ್ಗಟ್ಟಿನ ಬಲದಿಂದ ಜೆಡಿಎಸ್ ಮತ್ತು ಬಿಜೆಪಿ ಭದ್ರಕೋಟೆಯನ್ನು ಶಿಥಿಲಗೊಳಿಸಿ ಗೆಲುವು ಸಾಧಿಸಿರುವುದು ಕಾಂಗ್ರೆಸ್ ನಾಯಕರ ವಿಶ್ವಾಸವನ್ನು ಹೆಚ್ಚಿಸಿದೆ. ಎದುರಾಳಿ ಪಕ್ಷಗಳ ಆಂತರಿಕ ವಿಘಟನೆಯ ಲಾಭ ಪಡೆಯುವ ಅವಕಾಶದ ಬಗ್ಗೆ ಪಕ್ಷದೊಳಗೆ ಚರ್ಚೆ ಆರಂಭವಾಗಿದೆ.

1999ರಲ್ಲಿ ಪಾಂಚಜನ್ಯ-ಯಾತ್ರೆ ನಡೆಸಿದ ಅಂದಿನ ಕೆಪಿಸಿಸಿ ಅಧ್ಯಕ್ಷ ಎಸ್.ಎಂ. ಕೃಷ್ಣ ಕಾಂಗ್ರೆಸ್ ಅನ್ನು ಪೂರ್ಣಬಲದಲ್ಲಿ ಅಧಿಕಾರಕ್ಕೆ ತಂದಿದ್ದರು. ಅದಕ್ಕೆ ಹಿಂದಿನ ಜನತಾದಳ ಸರ್ಕಾರದಲ್ಲಿ ನಾಯಕತ್ವದ ಜಗಳ, ಒಕ್ಕಲಿಗರ ಮತಗಳು ಒಗ್ಗಟ್ಟಿನಿಂದ ಕೈ ಹಿಡಿದಿದ್ದು ಅನುಕೂಲಕಾರಿಯಾಗಿ ಪರಿಣಮಿಸಿತ್ತು. ಅದಾದ ಬಳಿಕ ನಡೆದ ಚುನಾವಣೆಯಲ್ಲಿ ಪಕ್ಷಕ್ಕೆ ಬಹುಮತ ಸಿಕ್ಕಿರಲಿಲ್ಲ. 2008ರಲ್ಲಿ ಅಧಿಕಾರ ಹಿಡಿದ ಬಿಜೆಪಿ ಮೂವರು ಮುಖ್ಯಮಂತ್ರಿಗಳನ್ನು ಕಂಡಿತ್ತು. ಭ್ರಷ್ಟಾಚಾರದ ಹಗರಣ, ಮುಖ್ಯಮಂತ್ರಿಯಾಗಿದ್ದವರೇ ಜೈಲಿಗೆ ಹೋಗಿದ್ದು, ಸಚಿವರ ಸರಣಿ ರಾಜೀನಾಮೆಗಳು ಕಾಂಗ್ರೆಸ್‌ಗೆ ಗೆಲುವಿನ ದಾರಿ ತೋರಿಸಿದ್ದವು. ಪರಮೇಶ್ವರ–ಸಿದ್ದರಾಮಯ್ಯ ನೇತೃತ್ವದಲ್ಲಿ ನಡೆದ ಚುನಾವಣೆಯಲ್ಲಿ 2013ರಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಹಿಡಿದಿತ್ತು. ಅದೇ ಪರಿಸ್ಥಿತಿ ಮರುಕಳಿಸಬಹುದು ಎಂಬ ಚರ್ಚೆ ಕಾಂಗ್ರೆಸ್‌ನಲ್ಲಿ ಶುರುವಾಗಿದೆ ಎಂದು ಆ ಪಕ್ಷದ ನಾಯಕರೊಬ್ಬರು ಹೇಳಿದರು.

ಈ ಅವಧಿಯಲ್ಲಿ ಬಿಜೆಪಿ ಸರ್ಕಾರ ಎರಡು ಮುಖ್ಯಮಂತ್ರಿಗಳನ್ನು ಕಂಡಿದೆ. 'ಬಸವರಾಜ ಬೊಮ್ಮಾಯಿ ನೇತೃತ್ವದಲ್ಲೇ ಮುಂದಿನ ಚುನಾವಣೆ ಎದುರಿಸುತ್ತೇವೆ' ಎಂದು ಆ ಪಕ್ಷದ ವರಿಷ್ಠ, ಕೇಂದ್ರ ಗೃಹ ಸಚಿವರೂ ಆಗಿರುವ ಅಮಿತ್ ಶಾ ಹೇಳಿದ್ದಾರೆ. ಆದರೆ, ಆ ಮಾತಿನಲ್ಲಿ ಬಿಜೆಪಿ ನಾಯಕರಿಗೆ ವಿಶ್ವಾಸವಿಲ್ಲ. ಹಾಗಿದ್ದರೂ 2013ರ ಚುನಾವಣೆಯಲ್ಲಾದ ಪರಿಣಾಮವೇ ಈಗಲೂ ಆದೀತೆಂಬ ಆತಂಕದಲ್ಲಿ ಮುಖ್ಯಮಂತ್ರಿ ಬದಲಾಯಿಸುವ ಸಾಧ್ಯತೆ ತೀರಾ ಕಡಿಮೆ ಎಂಬ ಚರ್ಚೆಗಳು ಬಿಜೆಪಿ ಪಡಸಾಲೆಯಲ್ಲಿ ಶುರುವಾಗಿವೆ.

ಮೇಲ್ಮನೆ ಗೆಲುವಿನ ಲೆಕ್ಕ: 'ಪ್ರಧಾನಿ ನರೇಂದ್ರ ಮೋದಿ ಪ್ರಭಾವ, ತಳಮಟ್ಟದಲ್ಲಿ ಬಿಜೆಪಿಗೆ ಇರುವ ಸಂಘಟನಾತ್ಮಕ ಬಲ ಕಂಡು ಅಧಿಕಾರಕ್ಕೆ ಬರುವ ವಿಶ್ವಾಸ ಕಳೆದುಕೊಂಡಿದ್ದೆವು. ಮೇಲ್ಮನೆ ಚುನಾವಣೆ ಹಾಗೂ ಹಾನಗಲ್ ಉಪಚುನಾವಣೆಯ ಫಲಿತಾಂಶ ಕಾಂಗ್ರೆಸ್ ನಾಯಕರಿಗೆ ಭರವಸೆಯ ಬೆಳಕನ್ನು ತೋರಿಸಿದೆ' ಎಂಬ ಮಾತುಗಳು ಬೆಳಗಾವಿಯ ಅಧಿವೇಶನದ ವೇಳೆ ಮೊಗಸಾಲೆಯ ಚರ್ಚೆಯ ಕೇಂದ್ರ ಬಿಂದುವಾಗಿದ್ದವು.

1999ರಲ್ಲಿ ಒಕ್ಕಲಿಗ ಸಮುದಾಯಕ್ಕೆ ಮುಖ್ಯಮಂತ್ರಿ ಪಟ್ಟ ಸಿಗಬಹುದೆಂಬ ಕಾರಣಕ್ಕೆ, ಜೆಡಿಎಸ್‌ನ ಮತಬ್ಯಾಂಕ್ ಆಗಿದ್ದ ಈ ಸಮುದಾಯದವರು ತಮ್ಮ ಚಿತ್ತವನ್ನು ಒಮ್ಮುಖವಾಗಿ ಬದಲಿಸಿದ್ದರು. ಅಲ್ಲದೇ ಆಯ್ದ ಕ್ಷೇತ್ರಗಳಲ್ಲಿ ಲಿಂಗಾಯತ, ಹಿಂದುಳಿದ, ಪರಿಶಿಷ್ಟ ಜಾತಿಯ ಮತಗಳು ಕೈಹಿಡಿದಿದ್ದವು. ಮುಸ್ಲಿಮರ ಮತ್ತು ಕ್ರೈಸ್ತರ ಮತಗಳು ಸಿಕ್ಕಿದ್ದವು.

ಮೇಲ್ಮನೆಯ ಚುನಾವಣೆಯ ಫಲಿತಾಂಶ ನೋಡಿದರೆ ಜೆಡಿಎಸ್ ಭದ್ರಕೋಟೆಯಾಗಿರುವ ಕಡೆ ಕಾಂಗ್ರೆಸ್ ಗೆಲುವು ಸಾಧಿಸಿದೆ. ಅದರಲ್ಲೂ ಮಂಡ್ಯದಲ್ಲಿ ಒಬ್ಬ ಶಾಸಕರೂ ಇಲ್ಲದಿದ್ದರೂ, ಬಿಜೆಪಿಯ ಸಚಿವರಿದ್ದರೂ ಕಾಂಗ್ರೆಸ್ ಗೆದ್ದಿರುವುದು ಈ ಬದಲಾವಣೆಯ ಸಂಕೇತ. ಅದಲ್ಲದೇ ತುಮಕೂರು, ಕೋಲಾರ–ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ, ಮೈಸೂರಿನಲ್ಲಿ ಕೂಡ ಇದೇ ರೀತಿಯ ಫಲಿತಾಂಶ ಸಿಕ್ಕಿದೆ. ಕೊಡಗಿನಲ್ಲಿ ಸಂಸದರು ಹಾಗೂ ಶಾಸಕರು ಬಿಜೆಪಿಯವರೇ ಇದ್ದರೂ ಪಕ್ಕದ ಜಿಲ್ಲೆಯವರಾದ ಮಂಥರ್‌ಗೌಡ ಅವರನ್ನು ಕೊನೆಗಳಿಗೆಯಲ್ಲಿ ಕಣಕ್ಕೆ ಇಳಿಸಿದರೂ ತೀವ್ರ ಪೈಪೋಟಿ ಒಡ್ಡಲು ಸಾಧ್ಯವಾಯಿತು. ಒಕ್ಕಲಿಗ ಸಮುದಾಯದ ಡಿ.ಕೆ. ಶಿವಕುಮಾರ್ ಅವರು ಕೆಪಿಸಿಸಿ ಅಧ್ಯಕ್ಷರಾಗಿರುವುದು, ಸಿದ್ದರಾಮಯ್ಯ ಪ್ರಭಾವ, ಪಕ್ಷದ ಶಾಸಕರು–ಹಿಂದಿನ ಚುನಾವಣೆಯಲ್ಲಿ ಪರಾಜಿತರಾದ ಅಭ್ಯರ್ಥಿಗಳು ಒಗ್ಗಟ್ಟಿನಿಂದ ಕೆಲಸ ಮಾಡಿರುವುದು ಇವೆಲ್ಲವೂ ಕಾರಣ. ಮುಂದಿನ ಫಲಿತಾಂಶಕ್ಕೆ ಇದು ದಿಕ್ಸೂಚಿಯಾಗಿದೆ ಎಂದು ಆ ಪಕ್ಷದ ನಾಯಕರೊಬ್ಬರು ಹೇಳಿದರು.

ಬೆಳಗಾವಿ ಲೋಕಸಭೆ ಉಪಚುನಾವಣೆಯಲ್ಲಿ ಪಕ್ಷದ ಸಾಧನೆ, ಮುಖ್ಯಮಂತ್ರಿ ತವರು ಜಿಲ್ಲೆಯ ಹಾನಗಲ್ ಉಪಚುನಾವಣೆಯಲ್ಲಿ ಗೆಲುವು ಕೂಡ ಉತ್ತರ ಕರ್ನಾಟಕ ಭಾಗದಲ್ಲಿ ಪಕ್ಷದ ಕಡೆಗೆ ಒಲವು ಹರಿಯುತ್ತಿರುವುದರ ಸೂಚನೆ. ಈ ಸಾಧನೆಯನ್ನು ಮತ್ತೊಂದು ಹೆಜ್ಜೆಯತ್ತ ಕೊಂಡೊಯ್ಯಬೇಕೆಂಬ ಚರ್ಚೆ ಶುರುವಾಗಿದೆ ಎಂದರು.

ಆತ್ಮಾವಲೋಕನದತ್ತ ಬಿಜೆಪಿ

ಪಕ್ಷ ಅಧಿಕಾರದಲ್ಲಿದ್ದರೂ ನಿರೀಕ್ಷಿತ ಮಟ್ಟದಲ್ಲಿ ಸಾಧನೆ ಮಾಡಲಾಗದಿರುವುದು, ಬೆಳಗಾವಿಯಲ್ಲಿ ಅಧಿಕೃತ ಅಭ್ಯರ್ಥಿಯ ಸೋಲು, ಮೈಸೂರು, ಮಂಡ್ಯದ ತೀವ್ರ ಹಿನ್ನಡೆ, ಕೊಡಗಿನಲ್ಲಿ ಎದುರಾಳಿಯ ಸಾಧನೆಗಳು ಆತ್ಮಾವಲೋಕನಕ್ಕೆ ಸಕಾಲ ಎಂಬ ಸೂಚನೆಯನ್ನು ನೀಡಿದೆ ಎಂಬ ಮಾತುಗಳು ಬಿಜೆಪಿಯಲ್ಲಿ ಆರಂಭವಾಗಿವೆ.

ಬೆಳಗಾವಿಯಲ್ಲಿ ಬಿಜೆಪಿ 13 ಶಾಸಕರು, ಮೂವರು ಸಂಸದರು, ಇಬ್ಬರು ಸಚಿವರು ಇದ್ದು ಸಂಘಟನೆ ಬಲಿಷ್ಠವಾಗಿದೆ. ಇಬ್ಬರು ಬಿಜೆಪಿ ಶಾಸಕರೇ ಮುಂದೆ ನಿಂತು ತಮ್ಮನನ್ನು ಗೆಲ್ಲಿಸಿಕೊಂಡಿರುವುದು, ಅದಕ್ಕೆ ಪಕ್ಷದ ಕೆಲವರು ಕೈಜೋಡಿಸಿರುವುದು ಬಿಜೆಪಿ ನಾಯಕರ ನಿದ್ದೆಗೆಡಿಸಿದೆ. ಪರಿಷತ್ತಿನಲ್ಲಿ ಆಡಳಿತ ಪಕ್ಷದ ಮುಖ್ಯಸಚೇತಕರಾಗಿರುವ ಮಹಾಂತೇಶ ಕವಟಗಿಮಠ ಸೋಲು ಅನಿರೀಕ್ಷಿತ ಆಘಾತ. ಈ ಬಗ್ಗೆ ಪರಾಮರ್ಶೆ ಮಾಡಲೇಬೇಕು ಎಂಬ ಒತ್ತಾಯವೂ ಶುರುವಾಗಿದೆ.

ಮುಖ್ಯಮಂತ್ರಿ ಬದಲಾಗುತ್ತಾರೆ ಎಂದು ಪದೇ ಪದೇ ನೀಡುತ್ತಿರುವ ಹೇಳಿಕೆಯು ಪಕ್ಷದ ಕಾರ್ಯಕರ್ತರಲ್ಲಿನ ವಿಶ್ವಾಸವನ್ನು ಕುಗ್ಗಿಸಲಿದೆ. ಜತೆಗೆ ಪಕ್ಷದ ನಾಯಕರು ಮೈಚಳಿ ಬಿಟ್ಟು ದುಡಿದಿದ್ದರೆ ಮೇಲ್ಮನೆಯಲ್ಲಿ ಇನ್ನಷ್ಟು ಸ್ಥಾನಗಳಲ್ಲಿ ಗೆಲುವು ಕಷ್ಟವಾಗುತ್ತಿರಲಿಲ್ಲ. ಸದ್ಯವೇ ನಡೆಯಲಿರುವ ಪ್ರಮುಖರ ಸಮಿತಿಯಲ್ಲಿ ಇದನ್ನು ಪ್ರಸ್ತಾಪಿಸಲಾಗುವುದು ಎಂದು ನಾಯಕರೊಬ್ಬರು ಹೇಳಿದರು.

ಸುದ್ದಿ 2 ನಿಮಿಷ

ಡಿಕೆಶಿ ಹೇಳಿರುವುದೆಲ್ಲವೂ ಅವರಿಗೇ ಅನ್ವಯ: ಸಿ.ಟಿ.ರವಿ

ಚಿಕ್ಕಮಗಳೂರು: 'ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ಲೂಟಿ ರವಿ ಎಂದು ಹೇಳಿರುವುದೆಲ್ಲವೂ ಅವರಿಗೇ ಅನ್ವಯವಾಗುತ್ತದೆ, ನನಗೆ ಅನ್ವಯಿಸಲ್ಲ' ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಪ್ರತಿಕ್ರಿಯಿಸಿದರು.

ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿ, 'ಅಕ್ರಮ ಸಂಪತ್ತು ಮಾಡಿಕೊಂಡು ಎಫ್‌ಐಆರ್, ಜೈಲು, ಜಾಮೀನು ಕಂಡವರು ಆರೋಪ ಮಾಡಿದ್ದಾರೆ. ಆರೋಪ ಮಾಡಿರುವವರ ಹಿನ್ನೆಲೆ ಏನು ಎಂದು ಅರ್ಥಮಾಡಿಕೊಳ್ಳಬೇಕು' ಎಂದು ಪರೋಕ್ಷವಾಗಿ ಛೇಡಿಸಿದರು.

'ಹಣ ಲೂಟಿ ಹೊಡೆದು, ಅಕ್ರಮ ಆಸ್ತಿ ಸಂಪಾದಿಸಿ ಜೈಲಿಗೆ ಹೋಗಿರುವ, ಬೇಲ್‌ನಲ್ಲಿರುವ ಕುಖ್ಯಾತಿ ನನಗಿಲ್ಲ. ನಾನು ಆರ್‌ಎಸ್‌ಎಸ್ ಸ್ವಯಂ ಸೇವಕ' ಎಂದ ಅವರು, 'ಕೊತ್ವಾಲ್ ರಾಮಚಂದ್ರನ ಚೇಲಾ ಆದವರಿಗೆ ಉಳಿದವರೆಲ್ಲಾ ಒಂದೇ ರೀತಿ ಕಾಣುತ್ತಾರೆ' ಎಂದು ವ್ಯಂಗ್ಯವಾಡಿದರು.

ವಂಚಿತರಿಗೆ ಮರು ಪರೀಕ್ಷೆಗೆ ಅವಕಾಶ

ಬೆಂಗಳೂರು: ಲೋಕೋಪಯೋಗಿ ಇಲಾಖೆಯಲ್ಲಿನ ಸಹಾಯಕ ಎಂಜಿನಿಯರ್ (ಸಿವಿಲ್) ಹುದ್ದೆಗಳ ಭರ್ತಿಗೆ ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್‌ಸಿ) ಡಿ. 14ರಂದು ಆಯೋಜಿಸಿದ್ದ ಪರೀಕ್ಷೆಗೆ, ರೈಲು ವಿಳಂಬದಿಂದ ಬೆಳಗ್ಗಿನ ಅವಧಿಯ ಪರೀಕ್ಷೆ ಹಾಜರಾಗಲು ಸಾಧ್ಯವಾಗದ, ಆದರೆ ಮಧ್ಯಾಹ್ನದ ಅವಧಿಯ ಪರೀಕ್ಷೆಗೆ ಹಾಜರಾದ ಎಲ್ಲ ಅಭ್ಯರ್ಥಿಗಳಿಗೆ ಇದೇ 29ರಂದು ಬೆಂಗಳೂರಿನಲ್ಲಿ ಮರು ಪರೀಕ್ಷೆ ನಡೆಸಲು ಕೆಪಿಎಸ್‌ಸಿ ನಿರ್ಧರಿಸಿದೆ.

ಹಾಸನ– ಸೊಲ್ಲಾಪುರ ಎಕ್ಸ್‌ಪ್ರೆಸ್ ಮತ್ತು ಉದ್ಯಾನ ಎಕ್ಸ್‌ಪ್ರೆಸ್ ರೈಲು ನಿಗದಿತ ವೇಳೆಗೆ ಕಲಬುರಗಿ ಪರೀಕ್ಷಾ ಕೇಂದ್ರಕ್ಕೆ ತಲುಪಲು ತಡವಾದ ಕಾರಣ ಅದರಲ್ಲಿ ಪ್ರಯಾಣಿಸಿದ ಅಭ್ಯರ್ಥಿಗಳಿಗೆ ಬೆಳಗ್ಗಿನ ಪರೀಕ್ಷೆಯನ್ನು (ಸಾಮಾನ್ಯ ಪತ್ರಿಕೆ–1) ಮತ್ತೆ ನಡೆಸುವುದಾಗಿ ಕೆಪಿಎಸ್‌ಸಿ ತಿಳಿಸಿತ್ತು. ಅಲ್ಲದೆ, ಇದೇ 22ರ ಒಳಗಾಗಿ ರೈಲುಗಳಲ್ಲಿ ಪ್ರಯಾಣಿಸಿದ ಟಿಕೆಟ್ ಮತ್ತು ಆಯೋಗ ನೀಡಿರುವ ಪ್ರವೇಶಪತ್ರ ಸಲ್ಲಿಸುವಂತೆಯೂ ಸೂಚಿಸಿತ್ತು.

ಅದೇ ದಿನ, ಬೀದರ್– ಯಶವಂತಪುರ ರೈಲು ಕೂಡಾ ವಿಳಂಬ ಆಗಿದ್ದರಿಂದ, ಅದರಲ್ಲಿ ಪ್ರಯಾಣಿಸಿದ ಅಭ್ಯರ್ಥಿಗಳಿಗೂ ಬೆಂಗಳೂರು ಪರೀಕ್ಷಾ ಕೇಂದ್ರದಲ್ಲಿ ಬೆಳಗ್ಗಿನ ಪರೀಕ್ಷೆ ಬರೆಯಲು ಸಾಧ್ಯವಾಗಿರಲಿಲ್ಲ. ಅವರು ತಮಗೂ ಪರೀಕ್ಷೆ ಬರೆಯಲು ಅವಕಾಶ ನೀಡುವಂತೆ ಆಯೋಗಕ್ಕೆ ಮನವಿ ಸಲ್ಲಿಸಿದ್ದರು.

'ಈ ಹಿನ್ನೆಲೆಯಲ್ಲಿ, ಬೀದರ್– ಯಶವಂತಪುರ ರೈಲು ವಿಳಂಬದಿಂದ ಬೆಳಗ್ಗಿನ ಪರೀಕ್ಷೆ ಬರೆಯಲು ಸಾಧ್ಯವಾಗದವರು ಮತ್ತು ಇದೇ ರೀತಿ ಅದೇ ದಿನ ಬೇರೆ ಯಾವುದಾದರೂ ರೈಲು ವಿಳಂಬದಿಂದ ಬೆಳಗ್ಗಿನ ಪರೀಕ್ಷೆ ಬರೆಯುವ ಅವಕಾಶದಿಂದ ವಂಚಿತರಾದ ಅಭ್ಯರ್ಥಿಗಳಿಗೆ ಇದೇ 29ರಂದು ಮರು ಪರೀಕ್ಷೆ ಬರೆಯಲು ಅವಕಾಶ ಮಾಡಿಕೊಡಲಾಗಿದೆ' ಎಂದು ಕೆಪಿಎಸ್‌ಸಿ ಕಾರ್ಯದರ್ಶಿ ಜಿ. ಸತ್ಯವತಿ ತಿಳಿಸಿದ್ದಾರೆ.

ಬಹು ಮಾಧ್ಯಮ ಪ್ರಜಾವಾಣಿ LIVE
ಪ್ರಜಾವಾಣಿ ಕನ್ನಡ ಧ್ವನಿ
Prajavani.net/podcast
ಬೆಳಗ್ಗೆ 7 : ವಚನವಾಣಿ,
ಬೆಳಗ್ಗೆ 7.30: ದಿನದ ಸೂಕ್ತಿ,
ಬೆಳಗ್ಗೆ 8: ಮಧ್ಯಾಹ್ನ 2: ರಾತ್ರಿ 8: ಪ್ರಜಾವಾಣಿ ವಾರ್ತೆ, ಬುಲೆಟಿನ್,
ಬೆಳಗ್ಗೆ 9: ಪ್ರಚಲಿತ,
ಬೆಳಗ್ಗೆ 9.30: ಸಂಪಾದಕೀಯ
Prajavani.net
Prajavani Prajavani

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

'ರಾಯಣ್ಣ ಪ್ರತಿಮೆ ಹಾಳುಗೆಡವಿದವರ ವಿರುದ್ಧ ಕ್ರಮ'

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: 'ಬೆಳಗಾವಿಯಲ್ಲಿ ಅಧಿವೇಶನ ನಡೆಯುತ್ತಿರುವ ಸಂದರ್ಭದಲ್ಲಿ ಉದ್ದೇಶಪೂರ್ವಕವಾಗಿ ಕೆಲವರು ಗೊಂದಲ, ಗಲಭೆ ಸೃಷ್ಟಿಸುತ್ತಿದ್ದಾರೆ. ಸಂಗೊಳ್ಳಿ ರಾಯಣ್ಣ ಪ್ರತಿಮೆ ಹಾಳು ಮಾಡುತ್ತಿರುವುದನ್ನು ಸಹಿಸಲು ಸಾಧ್ಯವಿಲ್ಲ. ಅಪರಾಧಿಗಳು ಯಾರೇ ಇರಲಿ, ಅವರ ವಿರುದ್ಧ ಕಠಿಣ ಕ್ರಮ ಜರುಗಿಸುತ್ತೇವೆ' ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹೇಳಿದರು.

ನಗರದಲ್ಲಿ ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಮಹಾತ್ಮರ ಪ್ರತಿಮೆ ವಿಚಾರವಾಗಿ ವಿಧಾನ ಮಂಡಲದಲ್ಲಿ ಈ ಬಗ್ಗೆ ಸುದೀರ್ಘ ಚರ್ಚೆ ಮಾಡುತ್ತೇವೆ. ಈ ರೀತಿ ಘಟನೆಗಳು ಮರುಕಳಿಸದಂತೆ ಪ್ರಾಮಾಣಿಕ ಪ್ರಯತ್ನ ಮಾಡುತ್ತೇವೆ. ಘಟನೆ ಬಗ್ಗೆ ಮುಖ್ಯಮಂತ್ರಿ ಬೊಮ್ಮಾಯಿ ಅವರು ಕಠಿಣ ಕ್ರಮ ಜರುಗಿಸುವಂತೆ ಗೃಹ ಸಚಿವರಿಗೆ ಸೂಚಿಸಿದ್ದಾರೆ. ಗಲಭೆಗೆ ಸಂಬಂಧಿಸಿ ಈಗಾಗಲೇ 23 ಜನರನ್ನು ಬಂಧಿಸಿ ಜೈಲಿಗೆ ಕಳುಹಿಸಲಾಗಿದೆ. ಘಟನೆಯಲ್ಲಿ ಇನ್ನೂ ಯಾರು ಯಾರು ಶಾಮೀಲಾಗಿದ್ದಾರೆಯೋ ಅವರನ್ನು ಬಂಧಿಸುವ ಕೆಲಸ ಮುಂದುವರಿಯುತ್ತದೆ' ಎಂದರು.

ಎಂಇಎಸ್ ಈ ಮಟ್ಟಿಗೆ ಬೆಳೆಯಲು ಹಿಂದೆ ಬಿಜೆಪಿ ನೀಡಿದ್ದ ಬೆಂಬಲವೇ ಕಾರಣ ಎಂಬ ಆರೋಪಕ್ಕೆ ಪ್ರತಿಕ್ರಿಯಿಸಿದ ಬಿಎಸ್‌ವೈ, 'ಯಾರೋ ಕೆಲವರು ವಾಸ್ತವಿಕ ಸಂಗತಿ ತಿಳಿಯದವರು ಮಾಡಿದ ಆರೋಪಕ್ಕೆ ಅರ್ಥವಿಲ್ಲ. ಯಾರೇ ಅಪರಾಧ ಮಾಡಿದರೂ ಕ್ಷಮಿಸುವ ಪ್ರಶ್ನೆಯೇ ಇಲ್ಲ. ತಪ್ಪು ಮಾಡಿದವರ ಮೇಲೆ ಕ್ರಮ ಜರುಗಿಸಿ ಜೈಲಿಗೆ ಕಳುಹಿಸಿರುವುದೇ ಇದಕ್ಕೆ ಉದಾಹರಣೆ' ಎಂದು ಹೇಳಿದರು.

'ಕನ್ನಡಪರ ಹೋರಾಟಗಾರರ ಮೇಲೆ ಪ್ರತಾಪ ಬೇಡ'



ಕುಮಾರಸ್ವಾಮಿ

ಬೆಂಗಳೂರು: 'ಸಂಗೊಳ್ಳಿ ರಾಯಣ್ಣ ಅವರ ಪ್ರತಿಮೆಯನ್ನು ವಿರೂಪಗೊಳಿಸಿದ ದೇಶ ದ್ರೋಹಿಗಳಿಗೆ ತಕ್ಕ ಪಾಠ ಕಲಿಸುವುದು ಬಿಟ್ಟು ಕನ್ನಡಪರ ಹೋರಾಟಗಾರರ ಮೇಲೆ ರಾಜ್ಯ ಸರ್ಕಾರ ಪ್ರತಾಪ ತೋರಿಸುವುದು ಬೇಡ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಹೇಳಿದ್ದಾರೆ.

ಸರಣಿ ಟ್ವೀಟ್ ಮಾಡಿರುವ ಅವರು, 'ಬೆಳಗಾವಿಯಲ್ಲಿ ಬೇರೆಯವರು ಬೇಳೆ ಬೇಯಿಸಿಕೊಳ್ಳುವುದು ಬೇಡ' ಎಂದು ಕಿಡಿಕಾರಿದ್ದಾರೆ.

'ಶಿವಾಜಿ ಪ್ರತಿಮೆ ವಿರೂಪ ಮಾಡಿದ ವಿಷಯವನ್ನು ಪ್ರಸ್ತಾಪ ಮಾಡಿರುವ ಮಹಾರಾಷ್ಟ್ರ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಅವರ ಅನಗತ್ಯ ಹೇಳಿಕೆ ಒಪ್ಪಲು ಸಾಧ್ಯವಿಲ್ಲ. ಮುಖ್ಯಮಂತ್ರಿ ಪದವಿಯಲ್ಲಿದ್ದು ಒಕ್ಕೂಟ ವ್ಯವಸ್ಥೆ ಆಶಯವನ್ನು ಗಾಳಿಗೆ ತೂರುವ ಉದ್ಧಟತನದ ಮಾತೇಕೆ' ಎಂದು ಅವರು ಪ್ರಶ್ನಿಸಿದ್ದಾರೆ.

ಕಲ್ಲುತೂರಾಟ: ಐವರ ಬಂಧನ

ಬೆಳಗಾವಿ: ನಗರದಲ್ಲಿ ಶುಕ್ರವಾರ ತಡರಾತ್ರಿ ನಡೆದ ಕಲ್ಲುತೂರಾಟ ಪ್ರಕರಣ ಸಂಬಂಧ ಮಾರ್ಕೆಟ್ ಠಾಣೆ ಪೊಲೀಸರು ಭಾನುವಾರ ಐವರನ್ನು ಬಂಧಿಸಿದ್ದಾರೆ. ಬಂಧಿತರ ಸಂಖ್ಯೆ 32ಕ್ಕೆ ಏರಿದೆ.

ಸ್ಥಾನಮಾನ ಶಾಶ್ವತವಲ್ಲ: ಭಾವುಕರಾದ ಸಿ.ಎಂ

ಒಂದನೇ ಪುಟದಿಂದ

ಈ ಸಂದರ್ಭದಲ್ಲಿ ಮಾತನಾಡಿದ ಸಚಿವ ಮುರುಗೇಶ ನಿರಾಣಿ, 'ಬಸವರಾಜ ಬೊಮ್ಮಾಯಿ ಅವರೇ ಪೂರ್ಣಾವಧಿ ಸಿಎಂ ಆಗಿ ಮುಂದುವರಿಯುತ್ತಾರೆ. ಅವರ ತಂದೆ ಎಸ್.ಆರ್. ಬೊಮ್ಮಾಯಿ ಕೇಂದ್ರ ಮಂತ್ರಿಯಾದ ರೀತಿ ಪುತ್ರ ಬೊಮ್ಮಾಯಿ ಕೂಡ ಕೇಂದ್ರ ಮಂತ್ರಿಯಾಗಲಿದ್ದಾರೆ' ಎಂದರು.

ಕೂಡಲಸಂಗಮದ ಬಸವಜಯ ಮೃತ್ಯುಂಜಯ ಸ್ವಾಮೀಜಿ ಪ್ರತಿಕ್ರಿಯಿಸಿ, 'ಬೊಮ್ಮಾಯಿ ಅವರು ಕೇಂದ್ರ ಮಂತ್ರಿಯಾಗುವ ಅಗತ್ಯವಿಲ್ಲ. ಅವರು 2023ರ ನಂತರವೂ ಮುಖ್ಯಮಂತ್ರಿಯಾಗಿಯೇ ಮುಂದುವರಿಯಲಿ' ಎಂದರು. ಇದಕ್ಕೆ ತಕ್ಷಣ ಪ್ರತಿಕ್ರಿಯಿಸಿದ ನಿರಾಣಿ, 'ಬೊಮ್ಮಾಯಿ ಈಗ ಕೇಂದ್ರ ಮಂತ್ರಿಯಾಗುತ್ತಾರೆ ಎಂದಿಲ್ಲ. ಮುಂದೆ ಆಗುವ ಯೋಗವಿದೆ ಎಂದು ಹೇಳಿದೆ' ಎಂದರು.

ಪುಣೆಗೆ ತೆರಳಿದ್ದ ರಾಜ್ಯದ ಬಸ್ ವಿರೂಪಗೊಳಿಸಿದ ಕಿಡಿಗೇಡಿಗಳು

ಕಲ್ಯಾಣ ಕರ್ನಾಟಕ ಸಾರಿಗೆ ಸಂಸ್ಥೆಯ ಬಸ್ಸನ್ನು ಕಿಡಿಗೇಡಿಗಳು ವಿರೂಪಗೊಳಿಸಿರುವುದು

ಲಿಂಗಸುಗೂರು: ರಾಯಚೂರು ಜಿಲ್ಲೆಯ ಲಿಂಗಸುಗೂರಿನಿಂದ ಮಹಾರಾಷ್ಟ್ರದ ಪುಣೆಗೆ ತೆರಳಿದ್ದ ಕಲ್ಯಾಣ ಕರ್ನಾಟಕ ಸಾರಿಗೆಯ ಬಸ್ ಮೇಲೆ ಕೆಲ ಕಿಡಿಗೇಡಿಗಳು ಮಸಿ ಬಳಿದು, ವಿರೂಪಗೊಳಿಸಿದ್ದಾರೆ. ಕೇಸರಿ ಬಣ್ಣದಲ್ಲಿ ಶಿವಸೇನೆ ಮತ್ತು ಶಿವಾಜಿ ಮಹಾರಾಜ ಎಂದು ಬರೆಯಲಾಗಿದೆ.

'ಶನಿವಾರ ತಂಡೋಪತಂಡವಾಗಿ ಬಂದ ಯುವಕರು, ಕನ್ನಡಿಗರು ಮತ್ತು ಕರ್ನಾಟಕ ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು. ನಂತರ ಕರ್ನಾಟಕದ ಬಸ್‌ಗಳ ಮೇಲೆ ಮನಸೋ ಇಚ್ಛೆ ಬರೆದು ವಿರೂಪಗೊಳಿಸಿದರು. ಅವರನ್ನು ತಡೆಯಲು ಸಾಧ್ಯವಾಗಲಿಲ್ಲ' ಎಂದು ಬಸ್ ಚಾಲಕರಾದ ಕಾಶಿಂಸಾಬ ಮತ್ತು ಸಿದ್ದಪ್ಪ ತಿಳಿಸಿದರು.

ಆಳಂದ (ಕಲಬುರಗಿ ಜಿಲ್ಲೆ): ಮಹಾರಾಷ್ಟ್ರದ ಕೊಲ್ಹಾಪುರ, ಸಾಂಗ್ಲಿಯಲ್ಲಿ ಕನ್ನಡ ಧ್ವಜ ಹಾಗೂ ಸಂಗೊಳ್ಳಿ ರಾಯಣ್ಣನ ಪ್ರತಿಮೆಗೆ ಅಪಮಾನಿಸಿದ ಕೃತ್ಯ ಖಂಡಿಸಿ ಆಳಂದ ಚೆಕ್‌ಪೋಸ್ಟ್ ಬಳಿ ಜಯಕರ್ನಾಟಕ ಸಂಘಟನೆ ಕಾರ್ಯಕರ್ತರು ಶನಿವಾರ ರಾತ್ರಿ ಮಹಾರಾಷ್ಟ್ರದ ವಾಹನಗಳಿಗೆ ಮಸಿ ಬಳಿದು ಆಕ್ರೋಶ ವ್ಯಕ್ತಪಡಿಸಿದರು.

ಬೊಮ್ಮಾಯಿ ವಿರುದ್ಧ ಶಿವಸೇನಾ ಪ್ರತಿಭಟನೆ

ಮುಂಬೈ (ಪಿಟಿಐ): ಬೆಂಗಳೂರಿನಲ್ಲಿ ಛತ್ರಪತಿ ಶಿವಾಜಿ ಅವರ ಪ್ರತಿಮೆಗೆ ಮಸಿ ಬಳಿದಿರುವುದನ್ನು ಖಂಡಿಸಿ ಶಿವಸೇನಾ ಪಕ್ಷದ ಸದಸ್ಯರು ಭಾನುವಾರ ಇಲ್ಲಿ ಪ್ರತಿಭಟನೆ ನಡೆಸಿದರು.

ಬೆಳಗಾವಿಯ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಯುವಕ ಸಂಘ ಹಾಗೂ ರಾಯಣ್ಣ ಸೇನೆ ಕಾರ್ಯಕರ್ತರು ಅನಗೋಳದ ಕನಕದಾಸ ಕಾಲೊನಿಯಲ್ಲಿ ಭಾನುವಾರ ಮರಳಿ ಅದೇ ಜಾಗದಲ್ಲಿ ರಾಯಣ್ಣನ ಪ್ರತಿಮೆ ಪ್ರತಿಷ್ಠಾಪಿಸಿ ಪೂಜೆ ಸಲ್ಲಿಸಿದರು –ಪ್ರಜಾವಾಣಿ ಚಿತ್ರ

ರಾಯಣ್ಣನ ಪ್ರತಿಮೆ ಪುನರ್ ಸ್ಥಾಪನೆ

ಒಂದನೇ ಪುಟದಿಂದ

ಶನಿವಾರ ನಸುಕಿನಲ್ಲಿ ಪ್ರತಿಮೆ ವಿರೂಪಗೊಳಿಸಿದ ಘಟನೆ ಬಳಿಕ ಪೊಲೀಸರು ಅದನ್ನು ತಮ್ಮ ವಶಕ್ಕೆ ಪಡೆದಿದ್ದರು.

ಕರವೇ ಕಾರ್ಯಕರ್ತರು ಪೊಲೀಸ್ ವಶಕ್ಕೆ: ಪ್ರತಿಮೆ ಭಗ್ನಗೊಳಿಸಿದ ಘಟನೆ ವಿರೋಧಿಸಿ ತಾಲ್ಲೂಕಿನ ಪೀರನವಾಡಿ ಬಳಿಯ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ವೃತ್ತದಲ್ಲಿ ಪ್ರತಿಭಟನೆ ನಡೆಸಿದ ಕರ್ನಾಟಕ ರಕ್ಷಣಾ ವೇದಿಕೆ (ಟಿ.ಎ. ನಾರಾಯಣಗೌಡ ಬಣ) ಜಿಲ್ಲಾ ಘಟಕದ ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದರು.

22ರವರೆಗೆ ನಿಷೇಧಾಜ್ಞೆ ವಿಸ್ತರಣೆ: ಬೆಳಗಾವಿ ನಗರ ಸೇರಿದಂತೆ ತಾಲ್ಲೂಕಿನಾದ್ಯಂತ ಇದೇ 22ರ ಬೆಳಿಗ್ಗೆ 6 ಗಂಟೆಯವರೆಗೆ ನಿಷೇಧಾಜ್ಞೆಯನ್ನು ವಿಸ್ತರಿಸಿ ನಗರ ಪೊಲೀಸ್ ಆಯುಕ್ತ ಡಾ.ಕೆ. ತ್ಯಾಗರಾಜನ್ ಭಾನುವಾರ ಆದೇಶ ಹೊರಡಿಸಿದ್ದಾರೆ.

'ಗುತ್ತಿಗೆ ಪದ್ಧತಿ ರದ್ದಾಗಲಿ: ಸಮಾನ ವೇತನ ಸಿಗಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರಿನ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣದಿಂದ ಸ್ವಾತಂತ್ರ್ಯ ಉದ್ಯಾನದವರೆಗೆ ಪ್ರತಿಭಟನಕಾರರು ಭಾನುವಾರ ಮೆರವಣಿಗೆ ನಡೆಸಿದರು –ಪ್ರಜಾವಾಣಿ ಚಿತ್ರ

ಬೆಂಗಳೂರು: 'ಗುತ್ತಿಗೆ ಪದ್ಧತಿ ರದ್ದುಪಡಿಸಬೇಕು, ಸಮಾನ ಕೆಲಸಕ್ಕೆ ಸಮಾನ ವೇತನ ನೀಡಬೇಕು ಹಾಗೂ ಕಾರ್ಪೊರೇಟ್ ಮಾಲೀಕರ ಪರವಾಗಿರುವ ನಾಲ್ಕು ಕಾರ್ಮಿಕ ಸಂಹಿತೆಗಳನ್ನು ರೈತ ವಿರೋಧಿ ಕೃಷಿ ಕಾಯ್ದೆಗಳ ರೀತಿಯಲ್ಲೇ ಹಿಂದಕ್ಕೆ ಪಡೆಯಬೇಕು ಎಂದು ಒತ್ತಾಯಿಸಿ ಕಾರ್ಮಿಕ ಹಕ್ಕುಗಳ ಹೋರಾಟ ಸಮಿತಿ ನೇತೃತ್ವದಲ್ಲಿ ವಿವಿಧ ಸಂಘಟನೆಗಳು ಭಾನುವಾರ ಪ್ರತಿಭಟನೆ ನಡೆಸಿದವು.

'ಬೆವರಿನ ಪಾಲು, ಘನತೆಯ ಬಾಳು' ಧ್ಯೇಯ ವಾಕ್ಯದೊಂದಿಗೆ ನಡೆದ ಕಾರ್ಮಿಕ ಹಕ್ಕೊತ್ತಾಯ ಸಮಾವೇಶದ ಅಂಗವಾಗಿ ನಗರದ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣದಿಂದ ಸ್ವಾತಂತ್ರ್ಯ ಉದ್ಯಾನದವರೆಗೆ ನಡೆದ ಮೆರವಣಿಗೆಯಲ್ಲಿ ಸಾವಿರಾರು ಕಾರ್ಮಿಕರು ಪಾಲ್ಗೊಂಡರು.

'ಕಾರ್ಮಿಕರ ಐಕ್ಯ ಹೋರಾಟ ಚಿರಾಯುವಾಗಲಿ', 'ಗುತ್ತಿಗೆ ಪದ್ಧತಿ ಬೇಡವೇ ಬೇಡ', 'ಕಾರ್ಮಿಕ ವಿರೋಧಿ ಕಾಯ್ದೆಗಳು ರದ್ದಾಗಬೇಕು' ಎಂಬ ಘೋಷಣೆಗಳನ್ನು ಕೂಗುವ ಮೂಲಕ ಪ್ರತಿಭಟನಕಾರರು ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಪ್ರತಿಭಟನಾ ಹಾದಿಯಲ್ಲಿ ಹೋರಾಟದ ಗೀತೆಗಳು ಮೊಳಗಿದವು. ಕೆಂಪು ಹಾಗೂ ನೀಲಿ ಧ್ವಜಗಳೂ ರಾರಾಜಿಸಿದವು.

ಕರ್ನಾಟಕ ಶ್ರಮಿಕ ಶಕ್ತಿಯ ರಾಜ್ಯ ಘಟಕದ ಅಧ್ಯಕ್ಷ ವರದರಾಜೇಂದ್ರ, ಟಿಯುಸಿಐ ರಾಜ್ಯ ಘಟಕದ ಅಧ್ಯಕ್ಷ ಆರ್.ಮಾನಸಯ್ಯ ಮಾತನಾಡಿದರು. ಕಾರ್ಮಿಕ ಮುಖಂಡರಾದ ಬಾಲನ್, ಎಸ್.ವೆಂಕಟೇಶ್ವರ ರಾವ್, ನೂರ್ ಶ್ರೀಧರ್, ಸುದೇಶ್, ಕೈಲಾಶ್, ಸಿದ್ಧಾಂತ್, ಮೋಹನ್‌ಕುಮಾರ್, ಚನ್ನಮ್ಮ, ಸುಷ್ಮಾ ವರ್ಮ ಇದ್ದರು.

ಕಾರ್ಮಿಕರ ಹಕ್ಕೊತ್ತಾಯಗಳು

- ಬಳ್ಳಾರಿ ಜಿಲ್ಲೆಯ ಗಣಿ ಕಾರ್ಮಿಕರಿಗೆ ಪರಿಹಾರ, ಪುನರ್ವಸತಿ ಕಲ್ಪಿಸಬೇಕು
- ಯರಮರಸ್ ಉಷ್ಣ ವಿದ್ಯುತ್ ಸ್ಥಾವರದ ಕಾರ್ಮಿಕರಿಗೆ ಶಾಸನಬದ್ಧ ಸೌಲಭ್ಯ ಕಲ್ಪಿಸಬೇಕು
- ಎಲ್ಲಾ ನೀರಾವರಿ ಯೋಜನೆಗಳ ಕಾರ್ಮಿಕರ ಬಾಕಿ ವೇತನ ಪಾವತಿಸಬೇಕು.
- ಬೆಂಗಳೂರು ಜಲಮಂಡಳಿ, ಬಿಬಿಎಂಪಿ ಮತ್ತು ರೇಸ್ ಕೋರ್ಸ್‌ಗಳಲ್ಲಿನ ಗುತ್ತಿಗೆ ಕಾರ್ಮಿಕರಿಗೆ ಸಮಾನ ವೇತನ, ಗ್ರಾಚ್ಯುಟಿ, ಆರೋಗ್ಯ ವಿಮೆ ಮತ್ತು ಕೆಲಸದ ಭದ್ರತೆ ಒದಗಿಸಬೇಕು
- ನೇಕಾರರಿಗೆ, ಹಮಾಲಿಗಳಿಗೆ ಕಲ್ಯಾಣ ಮಂಡಳಿ ಸ್ಥಾಪಿಸಿ

ಮಹಾರಥೋತ್ಸವ ಕೊಪ್ಪಳ ಜಿಲ್ಲೆಯ ಕುಕನೂರು ಪಟ್ಟಣದ ಗುದ್ನೇಶ್ವರಸ್ವಾಮಿಯ ಮಹಾರಥೋತ್ಸವವು ಭಾನುವಾರ ಸಂಭ್ರಮದಿಂದ ಜರುಗಿತು -ಪ್ರಜಾವಾಣಿ ಚಿತ್ರ/ ಭರತ್ ಕಂದಕೂರ

ಸದನದಲ್ಲಿ ಇಂದು ರಾಯಣ್ಣ ಕಾವು?

ಒಂದನೇ ಪುಟದಿಂದ

ಬೆಳಗಾವಿಯಲ್ಲಿ ಎಂಇಎಸ್ ಮುಖಂಡ ದೀಪಕ್ ದಳವಿ ಮುಖಕ್ಕೆ ಮಸಿ ಎರಚಿದ ಬಳಿಕ ಮಹಾರಾಷ್ಟ್ರದ ಕೊಲ್ಹಾಪುರದಲ್ಲಿ ಕನ್ನಡ ಬಾವುಟ ಸುಟ್ಟು ಹಾಕಲಾಗಿತ್ತು. ಇದನ್ನು ಜೆಡಿಎಸ್ ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿತ್ತು. ಅದರ ಬೆನ್ನಲ್ಲೇ ಬೆಂಗಳೂರಿನಲ್ಲಿ ಶಿವಾಜಿ ಪ್ರತಿಮೆಗೆ ಕಿಡಿಗೇಡಿಗಳು ಮಸಿ ಬಳಿದರು. ಇದಕ್ಕೆ ಪ್ರತೀಕಾರವೆಂಬಂತೆ ಕಿಡಿಗೇಡಿಗಳು ಬೆಳಗಾವಿಯಲ್ಲಿ ಸಂಗೊಳ್ಳಿ ರಾಯಣ್ಣ ಪ್ರತಿಮೆಯನ್ನು ವಿರೂಪಗೊಳಿಸಿದರು. ಬೆಂಗಳೂರಿನಿಂದ ಬಂದಿರುವ ಸರ್ಕಾರಿ ವಾಹನಗಳ ಮೇಲೆ ಎಂಇಎಸ್ ಕಾರ್ಯಕರ್ತರು ದಾಳಿ ನಡೆಸಿದ ಪ್ರಕರಣಗಳು ನಡೆದಿವೆ. ಈ ಘಟನೆಗಳಿಂದ ಬೆಳಗಾವಿಯಲ್ಲಿ ಆತಂಕ ನೆಲೆಸಿದೆ.

ಈ ಮಧ್ಯೆ ಕೆಲವು ಕನ್ನಡ ಪರ ಸಂಘಟನೆಗಳು ಪ್ರತಿಭಟನೆಗಾಗಿ ಬೆಂಗಳೂರಿನಿಂದ ವಾಹನಗಳಲ್ಲಿ ಬೆಳಗಾವಿಯತ್ತ ಹೊರಟಿರುವುದು ಪೊಲೀಸರಿಗೆ ತಲೆನೋವು ತಂದಿದೆ.

ಮಹಾರಾಷ್ಟ್ರ ಮತ್ತು ಎಂಇಎಸ್‌ನ ಕಿಡಿಗೇಡಿಗಳ ವರ್ತನೆಗಳ ಬಗ್ಗೆ ಜೆಡಿಎಸ್ ದೊಡ್ಡ ಮಟ್ಟದಲ್ಲಿ ಪ್ರಸ್ತಾಪಿಸಲಿದೆ. ಮತ್ತೊಂದೆಡೆ ನಗರಾಭಿವೃದ್ಧಿ ಸಚಿವ ಬೈರತಿ ಬಸವರಾಜ ಮತ್ತು ವಿಧಾನಪರಿಷತ್ ಸದಸ್ಯ ಆರ್.ಶಂಕರ್ ಅವರ ವಿರುದ್ಧ ಭೂಕಬಳಿಕೆ ಆರೋಪದ ವಿಷಯವನ್ನು ಮುಂದಿಟ್ಟುಕೊಂಡು ಸಚಿವರ ರಾಜೀನಾಮೆಗೆ ಆಗ್ರಹಿಸುತ್ತಿರುವ ಬೆನ್ನಲ್ಲೇ, ಬೆಳಗಾವಿ ಘಟನೆ ಮುನ್ನೆಲೆಗೆ ಬಂದಿದೆ. ಶುಕ್ರವಾರ ಎರಡೂ ಸದನಗಳಲ್ಲಿ ಬೈರತಿ ವಿಷಯವಾಗಿ ಕಾಂಗ್ರೆಸ್ ಧರಣಿ ನಡೆಸಿ, ರಾಜೀನಾಮೆಗೆ ಆಗ್ರಹಿಸಿತ್ತು. ಸೋಮವಾರವೂ ಪಟ್ಟು ಮುಂದುವರೆಸಲು ತೀರ್ಮಾನಿಸಿತ್ತು. ಅಲ್ಲದೆ, ಶೇ 40 ಕಮಿಷನ್ ಮತ್ತು ಬಿಟ್ ಕಾಯಿನ್ ವಿಚಾರದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ರಾಜೀನಾಮೆಗೆ ಆಗ್ರಹಿಸುವ ಕಾಂಗ್ರೆಸ್‌ನ ಕಾರ್ಯತಂತ್ರ ಯಾವ ತಿರುವು ಪಡೆಯಲಿದೆ ಎಂಬ ಕುತೂಹಲವೂ ಇದೆ.

ಕಾಂಗ್ರೆಸ್ ನಾಯಕರು ಎಂಇಎಸ್ ಮತ್ತು ಶಿವಸೇನೆಗಳ ಕಿಡಿಗೇಡಿ ವರ್ತನೆಯ ವಿಷಯವನ್ನು ಯಾವ ರೀತಿ ಪ್ರಸ್ತಾಪಿಸಲಿದ್ದಾರೆ ಮತ್ತು ಎಷ್ಟು ಮಹತ್ವ ನೀಡಲಿದ್ದಾರೆ ಎಂಬುದು ಸೋಮವಾರ ನಡೆಯುವ ಶಾಸಕಾಂಗ ಪಕ್ಷದ ಸಭೆಯಲ್ಲಿ ತೀರ್ಮಾನವಾಗಲಿದೆ. ಮಹಾರಾಷ್ಟ್ರದಲ್ಲಿ ಶಿವಸೇನೆ ನೇತೃತ್ವದ ಮೈತ್ರಿ ಸರ್ಕಾರದಲ್ಲಿ ಕಾಂಗ್ರೆಸ್ ಭಾಗಿಯಾಗಿದೆ. ಮಹಾರಾಷ್ಟ್ರದ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಬೆಳಗಾವಿಯ ಎಂಇಎಸ್‌ಗೆ ಬಹಿರಂಗವಾಗಿ ಬೆಂಬಲ ನೀಡಿದ್ದಾರೆ. ಇದು ಕಾಂಗ್ರೆಸ್‌ಗೆ ನುಂಗಲಾರದ ತುತ್ತಾಗಿದೆ.

ಎಂಇಎಸ್ ನಡೆಸುತ್ತಿರುವ ಕೃತ್ಯಗಳ ಬಗ್ಗೆ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಟ್ವೀಟ್ ಮೂಲಕ ಆಕ್ರೋಶ ವ್ಯಕ್ತಪಡಿಸಿದ್ದು, ಸೋಮವಾರ ಸದನಕ್ಕೆ ಹಾಜರಾಗಿ ವಿಷಯ ಪ್ರಸ್ತಾಪಿಸುವ ಸಾಧ್ಯತೆ ಇದೆ ಎನ್ನಲಾಗಿದೆ. ಈ ಮಧ್ಯೆ, ಮತಾಂತರ ನಿಷೇಧ ಮಸೂದೆಯನ್ನು ಮಂಡಿಸುವ ಸಂಬಂಧ ಸೋಮವಾರ ನಡೆಯುವ ಸಚಿವ ಸಂಪುಟ ಸಭೆಯಲ್ಲಿ ಒಪ್ಪಿಗೆ ಪಡೆಯಲಾಗುವುದು ಎಂದು ಬಿಜೆಪಿ ಮೂಲಗಳು ತಿಳಿಸಿವೆ.

ಎಲ್ಲ ಶಾಸಕರು ಕಡ್ಡಾಯವಾಗಿ ಹಾಜರಿರುವಂತೆ ವಿಪ್ ಹೊರಡಿಸಲೂ ಪಕ್ಷ ತೀರ್ಮಾನಿಸಿದೆ.

ಒಳನೋಟ

'ಹವಾಲಾದಂತಾದ ಅಡಿಕೆ ವಹಿವಾಟು'

ಬೆಂಗಳೂರು: 'ಹವಾಲಾದಂತಾದ ಅಡಿಕೆ ವಹಿವಾಟು' ಶೀರ್ಷಿಕೆಯಡಿ 'ಪ್ರಜಾವಾಣಿ'ಯಲ್ಲಿ ಭಾನುವಾರ (ಡಿ.19) ಪ್ರಕಟವಾದ 'ಒಳನೋಟ' ವರದಿಗೆ ರಾಜ್ಯದಾದ್ಯಂತ ಓದುಗರು ಪ್ರತಿಕ್ರಿಯಿಸಿದ್ದಾರೆ. ಆಯ್ದ ಪ್ರತಿಕ್ರಿಯೆಗಳು ಇಲ್ಲಿವೆ.

ಬೆಳೆಗಾರರದ್ದು ಯಥಾಸ್ಥಿತಿ

ಅಡಿಕೆ ದರ ಎಷ್ಟೇ ಏರಿಳಿತ ಕಂಡರೂ, ಅಡಿಕೆ ಬೆಳೆಗಾರರಿಗೆ ಲಾಭ ಕೈಗೆಟುಕುವುದಿಲ್ಲ. ಮಧ್ಯವರ್ತಿಗಳು ಕೇಳಿದ ಬೆಲೆಗೆ ಫಸಲು ಕೊಟ್ಟು, ಬೆಳೆಗಾರರು ಯಥಾಸ್ಥಿತಿಯಲ್ಲೇ ಉಳಿದಿದ್ದಾರೆ. ಅಡಿಕೆ ಬೆಳೆಗಾರರು ನೇರವಾಗಿ ಮಾರುಕಟ್ಟೆಗೆ ಹೋಗಿ ಅಡಿಕೆ ಮಾರಾಟ ಮಾಡುವ ಸ್ಥಿತಿ ನಿರ್ಮಾಣವಾದರೆ, ಲಾಭ ಕಾಣಬಹುದು.

ದರ್ಶನ್, ತುಮಕೂರು

ಅಡಿಕೆಗೆ ಅಪಾಯಕಾರಿ ಬಣ್ಣ ಬಳಕೆ

ಮಾರುಕಟ್ಟೆಗಳಲ್ಲಿ ಉತ್ತಮ ಬೆಲೆ ಸಿಗಲಿ ಹಾಗೂ ತೂಕ ಹೆಚ್ಚಾಗಲಿ ಎಂಬ ಉದ್ದೇಶದಿಂದ ಅಡಿಕೆಗೆ ಅಪಾಯಕಾರಿ ಬಣ್ಣಗಳನ್ನು ಬಳಸುತ್ತಾರೆ. ಈ ಪ್ರವೃತ್ತಿಯನ್ನು ಅಡಿಕೆ ಬೆಳೆಗಾರರು ನಿಲ್ಲಿಸಬೇಕು. ಇದು, ಆರೋಗ್ಯದ ಮೇಲೂ ತೀವ್ರ ಪರಿಣಾಮ ಬೀರುತ್ತದೆ. ದರ ಏರಿಳಿತಕ್ಕೂ ಕಾರಣವಾಗುತ್ತದೆ.

ಶಿವಮೂರ್ತಪ್ಪ, ಶಿವಮೊಗ್ಗ

ಮಧ್ಯವರ್ತಿಗಳಿಗೆ ಸಂತಸ

ಅಡಿಕೆ ಧಾರಣೆ ಗಗನಕ್ಕೇರುತ್ತಿರುವುದು ಅಡಿಕೆ ಬೆಳೆಗಾರರಿಗೆ ಸಿಹಿಯ ವಿಚಾರವಲ್ಲ. ಇದು, ನೇರವಾಗಿ ಬೆಳೆಗಾರರಿಗೆ ತಲುಪುವುದಿಲ್ಲ. ಇದರ ನಿಜವಾದ ಸಂತೋಷ ಅನುಭವಿಸುವವರು ಮಧ್ಯವರ್ತಿಗಳು ಮಾತ್ರ. ಮುಂಗಡ ಹಣ ಪಡೆದು, ಅಡಿಕೆ ತೋಟವನ್ನು ಮಧ್ಯವರ್ತಿಗೆ ಗುತ್ತಿಗೆ ನೀಡುವುದರಿಂದ ಲಾಭದ ಬಹುಪಾಲು ಮಧ್ಯವರ್ತಿಗಳ ಪಾಲಾಗುತ್ತವೆ.

ವಿಜಯೇಂದ್ರ, ಮೈಸೂರು

ದಲ್ಲಾಳಿಗಳಿಂದ ದರ ಏರಿಳಿತ

ಅಡಿಕೆ ದರ ಏರಿಳಿತಕ್ಕೆ ದಲ್ಲಾಳಿಗಳೇ ಕಾರಣ. ತಿಂಗಳುಗಟ್ಟಲೆ ಶ್ರಮ ವಹಿಸಿ ಅಡಿಕೆ ಬೆಳೆಯುವವರು ನಷ್ಟದಲ್ಲೇ ಸಿಲುಕಿರುತ್ತಾರೆ. ಮಧ್ಯವರ್ತಿಗಳು ಕಷ್ಟ ಪಡದೆ ಶ್ರೀಮಂತರಾದರೆ, ಬೆಳೆಗಾರರು ಸಾಲಗಾರರಾಗುತ್ತಿದ್ದಾರೆ. ಸರ್ಕಾರ ಮಧ್ಯವರ್ತಿಗಳ ಹಾವಳಿ ತಪ್ಪಿಸಿ, ಅಡಿಕೆ ಬೆಳೆಗಾರರಿಗೆ ಸೂಕ್ತ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸಬೇಕು.

ದಿಲೀಪ್, ದಾವಣಗೆರೆ

ಮಧ್ಯವರ್ತಿಗಳ ಹಾವಳಿ ನಿಲ್ಲಿಸಿ

ಮಧ್ಯವರ್ತಿಗಳು ಬೆಳೆಗಾರರಿಂದ ಅಡಿಕೆ ಖರೀದಿ ಮಾಡುವುದನ್ನು ನಿಲ್ಲಿಸಬೇಕು. ಆಗ ಮಾತ್ರ ಅಡಿಕೆ ಬೆಳೆಗಾರರ ಅಭಿವೃದ್ಧಿ ಸಾಧ್ಯ. ಎಪಿಎಂಸಿಗಳಿಂದಲೇ ಅಡಿಕೆ ಖರೀದಿಗೆ ಸರ್ಕಾರ ಕ್ರಮ ಕೈಗೊಳ್ಳಬೇಕು. ಮಧ್ಯವರ್ತಿಗಳು ಮಾತ್ರ ಶ್ರೀಮಂತರಾಗಿ ಬೆಳೆಯುತ್ತಿದ್ದು, ಬಡವರಾಗಿಯೇ ಉಳಿದಿರುವ ಅಡಿಕೆ ಬೆಳೆಗಾರರಿಗೆ ಸೂಕ್ತ ಬೆಲೆ ಸಿಗುವಂತೆ ಮಾರುಕಟ್ಟೆ ನಿಯಮಗಳನ್ನು ರೂಪಿಸಬೇಕು.

ಬಸಪ್ಪ ಸೊ.ಮುಳ್ಳೂರ, ಬೆಳಗಾವಿ

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	124.80	2,050	1,857
ಹಾರಂಗಿ	2,859	2,853.72	70	200
ಕಬಿನಿ	2,284	2,283.43	910	700
ಹೇಮಾವತಿ	2,922	2,911.88	1,056	2,540
ಲಿಂಗನಮಕ್ಕಿ	1,819	1,810.95	396	5775
ಸೂಪಾ (ಮೀ)	564	553.54	237	3,179
ಮಾಣಿ	594.36	585.98	195	-
ತುಂಗಭದ್ರಾ	1,633	1,632.72	3,800	6,586
ಮಲಪ್ರಭಾ	2,079.50	2,076.77	-	1,469
ಘಟಪ್ರಭಾ	2,175	2,165.86	-	2,637
ಭದ್ರಾ	186	186	1,057	1,057
ಆಲಮಟ್ಟಿ (ಮೀ)	519.60	519.23	3,727	9,596
ನಾರಾಯಣಪುರ (ಮೀ)	492.25	491.46	8,280	9,140

* ನೆಲಮಟ್ಟದಿಂದ

ಪೌಷ್ಟಿಕ ಆಹಾರ ಸೇವಿಸಿ

'ಮಹಿಳೆ ಬದಲಾಗಿದ್ದಾಳೆ, ಗಂಡಸರಲ್ಲ'

• ಶರತ್ ಹೆಗ್ಡೆ



ಶಶಿ ದೇಶಪಾಂಡೆ

ಬೆಂಗಳೂರು: 'ವಿಧಾನಸಭಾ ಅಧಿವೇಶನದಲ್ಲಿ ಶಾಸಕರೊಬ್ಬರು ಅತ್ಯಾಚಾರದ ಬಗ್ಗೆ ಲಘುವಾಗಿ ಮಾತನಾಡುತ್ತಾರೆ. ಆದರೂ ಅವರ ವಿರುದ್ಧ ಯಾವುದೇ ಕ್ರಮ ಜರುಗುವುದಿಲ್ಲ...! ಮಹಿಳೆಯರು ಬದಲಾಗಿದ್ದಾರೆ. ಆದರೆ, ಗಂಡಸರು ಇನ್ನೂ ಬದಲಾಗಿಲ್ಲ. ಹಾಗಾಗಿ ಅವರ ವಿರುದ್ಧ ಯಾವ ಕ್ರಮವೂ ಜರುಗುವುದಿಲ್ಲ...'

– ವಿಧಾನಸಭೆಯ ಅಧಿವೇಶನದಲ್ಲಿ ಇತ್ತೀಚೆಗೆ ನಡೆದ ವಿದ್ಯಮಾನಕ್ಕೆ ಕಾದಂಬರಿಕಾರ್ತಿ ಶಶಿ ದೇಶಪಾಂಡೆ ನೀಡಿದ ತೀಕ್ಷ್ಣ ಪ್ರತಿಕ್ರಿಯೆ ಇದು.

ಬೆಂಗಳೂರು ಸಾಹಿತ್ಯ ಉತ್ಸವದಲ್ಲಿ ಲೇಖಕಿ ಇಂದಿರಾ ಚಂದ್ರಶೇಖರ್ ಭಾನುವಾರ ನಡೆಸಿಕೊಟ್ಟ ಸಂವಾದದಲ್ಲಿ ಅವರು ತಮ್ಮ 'ಸಬ್‌ವರ್ಷನ್ಸ್: ಎಸ್ಸೇಸ್ ಆನ್ ಲೈಫ್ ಆ್ಯಂಡ್ ಲಿಟರೇಚರ್' ಕೃತಿಯ ಕುರಿತು ಮಾತನಾಡಿದರು.

'ಬರಹಗಾರರು ಎಲ್ಲ ಸಂದರ್ಭಗಳಲ್ಲೂ ಮೌನ ವಹಿಸುವುದು ಸಮ್ಮತವಲ್ಲ. ಈಗಂತೂ ಧ್ವನಿಯೆತ್ತಿದರೆ ಸಾಕು, ಯಾವುದಾದರೂ ಒಂದು ಗುಂಪಿಗೆ ಸೇರಿಸಿ ನಮಗೆ ಮುದ್ರೆ ಒತ್ತಿಬಿಡುತ್ತಾರೆ. ಎಂ.ಎಂ.ಕಲಬುರ್ಗಿ ಹತ್ಯೆ ನಡೆದಾಗ ನಾನು ಸಾಹಿತ್ಯ ಅಕಾಡೆಮಿಯ ಸಮಿತಿಗೆ ರಾಜೀನಾಮೆ ಕೊಟ್ಟಿದ್ದೆ. ದೇಶದಲ್ಲಿ ಸಂಕಷ್ಟದ ಸಂದರ್ಭ ಎದುರಾದಾಗ ವ್ಯಕ್ತಿಗತವಾಗಿ ನಿರ್ದಿಷ್ಟ ನಿಲುವು ತಳೆಯಬೇಕೇ ವಿನಃ ಬರಹಗಾರರಾಗಿ ಅಲ್ಲ.' ಎಂದು ಅವರು ಹೇಳಿದರು.

'ಬೆಂಗಳೂರಿನಲ್ಲಿ ಕನ್ನಡಿಗರನ್ನು ಕಡೆಗಣಿಸಲಾಗುತ್ತಿದೆ. ಈ ನಗರ ಹಲವರ ಪಾಲಿಗೆ ದುಬಾರಿಯೆನಿಸಿಬಿಟ್ಟಿದೆ' ಎಂದು ಕಳವಳ ವ್ಯಕ್ತಪಡಿಸಿದರು.

'ಎಷ್ಟೋ ಮಂದಿ ನನ್ನನ್ನು ಸ್ತ್ರೀವಾದಿಯಾಗಿ ಗುರುತಿಸುತ್ತಾರೆ. ನಾನು ಸ್ತ್ರೀವಾದಿ ಅಲ್ಲ.' ಎಂದರು.

ಸಂಕ್ಷಿಪ್ತ ಸುದ್ದಿ

‘ಪಶು ಸಂಜೀವಿನಿ: ಆಂಬುಲೆನ್ಸ್ ಶೀಘ್ರ’

ಹುಬ್ಬಳ್ಳಿ: ‘ಮನೆ ಬಾಗಿಲಿಗೆ ತೆರಳಿ ಪಶುಗಳಿಗೆ ಚಿಕಿತ್ಸೆ ನೀಡುವ ಪಶು ಸಂಜೀವಿನಿ ‘1962 ಆಂಬುಲೆನ್ಸ್’ ಸೇವೆಯು ಎರಡು-ಮೂರು ತಿಂಗಳಲ್ಲಿ ಜಾರಿಗೆ ಬರಲಿದೆ’ ಎಂದು ಪಶುಸಂಗೋಪನಾ ಇಲಾಖೆ ಸಚಿವ ಪ್ರಭು ಚವ್ಹಾಣ್ ತಿಳಿಸಿದರು.

ಭಾನುವಾರ ಸಿದ್ಧಾರೂಢ ಮಠದಲ್ಲಿ ಗೋ ಪೂಜೆ ನೆರವೇರಿಸಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ‘ಪ್ರತಿ ತಾಲ್ಲೂಕಿಗೆ ಒಂದೊಂದು ಪಶು ಸಂಜೀವಿನಿ ಆಂಬುಲೆನ್ಸ್ ನೀಡಲಾಗುವುದು. ಕರೆ ಮಾಡಿದ ತಕ್ಷಣ ಪಶು ವೈದ್ಯರು ಆಂಬುಲೆನ್ಸ್‌ನಲ್ಲಿ ಸ್ಕ್ಯಾನಿಂಗ್ ಯಂತ್ರದ ಜೊತೆ ಮನೆಗೆ ತೆರಳಿ ಪಶುಗಳಿಗೆ ಚಿಕಿತ್ಸೆ ನೀಡಲಿದ್ದಾರೆ. ಟೆಂಡರ್ ಪ್ರಕ್ರಿಯೆ ನಡೆಯುತ್ತಿದೆ’ ಎಂದರು.

‘ಪ್ರತಿ ಜಿಲ್ಲೆಗೆ ಒಂದೊಂದು ಸರ್ಕಾರಿ ಗೋಶಾಲೆ ಸ್ಥಾಪಿಸಲು ನಿರ್ಧರಿಸಿದ್ದು, ಈಗಾಗಲೇ ಜಾಗ ಸಹ ಗುರುತಿಸಲಾಗಿದೆ. ಗೋಶಾಲೆ ಸ್ಥಾಪನೆಯಾದ ನಂತರ ಬಿಡಾಡಿ ದನಗಳನ್ನೆಲ್ಲ ಅಲ್ಲಿಗೆ ಸ್ಥಳಾಂತರಿಸಲಾಗುವುದು’ ಎಂದು ತಿಳಿಸಿದರು.

‘ಗೋ ಹತ್ಯೆ ನಿಷೇಧ ಕಾಯ್ದೆ ಜಾರಿಗೆ ಬಂದ ಮೂರು ತಿಂಗಳಲ್ಲಿ ಅಕ್ರಮ ಗೋ ಸಾಗಾಟ ಕುರಿತು 40 ಸಾವಿರದಷ್ಟು ಕರೆಗಳು ಬಂದಿವೆ. ಕರೆಗಳ ಆಧರಿಸಿ ಸಾಕಷ್ಟು ಜಾನುವಾರುಗಳನ್ನು ರಕ್ಷಿಸಲಾಗಿದೆ. ವಿವಿಧೆಡೆ 500ಕ್ಕೂ ಹೆಚ್ಚು ಪ್ರಕರಣಗಳು ದಾಖಲಾಗಿವೆ. ಕಾಯ್ದೆ ವಿರುದ್ಧ ಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದಾರೆ. ನಮ್ಮ ಪರ ತೀರ್ಪು ಬರುವ ವಿಶ್ವಾಸವಿದೆ’ ಎಂದರು.

ಆನೆ ದಾಳಿ: ಅರಣ್ಯ ಸಿಬ್ಬಂದಿಗೆ ಗಾಯ

ಧಾರವಾಡ: ಕಲಘಟಗಿ ತಾಲ್ಲೂಕಿನ ತಂಬೂರು ಬಳಿ ಭಾನುವಾರ ಅರಣ್ಯ ಇಲಾಖೆಯ ಸಿಬ್ಬಂದಿ ಕಾರ್ಯಾಚರಣೆ ನಡೆಸುತ್ತಿದ್ದ ಸಂದರ್ಭದಲ್ಲಿ ಆನೆಗಳು ದಾಳಿ ನಡೆಸಿದ್ದು, ಐವರು ಸಿಬ್ಬಂದಿ ಗಾಯಗೊಂಡಿದ್ದಾರೆ.

ಎಂಟು ಆನೆಗಳ ಹಿಂಡು ತಾಲ್ಲೂಕಿನ ಆಲದಟ್ಟಿ, ತಂಬೂರ, ಸಂಗಮೇಶ್ವರ ಡಿಂಬವಳ್ಳಿ ಗ್ರಾಮದ ಬಳಿ ಬೀಡು ಬಿಟ್ಟ ಮಾಹಿತಿ ಪಡೆದು ಕಾರ್ಯಾಚರಣೆ ನಡೆಸಲಾಗುತ್ತಿತ್ತು. ಆಗ ಬಮ್ಮಗಟ್ಟಿ ವಲಯದ ಸಿಬ್ಬಂದಿ ಮೇಲೆ ಆನೆ ದಾಳಿ ನಡೆದಿದೆ. ‘ಸಿಬ್ಬಂದಿ ಪ್ರಾಣಾಪಾಯದಿಂದ ಪಾರಾಗಿದ್ದಾರೆ’.‘ಆನೆಗಳು ತಂಬೂರು ಅರಣ್ಯ ಪ್ರದೇಶದಲ್ಲಿ ಬೀಡುಬಿಟ್ಟಿವೆ’ ಎಂದು ವಲಯ ಅರಣ್ಯಾಧಿಕಾರಿ ಶ್ರೀಕಾಂತ ಪಾಟೀಲ ಅವರು ತಿಳಿಸಿದ್ದಾರೆ.

ರಿಯಲ್ ಎಸ್ಟೇಟ್‌ಗೆ ಕಡಿವಾಣ: ತುಂಡು ಭೂಮಿಗಳಿಗೆ ಪಹಣಿ ಮತ್ತು ‘11ಇ’ ಅಡಿ ನಕ್ಷೆ ಇಲ್ಲ

‘ತುಂಡು’ ಭೂಮಿ ಬಳಕೆಗೆ ನಿರ್ಬಂಧ

ಪ್ರಜಾವಾಣಿ ವಾರ್ತೆ

ಬೆಳಗಾವಿ: ರಿಯಲ್ ಎಸ್ಟೇಟ್ ಉದ್ದೇಶಕ್ಕಾಗಿ ಕೃಷಿ ಭೂಮಿಯನ್ನು ಅತಿ ಚಿಕ್ಕದಾಗಿ ತುಂಡರಿಸಿ ಬಳಸುವುದನ್ನು ತಡೆಯಲು ರಾಜ್ಯ ಸರ್ಕಾರ ಕಟ್ಟುನಿಟ್ಟಿನ ನಿಯಮ ಜಾರಿಗೆ ತಂದಿದ್ದು, ಇಂತಹ ಭೂಮಿಗೆ ಪಹಣಿ ಮತ್ತು 11 ಇ ಅಡಿ ನಕ್ಷೆ ಮಾಡಿಕೊಡುವುದನ್ನು ನಿಷೇಧಿಸಿದೆ.

ಹೀಗಾಗಿ ಕೆಲವೇ ಗುಂಟೆ ಕೃಷಿ ಭೂಮಿಯಲ್ಲಿ ನಿವೇಶನಗಳನ್ನು ರೂಪಿಸುವುದು ಮತ್ತು ಕಟ್ಟಡಗಳನ್ನು ನಿರ್ಮಿಸಲು ಇನ್ನು ಮುಂದೆ ಸಾಧ್ಯವಿಲ್ಲ.

ಈ ಸಂಬಂಧ ಭೂಮಾಪನ, ಕಂದಾಯ ವ್ಯವಸ್ಥೆ ಮತ್ತು ಭೂಮಾರಾಟ ಇಲಾಖೆ ಆದೇಶವೊಂದನ್ನು ಹೊರಡಿಸಿದೆ. ಅದರ ಪ್ರಕಾರ ಇನ್ನು ಮುಂದೆ ಕೊಡಗು, ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ ಜಿಲ್ಲೆಗಳಲ್ಲಿ 3 ಗುಂಟೆ ಮತ್ತು ಇನ್ನುಳಿದ ಜಿಲ್ಲೆಗಳಲ್ಲಿ 5 ಗುಂಟೆಗಿಂತ ಕಡಿಮೆ ವಿಸ್ತೀರ್ಣ ಹೊಂದಿರುವ ಸರ್ವೆ ನಂಬರ್‌ಗಳನ್ನು (ಹಿಸ್ಸಾ ನಂಬರ್ ಒಳಗೊಂಡಂತೆ) ಹೊಸದಾಗಿ ಸೃಜಿಸುವಂತಿಲ್ಲ.

‘ರಾಜ್ಯದಲ್ಲಿ ಕೃಷಿ ಭೂಮಿಯನ್ನು ತುಂಡು ತುಂಡು ಮಾಡಿ ಮಾರಾಟ ಮಾಡುತ್ತಿದ್ದು, ಈ ರೀತಿ ಮಾರಾಟ ಮಾಡುತ್ತಿರುವ ಭೂಮಿಗಳನ್ನು- ಕೃಷಿ ಉದ್ದೇಶಗಳಿಗೆ ಬಳಸುತ್ತಿಲ್ಲ. ನಿವೇಶನ, ಕಟ್ಟಡ ನಿರ್ಮಾಣಕ್ಕಾಗಿ ಬಳಸಲಾಗುತ್ತಿದೆ. ನಗರ ಪ್ರದೇಶಗಳಲ್ಲಿ ಈ ಪ್ರವೃತ್ತಿ ಹೆಚ್ಚಾಗಿ ನಡೆಯುತ್ತಿದೆ. ಇದರಿಂದಾಗಿ ನಗರೀಕರಣ ಸುವ್ಯವಸ್ಥಿತವಾಗಿ ನಡೆಯುತ್ತಿಲ್ಲ ಹಾಗೂ ಅವಶ್ಯಕ ಮೂಲಸೌಕರ್ಯಗಳಾದ ರಸ್ತೆ, ಒಳಚರಂಡಿ, ನೀರು, ಇತ್ಯಾದಿಗಳನ್ನು ಪೂರೈಸಲು ಕಷ್ಟವಾಗುತ್ತಿದೆ’ ಎಂದು ಕಂದಾಯ ಇಲಾಖೆ ಮೂಲಗಳು ತಿಳಿಸಿವೆ.

ಕರ್ನಾಟಕ ನಗರಾಭಿವೃದ್ಧಿ ಕಾಯ್ದೆಯಡಿ ನಿಯಮ ಬದ್ಧವಾಗಿ ಅನುಮೋದನೆ ಪಡೆಯದೇ ಕೃಷಿ ಭೂಮಿಗಳನ್ನು ನಿವೇಶನ ಮತ್ತು ಕಟ್ಟಡಗಳಿಗಾಗಿ ಪರಿವರ್ತಿಸುತ್ತಿರುವ ಬಗ್ಗೆ ರಾಜ್ಯದಾದ್ಯಂತ ದೂರುಗಳು ಬಂದಿದ್ದವು.

ಇದೊಂದು ದೊಡ್ಡ ಸಮಸ್ಯೆಯಾಗಿದ್ದು, ಇದಕ್ಕೆ ಕಡಿವಾಣ ಹಾಕಲು ಭೂಮಿಯನ್ನು ತುಂಡು- ತುಂಡು ಮಾಡುವುದನ್ನು ನಿರ್ಬಂಧಿಸಿ, ಪಹಣಿ ಮಾಡದೇ ಇರಲು ಪ್ರಸ್ತಾವನೆಯನ್ನು ಸಲ್ಲಿಸಲಾಗಿತ್ತು.

ಕೃಷಿ ಭೂಮಿ ತುಂಡು ಮಾಡಿ ಉದ್ದೇಶಪೂರ್ವಕವಾಗಿ ಮಾರಾಟ ಮಾಡುವುದು ‘ಕರ್ನಾಟಕ ಭೂಕಂದಾಯ ಅಧಿನಿಯಮ 1964’ರ ಕಲಂ 95ರ ಸ್ಪಷ್ಟ ಉಲ್ಲಂಘನೆ. ತುಂಡು ಭೂಮಿಗಳಲ್ಲಿ ಕೃಷಿ ನಡೆಸಲು ಆಗುವುದಿಲ್ಲ.

ರಿಯಲ್ ಎಸ್ಟೇಟ್ ಉದ್ದೇಶಕ್ಕೆ ಬಳಕೆ ಆಗುತ್ತಿದೆ ಎಂದು ಕಂದಾಯ ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು.

ಹೊಸ ಆದೇಶದಲ್ಲಿ ಏನಿದೆ?

- ಕೊಡಗು, ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ ಜಿಲ್ಲೆಗಳಲ್ಲಿ 3 ಗುಂಟೆ ಮತ್ತು ಇತರ ಜಿಲ್ಲೆಗಳಲ್ಲಿ 5 ಗುಂಟೆಗಿಂತ ಕಡಿಮೆ ವಿಸ್ತೀರ್ಣಕ್ಕೆ 11ಇ ನಕ್ಷೆ ತಯಾರಿಸುವಂತಿಲ್ಲ ಮತ್ತು ವಿತರಿಸುವಂತಿಲ್ಲ.
- ಈಗಾಗಲೇ ಅಸ್ತಿತ್ವದಲ್ಲಿರುವ ಸರ್ವೆ ನಂಬರ್ ಅಥವಾ ಪಹಣಿಗಳು ಕನಿಷ್ಠ ವಿಸ್ತೀರ್ಣಕ್ಕಿಂತ ಕಡಿಮೆ ಇದ್ದರೂ ಅಂತಹ ಸರ್ವೆ ನಂಬರ್ ಅಥವಾ ಪಹಣಿಗಳು ಹಾಗೆಯೇ ಮುಂದುವರೆಯುತ್ತವೆ. ಅವುಗಳನ್ನು ಸಂಪೂರ್ಣವಾಗಿ ಮಾನ್ಯ ಮಾಡಲಾಗುತ್ತದೆ.
- ಪಿತ್ರಾರ್ಜಿತ ಅಥವಾ ಆನುವಂಶಿಕವಾಗಿ ಬಂದ ಹಕ್ಕುಗಳ ಮೇಲೆ ಉಲ್ಲೇಖಿಸಿದ ವಿಸ್ತೀರ್ಣಕ್ಕಿಂತ ಕಡಿಮೆ ಇದ್ದರೂ ಅವುಗಳ ಹೊಸ ಪಹಣಿ ರಚಿಸಬಹುದು ಮತ್ತು ಪೋಡಿ ಮಾಡಬಹುದು.
- ಈಗಾಗಲೇ ಪಹಣಿಗಳಲ್ಲಿ ದಾಖಲಾದ ಮತ್ತು ಅಸ್ತಿತ್ವದಲ್ಲಿರುವ ಮಾಲೀಕರ ಹಕ್ಕುಗಳ ಪ್ರಕಾರ ಪೋಡಿಯನ್ನು ಮೇಲೆ ಉಲ್ಲೇಖಿಸಿದಕ್ಕಿಂತ ಕನಿಷ್ಠ ವಿಸ್ತೀರ್ಣ ಪ್ರಮಾಣದಲ್ಲಿದ್ದರೆ ಅದರಂತೆ ಹೊಸ ಪಹಣಿ ರಚಿಸಬಹುದು.

ರಾಜಕಾರಣಿಗಳ ಕೈವಾಡ ಇಲ್ಲ: ಗುತ್ತಿಗೆದಾರರ ಸಂಘ ಸ್ಪಷ್ಟನೆ

ಪ್ರಜಾವಾಣಿ ವಾರ್ತೆ

ಬೆಳಗಾವಿ:‘ ಶೇ 40 ಕಮಿಷನ್ ವಿಚಾರದಲ್ಲಿ ಗುತ್ತಿಗೆದಾರರ ಸಂಘದ ಅಭಿಪ್ರಾಯಗಳ ಹಿಂದೆ ವಿರೋಧ ಪಕ್ಷಗಳ ಅಥವಾ ರಾಜಕಾರಣಿಗಳ ಕೈವಾಡ ಇಲ್ಲ. ನಾವು ಯಾವುದೇ ಪಕ್ಷ, ಸರ್ಕಾರ ಅಥವಾ ಸಚಿವರನ್ನು ಗುರಿಯಾಗಿಸಿಕೊಂಡು ಆರೋಪ ಮಾಡುತ್ತಿಲ್ಲ’ ಎಂದು ಕರ್ನಾಟಕ ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಡಿ.ಕೆಂಪಣ್ಣ ಹೇಳಿದ್ದಾರೆ.

‘ಸರ್ಕಾರ ನಮ್ಮ ಸಂಘದ ವಿರುದ್ಧ ಮಾಡುತ್ತಿರುವ ಆರೋಪಗಳಲ್ಲಿ ಯಾವುದೇ ಹುರುಳಿಲ್ಲ’ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಭ್ರಷ್ಟಾಚಾರಕ್ಕೆ ಕೊನೆ ಹಾಡುವಂತೆ ಹಲವು ದಶಕಗಳಿಂದ ಪ್ರತಿಯೊಂದು ಸರ್ಕಾರ, ಮುಖ್ಯಮಂತ್ರಿಗಳು, ಸಚಿವರು ಮತ್ತು ಹಿರಿಯ ಅಧಿಕಾರಿಗಳಿಗೆ ಮನವಿ ಮಾಡುತ್ತಲೇ ಬಂದಿದ್ದೇವೆ. ಆದರೆ, ಭರವಸೆ ಹೊರತುಪಡಿಸಿ ಅಕ್ರಮ ವ್ಯವಹಾರಗಳಿಗೆ ಕಡಿವಾಣ ಹಾಕುವ ಪ್ರಯತ್ನ ನಡೆಯಲೇ ಇಲ್ಲ. ಸರ್ಕಾರಗಳು ಮತ್ತು ಸಚಿವರು ಬದಲಾದಂತೆ ವರ್ಷದಿಂದ ವರ್ಷಕ್ಕೆ ಭ್ರಷ್ಟಾಚಾರ ಹೆಚ್ಚುತ್ತಲೇ ಬಂದಿದೆ ಎಂದು ಅವರು ಹೇಳಿದ್ದಾರೆ.

ಇಂತಹ ಸಂದರ್ಭದಲ್ಲಿ ದೇಶದ ಪ್ರಧಾನಮಂತ್ರಿಗಳಿಗೆ ದೂರು ನೀಡದೇ ಇನ್ನೇನು ಮಾಡಬೇಕು ಎಂದು ಪ್ರಶ್ನಿಸಿರುವ ಅವರು, ಸಾಕಷ್ಟು ಅಕ್ರಮಗಳು ಹೊರ ಬಂದ ನಂತರವೂ ಭ್ರಷ್ಟಾಚಾರಕ್ಕೆ ಕಡಿವಾಣ ಹಾಕುವ ಬದಲಾಗಿ ಕೆಸರೆರಚಾಟವೇ ಮುಂದುವರೆದಿದೆ ಎಂದಿದ್ದಾರೆ.

‘ನಮ್ಮ ಸಂಘ ಈಗಿನ ಸರ್ಕಾರದಲ್ಲಿ ಮಾತ್ರ ಭ್ರಷ್ಟಾಚಾರ ಇದೆ ಎಂದು ಎಲ್ಲಿಯೂ ಹೇಳಿಲ್ಲ. ಮೂಲಸೌಕರ್ಯಗಳ ನಿರ್ಮಾಣವೇ ನಮ್ಮ ಆದ್ಯತೆಯಾಗಿದೆ’ ಎಂದೂ ಕೆಂಪಣ್ಣ ಹೇಳಿದ್ದಾರೆ.

‘ಎಲ್ಲ ಸಮುದಾಯಕ್ಕೂ ನ್ಯಾಯ ಒದಗಿಸುತ್ತೇವೆ’

2ಎ ಮೀಸಲಾತಿ ಕಲ್ಪಿಸಲು ಸ್ವಾಮೀಜಿಗಳ ಹಕ್ಕೊತ್ತಾಯ: ಮುಖ್ಯಮಂತ್ರಿ ಬೊಮ್ಮಾಯಿ ಭರವಸೆ

ಪ್ರಜಾವಾಣಿ ವಾರ್ತೆ

ಹಾವೇರಿ: ‘ಪಂಚಮಸಾಲಿ ಸಮಾಜಕ್ಕೆ 2ಎ ಮೀಸಲಾತಿ ಕಲ್ಪಿಸಿದರೆ ಸೂರ್ಯ ಚಂದ್ರ ಇರುವವರೆಗೆ ಬಸವರಾಜ ಬೊಮ್ಮಾಯಿ ಅವರ ಹೆಸರು ಅಜರಾಮರವಾಗಿರುತ್ತದೆ. ಸಮಾಜ ಸದಾ ಋಣಿಯಾಗಿರುತ್ತದೆ’ ಎಂದು ಕೂಡಲಸಂಗಮ ಪೀಠದ ಬಸವಜಯ ಮೃತ್ಯುಂಜಯ ಸ್ವಾಮೀಜಿ ಹೇಳಿದರು.

ಶಿಗ್ಗಾವಿ ಪಟ್ಟಣದಲ್ಲಿ ಭಾನುವಾರ ವೀರರಾಣಿ ಕಿತ್ತೂರು ಚನ್ನಮ್ಮ ಪುತ್ಥಳಿ ಲೋಕಾರ್ಪಣೆ ಹಾಗೂ ಪಂಚಮಸಾಲಿ ಸಮುದಾಯ ಭವನದ ಅಡಿಗಲ್ಲು ಸಮಾರಂಭದಲ್ಲಿ ಅವರು ಸಾನ್ನಿಧ್ಯ ವಹಿಸಿ ಮಾತನಾಡಿದರು.

‘ಕೂಡಲಸಂಗಮದಿಂದ ಬೆಂಗಳೂರಿಗೆ ಪಾದಯಾತ್ರೆ ಹೊರಟಾಗ ಅಂದು ಗೃಹ ಸಚಿವರಾಗಿದ್ದ ಬಸವರಾಜ ಬೊಮ್ಮಾಯಿ ಅವರು ನಮಗೆ ಎಲ್ಲಿಯೂ ತೊಂದರೆಯಾಗದಂತೆ ನಮ್ಮ ಹೋರಾಟಕ್ಕೆ ಸಕಾರಾತ್ಮಕವಾಗಿ ಸ್ಪಂದಿಸಿದರು. ಹೀಗಾಗಿ ಬೊಮ್ಮಾಯಿ ಅವರು 2ಎ ಮೀಸಲಾತಿ ಕಲ್ಪಿಸುತ್ತಾರೆ ಎಂಬ ಬಗ್ಗೆ ಪೂರ್ಣ ವಿಶ್ವಾಸವಿದೆ’ ಎಂದರು.

‘ಮಹಿಳಾ ಸೇನಾ ಪಡೆಗೆ ‘ಕಿತ್ತೂರು ಚನ್ನಮ್ಮ’ ಹೆಸರಿಡಲು ಕೇಂದ್ರ ಸರ್ಕಾರಕ್ಕೆ ರಾಜ್ಯ ಸರ್ಕಾರ ಶಿಫಾರಸು ಮಾಡಬೇಕು’ ಎಂದು ಬೊಮ್ಮಾಯಿ ಅವರಿಗೆ ಕೋರಿದರು.

ಹರಿಹರ ಪಂಚಮಸಾಲಿ ಪೀಠದ ವಚನಾನಂದ ಸ್ವಾಮೀಜಿ ಅವರು, ‘ಮೀಸಲಾತಿಯಿಂದ ಯಾವ ಮುಖ್ಯಮಂತ್ರಿಗೂ ಬಿಡುಗಡೆ ಎಂಬುದಿಲ್ಲ. ಮೀಸಲಾತಿ ವಿಚಾರದಲ್ಲಿ ಸರ್ಕಾರ ತರಾತುರಿ ಮಾಡಬಾರದು. ವೈಜ್ಞಾನಿಕವಾಗಿ ಮೀಸಲಾತಿ ಕೊಡದಿದ್ದರೆ, ಸುಪ್ರೀಂ ಕೋರ್ಟ್‌ನಲ್ಲಿ ಅದು ನಿಲ್ಲುವುದಿಲ್ಲ. ಅದಕ್ಕೆ ಉತ್ತಮ ಉದಾಹರಣೆಯೆಂದರೆ, ಮಹಾರಾಷ್ಟ್ರ ಸರ್ಕಾರ ಮರಾಠ ಸಮುದಾಯಕ್ಕೆ ಶೇ 16 ಮೀಸಲಾತಿ ಕೊಟ್ಟರೂ, ಸುಪ್ರೀಂಕೋರ್ಟ್‌ನಲ್ಲಿ ಮಾನ್ಯತೆ ಸಿಗಲಿಲ್ಲ’ ಎಂದರು.

ಸ್ವಾಮೀಜಿಗಳ ಹಕ್ಕೊತ್ತಾಯಕ್ಕೆ ಪ್ರತಿಕ್ರಿಯಿಸಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ‘ಹಿಂದುಳಿದ ವರ್ಗಗಳ ಆಯೋಗಕ್ಕೆ ಎಲ್ಲರೂ ಸಂಪೂರ್ಣ ಸಹಕಾರಿ ನೀಡಿದರೆ, ಒಳ್ಳೆಯ ನಿರ್ಣಯ ತೆಗೆದುಕೊಳ್ಳಲು ಸಾಧ್ಯವಾಗುತ್ತದೆ. ಧ್ವನಿ ಇಲ್ಲದವರಿಗೆ, ತುಳಿತಕ್ಕೆ ಒಳಗಾದವರಿಗೆ ಧ್ವನಿ ನೀಡಲು ನಾವು ಬದ್ಧವಾಗಿದ್ದೇವೆ. ಎಲ್ಲ ಸಮುದಾಯಗಳಿಗೂ ಪ್ರಾಶಸ್ತ್ಯ ನೀಡಿ, ಅಭಿವೃದ್ಧಿಗೆ ನೆರವು ನೀಡುತ್ತೇವೆ. ಎಲ್ಲರಿಗೂ ನ್ಯಾಯ ಕೊಡಿಸುವ ಕೆಲಸಕ್ಕೆ ಬದ್ಧವಾಗಿದ್ದೇವೆ. 2ಎ ಮೀಸಲಾತಿ ಬಗ್ಗೆ ಕೂಡಲಸಂಗಮದ ಶ್ರೀಗಳ ಜೊತೆ ಈಗಾಗಲೇ ಮಾತನಾಡಿದ್ದೇನೆ’ ಎಂದು ಹೇಳಿದರು.

ಪಂಚಮಸಾಲಿ ಸಮುದಾಯ ಭವನದ ಅಡಿಗಲ್ಲು ಸಮಾರಂಭದಲ್ಲಿ ಸಚಿವ ಶಂಕರಪಾಟೀಲ ಮುನೇನಕೊಪ್ಪ, ಕೂಡಲಸಂಗಮ ಪೀಠದ ಬಸವಜಯ ಮೃತ್ಯುಂಜಯ ಸ್ವಾಮೀಜಿ, ಹರಿಹರ ಪೀಠದ ವಚನಾನಂದ ಸ್ವಾಮೀಜಿ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಶಾಸಕ ಬಸನಗೌಡ ಪಾಟೀಲ ಯತ್ನಾಳ ಭಾಗವಹಿಸಿದ್ದರು. ಪ್ರಜಾವಾಣಿ ಚಿತ್ರ

ಮುಖ್ಯಾಂಶಗಳು

- ಬೊಮ್ಮಾಯಿ ಅವರು 2ಎ ಮೀಸಲಾತಿ ಕಲ್ಪಿಸುತ್ತಾರೆ ಎಂಬ ವಿಶ್ವಾಸ
- ಎಲ್ಲರ ಸಹಕಾರದಿಂದ ಉತ್ತಮ ನಿರ್ಣಯ ತೆಗೆದುಕೊಳ್ಳಲು ಸಾಧ್ಯ
- ತುಳಿತಕ್ಕೆ ಒಳಗಾದವರಿಗೆ ಧ್ವನಿ ನೀಡಲು ಸರ್ಕಾರ ಬದ್ಧ-ಸಿಎಂ

ಸ್ವಾಮೀಜಿಗಳ ಮುನಿಸು: ಭಕ್ತರ ಗುಸುಗುಸು

ಪಂಚಮಸಾಲಿ ಸಮುದಾಯದ ಕೂಡಲಸಂಗಮ ಪೀಠದ ಬಸವಜಯ ಮೃತ್ಯುಂಜಯ ಸ್ವಾಮೀಜಿ ಮತ್ತು ಹರಿಹರ ಪೀಠದ ವಚನಾನಂದ ಸ್ವಾಮೀಜಿ ಸಮಾರಂಭದಲ್ಲಿ 3 ಗಂಟೆಗೂ ಹೆಚ್ಚು ಕಾಲ ಅಕ್ಕಪಕ್ಕವೇ ಕುಳಿತಿದ್ದರೂ, ಪರಸ್ಪರ ಮುಖ ನೋಡದೆ, ಒಮ್ಮೆಯೂ ಮಾತನಾಡದೇ ಇದ್ದುದ್ದನ್ನು ಗಮನಿಸಿದ ಭಕ್ತರು ಗುಸುಗುಸು ಮಾತನಾಡಿಕೊಂಡರು.

ವಚನಾನಂದ ಸ್ವಾಮೀಜಿ ತಮ್ಮ ಭಾಷಣದಲ್ಲಿ, ‘ನಾಯಕರಾದವರು, ಗುರುಗಳಾದವರು ಸಮುದಾಯದ ನಡುವೆ ಬೆಂಕಿ ಹಚ್ಚುವ ಕೆಲಸ ಮಾಡಬಾರದು. ಪ್ರೇಮ, ಸಹಬಾಳ್ವೆ ಬಿತ್ತಬೇಕು ಎಂದು ಹೇಳಿದ ಮಾರ್ಮಿಕ ನುಡಿಗಳು ಎರಡೂ ಪೀಠಗಳ ನಡುವೆ ಇರುವ ವೈಮನಸ್ಸಿಗೆ ಸಾಕ್ಷಿ ಎಂದು ಭಕ್ತರೊಬ್ಬರು ವಿಶ್ಲೇಷಿಸಿದರು.

ಕೊನೆಯಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ‘ಇಬ್ಬರೂ ಸ್ವಾಮೀಜಿಗಳು ಜ.14ರಂದು ಮಠದಲ್ಲಿ ನಡೆಯುವ ಕಾರ್ಯಕ್ರಮಕ್ಕೆ ಬರುವಂತೆ ಆಹ್ವಾನ ನೀಡಿದ್ದೀರಿ. ಸಮಯ ಹೊಂದಾಣಿಕೆ ಮಾಡಿಕೊಂಡು ಎರಡೂ ಕಡೆ ಬರುತ್ತೇನೆ’ ಎಂದು ಭರವಸೆ ನೀಡಿದರು.

ಚಿಕ್ಕಮಗಳೂರು ತಾಲ್ಲೂಕಿನ ಬಾಬಾಬುಡನ್ ಗಿರಿಯಲ್ಲಿ ದತ್ತ ಪಾದುಕೆ ದರ್ಶನಕ್ಕಾಗಿ ಭಕ್ತರು ಭಾನುವಾರ ಸಾಲುಗಟ್ಟಿ ನಿಂತಿದ್ದರು. –ಪ್ರಜಾವಾಣಿ ಚಿತ್ರ

ದತ್ತ ಜಯಂತಿಗೆ ಭಕ್ತರ ಕಲರವ

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ದತ್ತ ಜಯಂತಿಗೆ ಭಾನುವಾರ ವಿವಿಧೆಡೆಗಳಿಂದ ಭಕ್ತರ ದಂಡು ಹರಿದುಬಂದಿತ್ತು. ಶ್ರೀಗುರುದತ್ತಾತ್ರೇಯ ಬಾಬಾಬುಡನ್ ಸ್ವಾಮಿ ದರ್ಗಾದಲ್ಲಿ ದತ್ತ ಪಾದುಕೆ ದರ್ಶನ ಮಾಡಿದರು.

ಮಂಗಳೂರು, ಉಡುಪಿ, ಹಾಸನ, ಶಿವಮೊಗ್ಗ, ಮೈಸೂರು ಸಹಿತ ವಿವಿಧ ಜಿಲ್ಲೆಗಳಿಂದ ಭಕ್ತರು ಬಂದಿದ್ದರು. ಗಿರಿಯಲ್ಲಿ ಭಕ್ತರ ಕಲರವ ಮೇಳೈಸಿತ್ತು.

ನಸುಕಿನಿಂದಲೇ ಕೆಲವು ಮಾಲಾಧಾರಿಗಳು ಇರುಮುಡಿ ಹೊತ್ತು ಕಾಲ್ನಡಿಗೆಯಲ್ಲಿ ದತ್ತಪೀಠಕ್ಕೆ ಸಾಗಿದರು. ಮತ್ತೆ ಕೆಲವರು ವಾಹನಗಳಲ್ಲಿ ಸಾಗಿದರು. ಪಾದುಕೆ ದರ್ಶನ ಮಾಡಿ, ಭಕ್ತಿ ಸಮರ್ಪಿಸಿದರು. ಮೂರು ದಿನಗಳಿಂದ ನಡೆದ ದತ್ತ ಜಯಂತ್ಯುತ್ಸವ ಭಾನುವಾರ ಸಂಪನ್ನವಾಯಿತು. ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ, ಎಂ.ಕೆ. ಪ್ರಾಣೇಶ್ ಇದ್ದರು.

ಮಹಿಳೆ ವಿಚಾರಿಸಿದ ಶಾಸಕ

ಹೊಸದುರ್ಗ: ಅಸಹಾಯಕ ಹಿಂದೂಗಳ ಮನಃಪರಿವರ್ತಿಸುವುದನ್ನು ಕ್ರೈಸ್ತ ಮಿಷನರಿಗಳು ನಿಲ್ಲಿಸದಿರುವುದು ಅಪಾಯದ ಸಂಕೇತ ಎಂದು ಶಾಸಕ ಗೂಳಿಹಟ್ಟಿ ಡಿ. ಶೇಖರ್ ಆರೋಪಿಸಿದರು.

‘ತಾಲ್ಲೂಕಿನ ಜಾನಕಲ್‌ಗೆ ಹೋಗುವಾಗ ಶಾಂತಿನಗರದ ಚರ್ಚ್‌ನಿಂದ ಹಲವರು ಹೊರಬರುತ್ತಿದ್ದರು. ಮಹಿಳೆಯೊಬ್ಬರು ಹಣೆಗೆ ಕುಂಕುಮ ಇಟ್ಟುಕೊಂಡಿದ್ದರು. ವಿಚಾರಿಸಿದಾಗ, ಚರ್ಚಿನಲ್ಲಿ ಪ್ರಾರ್ಥಿಸಿದರೆ ಒಳಿತಾಗುತ್ತದೆ ಎಂಬ ಭ್ರಮೆ ಹುಟ್ಟಿಸಲಾಗಿದೆ ಎಂಬುದು ತಿಳಿಯಿತು’ ಎಂದು ಮಾಧ್ಯಮ ಪ್ರತಿನಿಧಿಗಳಿಗೆ ತಿಳಿಸಿದರು. ಚರ್ಚ್‌ನಿಂದ ಹೊರಬರುತ್ತಿದ್ದವರ ಹೆಸರು, ಊರು, ಜಾತಿ ಸೇರಿ ಇತರ ಮಾಹಿತಿ ಕಲೆಹಾಕುತ್ತಿದ್ದ ಶಾಸಕರ ವಿಡಿಯೊ ವೈರಲ್ ಆಗಿದೆ.

ಸ್ವಾತಂತ್ರ್ಯದ ಅಮೃತ ಮಹೋತ್ಸವ

ಕೈಮಗ್ಗ ಮತ್ತು ಜವಳಿ ಇಲಾಖೆ

ಶ್ರೀ ನರೇಂದ್ರ ಮೋದಿ
ಸನ್ಮಾನ್ಯ ಪ್ರಧಾನಮಂತ್ರಿಗಳು



ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು

ವಿದ್ಯುತ್ ಮಗ್ಗ ನೇಕಾರರ ಹಾಗೂ ಮಗ್ಗ ಪೂರ್ವ ಚಟುವಟಿಕೆಗಳಲ್ಲಿ ತೊಡಗಿರುವ ಕೆಲಸಗಾರರ

ಗಣತಿ ಹಾಗೂ ಘಟಕಗಳ ಸಮೀಕ್ಷೆ

ಗಣತಿ/ಸಮೀಕ್ಷೆಯ ಉದ್ದೇಶ

ವಿದ್ಯುತ್ ಮಗ್ಗ ವಲಯದಲ್ಲಿ ಜಾರಿಯಲ್ಲಿರುವ ವಿವಿಧ ಯೋಜನೆಗಳಿಂದ ಆಗಿರುವ ಸಾಮಾಜಿಕ ಹಾಗೂ ಆರ್ಥಿಕ ಪರಿಣಾಮಗಳ ಕುರಿತು ಮಾಹಿತಿ ಸಂಗ್ರಹಣೆ.

ಇಲಾಖೆಯಿಂದ ಅನುಷ್ಠಾನಗೊಳಿಸಲಾಗುತ್ತಿರುವ ಯೋಜನೆಗಳಲ್ಲಿ ಮಾಡಬಹುದಾದ ಮಾರ್ಪಾಡು/ಸೇರ್ಪಡೆ/ ಕೈಬಿಡಬಹುದಾದ ಯೋಜನೆಗಳ ಬಗ್ಗೆ ಸಮೀಕ್ಷೆ.

ವಿದ್ಯುತ್ ಮಗ್ಗ ವಲಯದ ತಾಂತ್ರಿಕ ವಿವರ, ಕಚ್ಚಾಮಾಲು, ಉತ್ಪಾದನೆ ಇತ್ಯಾದಿಗಳ ಕುರಿತು ಮಾಹಿತಿ ಸಂಗ್ರಹಣೆ.

ವಿದ್ಯುತ್ ಮಗ್ಗ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ನೇಕಾರ / ಕೆಲಸಗಾರರಿಗೆ ಗುರುತಿನ ಚೀಟಿ (ID Card).

ಮಾನ್ಯ ಕೈಮಗ್ಗ ಮತ್ತು ಜವಳಿ ಹಾಗೂ ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಸಚಿವರಾದ ಶಂಕರ್ ಬ. ಪಾಟೀಲ್ ಮುನೇನಕೊಪ್ಪ ರವರು ವಿದ್ಯುತ್ ಮಗ್ಗ ಘಟಕ ವೀಕ್ಷಿಸುತ್ತಿರುವುದು.

ಗಣತಿ/ಸಮೀಕ್ಷೆಯ ಸಂದರ್ಭದಲ್ಲಿ ಪ್ರಸ್ತುತಪಡಿಸಬೇಕಾದ ದಾಖಲಾತಿಗಳು

- ಘಟಕದ: ನೋಂದಣಿ ಪ್ರತಿ, ಪ್ಯಾನ್ ಕಾರ್ಡ್, ಜಿ.ಎಸ್.ಟಿ ಸಂಖ್ಯೆ ವಿದ್ಯುತ್ ಆರ್.ಆರ್.ಸಂಖ್ಯೆ, ಕೆಲಸಗಾರರ ಇ.ಎಸ್.ಐ/ಪಿ.ಎಫ್ ಸಂಖ್ಯೆ (ಇದ್ದಲ್ಲಿ) ಘಟಕದ ಕಾರ್ಯನಿರ್ವಹಣೆಗೆ ಬ್ಯಾಂಕ್ / ಹಣಕಾಸು ಸಂಸ್ಥೆಗಳಲ್ಲಿ ಸಾಲ ಪಡೆದಿದ್ದಲ್ಲಿ ಪತ್ರದ ಪ್ರತಿ, ಇತ್ಯಾದಿ., ನೇಕಾರ / ಕೆಲಸಗಾರರ ಆಧಾರ್ ಕಾರ್ಡ್, ರೇಷನ್ ಕಾರ್ಡ್, ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ ಇತ್ಯಾದಿ.
- ಗಣತಿ / ಸಮೀಕ್ಷೆಗಾಗಿ M/s AMS (Academy of Management Studies), Lucknow / New Delhi ರವರನ್ನು ನೇಮಿಸಿದ್ದು, ಸದರಿಯವರು ತಮ್ಮ ಘಟಕಕ್ಕೆ ಭೇಟಿ ನೀಡಿದಾಗ ಮೇಲಿನ ಅಗತ್ಯ ದಾಖಲಾತಿಗಳನ್ನು ಒದಗಿಸುವುದು

ಹೆಚ್ಚಿನ ವಿವರ / ಮಾಹಿತಿಗಳಿಗಾಗಿ ಇಲಾಖೆಯ ವಿಭಾಗ ಮಟ್ಟ / ಜಿಲ್ಲಾ ಮಟ್ಟದ ಕಛೇರಿಯ ಸಂಪರ್ಕಕ್ಕಾಗಿ ಇಲಾಖೆಯ ವೆಬ್‌ಸೈಟ್ www.karnatakadht.org ವೀಕ್ಷಿಸುವುದು.

ಟಿ.ಹೆಚ್.ಎಂ. ಕುಮಾರ್, ಭಾ.ಆ.ಸೇ.
ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ

ಪಂಕಜ್ ಕುಮಾರ್ ಪಾಂಡೆ, ಭಾ.ಆ.ಸೇ.
ಸರ್ಕಾರದ ಕಾರ್ಯದರ್ಶಿಗಳು (ಎಂ.ಎಸ್.ಎಂ.ಇ & ಗಣಿ), ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ

ಸುಭಾಷಿತ

ಒಂದು ಕ್ಷಣದ ಸಿಟ್ಟಿನಿಂದ ನೀವು ಪಾರಾದರೆ, ನಾಲ್ಕು ದಿನಗಳ ದುಃಖದಿಂದ ಪಾರಾದಿರಿ ಎನ್ನಬಹುದು.
-ಸ್ವಾಮಿ ವಿವೇಕಾನಂದ

ಪುರುಷ ಠೇಂಕಾರ ಕೊನೆಯಾಗಲಿ ಸದನದ ಘನತೆ ಮುಕ್ಕಾಗದಿರಲಿ

ಶಾಸಕ ಕೆ.ಆರ್. ರಮೇಶ್ ಕುಮಾರ್ ಅವರು ಅತ್ಯಾಚಾರದ ಕುರಿತು ವಿಧಾನಸಭೆಯಲ್ಲಿ ಆಡಿರುವ ಮಾತು ಸಂವೇದನಾರಹಿತವಾದುದು ಮಾತ್ರವಲ್ಲ, ಸದನದ ಗೌರವಕ್ಕೂ ಧಕ್ಕೆ ತರುವಂತಹದ್ದು. 'ಅತ್ಯಾಚಾರದಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗದಿದ್ದರೆ, ಅದನ್ನು ಆನಂದಿಸಿ ಎಂಬ ಮಾತಿದೆ' ಎನ್ನುವ ತಮ್ಮ ಮಾತಿಗೆ ರಮೇಶ್ ಕುಮಾರ್ ಕ್ಷಮೆ ಕೋರಿದ್ದಾರೆ. ಆ ಕ್ಷಮಾಪಣೆಯನ್ನು ತಕ್ಷಣವೇ ಒಪ್ಪಿಕೊಂಡಿರುವ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ, 'ವಿಷಯವನ್ನು ಅಲ್ಲಿಗೆ ಮುಕ್ತಾಯ ಮಾಡೋಣ' ಎಂದು ಹೇಳಿದ್ದಾರೆ. ಆದರೆ ಇದು ಸುಲಭಕ್ಕೆ ಮುಗಿಯುವಂತಹ ವಿಷಯವಲ್ಲ. ಲೈಂಗಿಕ ಹಿಂಸಾವಿನೋದದ ಪ್ರಕರಣದಲ್ಲಿ ಸದನ ನಡೆದುಕೊಂಡ ರೀತಿ ವಿಧಾನಸಭೆಯ ವರ್ಚಸ್ಸನ್ನು ಹೆಚ್ಚಿಸುವಂತಹದ್ದಲ್ಲ. ರಮೇಶ್ ಕುಮಾರ್ ಅವರ ಮಾತು ಆಕ್ಷೇಪಾರ್ಹವಾದುದು, ಆ ರೀತಿ ಮಾತನಾಡಬಾರದಿತ್ತು ಎಂದು ತಿಳಿಹೇಳಬೇಕೆಂದು ಸದನದಲ್ಲಿದ್ದ ಯಾರಿಗೂ ಅನ್ನಿಸಿಲ್ಲ. ಆಕ್ಷೇಪಾರ್ಹ ಮಾತನ್ನು ಕಡತದಿಂದ ತೆಗೆಯಬೇಕೆಂದು ಯಾರೊಬ್ಬರೂ ಹೇಳಿಲ್ಲ. ಸಭಾಧ್ಯಕ್ಷರು ಕೂಡ ರಮೇಶ್ ಕುಮಾರ್ ಅವರ ಮಾತನ್ನು ಆಕ್ಷೇಪಿಸಿಲ್ಲ. ಹೇಳಿಕೆಯು ಮಾಧ್ಯಮಗಳಲ್ಲಿ ವರದಿಯಾಗಿ ವ್ಯಾಪಕ ಟೀಕೆಗಳು ವ್ಯಕ್ತವಾದ ನಂತರ ಶಾಸಕರು ತಮ್ಮ ಮಾತಿಗೆ ಕ್ಷಮೆ ಯಾಚಿಸಿದ್ದಾರೆ. ಕ್ಷಮೆಯನ್ನು ಮೌನವಾಗಿ ಅಂಗೀಕರಿಸುವ ಮೂಲಕ ಸದನ ತನ್ನ ನೈತಿಕ ಹೊಣೆಗಾರಿಕೆಯಿಂದ ನುಣುಚಿಕೊಂಡಿದೆ. ಇಂಥ ನಡವಳಿಕೆಯೊಂದರ ಹಿನ್ನೆಲೆಯಲ್ಲಿ, ಮಹಿಳೆಯರ ಬಗ್ಗೆ ವಿಧಾನಸಭೆಗೆ ಗೌರವವಿಲ್ಲ ಎಂದು ಬಿಡುಬೀಸಾಗಿ ಹೇಳುವುದು ಸಾಧ್ಯವಿಲ್ಲವಾದರೂ, ಲಿಂಗಭೇದದ ವಿಷಯದಲ್ಲಿ ನಮ್ಮ ರಾಜಕಾರಣಿಗಳು ಅಸೂಕ್ಷ್ಮರಾಗಿದ್ದಾರೆ ಎನ್ನುವುದಂತೂ ಸ್ಪಷ್ಟವಾಗಿದೆ. ರಮೇಶ್ ಕುಮಾರ್ ಅವರ ಮಾತು ಹೆಣ್ಣಿನ ಬಗೆಗಿನ ಪೂರ್ವಗ್ರಹದ ಪುರುಷ ಮನಸ್ಥಿತಿಯಿಂದ ಕೂಡಿರುವಂತಹದ್ದು. ಅವರ ಮಾತಿಗೆ ಸದನದಲ್ಲಿ ವ್ಯಕ್ತವಾದ ನಗು ಉತ್ತಮ ಅಭಿರುಚಿಯದಲ್ಲ ಎನ್ನುವುದನ್ನು ವಿಷಾದದಿಂದಲೇ ಹೇಳಬೇಕಾಗಿದೆ. ರಮೇಶ್ ಕುಮಾರ್ ಅವರ ಮಾತಿಗೆ ಸಭಾಧ್ಯಕ್ಷರು ಕೂಡ ಜೋರಾಗಿ ನಕ್ಕಿದ್ದಕ್ಕೆ ವ್ಯಾಪಕ ಟೀಕೆ ವ್ಯಕ್ತವಾಗಿದೆ. ಅತ್ಯಾಚಾರದ ಬಗೆಗಿನ ಮಾತು ನಗುವಿಗೆ ಕಾರಣವಾಗಬಾರದು. ಅತ್ಯಾಚಾರದ ನೋವಿನ ಅನುಭವವು ಹೆಣ್ಣನ್ನು ಜೀವನದುದ್ದಕ್ಕೂ ದುಃಸ್ವಪ್ನವಾಗಿ ಕಾಡುತ್ತಲೇ ಇರುತ್ತದೆ. ಆ ನೋವನ್ನು ಆನಂದವನ್ನಾಗಿ ಬದಲಿಸಿಕೊಳ್ಳಬೇಕು ಎನ್ನುವ ಮಾತನ್ನು ಹಾಸ್ಯದ ರೂಪದಲ್ಲೂ ಒಪ್ಪಲಾಗದು. ಸದನದಲ್ಲಂತೂ ಅಂಥ ಮಾತುಗಳು ಕೇಳಿಸಲೇಬಾರದು.



ರಾಜಕಾರಣವನ್ನು ಲಿಂಗಭೇದದಿಂದ ಮುಕ್ತಗೊಳಿಸುವ ಪ್ರಕ್ರಿಯೆಯಲ್ಲಿ ಎಲ್ಲ ರಾಜಕೀಯ ಪಕ್ಷಗಳೂ ಪ್ರಾಮಾಣಿಕವಾಗಿ ತೊಡಗಿಕೊಳ್ಳಬೇಕು

ಮಹಿಳೆಯರನ್ನು ಅಪಮಾನಿಸುವಂತಹ ಮಾತುಗಳನ್ನು ಅನೇಕ ರಾಜಕಾರಣಿಗಳು ಸದನದ ಒಳಗೂ ಹೊರಗೂ ಬಹಳಷ್ಟು ಸಲ ಆಡಿದ್ದಾರೆ. ಮಹಿಳೆಯರ ಬಗ್ಗೆ ಲಘುವಾಗಿ ಮಾತನಾಡಿರುವವರಲ್ಲಿ ಎಲ್ಲ ರಾಜ್ಯಗಳ ಹಾಗೂ ಎಲ್ಲ ಪಕ್ಷಗಳ ರಾಜಕಾರಣಿಗಳೂ ಸೇರಿದ್ದಾರೆ. ಮಾತಿನ ಹಂತ ಮೀರಿ ಮಹಿಳಾ ಪ್ರತಿನಿಧಿಗಳ ಉಡುಪಿಗೆ ಕೈಹಾಕಿದ ಪ್ರಸಂಗಗಳನ್ನೂ ಆಧುನಿಕ ಭಾರತದ ಸದನಗಳು ಕಂಡಿವೆ. ಎದುರಾಳಿಯ ಸಾಮರ್ಥ್ಯ ಹಾಗೂ ಪೌರುಷವನ್ನು ಹೀಗಳೆಯಲು, ಮಹಿಳೆಯರ ಸೀರೆ, ಬಳೆ ಹಾಗೂ ಅಡುಗೆಮನೆಯನ್ನು ಬಳಸಲಾಗುತ್ತದೆ. 'ದೇಶದಲ್ಲಿನ ಆಧುನಿಕ ಮಹಿಳೆಯರು ಒಬ್ಬರೇ ಇರಲು ಬಯಸುತ್ತಿದ್ದಾರೆ. ವಿವಾಹವಾದರೂ ಮಕ್ಕಳಿಗೆ ಜನ್ಮನೀಡಲು ಬಯಸದೆ, ಬಾಡಿಗೆ ತಾಯ್ತನದಿಂದ ಸಂತಾನ ಪಡೆಯುತ್ತಿದ್ದಾರೆ' ಎಂದು ಆರೋಗ್ಯ ಸಚಿವ ಡಾ. ಕೆ. ಸುಧಾಕರ್ ಇತ್ತೀಚೆಗಷ್ಟೇ ಹೇಳಿದ್ದರು. ಈ ಹೇಳಿಕೆಯು ವಿವಾದವಾದ ಬಳಿಕ, ಅದು ಅಧ್ಯಯನವೊಂದನ್ನು ಆಧರಿಸಿ ಮಾಡಿದ ಉಲ್ಲೇಖ ಎಂಬ ಸ್ಪಷ್ಟನೆಯನ್ನೂ ಅವರು ನೀಡಿದ್ದರು. ಗೃಹ ಸಚಿವ ಆರಗ ಜ್ಞಾನೇಂದ್ರ ಅವರು ಮೈಸೂರಿನಲ್ಲಿ ನಡೆದ ಅತ್ಯಾಚಾರ ಪ್ರಕರಣವೊಂದರ ಸಂದರ್ಭದಲ್ಲಿ, 'ಸಂತ್ರಸ್ತ ಯುವತಿಯು ಸಂಜೆಯ ನಂತರ ನಿರ್ಜನ ಪ್ರದೇಶಕ್ಕೆ ಹೋಗಬಾರದಿತ್ತು' ಎಂದು ಅಭಿಪ್ರಾಯಪಟ್ಟಿದ್ದರು. ಶಾಸಕ ಸಾ.ರಾ. ಮಹೇಶ್ ಅವರು ಐಎಎಸ್ ಅಧಿಕಾರಿ ರೋಹಿಣಿ ಸಿಂಧೂರಿ ಅವರು ತಮ್ಮ ಹುದ್ದೆಗೆ ರಾಜೀನಾಮೆ ನೀಡಿ ಅಡುಗೆ ಮಾಡಿಕೊಂಡಿರಲಿ ಎಂದು ಹೇಳಿಕೆ ನೀಡಿದ್ದರು. ಮನೆಯ ಚೌಕಟ್ಟಿನಿಂದ ಹೆಣ್ಣು ಹೊರಬರುವುದನ್ನು ಬಯಸದ ಮನೋಭಾವ ಹಾಗೂ ಹೆಣ್ಣುಮಕ್ಕಳು ಅಡುಗೆಮನೆಗಷ್ಟೇ ಲಾಯಕ್ಕು ಎನ್ನುವ ಪುರುಷ ಠೇಂಕಾರ ಮತ್ತೆ ಮತ್ತೆ ವ್ಯಕ್ತವಾಗುತ್ತಿದೆ. ಹೆಣ್ಣಿನ ದೇಹದ ಬಗ್ಗೆ ಸಾರ್ವಜನಿಕವಾಗಿ ಎಗ್ಗಿಲ್ಲದೆ ಮಾತನಾಡುವುದಲ್ಲದೆ, ಅದನ್ನು ಸಮರ್ಥಿಸಿಕೊಳ್ಳುವವರೂ ಇದ್ದಾರೆ. ಚಾರಿತ್ರ್ಯದ ಬಗ್ಗೆ ಮಾತನಾಡುವ ಮೂಲಕ ಮಹಿಳಾ ರಾಜಕಾರಣಿಗಳ ಸ್ಥೈರ್ಯ ಕುಂದಿಸಲು ಪ್ರಯತ್ನಿಸಲಾಗುತ್ತಿದೆ. ಪದೇ ಪದೇ ಕೇಳಿಸುವ ಲಿಂಗಭೇದದ ಮಾತುಗಳು ಹಾಗೂ ವಿಕೃತವಿನೋದವು ಜನಪ್ರತಿನಿಧಿಗಳ ಮನಸ್ಸಿನಲ್ಲಿ ಪಿತೃಪ್ರಧಾನ ಸಂಸ್ಕೃತಿಯ ಪೂರ್ವಗ್ರಹ ಬೇರೂರಿರುವುದಕ್ಕೆ ನಿದರ್ಶನವಾಗಿವೆ.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ರಾಜಕಾರಣಿಗಳು ನೈತಿಕ ಮೌಲ್ಯಗಳ ರಾಯಭಾರಿಗಳಾಗಬೇಕು ಹಾಗೂ ವಿಧಾನಮಂಡಲವು ನೈತಿಕತೆಯ ಪ್ರಯೋಗಶಾಲೆ ಆಗಬೇಕು. ಆದರೆ, ಲಿಂಗಭೇದಕ್ಕೆ ಇಂಬು ಕೊಡುವ ಪ್ರಸಂಗಗಳೇ ರಾಜಕಾರಣದಲ್ಲಿ ಹೆಚ್ಚು ನಡೆಯುತ್ತಿವೆ. ಕೆಲವು ರಾಜ್ಯಗಳಲ್ಲಂತೂ ಲೈಂಗಿಕ ಅಪರಾಧಗಳಲ್ಲಿ ರಾಜಕಾರಣಿಗಳ ಪಾತ್ರವಿರುವುದು ಹಾಗೂ ಅತ್ಯಾಚಾರಿಗಳಿಗೆ ರಾಜಕೀಯ ಬೆಂಬಲ ನೀಡಿರುವುದು ವರದಿಯಾಗಿವೆ. ರಾಜಕಾರಣವನ್ನು ಲಿಂಗಭೇದದಿಂದ ಮುಕ್ತಗೊಳಿಸುವ ಪ್ರಕ್ರಿಯೆಯಲ್ಲಿ ಎಲ್ಲ ರಾಜಕೀಯ ಪಕ್ಷಗಳೂ ಪ್ರಾಮಾಣಿಕವಾಗಿ ತೊಡಗಿಕೊಳ್ಳಬೇಕು. ಯಾರಾದರೊಬ್ಬರು ನಾಲಿಗೆ ಸಡಿಲ ಬಿಟ್ಟಾಗ, ಅವರನ್ನು ತಿದ್ದುವ ಹಾಗೂ ಶಿಕ್ಷಿಸುವ ಆಂತರಿಕ ವ್ಯವಸ್ಥೆಯನ್ನು ಪಕ್ಷಗಳು ರೂಪಿಸಿಕೊಳ್ಳಬೇಕು. ಅಂಥ ವ್ಯವಸ್ಥೆ ರೂಪುಗೊಳ್ಳುವವರೆಗೂ ಕರ್ನಾಟಕ ವಿಧಾನಸಭೆಯಲ್ಲಿ ನಡೆದಂಥ ಪ್ರಕರಣಗಳು ಮರುಕಳಿಸುತ್ತಲೇ ಇರುತ್ತವೆ ಹಾಗೂ ಮಹಿಳಾ ಕಾಳಜಿಯ ಪ್ರಹಸನಗಳು ಜಾರಿಯಲ್ಲಿರುತ್ತವೆ.

ದಿನದ ಟ್ವೀಟ್

ಹುಸಿಯಾಗದಿರಲಿ ನಿರೀಕ್ಷೆ

ಅಫ್ಗಾನಿಸ್ತಾನದಲ್ಲಿ ಪ್ರೌಢಶಾಲಾ ಬಾಲಕಿಯರು ಶಾಲೆಗೆ ಹಿಂದಿರುಗುವುದಕ್ಕೆ ತಾಲಿಬಾನ್ ನಿಷೇಧ ಹೇರಿ 93 ದಿನಗಳಾಗಿವೆ. ದೇಶದಾದ್ಯಂತ ಹದಿಹರೆಯದ ಲಕ್ಷಾಂತರ ಹೆಣ್ಣು ಮಕ್ಕಳು ಮನೆಯಲ್ಲಿ ಸಿಲುಕಿಕೊಂಡಿದ್ದಾರೆ. ತಾವು ತಮ್ಮ ತರಗತಿಗಳಿಗೆ ಮರಳಲು ಸಾಧ್ಯವಾಗಬಹುದು ಎಂಬ ಭರವಸೆಯಿಂದ ಕಾಯುತ್ತಿದ್ದಾರೆ. #LetAfghanGirlsLearn

ಯಲ್ದಾ ಹಕೀಮ್, ಅಫ್ಗಾನಿಸ್ತಾನ ಮೂಲದ ಆಸ್ಟ್ರೇಲಿಯಾ ಪತ್ರಕರ್ತೆ

ಕಿಡಿನುಡಿ

ಯಾವುದೇ ಸಂಘಟನೆಯಿರಲಿ ದೇಶದಲ್ಲಿ ಶಾಂತಿ ಕಾಪಾಡಲು ಸಹಕರಿಸಬೇಕು. ಯಾವುದಾದರೂ ಸಂಘಟನೆಯು ಪದೇ ಪದೇ ಶಾಂತಿ ಕದಡುತ್ತದೆ ಎಂದಾದರೆ ಅದನ್ನು ನಿಷೇಧಿಸಲು ಸರ್ಕಾರ ಮುಂದಾಗಬೇಕು.

ಪ್ರೇಮ್, ಚಲನಚಿತ್ರ ನಟ

25 ವರ್ಷಗಳ ಹಿಂದೆ

ಶುಕ್ರವಾರ, 20-12-1996

• **ರಾಷ್ಟ್ರಪತಿ ಆಳ್ವಿಕೆ: ಐತಿಹಾಸಿಕ ತೀರ್ಪು**

ಲಖನೌ, ಡಿ. 19– ಉತ್ತರಪ್ರದೇಶದಲ್ಲಿ ರಾಷ್ಟ್ರಪತಿ ಆಳ್ವಿಕೆಯನ್ನು ಮತ್ತೆ ಜಾರಿಗೊಳಿಸುವ ರಾಷ್ಟ್ರಪತಿ ಅವರ ಅಧಿಸೂಚನೆಯನ್ನು ರದ್ದುಗೊಳಿಸಿ ಅಲಹಾಬಾದ್ ಹೈಕೋರ್ಟ್‌ನ ವಿಭಾಗೀಯ ಪೀಠ ಇಂದು ಐತಿಹಾಸಿಕ ತೀರ್ಪು ನೀಡಿದೆ.

ಚುನಾವಣೆಯಲ್ಲಿ ಅತ್ಯಧಿಕ ಸ್ಥಾನಗಳನ್ನು ಗಳಿಸಿರುವ ಪಕ್ಷವನ್ನು ಸರ್ಕಾರ ರಚಿಸಲು ಆಹ್ವಾನಿಸದೆ ರಾಜ್ಯದಲ್ಲಿ ರಾಷ್ಟ್ರಪತಿ ಆಡಳಿತವನ್ನು ಮುಂದುವರಿಸಲು ಸಲಹೆ ಮಾಡಿದ ರಾಜ್ಯಪಾಲರ ವಿವಾದಾತ್ಮಕ ನಿರ್ಧಾರವನ್ನು ಪ್ರಶ್ನಿಸಿ ಈ ಹಿಂದೆ ಸಲ್ಲಿಸಿದ್ದ ಅರ್ಜಿ ಸಂಬಂಧ ದ್ವಿಸದಸ್ಯ ಪೀಠ ನೀಡಿದ್ದ ತೀರ್ಪಿನ ಹಿನ್ನೆಲೆಯಲ್ಲಿ ಮುಖ್ಯ ನ್ಯಾಯಮೂರ್ತಿ ಅವರು ವಿಶೇಷ ವಿಭಾಗೀಯ ಪೀಠ ರಚಿಸಿದ್ದರು.

• **ದೇವನಹಳ್ಳಿ ವಿಮಾನ ನಿಲ್ದಾಣಕ್ಕೆ ಕೇಂದ್ರ ಅಸ್ತು**

ನವದೆಹಲಿ, ಡಿ. 19– ಬೆಂಗಳೂರು ಬಳಿಯ ದೇವನಹಳ್ಳಿಯಲ್ಲಿ ಖಾಸಗಿ ವಲಯದಲ್ಲಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ನಿರ್ಮಿಸಲು ಕೇಂದ್ರ ಸರ್ಕಾರವು ಕರ್ನಾಟಕ ಸರ್ಕಾರಕ್ಕೆ ಒಪ್ಪಿಗೆ ನೀಡಿದೆ ಎಂದು ನಾಗರಿಕ ವಿಮಾನಯಾನ ಖಾತೆ ಸಚಿವ ಸಿ.ಎಂ. ಇಬ್ರಾಹಿಂ ಲೋಕಸಭೆಗೆ ತಿಳಿಸಿದರು.

50 ವರ್ಷಗಳ ಹಿಂದೆ

ಸೋಮವಾರ, 20-12-1971

• **ಇಂದು ಯಾಹ್ಯಾಖಾನ್ ರಾಜೀನಾಮೆ**

ನವದೆಹಲಿ, ಡಿ. 19– ಪಾಕಿಸ್ತಾನದ ಅಧ್ಯಕ್ಷ ಯಾಹ್ಯಾಖಾನರು ಸೋಮವಾರ ರಾಜೀನಾಮೆ ನೀಡುತ್ತಾರೆಂದು ಅಧಿಕೃತವಾಗಿ ಪ್ರಕಟಿಸಲಾಗಿದೆ. ಚುನಾಯಿತ ಜನತಾ ಪ್ರತಿನಿಧಿಗಳಿಗೆ ಅಧಿಕಾರ ವರ್ಗಾಯಿಸಿದ ಕೂಡಲೇ ಅವರು ಪದವಿ ತ್ಯಜಿಸುವರೆಂದು ಅಧಿಕೃತ ವಕ್ತಾರ ಹೇಳಿರುವುದಾಗಿ ಪಾಕ್ ರೇಡಿಯೊ ಇಂದು ರಾತ್ರಿ ಬಿತ್ತರಿಸಿತು.

ಯಾಹ್ಯಾಖಾನ್ ಮತ್ತಿತರ ಮಿಲಿಟರಿ ಆಡಳಿತ ಅಧಿಕಾರಿಗಳನ್ನು ಸಾರ್ವಜನಿಕ ವಿಚಾರಣೆಗೆ ಗುರಿಪಡಿಸಬೇಕೆಂದು ವಿಮಾನ ಪಡೆಯ ಮಾಜಿ ದಂಡನಾಯಕ ಅಸ್ಗರ್ ಖಾನ್ ಒತ್ತಾಯ ಮಾಡಿದ ನಂತರ ರೇಡಿಯೊ ಉರ್ದು ವಾರ್ತಾ ಪ್ರಸಾರವೊಂದರಲ್ಲಿ ಅಧ್ಯಕ್ಷರು ರಾಜೀನಾಮೆ ಕೊಡುವ ಸುದ್ದಿ ರಾವಲ್ಪಿಂಡಿಯಿಂದ ಬಂದಿದೆಯೆಂದು ತಿಳಿಸಿತು. ಯಾಹ್ಯಾಖಾನರ ಪದಚ್ಯುತಿಗೆ ಒತ್ತಾಯಿಸಿ ಪಾಕಿಸ್ತಾನದಲ್ಲಿ ಮತಪ್ರದರ್ಶನಗಳು ನಡೆದಿದ್ದವು.

ಮಹಿಳೆಯರ ವಿವಾಹದ ಕನಿಷ್ಠ ವಯಸ್ಸಿನ ಮಿತಿ ಏರಿಕೆ ನಿಲುವು ಗಮನಾರ್ಹ

ವಿವಾಹದ ವಯಸ್ಸು: ವಿಶ್ಲೇಷಿಸುವ ಸಮಯ

ವಿಶ್ಲೇಷಣೆ

ಡಾ. ಕೆ.ಎಸ್.ಪವಿತ್ರ

'ದೇರ್ ಈಸ್ ನೋ ರಾಂಗ್ ಟೈಮ್ ಟು ಡು ದ ರೈಟ್ ಥಿಂಗ್' (ಸರಿಯಾದುದನ್ನು ಮಾಡಲು ಸರಿಯಲ್ಲದ ಸಮಯ ಎಂಬುದಿಲ್ಲ) ಎಂಬುದೊಂದು ಪ್ರಸಿದ್ಧ ಹೇಳಿಕೆ. ಮದುವೆ ಎನ್ನುವುದೂ ಒಂದು ಸರಿಯಾದ, ಎಲ್ಲರ ಜೀವನದಲ್ಲಿ ಆಗಬೇಕಾದ 'ಒಳ್ಳೆಯ' ಸಂಗತಿ ಎನ್ನುವುದನ್ನು ನಮ್ಮಲ್ಲಿ ಹೆಚ್ಚಿನವರು ಒಪ್ಪುತ್ತಾರೆ. ಆದರೆ ಅದಕ್ಕೆ ಮಾತ್ರ ಮುಹೂರ್ತ-ಒಳ್ಳೆಯ ದಿನ ಹುಡುಕುವಂತೆ, ಸರಿಯಾದ ವಯಸ್ಸಿಗೆ ಮದುವೆಯಾಗುವುದೂ ಕೂಡ ಅಗತ್ಯ ಎಂಬುದನ್ನು ದೇಹ- ಮನಸ್ಸುಗಳೆರಡಕ್ಕೂ ಸಂಬಂಧಿಸಿದ ಆರೋಗ್ಯ ಕ್ಷೇತ್ರ ಒತ್ತಿ ಹೇಳುತ್ತದೆ.

'ಸರಿಯಾದ ವಯಸ್ಸು' ಅಂದರೆ ಯಾವುದು? ಭಾರತದ ಕಾನೂನು ವ್ಯವಸ್ಥೆಯಲ್ಲಿ ವಿವಾಹದ ಕನಿಷ್ಠ ವಯಸ್ಸಿನ ಮಿತಿ ಬದಲಾಗಬೇಕಾದ ಹಂತದಲ್ಲಿರುವುದೇ ಈ ಪ್ರಶ್ನೆಗೆ ವೈಜ್ಞಾನಿಕವಾಗಿ ಇರುವ ಆಧಾರಗಳನ್ನು ಶೋಧಿಸಿ ನೋಡುವುದಕ್ಕೆ ಸ್ಫೂರ್ತಿಯಾಗಬೇಕು.

ಮನೋವಿಜ್ಞಾನ ಮತ್ತು ನರಮಂಡಲ ವಿಜ್ಞಾನಗಳೆರಡೂ ಈ ಬಗ್ಗೆ ವಿವರಿಸಿವೆ. ಮೊದಲು ಮಿದುಳಿನ ಕಡೆ ನೋಡೋಣ. ಮಿದುಳಿನ 'ಫ್ರಾಂಟಲ್ ಲೋಬ್' ಎಂಬ ಮುಂಭಾಗವು ಪ್ರಬುದ್ಧತೆಗೆ ಮುಖ್ಯ ಕಾರಣ. ನೈತಿಕತೆ- ನಿರ್ಧಾರಗಳನ್ನು ತೆಗೆದುಕೊಳ್ಳುವ ಸಾಮರ್ಥ್ಯ, ಭಾವನಾತ್ಮಕವಾಗಿ ಸಂಬಂಧಗಳಲ್ಲಿ ಎಷ್ಟು ತೊಡಗಿಸಿಕೊಳ್ಳಬೇಕು- ಬೇಡ ಇವುಗಳನ್ನು ನಿರ್ದೇಶಿಸುವುದು ಮಿದುಳಿನ ಈ ಭಾಗವೇ. ಇದು ಸರಿಯಾಗಿ ಬೆಳವಣಿಗೆಯಾಗುವುದು 24- 25 ವರ್ಷಗಳ ಹೊತ್ತಿಗೆ. ಹಾಗಾಗಿ ಜೀವನದ ಯಾವುದೇ ಮುಖ್ಯ ದೀರ್ಘಕಾಲಿಕ ನಿರ್ಧಾರಗಳಿಗೆ ಈ ವಯಸ್ಸಿನ ಮಿದುಳು ಸರಿಯಾಗಿ ಕೆಲಸ ಮಾಡುವ ಸಾಧ್ಯತೆ ಹೆಚ್ಚು.

ಗೋಲ್ಡಿಲಾಕ್ಸ್ ಎಂಬುದು ಮನೋವಿಜ್ಞಾನದ ಒಂದು ಸಿದ್ಧಾಂತ. ಇದರ ಪ್ರಕಾರ, ತೀರಾ ಚಿಕ್ಕ ವಯಸ್ಸು ಅಥವಾ ತೀರಾ 'ವಯಸ್ಸಾಗಿಬಿಟ್ಟ' ಎರಡರಲ್ಲೂ ಮದುವೆಯ ಬಂಧ ಗಟ್ಟಿಯಾಗಿ ಉಳಿಯುವುದಿಲ್ಲ. ಅಂದರೆ ನಿಜವಾದ ಸಾಂಗತ್ಯ ಮತ್ತು ಆ ಕ್ಷಣದ ಆಕರ್ಷಣೆಯ ಪ್ರೇಮದ ನಡುವೆ ಇರುವ ವ್ಯತ್ಯಾಸವನ್ನು ಅರ್ಥಮಾಡಿಕೊಳ್ಳುವಷ್ಟು ವಯಸ್ಸು- ಬುದ್ಧಿ- ಮನಸ್ಸುಗಳು ಪ್ರಬುದ್ಧವಾಗಿರಬೇಕು. ಅದೇ ಜೀವನದಲ್ಲಿ, ದೈನಂದಿನ ಅಭ್ಯಾಸಗಳಲ್ಲಿ ಹೊಂದಾಣಿಕೆ ಮಾಡಿಕೊಳ್ಳಲೇ ಆಗದಷ್ಟು ವಯಸ್ಸು ಮುಂದೆ ಸಹ ಹೋಗಿರಬಾರದು! ವಿಚ್ಛೇದನಗಳು ಸುಲಭವಾಗಿ ಸಿಕ್ಕುವ ಅಮೆರಿಕ- ಬ್ರಿಟನ್‌ಗಳಲ್ಲಿ ನಡೆದ ಒಂದು ಅಧ್ಯಯನದಲ್ಲಿ, 25 ವರ್ಷಕ್ಕೆ ಮದುವೆಯಾದ ವ್ಯಕ್ತಿಗಳಲ್ಲಿ 20 ವರ್ಷಕ್ಕೆ ಮದುವೆಯಾದ ವ್ಯಕ್ತಿಗಳಿಗೆ ಹೋಲಿಸಿದರೆ ವಿಚ್ಛೇದನದ ಪ್ರಮಾಣ ಶೇ 50ರಷ್ಟು ಕಡಿಮೆ ಎಂಬುದು ಕಂಡುಬಂದಿದೆ.

ಮಿದುಳು ಪೂರ್ತಿ ಬೆಳವಣಿಗೆಯಾಗಿದೆ ಎಂಬುದೂ ಒಳಗೊಂಡಂತೆ ಹಲವು ಕಾರಣಗಳನ್ನು ಇಲ್ಲಿ ಊಹಿಸಬಹುದು. ಇಬ್ಬರೂ ಕೆಲಸದಲ್ಲಿ ನೆಲೆ ನಿಂತಿರುವುದು, ಆರ್ಥಿಕ ಸಬಲತೆ, 'ಪ್ರೀತಿ' ಎಂಬುದರ ಬಗ್ಗೆ ಅತಿ ಆದರ್ಶದ ಪರಿಕಲ್ಪನೆ ಕಡಿಮೆಯಾಗಿ, ಸಂಗಾತಿಯಿಂದ ನಿರೀಕ್ಷೆಗಳು ವಾಸ್ತವಕ್ಕೆ ಹತ್ತಿರವಾಗಿರುವುದು, ಇವೆಲ್ಲ ಆ ಕಾರಣಗಳು. ಆದರೆ 'ಮದುವೆ' ಎನ್ನುವುದು ಬರೀ ಇಂತಹ ವೈಜ್ಞಾನಿಕ ಸಂಗತಿ- ಅಧ್ಯಯನ- ಅಂಕಿ ಅಂಶಗಳಿಗಷ್ಟೇ ಸಂಬಂಧಿಸಿಲ್ಲ ಎನ್ನುವುದು ಗಮನಾರ್ಹ. ಧಾರ್ಮಿಕ- ಸಾಮಾಜಿಕ ಅಂಶಗಳು, ನಮ್ಮ ರೂಢಿಗತ ಧೋರಣೆಗಳು, ಹೆಣ್ಣು ಮಕ್ಕಳ ಸ್ಥಿತಿ ಇವೆಲ್ಲಕ್ಕೂ 'ಮದುವೆ' ಸಂಬಂಧಿಸಿದೆ. ಮದುವೆಯಲ್ಲಿ ಸರಿ- ತಪ್ಪು, ಒಪ್ಪು- ಬಿಡುಗಳ ವಿಶ್ಲೇಷಣೆಗೆ ನಿಲುಕದ, 'ಇದಮಿತ್ಥಂ' ಎಂದು ಹೇಳಲಾಗದ ಹಲವು ವಿಷಯಗಳೂ ಇವೆ.

ಹುಡುಗ– ಹುಡುಗಿಯ ವಯಸ್ಸಿನ ಅಂತರ, ಇಬ್ಬರ ನಡುವಿನ ದುಡಿಮೆಯ ಅಂತರ (ಹುಡುಗಿಗೆ ಹೆಚ್ಚು ಸಂಬಳ-ಹುಡುಗನಿಗೆ ಕಡಿಮೆ ಸಂಬಳ), ಹುಡುಗಿ ಹೊರಗೆ ಕೆಲಸ ಮಾಡುವ 'ಅವಶ್ಯಕತೆ' ಇರದಿರುವುದು (ಹೆಂಡತಿ ಮನೆಯಲ್ಲಿ ಜವಾಬ್ದಾರಿ ನೋಡಿಕೊಂಡರೆ ಸಾಕೇ ಸಾಕು) ಎಂಬಂತಹ ಮನೋಭಾವಗಳು ಎಲ್ಲೆಡೆ ವ್ಯಾಪಕವಾಗಿವೆ. ಇವೆಲ್ಲಕ್ಕೂ ಕೆಳಮಧ್ಯಮ ವರ್ಗ, ಕೆಳ ವರ್ಗಗಳ ಕುಟುಂಬಗಳು ಕಂಡುಕೊಳ್ಳುವ ಸುಲಭ ಉತ್ತರ 'ಆದಷ್ಟು ಬೇಗ, ಅಂದರೆ ಪಿಯು ಮುಗಿದ ತಕ್ಷಣ ಮನೆಯ ಮಗಳಿಗೆ ಮದುವೆ ಮಾಡುವುದು'. ಕೆಲವು ಸಮುದಾಯಗಳಲ್ಲಂತೂ ಹತ್ತನೇ ತರಗತಿಯ ನಂತರ ಹೆಣ್ಣು ಮಕ್ಕಳು ಶಾಲೆಗೆ ಹೋಗುವ ಅವಶ್ಯಕತೆಯೇ ಅಪ್ಪ- ಅಮ್ಮಂದಿರಿಗೆ ಕಾಣಿಸುವುದಿಲ್ಲ. ಇಂತಹ ಬಾಲಕಿಯರು ದೈಹಿಕವಾಗಿ ಪ್ರಬುದ್ಧವಾಗುವುದಷ್ಟೇ ಅವರಿಗೆ ಬೇಕಾದ ರಹದಾರಿಯಾಗಿಬಿಡುತ್ತದೆ.

ಹಾಗೆ 16 ವರ್ಷಕ್ಕೆ ಮಕ್ಕಳನ್ನು ಹೆರಲು ಮಾತ್ರ ಸಾಧ್ಯವಾಗುವ, ಉಳಿದ ಯಾವ ಪ್ರಬುದ್ಧತೆಯನ್ನೂ ಪಡೆಯದ, ಆದರೂ ಮದುವೆಯಾಗುವ ಎಷ್ಟು ಪ್ರಕರಣಗಳು ಪ್ರತಿದಿನ ತೆರೆಮರೆಯಲ್ಲಿ ನಡೆಯುತ್ತಿರಬಹುದು?! ಇವುಗಳಲ್ಲೆಲ್ಲ ಶಿಕ್ಷೆ ಸಾಧ್ಯವಾಗಿದೆಯೇ? ವಿವಾಹಕ್ಕೆಂದು ಕಾನೂನು ಕನಿಷ್ಠ ವಯಸ್ಸನ್ನು ನಿಗದಿಪಡಿಸುವುದರ ಹಿಂದೆ ಬಾಲ್ಯವಿವಾಹಗಳನ್ನು ತಡೆಯುವ ಮತ್ತು ಅಪ್ರಬುದ್ಧ ವಯಸ್ಕರ ಮೇಲಿನ ದೌರ್ಜನ್ಯವನ್ನು ತಡೆಯುವ ಮುಖ್ಯ ಉದ್ದೇಶಗಳಿವೆ ಎಂಬುದನ್ನು ನಾವು ನೆನಪಿನಲ್ಲಿಟ್ಟುಕೊಳ್ಳಬೇಕು. ಆದರೆ ಜನರಲ್ಲಿ ಅರಿವಿಲ್ಲದೆ ಬರೀ ಕಾನೂನಿನಿಂದ ಯಾವ ಬದಲಾವಣೆಯನ್ನೂ ತರಲಾಗದು.

ಪ್ರಸ್ತುತ ಆಡಳಿತ ವ್ಯವಸ್ಥೆಯು ಮದುವೆಯ ವಯಸ್ಸಿನ ಕನಿಷ್ಠ ಮಿತಿಯನ್ನು ಪುನರ್ ಪರಿಶೀಲಿಸುತ್ತಿರುವುದು ಸ್ವಾಗತಾರ್ಹವೇ. ಆದರೆ ನಿರೀಕ್ಷೆಯಂತೆ ಇದು ಪರಿಣಾಮ ಬೀರದಿರುವ ಸಾಧ್ಯತೆಗಳನ್ನೂ ನಾವು ಗಮನಿಸಬೇಕು. 'ಬೇಗ ಮದುವೆ- ಬೇಗ ಮಕ್ಕಳು' ಎಂಬ ಪರಿಸ್ಥಿತಿ ರೂಢಿಗತ ಧೋರಣೆಯಿಂದಲೂ ಚಾಲ್ತಿಯಲ್ಲಿ ಇರುವಂಥದ್ದೇ. ಈ ಧೋರಣೆ ಬದಲಾಗದೆ ಶಿಶುಮರಣ, ಮಾತೃಮರಣಗಳಲ್ಲಿ ಮದುವೆಯ ವಯಸ್ಸು ಪರಿಣಾಮ ಬೀರುವ ಸಾಧ್ಯತೆ ಕಡಿಮೆ. ಹಾಗಾಗಿಯೇ ಮಹಿಳೆಯರ ವಿವಾಹದ ಕನಿಷ್ಠ ವಯಸ್ಸನ್ನು ಏರಿಸುವಂತೆ ಶಿಫಾರಸು ಮಾಡಿರುವ ಜಯಾ ಜೇಟ್ಲಿ ನೇತೃತ್ವದ ಕಾರ್ಯಪಡೆಯು ಹೆಣ್ಣು ಮಕ್ಕಳಿಗೆ ಶಾಲಾ ಕಾಲೇಜುಗಳ ಮುಕ್ತ ಲಭ್ಯತೆ, ಕೌಶಲ ಮತ್ತು ವಾಣಿಜ್ಯ ತರಬೇತಿ, ಶಾಲೆಗಳಲ್ಲಿ ಕೌಟುಂಬಿಕ ಜೀವನ ಮತ್ತು ಲೈಂಗಿಕ ಶಿಕ್ಷಣ ನೀಡುವುದು- ಇವು ಮೊದಲು ನಡೆಯದಿದ್ದರೆ, ಕಾನೂನು ವಿಫಲವಾಗುವ ಮುನ್ಸೂಚನೆಯನ್ನೂ ನೀಡಿದೆ.

ಕಾನೂನನ್ನು ಹೇಗಾದರೂ ಮಾಡಿ ಹೇರುವ ಬದಲು, ಮದುವೆಯ ವಯಸ್ಸನ್ನು ಏರಿಸುವುದರಿಂದ ಮಹಿಳೆಗೆ, ಎಲ್ಲರ ಜೀವನಕ್ಕೆ, ಇಡೀ ಸಮಾಜಕ್ಕೆ ಇರುವ ಉಪಯೋಗಗಳ ಬಗೆಗೆ ದೊಡ್ಡ ಮಟ್ಟದಲ್ಲಿ ಅರಿವು ಹೆಚ್ಚಿಸಬೇಕೆಂದು ಕಾರ್ಯಪಡೆಯು ಸೂಚಿಸಿರುವುದು ಪ್ರಶಂಸನೀಯ. ಆಗ ಈ ಸಂಬಂಧದ ಕಾನೂನಿನ ಒಪ್ಪುವಿಕೆ- ಪಾಲಿಸುವಿಕೆ ವಿಶೇಷವಾಗಿ ಕೆಳವರ್ಗ, ಕೆಳ ಮಧ್ಯಮ ವರ್ಗಗಳಲ್ಲಿ ಸಾಧ್ಯವಾಗಬಹುದು. ತತ್‌ಕ್ಷಣಕ್ಕೆ ಇದನ್ನು ವಿರೋಧಿಸಬಹುದಾದ ಯಾರೂ ಮೊದಲು ಕಾರ್ಯಪಡೆಯು ಯಾವ ಆಧಾರದ ಮೇಲೆ ಈ ಶಿಫಾರಸನ್ನು ಮಾಡಿದೆ ಎಂಬುದನ್ನೂ ಗಮನಿಸಬೇಕು.

ದೇಶದಾದ್ಯಂತ 16 ವಿಶ್ವವಿದ್ಯಾಲಯಗಳಲ್ಲಿ ವ್ಯಾಸಂಗ ಮಾಡುತ್ತಿರುವ ಯುವಜನರ ಸಮೀಕ್ಷೆ, 15ಕ್ಕೂ ಹೆಚ್ಚು ಸ್ವಯಂಸೇವಾ ಸಂಸ್ಥೆಗಳಿಂದ ಅಲ್ಪಸಂಖ್ಯಾತ ಸಮುದಾಯಗಳು ಮತ್ತು ಗ್ರಾಮೀಣ ಪ್ರದೇಶಗಳ ಸಮೀಕ್ಷೆ ನಡೆಸಿ ಕಾರ್ಯಪಡೆ ಈ ಶಿಫಾರಸು ಮಾಡಿದೆ. ಮುಖ್ಯವಾಗಿ ನಗರ- ಗ್ರಾಮೀಣ ಪ್ರದೇಶಗಳು ಮತ್ತು ಎಲ್ಲಾ ಧರ್ಮಗಳ ಅಭಿಪ್ರಾಯವನ್ನು ಸಮಾನವಾಗಿ ಪರಿಗಣಿಸಲಾಗಿದೆ ಎನ್ನುವುದು ವಿಶೇಷ. ಹಾಗಾಗಿ ಕೇವಲ ರಾಜಕೀಯ ಭೇದದಿಂದ, ಎಡ- ಬಲ ಎಂಬ ವ್ಯತ್ಯಾಸದಿಂದ ಇದನ್ನು ತಳ್ಳಿಹಾಕುವಂತಿಲ್ಲ ಅಥವಾ ಕಾನೂನು ಉಲ್ಲಂಘಿಸುವುದು ಹೆಚ್ಚಾದೀತೆಂಬ ಭಯದಿಂದ ಕಾಲಕ್ಕೆ ಸರಿಯಾಗಿ, ವೈಜ್ಞಾನಿಕ ಆಧಾರವಿರುವ ಸಂಗತಿಗಾಗಿ ಕಾನೂನನ್ನು ಮಾರ್ಪಡಿಸುವ, ಅರಿವು ಮೂಡಿಸುವ ಪ್ರಯತ್ನವನ್ನೇ ಮಾಡದಿರುವುದೂ ನೈತಿಕತೆಯ ಪ್ರಶ್ನೆಯಿಂದ ವಿದ್ಯಾವಂತರಾದ ನಾವು ಮಾಡುವ ಅಪರಾಧವೇ!

ಹುಡುಗಿಯರ ಹೆಚ್ಚಿದ ವಿದ್ಯಾಭ್ಯಾಸವನ್ನು, ಆರ್ಥಿಕ ಸಬಲತೆಯನ್ನು ಇಂದು ವಿವಾಹ ವಿಚ್ಛೇದನಗಳ ಪ್ರಮುಖ ಕಾರಣವಾಗಿ ನೋಡುವವರು ಬಹಳಷ್ಟು ಮಂದಿ. ಆದರೆ ವಿಚ್ಛೇದನವಾಗದ ಮಾತ್ರಕ್ಕೆ, ಮೂಕವಾಗಿ ನರಳುವ ಮದುವೆಗಳು ಅದೆಷ್ಟೋ! ಅಂತಹ ಪರಿಸ್ಥಿತಿಗಳಲ್ಲಿ ಮದುವೆಯ ಕನಿಷ್ಠ ವಯಸ್ಸಿನ ಮಿತಿ ಏರುವಿಕೆ ಉಪಯುಕ್ತ ಎನಿಸುತ್ತದೆ. ಸಹಾಯ ಪಡೆಯಲು, ಸ್ವಾವಲಂಬಿಯಾಗಲು, ಆರೋಗ್ಯದ ಅರಿವು ಪಡೆಯಲು ಮಹಿಳೆಯ ವಿವಾಹಕ್ಕೆ 21 ವರ್ಷಗಳ ವಯಸ್ಸಿನ ಕನಿಷ್ಠ ಮಿತಿ ಅತ್ಯಗತ್ಯ. ಇದು ಕೇವಲ ಮಹಿಳೆಗಷ್ಟೇ ಅಲ್ಲ, ಮಕ್ಕಳ ಆರೋಗ್ಯಕ್ಕೆ, ಕೌಟುಂಬಿಕ ಸುಭದ್ರತೆಗೆ ಅವಶ್ಯಕ. ಹಾಗಾಗಿ ಮಾಡಬೇಕಾದ ಕೆಲಸ ಬೇಕಾದಷ್ಟಿದ್ದರೂ ಕ್ರಮಿಸಬೇಕಾದ ಹಾದಿ ಬಹಳವಿದ್ದರೂ ಬಹುದಿನಗಳಿಂದ ಕಾಲಕ್ಕನುಗುಣವಾಗಿ ಬದಲಾಗಲೇಬೇಕಿದ್ದ ವಿವಾಹದ ಕನಿಷ್ಠ ವಯಸ್ಸಿನ ಮಿತಿಯ ಕಾನೂನು, ಬದಲಾವಣೆಯತ್ತ ಹೆಜ್ಜೆ ಇಟ್ಟಿರುವುದನ್ನು ಅರಿವಿನಿಂದ ಸ್ವಾಗತಿಸೋಣ. ಅರಿವು ಹೆಚ್ಚಿಸಲು ದುಡಿಯೋಣ.



ಲೇಖಕಿ: ಮನೋವೈದ್ಯೆ

ಚುರುಮುರಿ

ನವಬೇತಾಳಗಳು!

• ಸುಮಂಗಲಾ

ರಾತ್ರಿ ಹತ್ತಾಗುತ್ತಿದ್ದಂತೆ ಬೆಕ್ಕಣ್ಣ ಸ್ವೆಟರ್ ಹಾಕಿಕೊಂಡು 'ನನಗೊಂದು ಬ್ಯಾಟರಿ ಕೊಡು' ಎಂದಿತು. 'ಎಲ್ಲಿಗೆ ಹೊಂಟೀಯಲೇ' ಎಂದೆ ಗಾಬರಿಯಿಂದ.

'ಅಡ್ಡಬಾಯಿ ಹಾಕಬ್ಯಾಡ. ಹಿಂದೆಲ್ಲ ರಾಜರು ರಾತ್ರಿ ವೇಷ ಮರೆಸ್ಕಂಡು ನಗರದೊಳಗೆ ಸುತ್ತಾಡಿ, ಪರಿಸ್ಥಿತಿ ಪರಿಶೀಲಿಸುತ್ತಿದ್ದರಲ್ಲ, ಹಂಗ ನಮ್ಮ ಮೋದಿಮಾಮನೂ ರಾತ್ರಿ ಅಯೋಧ್ಯಾವಳಗೆ ಅಡ್ಡಾಡಿ ಅಭಿವೃದ್ಧಿ ಪರಿಶೀಲನೆ ನಡಸಿದ್ರಂತ. ನಾನೂ ರಾತ್ರಿ ಪರಿಶೀಲನೆ ಮಾಡಾಕೆ ಹೊಂಟೀನಿ' ಎಂದಿತು.

'ನಿಂದ್ಯಾವ ಅಯೋಧ್ಯಾನಗರಿ ಐತಲೇ ಪರಿಶೀಲನೆ ನಡೆಸಾಕೆ'

'ನಮ್ಮ ಬೀದಿ ಐತಲ್ಲ... ಅದೇ ನನ್ನ ಸಾಮ್ರಾಜ್ಯ' ಎಂದು ಬೀಗುತ್ತ ಹೊರಟಿತು. ನಾಕು ಹೆಜ್ಜೆ ಹೋಗುವಷ್ಟರಲ್ಲಿ ಬೆಕ್ಕಣ್ಣನ ಬೆನ್ನಿಗೆ ಮುದಿಬೇತಾಳ ಅಮರಿಕೊಂಡಿತು. 'ಕೇಳಿದ್ದಕ್ಕೆ ಸರಿಯಾಗಿ ಉತ್ತರಿಸದಿದ್ದರೆ ತಲೆ ಸಾವಿರ ಹೋಳು ಮಾಡುವೆ' ಎಂದು ಗುಡುಗಿ ಪ್ರಶ್ನಿಸತೊಡಗಿತು.

'ಯುಪಿ + ಯೋಗಿ = ಉಪಯೋಗಿ, ಇದು ಯೋಗಸಂಧಿಯೋ ಅಥವಾ ಉಪಸಂಧಿಯೋ?'

'ಹ್ಹೆಹ್ಹೇ... ಇದು ಯೋಗಸಂಧಿಯೂ ಅಲ್ಲ, ಉಪಸಂಧಿಯೂ ಅಲ್ಲ, ಚುನಾವಣಾಸಂಧಿ' ಬೆಕ್ಕಣ್ಣ ಪಕಪಕನೆ ನಕ್ಕಾಗ ಅವಮಾನಗೊಂಡ ಬೇತಾಳ ಮತ್ತೊಂದು ಪ್ರಶ್ನೆ ಎಸೆಯಿತು. 'ವಿಧಾನಸಭೆಯ ಮಾಜಿ, ಹಾಲಿ ಅಧ್ಯಕ್ಷರ ನಡುವಣ ಸಂಬಂಧವು ಅರಿಸಮಾಸವೇ?'

'ಮಹಿಳೆಯರ ಗೌರವಕ್ಕೆ ಧಕ್ಕೆ ತರುವಂತೆ ಮಾಜಿಗಳು ಹಾಸ್ಯ ಮಾಡಿದರೆ ಹಾಲಿಗಳು ನಕ್ಕು ತಲೆಯಾಡಿಸುವರು, ಅವರಿಬ್ಬರ ನಡುವೆ ಇದೀಗ ಸುಸ್ವರಸಂಧಿಯ ಮಿತ್ರಸಮಾಸವುಂಟು'.

ಬೇತಾಳ ಕೊನೇದಾಗಿ ಕೇಳಿತು, 'ದೇಶದಲ್ಲೀಗ ಕೊರೊನಾದ ರೂಪಾಂತರ ತಳಿಗಳಿಗಿಂತ ಅಪಾಯಕಾರಿಯಾಗಿ ಹಬ್ಬುತ್ತಿರುವ, ಕೈಕೈಹಿಡಿದು ಸಾಗುತ್ತಿರುವ ತ್ರಿವಳಿಗಳು ಯಾರು?'

'ವಾಟ್ಸ್‌ಆ್ಯಪ್ ವಿಶ್ವವಿದ್ಯಾಲಯಗಳು, ಸುಳ್ಳುಸುದ್ದಿಗಳು ಮತ್ತು ನಾಲಿಗೆವೀರರ ಸಂತತಿ- ಇವೇ ಆ ತ್ರಿವಳಿಗಳು. ಇವೀಗ ಎಲ್ಲರ ಬೆಂಬತ್ತಿದ ನವಬೇತಾಳಗಳಾಗಿವೆ...' ಎನ್ನುತ್ತಿದ್ದಂತೆ 'ಅಯ್ಯೋ... ಇದ್ಯಾವುದೋ ನವಬೇತಾಳ' ಎಂದು ಬೆದರಿದ ಮುದಿಬೇತಾಳ ಬೆಕ್ಕಣ್ಣನ ಬೆನ್ನಿನಿಂದಿಳಿದು ಓಡಿಹೋಯಿತು!

ಸಂಗತ

ಬದಲಾಗಲಿ ಬಾಳೆಲೆಯಲ್ಲಿನ ಬಗೆಬಗೆ

ಅತಿಥಿಗಳ ಆರೋಗ್ಯದ ಕಾಳಜಿ ಆತಿಥೇಯರದ್ದು ಕೂಡ. ಉಪಾಹಾರ, ಊಟೋಪಚಾರದಲ್ಲಿ ಪ್ರಜ್ಞಾಪೂರ್ವಕವಾಗಿ ಆಗಬೇಕಿದೆ ಬದಲಾವಣೆ

• ಡಾ. ಮುರಳೀಧರ ಕಿರಣಕೆರೆ

ಅದು, ಸಹಕಾರ ಸಂಘವೊಂದರ ವಾರ್ಷಿಕ ಸರ್ವಸದಸ್ಯರ ಸಭೆ. ಸಭೆ ಮುಕ್ತಾಯಗೊಂಡ ನಂತರ ಉಪಾಹಾರದ ವ್ಯವಸ್ಥೆಯಾಗಿತ್ತು. ಕಾಫಿ ಕೌಂಟರ್ ಬಳಿ ಕಾದು ನಿಂತಿದ್ದ ಆ ಪರಿಚಿತ ಹಿರಿಯರನ್ನು 'ತಿಂಡಿ ಆಯ್ತಾ?' ಎಂದು ಮಾಮೂಲಾಗಿ ವಿಚಾರಿಸಿದ್ದೇ ತಡ ಅಡ್ಡಡ್ಡ ತಲೆಯಾಡಿಸಿದರು. 'ಈ ತಿಂಡೀನ ಹೇಗೆ ತಿನ್ಲಿ? ಜಿಲೇಬಿ ಜೊತೆಗೆ ಗೋಬಿ ಮಂಚೂರಿ. ನಂಗೆ ಶುಗರ್ ಇದೆ, ಸ್ವೀಟ್ ಆಗಲ್ಲ. ಜೊತೆಗೆ ಕೊಲೆಸ್ಟ್ರಾಲ್, ಕರಿದ ತಿಂಡೀನೂ ಮುಟ್ಟಲ್ಲ. ಹೊಟ್ಟೆ ಹಸೀತಿದೆ ಕಾಫಿನಾದ್ರೂ ಕುಡ್ದು ಹೋಗಣ ಅಂದ್ರೆ ಶುಗರ್‌ಲೆಸ್ ಇಲ್ವಂತೆ. ಈಗ ಮಾಡಿಕೊಡ್ತೀವಿ ಅಂದಿದ್ದಕ್ಕೆ ಕಾಯ್ತಾ ಇದೀನಿ' ಎಂದು ತುಂಬಾ ಬೇಸರದಲ್ಲಿ ಅವರು ಹೇಳಿದಾಗ ನನ್ನ ಮನಸ್ಸಿಗೂ ಪಿಚ್ಚೆನಿಸಿತ್ತು!

ಹೌದು, ಅಲ್ಲಿ ಸೇರಿದವರಲ್ಲಿ ಹೆಚ್ಚಿನವರು ಹಿರಿಯ ನಾಗರಿಕರು. ಅವರಲ್ಲಿ ಮಧುಮೇಹ ಇದ್ದವರ ಉಪಾಹಾರದ ಕತೆ ಏನು? ಹಾಗಂತ ಹೆಚ್ಚು ಹೊತ್ತು ಹಸಿದಿರಲೂ ಕಷ್ಟ. ಆಯೋಜಕರು ಇದರ ಬಗ್ಗೆಯೂ ಯೋಚಿಸಿ ಎಲ್ಲರಿಗೂ ಒಗ್ಗುವ ತಿಂಡಿಯ ವ್ಯವಸ್ಥೆ ಮಾಡಬೇಕಿತ್ತು. ಇದು ಅವರ ಕರ್ತವ್ಯ ಕೂಡ ಎಂದು ಆ ಕ್ಷಣಕ್ಕೆ ಬಲವಾಗಿ ಅನಿಸಿತ್ತು.

ಆ ಹಿರಿಯರೇನೋ ಆಹಾರದಲ್ಲಿ ಶಿಸ್ತನ್ನು ರೂಢಿಸಿಕೊಂಡವರು. ಸಿಹಿ, ಕರಿದದ್ದು ದೇಹಕ್ಕೆ ಆಗಿಬರದೆಂದು ದೂರವಿದ್ದಾರೆ. ಆದರೆ ಮಧುಮೇಹಿಗಳಲ್ಲಿ ಕೆಲವರು ತಮ್ಮ ತಮ್ಮ ಮನೆಯಲ್ಲಿ ಕಟ್ಟುನಿಟ್ಟಾಗಿ ಆಹಾರದ ಪಥ್ಯ ಮಾಡುವವರಾದರೂ ಹೊರ ಹೋದೊಡನೆ ತಮ್ಮ ಸಮಸ್ಯೆಯನ್ನು ಮರೆಯುತ್ತಾರೆ! ಎಚ್ಚರಿಸಲು, ನಿರ್ಬಂಧ ಹೇರಲು ಕುಟುಂಬದವರೂ ಹತ್ತಿರವಿಲ್ಲದಿದ್ದಾಗ ಬಾಯಿ ಚಪಲದ ಕೈ ಮೇಲಾಗುತ್ತದೆ. ಅದರಲ್ಲೂ ಆರೋಗ್ಯಕರ ಆಹಾರದ ವ್ಯವಸ್ಥೆಯೇ ಇಲ್ಲದಾಗ ಸಿಕ್ಕಿದ್ದನ್ನೆಲ್ಲಾ ತಿಂದು ಸ್ವಾಸ್ಥ್ಯ ಕೆಡಿಸಿಕೊಳ್ಳುವುದಂತೂ ನಿಶ್ಚಿತ.

ಹಿಂದೆಲ್ಲಾ ಭೋಜನದಲ್ಲಿ ಸ್ವೀಟ್ ಬಂದ ಸಂದರ್ಭದಲ್ಲಿ 'ಬೇಡ ಬೇಡ'ವೆಂದು ಕೈ ಅಡ್ಡ ಹಿಡಿಯುವಾಗ ಇಲ್ಲಾ 'ಒಂದು ಸಣ್ಣ ಪೀಸ್ ಸಾಕು' ಎನ್ನುವಾಗ 'ಓ! ನಿಮ್ಗೆ ಶುಗರ್ರಾ' ಎಂದು ಪಕ್ಕದವರು ಉದ್ಗರಿಸಿದರೆ ಒಂಥರಾ ಮುಜುಗರ. ಕಾಫಿಗೆ ಸಕ್ಕರೆ ಬೇಡವೆಂದರೂ ಇಂತಹದ್ದೇ ಚಡಪಡಿಸುವ ಪ್ರಶ್ನೆ. ತಮಗ್ಯಾಕೆ ಇಂಥ ಸ್ಥಿತಿ ಬಂದಿತು ಎಂಬ ಕೊರಗು.

ಹೌದು, ಆಗೆಲ್ಲಾ ಡಯಾಬಿಟಿಸ್ ಸಮಸ್ಯೆ ಇಷ್ಟು ವ್ಯಾಪಕವಾಗಿರಲಿಲ್ಲ. ಆದರೆ ಈಗ? 'ನಿಮ್ಗೆ ಶುಗರ್ರಾ' ಎಂದು ಕೇಳುವುದು ಹೋಗಲಿ 'ನಿಮ್ದು ಎಷ್ಟು ಯುನಿಟ್ ಇನ್ಸುಲಿನ್?' ಎಂಬ ನೇರ ಪ್ರಶ್ನೆ, ಕ್ರಿಕೆಟ್ ಸ್ಕೋರ್ ಕೇಳುವಂತೆ!

ಕೇಳುವವರಿಗೂ ಹೇಳುವವರಿಗೂ ಅಂತಹ ಮುಜುಗರವೇನಿಲ್ಲ. ಎಲ್ಲರಿಗೂ ಬರುತ್ತಿದೆ, ಇನ್ನು ಮುಚ್ಚಿಡುವುದು ಏನು ಎಂಬ ಮನೋಭಾವ. ಹಾಗಾಗಿ 'ನಂದು ದಿನಕ್ಕೆ ನಲವತ್ತು ಯುನಿಟ್, ಐವತ್ತು ಯುನಿಟ್' ಅಂತೆಲ್ಲಾ ಹೆಮ್ಮೆಯಿಂದಲೇ ಹೇಳಿಕೊಳ್ಳುವವರ ಸಂಖ್ಯೆ ಹೆಚ್ಚುತ್ತಿದೆ!

ಹೌದು, ಊಟದ ಮನೆಯಲ್ಲಿ ಬಡಿಸುವ ಕ್ರಮವೂ ಈಗ ಹದ ತಪ್ಪಿದೆ. ಬಗೆ ಬಗೆಯ ಪಲ್ಯಗಳಿಗೆ ಸ್ಥಾನವಿಲ್ಲ. ಒಂದೆರಡು ವಿಧದ ಪಲ್ಯಗಳನ್ನು ಎಲೆಯ ತುದಿಯಲ್ಲಿ ಒಂಚೂರು ಬಡಿಸಿದ ಶಾಸ್ತ್ರ ಮಾಡಿದರೆ ಮುಗಿಯಿತು. ಮತ್ತೆ ಅದರ ವಿಚಾರ ಇರಲ್ಲ. ಅದೇ ಪ್ರತಿಷ್ಠೆ ಮೆರೆಯಲು ಮಾಡುವ ಮೂರ್ನಾಲ್ಕು ಬಗೆಯ ಸ್ವೀಟ್‌ಗಳನ್ನು ಮತ್ತೆ ಮತ್ತೆ ಕೇಳುತ್ತಾ ಒತ್ತಾಯಪೂರ್ವಕವಾಗಿ ಬಡಿಸುತ್ತಾರೆ. ಹಾಗಾಗಿ ಇಂತಹ ಸಂದರ್ಭಗಳಲ್ಲಿ, ಎಲ್ಲರ ದೇಹಕ್ಕೂ ಅದರಲ್ಲೂ ಮಧುಮೇಹಿಗಳಿಗೆ ಅತಿ ಅಗತ್ಯವಾದ ಸೊಪ್ಪು, ತರಕಾರಿಗಳು ಶರೀರ ಸೇರುತ್ತಿಲ್ಲ. ಉದರದ ಬಹುಭಾಗವನ್ನು ಸಿಹಿ ಭಕ್ಷ್ಯಾನ್ನಗಳು ತುಂಬುತ್ತಿವೆ! ಇಂತಹ ಪದ್ಧತಿಯೇ ದೇಹಾರೋಗ್ಯವನ್ನು ಅಪಾಯಕ್ಕೆ ತಳ್ಳುತ್ತಿರುವುದು.

ಮದುವೆ, ಮುಂಜಿ, ಸಭೆ, ಸಮಾರಂಭಗಳ ಆಯೋಜಕರು ಈ ವಿಚಾರದಲ್ಲಿ ಯೋಚಿಸಿ ಉಪಾಹಾರ, ಊಟೋಪಚಾರದಲ್ಲಿ ಪ್ರಜ್ಞಾಪೂರ್ವಕವಾಗಿ ಬದಲಾವಣೆ ಮಾಡಿಕೊಳ್ಳಬೇಕು. ತಿಂಡಿ ತಿನಿಸುಗಳಿಗೆ ಸಕ್ಕರೆ ಕಡಿಮೆ ಬಳಸುವುದು, ಸ್ವೀಟುಗಳ ಸಂಖ್ಯೆಯನ್ನು ಕಡಿತಗೊಳಿಸುವುದು, ಕರಿದ ಪದಾರ್ಥಗಳನ್ನು ಮಿತಿಗೊಳಿಸುವುದು, ವೈವಿಧ್ಯಮಯ ತರಕಾರಿ ಸಲಾಡು, ಕೂಟು, ಪಲ್ಯಗಳನ್ನು ಹೆಚ್ಚು ತಯಾರಿಸುವುದು ಅತಿ ಅಗತ್ಯ.

ಅತಿಥಿಗಳ ಆರೋಗ್ಯದ ಕಾಳಜಿ ಆತಿಥೇಯರದ್ದು ಕೂಡ. ತಮ್ಮ ಸ್ಥಾನಮಾನವನ್ನು ವೈಭವೀಕರಿಸಲು ಇನ್ನೊಬ್ಬರ ಸ್ವಾಸ್ಥ್ಯವನ್ನು ಕೆಡಿಸುವುದು ಸರಿಯಲ್ಲ. ಹೌದು, ನಮ್ಮ ನಾಡು ಮಧುಮೇಹಿಗಳ ರಾಜಧಾನಿ ಎನಿಸಿಕೊಳ್ಳುತ್ತಿರುವ ಈ ಹೊತ್ತಿನಲ್ಲಿ ಬಾಳೆಲೆಯಲ್ಲಿನ ಬಗೆಗಳು ದೇಹಪ್ರಕೃತಿಗೆ ಅನುಗುಣವಾಗಿ ಬದಲಾಗಲೇಬೇಕಾದ ಅನಿವಾರ್ಯ ಇದೆ.

'ಹೇಗೂ ಇನ್ಸುಲಿನ್ ತೆಗೆದುಕೊಳ್ಳುತ್ತಿದ್ದೇನೆ. ಸ್ವೀಟ್ ತಿಂದ್ರೆ ಒಂದೆರಡು ಯುನಿಟ್ ಜಾಸ್ತಿ ತಗೊಂಡ್ರೆ ಆಯ್ತು' ಎಂಬ ಮನೋಭಾವ ಅಪಾಯಕಾರಿ. 'ಅಯ್ಯೋ ನಂಗೆ ಡಯಾಬಿಟಿಸ್ ಬಂದ್ಬಿಟ್ಟಿದೆ. ಇನ್ನು ಜೀವನಪರ್ಯಂತ ಇದರ ಜೊತೆ ಏಗ್ಬೇಕಲ್ಲ' ಎಂದು ಸದಾ ಚಿಂತೆಯಲ್ಲಿದ್ದರೂ ನಿಯಂತ್ರಣ ಖಂಡಿತಾ ಕಷ್ಟ. ಆರೋಗ್ಯಕರ ಆಹಾರ, ವಿರಾಮ, ಜೀವನಶೈಲಿಯ ಜೊತೆಗೆ ಮನಸ್ಸು ನಿರಾಳವಾಗಿದ್ದರೆ, ಸಂತಸದಿಂದಿದ್ದರೆ, ಉತ್ತಮ ಹವ್ಯಾಸಗಳಲ್ಲಿ ಮಗ್ನವಾಗಿದ್ದರೆ ಆಶ್ಚರ್ಯವೆನಿಸುವ ಮಟ್ಟದಲ್ಲಿ ಸಕ್ಕರೆಯ ಅಂಶ ಇಳಿಯುತ್ತದೆ. ಮನಸ್ಸಿನ ತಾಕತ್ತೇ ಅಂಥದ್ದು.

ವಾಚಕರ ವಾಣಿ

ಇನ್ನಾದರೂ ಚರ್ಚೆ ನಡೆಯಲಿ

ಬೆಳಗಾವಿಯಲ್ಲಿ ಇದೇ 13ರಿಂದ ವಿಧಾನಮಂಡಲ ಅಧಿವೇಶನ ಆರಂಭವಾಗಿದ್ದರೂ ಜನಸಾಮಾನ್ಯರ ಬವಣೆಗಳು, ಉತ್ತರ ಕರ್ನಾಟಕದ ಹಲವು ಜ್ವಲಂತ ಸಮಸ್ಯೆಗಳ ಕುರಿತು ಅರ್ಥಪೂರ್ಣ ಚರ್ಚೆಗಳೇ ನಡೆದಿಲ್ಲ. ಸಮಸ್ಯೆಯ ಎಲ್ಲ ಆಯಾಮಗಳ ಕುರಿತು ವಿವರವಾಗಿ ಚರ್ಚಿಸಲು ಸದನ ಅತ್ಯುತ್ತಮ ವೇದಿಕೆ. ಇದನ್ನು ಮರೆತು ಆಡಳಿತ ಮತ್ತು ವಿರೋಧ ಪಕ್ಷಗಳ ಕಡೆಯವರು ಬರೀ ಬೊಬ್ಬೆ, ಗದ್ದಲ, ಚೀರಾಟಗಳಲ್ಲಿ ಮೈಮರೆತರೆ ನಮ್ಮ ತೆರಿಗೆ ಹಣಕ್ಕೆ ನ್ಯಾಯ ದೊರೆಯುವುದಾದರೂ ಹೇಗೆ? ಅಧಿವೇಶನದ ಇನ್ನುಳಿದ ದಿನಗಳನ್ನಾದರೂ ಸದುಪಯೋಗ ಪಡಿಸಿಕೊಳ್ಳಬೇಕು. ಎರಡೂ ಕಡೆಯವರು ತಮ್ಮ ಪ್ರತಿಷ್ಠೆಯನ್ನು ಒತ್ತಟ್ಟಿಗಿರಿಸಿ, ಹಲವು ಸಮಸ್ಯೆಗಳಿಂದ ಬಳಲಿರುವ ಪ್ರಜೆಗಳಿಗೆ ಪರಿಹಾರ ಒದಗಿಸಬಲ್ಲರೇ?

ಕೆ.ಶ್ರೀನಿವಾಸ ರಾವ್, ಹರಪನಹಳ್ಳಿ

ಮಹತ್ವದ ಬದಲಾವಣೆ ಸಾಧ್ಯ

ಮಹಿಳೆಯರ ಮದುವೆಯ ಕನಿಷ್ಠ ವಯಸ್ಸನ್ನು 18 ವರ್ಷದಿಂದ 21 ವರ್ಷಕ್ಕೆ ಏರಿಸುವುದಕ್ಕಾಗಿ ಕಾಯ್ದೆ ರೂಪಿಸಲು ಕೇಂದ್ರ ಸರ್ಕಾರ ನಿರ್ಧರಿಸಿರುವುದು ಸ್ವಾಗತಾರ್ಹ. ಇದು ಸಾಧ್ಯವಾದರೆ ನಿಜಕ್ಕೂ ಇದೊಂದು ಮಹತ್ವದ ಬದಲಾವಣೆ. ಹೆಣ್ಣು ಮಕ್ಕಳು ಸಂತಸಪಡುವ ವಿಷಯ. ಇದರಿಂದ ಮಹಿಳೆಯರ ವಿದ್ಯಾಭ್ಯಾಸಕ್ಕೆ ಅನುಕೂಲ ಆಗುವುದು. ಶಿಶು ಮತ್ತು ಬಾಣಂತಿಯರ ಮರಣ ಪ್ರಮಾಣ ತಗ್ಗಿಸಲು ನೆರವಾಗುವುದು. ಮತ್ತೊಂದು ವಿಷಯದಲ್ಲಿ ಸಮಾನತೆ ಸಾಧಿಸಲು ಅನುವಾಗುವುದು.

ಆದರೆ, ಇದರ ಅಗತ್ಯ ಮತ್ತು ಪಾಲನೆ ಕುರಿತು ಗ್ರಾಮೀಣ ಭಾಗದ ಜನರ ಮನವೊಲಿಸುವುದು ಸವಾಲಿನ ಕೆಲಸ. 18 ತುಂಬಿದರೆ ಸಾಕು ಮಗಳಿಗೆ ಮದುವೆ ಮಾಡಿ ಜವಾಬ್ದಾರಿಯಿಂದ ಮುಕ್ತರಾಗೋಣ ಎಂದು ಕೆಲವು ಪೋಷಕರು ತುದಿಗಾಲಲ್ಲಿ ನಿಂತಿರುತ್ತಾರೆ. ಅದಕ್ಕೆ ಅವರದೇ ಆದ ಕಾರಣ–ತರ್ಕಗಳು ಇರುತ್ತವೆ. ಹಾಗಾಗಿ, ಅರಿವು ಮೂಡಿಸುವ ಕೆಲಸ ದೊಡ್ಡ ಮಟ್ಟದಲ್ಲಿ ನಡೆಯಬೇಕಾಗುತ್ತದೆ.

ಶೈಲಾ ನಾಗರಾಜ ಮೇಟಿ, ಬೇಗೂರು, ಕಲಘಟಗಿ

ವೋಟ್ ಬ್ಯಾಂಕ್ ರಾಜಕಾರಣ ಸಾಕುಮಾಡಿ

ಬೆಳಗಾವಿಯಲ್ಲಿ ಮತ್ತೆ ಎಂಇಎಸ್ ಕಿತಾಪತಿ ಪ್ರಾರಂಭವಾಗಿರುವುದಕ್ಕೆ ಅಲ್ಲಿನ ಕೆಲವು ಕನ್ನಡಿಗ ರಾಜಕಾರಣಿಗಳ ಹೊಂದಾಣಿಕೆ ರಾಜಕಾರಣವೇ ಕಾರಣ. ಮರಾಠಾ ವೋಟ್ ಬ್ಯಾಂಕ್ ರಾಜಕಾರಣಕ್ಕೆ ಹೆದರಿ ಯಾವೊಬ್ಬ ಸ್ಥಳೀಯ ಜನಪ್ರತಿನಿಧಿಯೂ ಅವರ ವಿರುದ್ಧ ಗಟ್ಟಿ ಧ್ವನಿ ಎತ್ತುತ್ತಿಲ್ಲ. ಸಭೆ, ಸಮಾರಂಭಗಳಲ್ಲಿ ಭಾಷಣದ ಕೊನೆಯಲ್ಲಿ ಅಲ್ಲಿನ ಸ್ಥಳೀಯ ನಾಯಕರು ಜೈ ಕರ್ನಾಟಕದ ಜೊತೆಗೆ ಜೈ ಮಹಾರಾಷ್ಟ್ರ ಅನ್ನುವ ಪರಿಪಾಟವನ್ನು ಬೆಳೆಸಿಕೊಂಡಿದ್ದರಿಂದಲೇ ಎಂಇಎಸ್ ಮತ್ತೆ ಬಾಲ ಬಿಚ್ಚುತ್ತಿದೆ. ಹೀಗಾದರೆ ಬೆಳಗಾವಿ ಕನ್ನಡಮಯವಾಗುವುದಾದರೂ ಹೇಗೆ? ಬೆಳಗಾವಿಯಲ್ಲಿ ಕನ್ನಡದ ಧ್ವನಿ ಗಟ್ಟಿ ಆಗಬೇಕಾದರೆ ಅಲ್ಲಿನ ರಾಜಕಾರಣಿಗಳು ಎಂಇಎಸ್ ಜೊತೆಗಿನ ಹೊಂದಾಣಿಕೆ ರಾಜಕಾರಣವನ್ನು ಬಿಡಬೇಕು.

ವಿ.ಜಿ.ಇನಾಮದಾರ, ಸಾರವಾಡ, ವಿಜಯಪುರ

'ವಿಜಯದ ಶಿಲ್ಪಿ'ಯ ನೆನೆಯಬೇಕಾದವರು ಯಾರು?

1971ರ 'ಬಾಂಗ್ಲಾ ಯುದ್ಧ' ವಿಜಯದ 50ನೇ ವಾರ್ಷಿಕ ಆಚರಣೆಯ ಸಂದರ್ಭದಲ್ಲಿ, ಆ ವಿಜಯದ ಶಿಲ್ಪಿ ಎನಿಸಿದ್ದ ಆಗಿನ ಪ್ರಧಾನಮಂತ್ರಿ ಇಂದಿರಾ ಗಾಂಧಿಯವರನ್ನು ಈಗಿನ ಪ್ರಧಾನಮಂತ್ರಿ ನರೇಂದ್ರ ಮೋದಿಯವರು ನೆನೆಯದಿರುವುದನ್ನು ಕಾಂಗ್ರೆಸ್ ಪಕ್ಷ ಖಂಡಿಸಿರುವ ಸುದ್ದಿಯನ್ನು ಓದಿ ಅಳಬೇಕೋ ನಗಬೇಕೋ ಗೊತ್ತಾಗುತ್ತಿಲ್ಲ. ಏಕೆಂದರೆ ತಮ್ಮ ಶತ್ರುಪಾಳಯಕ್ಕೆ ಒಂದು ಸಣ್ಣ ರಾಜಕೀಯ ಅನುಕೂಲವೂ ಆಗದಂತೆ ಎಚ್ಚರಿಕೆ ವಹಿಸಿ ತಮ್ಮ ರಾಜಕಾರಣವನ್ನು ಅತಿದಕ್ಷ ಚುನಾವಣಾ ರಾಜಕಾರಣವನ್ನಾಗಿ ಪರಿವರ್ತಿಸಿರುವ ಮೋದಿಯವರಿಂದ ಇಂತಹ ಉದಾರತೆಯನ್ನು ಇನ್ನೂ ನಿರೀಕ್ಷಿಸುತ್ತಿರುವುದು ಕಾಂಗ್ರೆಸ್ ಬಗ್ಗೆ ಸಹಾನುಭೂತಿಗಿಂತ ಹೆಚ್ಚಾಗಿ ಮರುಕವನ್ನು ಹುಟ್ಟಿಸುವಂತಿದೆ.

ಈ ಯುದ್ಧದ ಸಂಬಂಧವಾಗಿ ಇತ್ತೀಚೆಗೆ ಪ್ರಕಟವಾಗಿರುವ ನೆನಪುಗಳ ಪುಸ್ತಕಗಳಲ್ಲಿ ಈ ಯುದ್ಧದಲ್ಲಿ ಭಾರತದ ಅಪೂರ್ವ ಗೆಲುವು ಸಾಧ್ಯವಾದದ್ದಕ್ಕೆ ಸೇನಾ ಶಕ್ತಿಯ ಜೊತೆಗೆ ರಾಯಭಾರ ಚಾಕಚಕ್ಯತೆ ಮತ್ತು ರಾಜಕೀಯ ಪ್ರಬುದ್ಧತೆಗಳು ಮುಖ್ಯ ಕಾರಣಗಳಾಗಿದ್ದು, ಈ ಮೂರೂ ಕಾರಣಗಳ ಸಂಗಮ ಬಿಂದು ಪ್ರಧಾನಿ ಇಂದಿರಾ ಅವರೇ ಆಗಿದ್ದರು ಎಂದು ಅಭಿಪ್ರಾಯಪಡಲಾಗಿದೆ. ಹಾಗಾಗಿಯೇ ಅಂದಿನ ವಿರೋಧ ಪಕ್ಷದ ಮುಖಂಡರಾದ ಭಾರತೀಯ ಜನಸಂಘದ (ಇಂದಿನ ಬಿಜೆಪಿಯ ಪೂರ್ವ ಆವೃತ್ತಿ) ಅಟಲ್ ಬಿಹಾರಿ ವಾಜಪೇಯಿಯವರು ಯಾವ ರಾಜಕೀಯ ಪರಿಗಣನೆಗಳನ್ನೂ ಲೆಕ್ಕಿಸದೆ ಇಂದಿರಾ ಅವರನ್ನು ದುರ್ಗೆಯ ರೂಪವೆಂದು ಶ್ಲಾಘಿಸಿದ್ದರು. ವಸ್ತುಸ್ಥಿತಿ ಹೀಗಿರುವಾಗ, ಕಾಂಗ್ರೆಸ್ ಪಕ್ಷ ತನ್ನ ಅನುಪಮ ರಾಜಕೀಯ ಸಾಧನೆ ಎಂದು ಹೆಮ್ಮೆಯಿಂದ ಹೇಳಿಕೊಳ್ಳಬಹುದಾಗಿದ್ದ 1971ರ ಈ ವಿಜಯದ ನೆನಪೇ ಇಲ್ಲದಂತೆ, ಆ ಸಂಬಂಧದ ಒಂದು ಸಣ್ಣ ಆಚರಣೆಯನ್ನಾದರೂ ಆಯೋಜಿಸಿ ಜನರಿಗೆ ತನ್ನ ಭವ್ಯ ಚರಿತ್ರೆಯನ್ನು ಮನದಟ್ಟು ಮಾಡುವ ಪ್ರಯತ್ನವನ್ನೇ ಮಾಡದೆ ಮೋದಿಯವರನ್ನು ಟೀಕಿಸಿರುವುದರ ಬಗ್ಗೆ ಏನು ಹೇಳುವುದು? ಚರಿತ್ರೆ ಗೊತ್ತಿಲ್ಲದವರಿಗೆ ಭವಿಷ್ಯವೂ ಇರಲಾರದೆಂದು ಅದಕ್ಕೇ ಬಲ್ಲವರು ಹೇಳುವುದು.

ಸುಮಾರು ಇಪ್ಪತ್ತು ವರ್ಷಗಳ ಹಿಂದಿನ ಪಾಕಿಸ್ತಾನದ ಒಂದು ಸಣ್ಣ ದುಸ್ಸಾಹಸವೆನಿಸಿದ್ದ ಕಾರ್ಗಿಲ್ ಯುದ್ಧದ ವಿಜಯವನ್ನು ಈಗಲೂ ಪ್ರತಿವರ್ಷ 'ವಿಜಯ ದಿವಸ'ವೆಂದು ಆಚರಿಸುವ ಬಿಜೆಪಿಯ ರಾಜಕೀಯ ಮಾದರಿಯನ್ನಾದರೂ ನೋಡಿ ಕಾಂಗ್ರೆಸ್ ಒಂದಿಷ್ಟು ಪಾಠ ಕಲಿಯಬಹುದಿತ್ತು. ಆದರೆ ಇದಕ್ಕೆಲ್ಲ ಬೇಕಾದ ರಾಜಕೀಯ ಮುನ್ನೋಟವನ್ನೇ ಕಾಂಗ್ರೆಸ್ ಕಳೆದುಕೊಂಡಂತಿದೆ. ಪಕ್ಷದ ನಾಯಕ ರಾಹುಲ್ ಗಾಂಧಿಯವರು ಹಿಂದೂ ಮತ್ತು ಹಿಂದುತ್ವದ ನಡುವಣ ವ್ಯತ್ಯಾಸಗಳ ಬಗ್ಗೆ ತಮ್ಮ ಅರಿವಿಗೆ ದಕ್ಕಿದಷ್ಟು ಮಟ್ಟಿಗೆ ಮಾತನಾಡಿದ್ದಾರೆ. ಆದರೆ ಈ ಬಗ್ಗೆ ಪ್ರತಿಕ್ರಿಯಿಸಿರುವ ಸಂಘ ಪರಿವಾರದ ಕೆಲ ಮುಖಂಡರು ರಾಹುಲ್ ಅವರ ತಂದೆಯ ಮೂಲಧರ್ಮವನ್ನೇ ಪ್ರಶ್ನಿಸಿ, ಇಂಥವರಿಗೆ ಹಿಂದೂ ಧರ್ಮದ ಬಗ್ಗೆ ಮಾತನಾಡುವ ಹಕ್ಕಿಲ್ಲ ಎಂದಿದ್ದಾರೆ. ಈ ಹಿನ್ನೆಲೆಯಲ್ಲಿ, ಹತ್ತಾರು ತಲೆಮಾರುಗಳ ಹಿಂದೆ ಅನ್ಯಮತಗಳಿಗೆ ಮತಾಂತರವಾದವರನ್ನು ತಮ್ಮ 'ಘರ್‌ವಾಪಸಿ' ಮೂಲಕ ಹಿಂದೂ ಧರ್ಮಕ್ಕೆ ಮರಳಿ ಕರೆತರಬಯಸಿರುವವರನ್ನು ಇವರು ಹೇಗೆ ನೋಡಬಹುದೆಂದು ಸುಲಭವಾಗಿ ಊಹಿಸಬಹುದಾಗಿದೆ.

ಡಿ.ಎಸ್.ನಾಗಭೂಷಣ, ಶಿವಮೊಗ್ಗ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಜೇಮ್ಸ್ ವೆಬ್ ದೂರದರ್ಶಕ ಬಾಹ್ಯಾಕಾಶಕ್ಕೆ ಭೂತಕನ್ನಡಿ



ವಿಶ್ವದ ಭೂತಕಾಲಕ್ಕೆ ದೂರದರ್ಶಕದ ಪಯಣ



ವಿಶ್ವದ ಈವರೆಗಿನ ಅತ್ಯಂತ ದೊಡ್ಡ ದೂರದರ್ಶಕ, 'ಜೇಮ್ಸ್ ವೆಬ್' ಅನ್ನು ಬಾಹ್ಯಾಕಾಶಕ್ಕೆ ಕಳುಹಿಸಲು ಅಮೆರಿಕದ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ನಾಸಾ) ಅಂತಿಮ ಹಂತದ ಸಿದ್ಧತೆ ನಡೆಸಿದೆ. ಎಲ್ಲವೂ ಅಂದುಕೊಂಡಂತೆಯೇ ನಡೆದರೆ ಇದೇ 22ರಂದು ಈ ದೂರದರ್ಶಕವನ್ನು ಹೊತ್ತ ಏರಿಯನ್-5 ನೌಕೆಯು ಬಾಹ್ಯಾಕಾಶದತ್ತ ಪ್ರಯಾಣ ಅರಂಭಿಸಲಿದೆ.

'ಜೇಮ್ಸ್ ವೆಬ್ ದೂರದರ್ಶಕವು ಕಕ್ಷೆ ಸೇರಿ, ತನ್ನ ಫಲಕಗಳನ್ನು ಅರಳಿಸಿ, ನಮ್ಮ ಸೌರಮಂಡಲದಾಚೆಗೆ ತನ್ನ ದರ್ಪಣಗಳನ್ನು ತೆರೆದುಕೊಂಡು ನಿಲ್ಲಲಿದೆ. ನಾವು ಬಾಹ್ಯಾಕಾಶವನ್ನು ನೋಡುವ ಬಗೆಯನ್ನೇ ಬದಲಿಸುವಂತಹ ವಿಚಾರಗಳನ್ನು ಈ ದೂರದರ್ಶಕವು ಭೂಮಿಗೆ ಕಳುಹಿಸಿ ಕೊಡಲಿದೆ. ಜಗತ್ತು ಹೇಗಿತ್ತು ಎಂಬುದನ್ನು ದೂರದರ್ಶಕಗಳು ತೋರಿಸುತ್ತವೆಯೇ ಹೊರತು, ಈಗ ಹೇಗಿದೆ ಎಂಬುದನ್ನಲ್ಲ. ಹೀಗಾಗಿ ನಮ್ಮ ವಿಶ್ವದ ಇತಿಹಾಸವನ್ನು ಈ ಹಿಂದೆ ನೋಡಿರದೇ ಇರುವ ರೀತಿಯಲ್ಲಿ ನೋಡಲು ಈ ದೂರದರ್ಶಕವು ಅನುವು ಮಾಡಿಕೊಡುತ್ತದೆ. ನಾವು ಈವರೆಗೆ ನೋಡಿರುವ ಗೆಲಾಕ್ಸಿಗಳಿಗಿಂತಲೂ ಬಹುದೂರವಿರುವ ಗೆಲಾಕ್ಸಿಗಳನ್ನು ಈ ದೂರದರ್ಶಕವು ನಮಗೆ ತೋರಿಸುತ್ತದೆ' ಎಂದು ನಾಸಾ ವಿವರಿಸಿದೆ.

ಈಗಿನ ಅತ್ಯಂತ ದೊಡ್ಡ ದೂರದರ್ಶಕ ಎನಿಸಿರುವ ಹಬಲ್ ದೂರದರ್ಶಕಕ್ಕಿಂತ ಹಲವು ಪಟ್ಟು ದೂರದಲ್ಲಿನ ಅರ್ಥಾತ್ ಹಿಂದಿನ ಬಾಹ್ಯಾಕಾಶ ವಿದ್ಯಮಾನಗಳನ್ನು ಅಥವಾ ವಿಶ್ವದ ಭೂತಕಾಲದ ವಿದ್ಯಮಾನಗಳನ್ನು ಜೇಮ್ಸ್ ವೆಬ್ ನಮ್ಮ ಎದುರು ತೆರೆದಿಡಲಿದೆ. ವಿಶ್ವವು ಹೇಗೆ ಉಗಮವಾಯಿತು ಎಂಬುದನ್ನು ಅರಿತುಕೊಳ್ಳುವಲ್ಲಿ, ಮನುಷ್ಯನನ್ನು ಮತ್ತಷ್ಟು ಮುಂದಕ್ಕೆ (ಇತಿಹಾಸದಲ್ಲಿ ಹಿಂದಕ್ಕೆ) ಕರೆದುಕೊಂಡು ಹೋಗುವ ಸಾಮರ್ಥ್ಯ ಈ ಜೇಮ್ಸ್ ವೆಬ್ ದೂರದರ್ಶಕಕ್ಕೆ ಇದೆ.

ಭೂಮಿಯ ನೆರಳಿನಲ್ಲಿ ಸೂರ್ಯನ ಸುತ್ತುವ ವೆಬ್

ಜೇಮ್ಸ್ ವೆಬ್ ದೂರದರ್ಶಕವನ್ನು ಭೂಮಿಯ ಕಕ್ಷೆಯಾಚೆಗಿನ 'ಲ್ಯಾಂಗ್ರೇಜ್ ಪಾಯಿಂಟ್'ನಲ್ಲಿ ಇರಿಸಲಾಗುತ್ತದೆ. ಜೇಮ್ಸ್ ವೆಬ್ ಸದಾ ಭೂಮಿಯ ನೆರಳಿನಲ್ಲಿ ಇರುತ್ತದೆ. ಈ ದೂರದರ್ಶಕದ ಚಲನೆ ವೇಳೆ ಬೇಕಾಗುವ ಶಕ್ತಿಯನ್ನು ಕಡಿಮೆ ಮಾಡಲು ಲ್ಯಾಂಗ್ರೇಜ್ ಪಾಯಿಂಟ್‌ನಲ್ಲಿ ಇರಿಸಲಾಗುತ್ತದೆ. ಸೂರ್ಯನನ್ನು ಭೂಮಿ ಸುತ್ತುತ್ತದೆ. ಹೀಗೆ ಸುತ್ತುವಾಗ ಭೂಮಿಯ ಹಿಂದೆ, ಸುರಕ್ಷಿತ ಅಂತರದಲ್ಲಿ ಈ ದೂರದರ್ಶಕವೂ ಸೂರ್ಯನನ್ನು ಸುತ್ತುವಂತೆ ಸಂಯೋಜನೆ ಮಾಡಲಾಗಿರುತ್ತದೆ. ಈ ಸಂಯೋಜನೆಯನ್ನೇ ಲ್ಯಾಂಗ್ರೇಜ್ ಪಾಯಿಂಟ್ ಎನ್ನಲಾಗುತ್ತದೆ. ಈ ಸಂಯೋಜನೆಯಲ್ಲಿ ಸೂರ್ಯ ಮತ್ತು ದೂರದರ್ಶಕದ ನಡುವೆ ಭೂಮಿ ಇರುತ್ತದೆ. ಸೂರ್ಯ, ಭೂಮಿ ಮತ್ತು ದೂರದರ್ಶಕವು ಒಂದೇ ಸರಳರೇಖೆಯಲ್ಲಿ ಇರುತ್ತವೆ. ಈ ಸಂಯೋಜನೆಯಲ್ಲಿ ಭೂಮಿಯ ನೆರಳಿನ ಪ್ರದೇಶದಲ್ಲಿ ಸೂರ್ಯನ ಗುರುತ್ವ ಬಲ ಸ್ವಲ್ಪ ಕಡಿಮೆ ಇರುತ್ತದೆ. ಹೀಗಾಗಿ ಸೂರ್ಯನ ಗುರುತ್ವ ಬಲವನ್ನು ತಪ್ಪಿಸಿಕೊಂಡು, ಸೂರ್ಯನನ್ನು ಸುತ್ತಲು ಈ ದೂರದರ್ಶಕವು ಹೆಚ್ಚಿನ ಶಕ್ತಿ ವ್ಯಯ ಮಾಡಬೇಕಾಗುವುದಿಲ್ಲ. ಈ ಕಾರಣದಿಂದ ಲ್ಯಾಂಗ್ರೇಜ್ ಪಾಯಿಂಟ್ ಅನ್ನು ಆಯ್ಕೆ ಮಾಡಿಕೊಳ್ಳಲಾಗಿದೆ.

- ವೆಬ್ ದೂರದರ್ಶಕವನ್ನು ಸೂರ್ಯನಿಗೆ ಬೆನ್ನುಮಾಡಿ ಇರುವಂತೆ ಸಂಯೋಜನೆ ಮಾಡಲಾಗುತ್ತದೆ. ನಮ್ಮ ಸೌರಮಂಡಲದ ಆಚೆಗಿನ ವಿಶ್ವವನ್ನು ವೀಕ್ಷಿಸಬೇಕಿರುವ ಕಾರಣ, ದೂರದರ್ಶಕವನ್ನು ಸೂರ್ಯನಿಗೆ ಬೆನ್ನುಮಾಡಿ ಇರಿಸಲಾಗುತ್ತದೆ. ದೂರದರ್ಶಕದ ದರ್ಪಣಗಳು ನಮ್ಮ ಸೌರಮಂಡಲದಾಚೆ ಮುಖಮಾಡಿರುತ್ತವೆ.



- ಈ ದೂರದರ್ಶಕವು ಇನ್ಫ್ರಾ ರೆಡ್ ಕಿರಣಗಳನ್ನು ಗ್ರಹಿಸಿ, ಪರಿವೀಕ್ಷಣೆ ಕೆಲಸ ಮಾಡುತ್ತದೆ. ಸೂರ್ಯನ ಬೆಳಕು ದೂರದರ್ಶಕದ ಬೆನ್ನಿನ ಮೇಲೆ ನೇರವಾಗಿ ಬಿದ್ದರೆ, ಅತ್ಯಂತ ಸೂಕ್ಷ್ಮ ಇನ್ಫ್ರಾ ರೆಡ್ ಕಿರಣಗಳನ್ನು ಗ್ರಹಿಸುವುದು ಕಷ್ಟವಾಗುತ್ತದೆ. ದೂರದರ್ಶಕವು ಸದಾ ಭೂಮಿಯ ನೆರಳಿನಲ್ಲಿ ಇರುವಂತೆ ಸಂಯೋಜನೆ ಮಾಡಿರುವುದಕ್ಕೆ ಸೂರ್ಯನ ಬೆಳಕು ನೇರವಾಗಿ ದೂರದರ್ಶಕದ ಮೇಲೆ ಬೀಳುವುದನ್ನು ತಪ್ಪಿಸುವ ಉದ್ದೇಶವೂ ಇದೆ.

ಅತ್ಯಾಧುನಿಕ ಉಪಕರಣಗಳ ಸಂಗ್ರಹ

ಈವರೆಗೆ ತಯಾರಿಸದ ಅತ್ಯಾಧುನಿಕ ದೂರದರ್ಶಕವನ್ನು ವಿನ್ಯಾಸಗೊಳಿಸುವುದು ವಿಜ್ಞಾನಿಗಳ ಉದ್ದೇಶವಾಗಿತ್ತು. ಅತ್ಯಂತ ತಂಪಾದ ವಾತಾವರಣದಲ್ಲಿ ಕೆಲಸ ಮಾಡಬಲ್ಲ, ಹಗುರವಾದ ರಚನೆ ಇದಾಗಿದ್ದು, ಅತಿಸೂಕ್ಷ್ಮ ಇನ್ಫ್ರಾ ರೆಡ್ ಬೆಳಕನ್ನು ಪತ್ತೆಹಚ್ಚುವ ಉಪಕರಣಗಳನ್ನು ಅಳವಡಿಸಲಾಗಿದೆ. ಸನ್‌ಶೀಲ್ಡ್ ಐದು ಪದರಗಳನ್ನು ಹೊಂದಿದ್ದು, ಪ್ರತಿಯೊಂದು ಪದರವೂ ಭಿನ್ನ ಗಾತ್ರ ಹೊಂದಿವೆ. ಬಿಸಿಲು ಅಥವಾ ಬೆಳಕು ನೇರವಾಗಿ ತಲುಪುವುದನ್ನು ತಡೆಯುವುದು ಇದರ ಉದ್ದೇಶ. ದೂರದರ್ಶಕದ ಒಂದು ಬದಿ ಅತಿ ತಂಪಾಗಿದ್ದರೆ, ಮತ್ತೊಂದು ಬದಿ ಅತಿ ಬಿಸಿಯಿರುತ್ತದೆ. ಈ ಎರಡೂ ಸ್ಥಿತಿಗಳನ್ನು ನಿರ್ವಹಿಸಲು ಐದು ಪದರಗಳ ವಿನ್ಯಾಸ ಮಾಡಲಾಗಿದೆ.

ಮನುಷ್ಯನ ಕೂದಲಿನಷ್ಟು ಸೂಕ್ಷ್ಮ ಗಾತ್ರದ, ಸಾವಿರಾರು ಕಿಂಡಿಗಳಿಂದ ಕೂಡಿರುವ 'ಮೈಕ್ರೊಷಟರ್' ಎಂಬ ಉಪಕರಣವು ಏಕಕಾಲದಲ್ಲಿ ಸಾವಿರಾರು ಕಣಗಳ/ವಸ್ತುಗಳ ತರಂಗಾಂತರ ಮತ್ತು ಆವರ್ತನಗಳನ್ನು ಮಾಪನ ಮಾಡುತ್ತದೆ. 'ಕ್ರಯೊಕೂಲರ್' ಎಂಬ ಮತ್ತೊಂದು ಉಪಕರಣವು ಇನ್‌ಫ್ರಾರೆಡ್ ಬೆಳಕು ಪತ್ತೆಹಚ್ಚುವ ಸಾಧನಗಳನ್ನು ನಿರಂತರವಾಗಿ ತಂಪುಗೊಳಿಸುತ್ತದೆ.

ಸಾವಿರಾರು ಮೈಲಿ ಪಯಣ: ಉಡಾವಣೆಗೊಂಡ ಬಳಿಕ ಸಾವಿರಾರು ಮೈಲಿ ಪ್ರಯಾಣ ಮಾಡಿ, 'ಎಲ್‌2' ಎಂಬ ನಿಗದಿತ ಕಕ್ಷೆಯನ್ನು ದೂರದರ್ಶಕ ತಲುಪಬೇಕಿದೆ. ಈ ಹಾದಿಯಲ್ಲಿ ಹಲವು ಪ್ರಕ್ರಿಯೆಗಳು ಜರುಗಲು ಕೆಲವು ವಾರಗಳೇ ಬೇಕು. ವೈಜ್ಞಾನಿಕ ಉಪಕರಣಗಳ ಕಾರ್ಯಾಚರಣೆ ಆರಂಭವಾಗುವುದಕ್ಕೂ ಮುನ್ನ ಅದನ್ನು ಮೈನಸ್ 370 ಡಿಗ್ರಿ ಫ್ಯಾರನ್‌ಹೀಟ್‌ಗೆ ತಣಿಸುವುದು ಮುಖ್ಯವಾದ ಕೆಲಸ. ಮುಖ್ಯ ದರ್ಪಣವು ಬಿಚ್ಚಿಕೊಂಡು, ಅದರ 18 ಭಾಗಗಳು ಏಕ ದರ್ಪಣವಾಗಿ ಸಂಯೋಜನೆಗೊಂಡು ಕೆಲಸ ಮಾಡುವಂತೆ ಸಿದ್ಧಪಡಿಸಬೇಕು. ರಾಕೆಟ್ ಉಡಾವಣೆಯಾದ ಬಳಿಕ, ದೂರದರ್ಶಕವು ಕಾರ್ಯಾಚರಣೆ ಆರಂಭಿಸಲು ಆರು ತಿಂಗಳು ಬೇಕು.

ಅತಿದೊಡ್ಡ ದರ್ಪಣ

ಜೇಮ್ಸ್ ವೆಬ್ ದೂರದರ್ಶಕವನ್ನು ಬಿಚ್ಚಿದರೆ, ಒಂದು ಟೆನಿಸ್ ಮೈದಾನದಷ್ಟು ವಿಸ್ತಾರವಾಗಿ ಕಾಣುತ್ತದೆ. ಆದರೆ ಇದೇ ಗಾತ್ರದಲ್ಲಿ ಉಡಾವಣೆ ಮಾಡುವ ಯಾವುದೇ ರಾಕೆಟ್ ಸದ್ಯಕ್ಕೆ ಲಭ್ಯವಿಲ್ಲ. ಈ ದೂರದರ್ಶಕವನ್ನು 'ಏರಿಯನ್ 5' ಎಂಬ ರಾಕೆಟ್‌ನ ಒಳಗೆ ಮಡಚಿಟ್ಟು ಉಡಾವಣೆ ಮಾಡಿ, ಬಾಹ್ಯಾಕಾಶದಲ್ಲಿ ಹಂತಹಂತವಾಗಿ ಅದು ಬಿಚ್ಚಿಕೊಳ್ಳುವಂತೆ ಯೋಜಿಸಲಾಗಿದೆ. ಸೂರ್ಯಶಾಖದಿಂದ ರಕ್ಷಣೆ ನೀಡುವ 'ಸನ್‌ಶೀಲ್ಡ್' ಈ ದೂರದರ್ಶಕದ ಪ್ರಮುಖ ಅಂಗ. ಇದರ ಪ್ರಮುಖ ದರ್ಪಣವು 270 ಚದರ ಅಡಿ ವಿಸ್ತೀರ್ಣದ್ದು. ಇದನ್ನು ರಾಕೆಟ್‌ನಲ್ಲಿ ಕೂರಿಸಲು ಆಗದು. ಹೀಗಾಗಿ ಇದನ್ನು ಷಡ್ಭುಜದ 18 ಚಿಕ್ಕ ಭಾಗಗಳಾಗಿ ವಿಭಜಿಸಲಾಗಿದೆ. ಉಡಾವಣೆ ಬಳಿಕ ಈ ಎಲ್ಲವೂ ಕೂಡಿಕೊಂಡು ಒಂದೇ ದರ್ಪಣವಾಗಿ ಕೆಲಸ ಮಾಡಲಿವೆ. ಇದು ಬಾಹ್ಯಾಕಾಶಕ್ಕೆ ಕಳುಹಿಸುತ್ತಿರುವ ಅತಿದೊಡ್ಡ ದರ್ಪಣ ಎನಿಸಿದೆ. ಎರಡನೇ ದರ್ಪಣವು 2.4 ಅಡಿ ವ್ಯಾಸ ಹೊಂದಿದೆ.

ಟೆನಿಸ್ ಕೋರ್ಟ್‌ಗೆ ಹೋಲಿಕೆ

ದೂರದರ್ಶಕದ ಗಾತ್ರ
69.5 ಅಡಿ ಉದ್ದ, 46.5 ಅಡಿ ಅಗಲ

ದೂರದರ್ಶಕಗಳ ದರ್ಪಣಗಳ ವ್ಯಾಸ



ಸ್ಪಿಟ್ಜರ್	0.85 ಮೀಟರ್
ಹಬಲ್	2.4 ಮೀಟರ್
ಜೇಮ್ಸ್ ವೆಬ್	6.6 ಮೀಟರ್

ಕೆಲಸ ಹೇಗೆ

ದೂರದರ್ಶಕದಲ್ಲಿ ಅಳವಡಿಸಿರುವ ವಿವಿಧ ಕ್ಯಾಮರಾ ಕಣ್ಣುಗಳು ಇನ್ಫ್ರಾ ರೆಡ್ ಬೆಳಕಿನ ಕಿರಣಗಳ ಚಿತ್ರವನ್ನು ಸೆರೆಹಿಡಿಯುತ್ತವೆ. ಅಧ್ಯಯನಕ್ಕಾಗಿ, ಸ್ಪೆಕ್ಟ್ರೊಗ್ರಾಫ್ ಮೂಲಕ ಈ ಬೆಳಕನ್ನು ವಿವಿಧ ಬಣ್ಣಗಳಾಗಿ ವಿಭಜಿಸಲಾಗುತ್ತದೆ. ಈ ಇನ್ಫ್ರಾ ರೆಡ್ ಬೆಳಕಿನ ಕಿರಣವನ್ನು ಆಧರಿಸಿ, ಸಮೀಪದ ಆಕಾಶಕಾಯಗಳ ಉಗಮದ ಅಧ್ಯಯನ ಮಾಡಲಾಗುತ್ತದೆ.

5-10 ವರ್ಷ — ಕಾರ್ಯಾಚರಣೆ ಅವಧಿ

14 ದೇಶಗಳ — ವಿಜ್ಞಾನಿಗಳು ಭಾಗಿ

-370 ಡಿಗ್ರಿ ಫ್ಯಾರನ್‌ಹೀಟ್ — ಕಾರ್ಯಾಚರಣೆಯ ತಾಪಮಾನ

ಜೇಮ್ಸ್ ವೆಬ್ ಯಾರು

ಅಮೆರಿಕ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ (ನಾಸಾ) ಮಾಜಿ ಆಡಳಿತಾಧಿಕಾರಿ ಜೇಮ್ಸ್ ವೆಬ್ ಅವರ ಹೆಸರನ್ನು ಅವರ ಗೌರವಾರ್ಥವಾಗಿ ಈ ಬೃಹತ್ ದೂರದರ್ಶಕಕ್ಕೆ ಇರಿಸಲಾಗಿದೆ. ಅಪೋಲೊ ನೌಕೆ ಉಡಾವಣೆ ಹಾಗೂ ಕಾರ್ಯಾಚರಣೆಯಲ್ಲಿ ಇವರು ಮಹತ್ವದ ಪಾತ್ರ ವಹಿಸಿದ್ದರು.

ಆಧಾರ ಮತ್ತು ಚಿತ್ರಗಳು: ನಾಸಾ, ಪ್ರಜಾವಾಣಿ ಗ್ರಾಫಿಕ್ಸ್

ವರದಿ: ಜಯಸಿಂಹ ಆರ್., ಅಮೃತ್ ಕಿರಣ್ ಬಿ.ಎಂ.

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 1

ಶಿವಭಕ್ತಿಯೇ ಮುಕ್ತಿಗೆ ಸಾಧನ

ಹಿಂದೂಧರ್ಮದಲ್ಲಿ ಹಲವು ಶಾಸ್ತ್ರಗ್ರಂಥಗಳಿವೆ. ಅವುಗಳಲ್ಲಿ ಬಹುಪಾಲು ಬರೆದಿರುವುದು ವ್ಯಾಸಮಹರ್ಷಿ. ಮಹಾಗುರುವಾದ ವ್ಯಾಸರ ಜನ್ಮದಿನವನ್ನ, ನಾವು ಗುರುಪೂರ್ಣಿಮ ಅಥವಾ ವ್ಯಾಸಹುಣ್ಣಿಮೆ ಎಂದು ಆಚರಿಸುತ್ತೇವೆ. ವ್ಯಾಸರ ಮೂಲ ಹೆಸರು ಕೃಷ್ಣದ್ವೈಪಾಯನ. ಅಳಿಯುತ್ತಿದ್ದ ವೇದಗಳನ್ನ ನಾಲ್ಕು ಭಾಗ ಮಾಡಿದ್ದರಿಂದ ಕೃಷ್ಣ ದ್ವೈಪಾಯನರ ಹೆಸರು ವೇದವ್ಯಾಸರೆಂದು ಕರೆಯಲಾಯಿತು. ವ್ಯಾಸರು ಬರೆದ ಮಹಾಭಾರತ, ಭಗವದ್ಗೀತೆ, 18 ಮಹಾಪುರಾಣಗಳು ನಮ್ಮ ಭಾರತೀಯ ಸಂಸ್ಕೃತಿಯನ್ನ ಶ್ರೀಮಂತವಾಗಿಸಿವೆ. ವ್ಯಾಸರ ದಿವ್ಯಜ್ಞಾನದಿಂದ ಬಂದ 18 ಮಹಾಪುರಾಣಗಳಲ್ಲಿ 'ಶಿವ ಮಹಾಪುರಾಣ' ಬಹಳ ಮಹತ್ವದ್ದು. ಅಷ್ಟೇ ಪವಿತ್ರವಾದದ್ದು ಕೂಡ.

ಶಿವಪುರಾಣವನ್ನ ವ್ಯಾಸರಿಗೆ ಹೇಳಿದ್ದು ಬ್ರಹ್ಮನ ಮಾನಸಪುತ್ರ ಸನತ್ಕುಮಾರ. ಸನತ್ಕುಮಾರನಿಗೆ ಹೇಳಿದ್ದು, ಸಾಕ್ಷಾತ್ ಪರಮೇಶ್ವರನೇ. ಶಿವನಿಂದ ಸನತ್ಕುಮಾರನಿಗೆ, ಸನತ್ಕುಮಾರನಿಂದ ವ್ಯಾಸರಿಗೆ, ವ್ಯಾಸರಿಂದ ಅವರ ಶಿಷ್ಯ ಸೂತಮುನಿಗೆ ಶಿವಪುರಾಣದ ಮಹಾತ್ಮೆ ತಿಳಿಯಿತು. ದೇವಮುನಿಯಾದ ಸನತ್ಕುಮಾರ ಮತ್ತು ನರಮುನಿಯಾದ ವ್ಯಾಸರಿಗೆ ಶಿವಪುರಾಣ ತಿಳಿದಿದ್ದದ್ದಕ್ಕೂ ಒಂದು ಕಥೆ ಇದೆ. ಈ ಇಬ್ಬರ ಕಥೆಯಲ್ಲೂ ಒಂದು ಸಾಮ್ಯತೆ ಕೂಡ ಇದೆ. ಅದು ಜೀವನವೈರಾಗ್ಯ. ಬ್ರಹ್ಮನ ಮಾನಸಪುತ್ರನಾದ ಸನತ್ಕುಮಾರನಿಗೆ ಒಮ್ಮೆ ಜೀವನ ಬೇಸರ ಅನ್ನಿಸತೊಡಗಿತು. ಮುಕ್ತಿಗಾಗಿ ಮಂದಾರಪರ್ವತದಲ್ಲಿ ತಪಸ್ಸು ಮಾಡುತ್ತಿದ್ದ. ಆಗ ಬಂದ ಶಿವನ ವಾಹನ ನಂದಿಕೇಶ್ವರ, ಮೂರು ಮುಕ್ತಿ ಸಾಧನ ಹೇಳಿಕೊಟ್ಟ. ಮೊದಲನೆಯದು ಶಂಕರನ ನಾಮಸ್ಮರಣೆ, ಎರಡನೆಯದು ಕೀರ್ತನೆ ಮತ್ತು ಮೂರನೆಯದೇ ಮನನ ಮಾಡೋದು. ಇದೇ ಮುಕ್ತಿಗೆ ಮಾರ್ಗವಾಗಿರುವ ಮೂರು ಸಾಧನಗಳು ಎಂದು ತಿಳಿಸಿದ್ದ.

> ಶಿವಪುರಾಣವನ್ನ ವ್ಯಾಸರಿಗೆ ಹೇಳಿದ್ದು ಬ್ರಹ್ಮನ ಮಾನಸಪುತ್ರ ಸನತ್ಕುಮಾರ. ಸನತ್ಕುಮಾರನಿಗೆ ಹೇಳಿದ್ದು, ಸಾಕ್ಷಾತ್ ಪರಮೇಶ್ವರನೇ. ಶಿವನಿಂದ ಸನತ್ಕುಮಾರನಿಗೆ, ಸನತ್ಕುಮಾರನಿಂದ ವ್ಯಾಸರಿಗೆ, ವ್ಯಾಸರಿಂದ ಅವರ ಶಿಷ್ಯ ಸೂತಮುನಿಗೆ ಶಿವಪುರಾಣದ ಮಹಾತ್ಮೆ ತಿಳಿಯಿತು.

ಅದರಂತೆ, ಸನತ್ಕುಮಾರನು ಪರಶಿವನ ನಾಮಸ್ಮರಣೆ, ಕೀರ್ತನೆ ಮತ್ತು ಮನನ ಮಾಡಿ ಶಿವನನ್ನು ಒಲಿಸಿಕೊಂಡ. ಆಗ ಪ್ರತ್ಯಕ್ಷನಾದ ಶಂಕರ ತನ್ನ ಶಿವಪುರಾಣವನ್ನ ಹೇಳಿದ. ಇದನ್ನ ಹೇಳಿದವರಿಗೂ ಕೇಳಿದವರಿಗೂ ಜೀವನ್ಮುಕ್ತಿ ಸಿಗುತ್ತೆ ಎಂದು ತಿಳಿಸಿದ್ದ. ಕಾಲ ಸರಿದಂತೆ, ಇತ್ತ ವೇದವ್ಯಾಸರಿಗೂ ಒಮ್ಮೆ ಜೀವನ ಬೇಸರವೆನ್ನಿಸಿತು.ವೇದ--ಪುರಾಣಗಳನ್ನೆಲ್ಲಾ ಬರೆದಿದ್ದರೂ, ಅವರಲ್ಲಿ ಸಂಸಾರಕ್ಲೇಷ-ಜುಗುಪ್ಸೆ ಮೂಡಿಸಿತ್ತು. ಜೀವನ್ಮುಕ್ತಿಗಾಗಿ ಅವರು ಒಮ್ಮೆ ಸರಸ್ವತೀನದಿತೀರದಲ್ಲಿ ತಪಸ್ಸಿಗೆ ಕುಳಿತರು. ಆಗ ಆಕಾಶಮಾರ್ಗವಾಗಿ ಹೋಗುತ್ತಿದ್ದ ಸನತ್ಕುಮಾರರಿಗೆ ವ್ಯಾಸರು ತಪಸ್ಸು ಮಾಡುತ್ತಿರುವುದು ಕಾಣಿಸಿತು. ವ್ಯಾಸರ ಬಳಿ ಬಂದು, ತಪಸ್ಸು ಮಾಡಲು ಕಾರಣವೇನೆಂದು ಕೇಳಿದ.

ಅದಕ್ಕೆ ವ್ಯಾಸರು 'ಯಾವುದೋ ಅತೃಪ್ತಿ ನನ್ನ ಕಾಡ್ತಿದೆ. ಜೀವನ ಬೇಸರವಾಗಿ ಮುಕ್ತಿಗಾಗಿ ತಪಸ್ಸು ಮಾಡ್ತಿದ್ದೇನೆ' ಎಂದರು. ವ್ಯಾಸರ ಮಾತನ್ನ ಕೇಳಿ ನಸುನಕ್ಕ ಸನತ್ಕುಮಾರ, ತನಗೂ ಒಮ್ಮೆ ಜೀವನವೈರಾಗ್ಯ ಬಂದಾಗ ನಂದಿಕೇಶ್ವರನ ಮೂಲಕ ಮುಕ್ತಿಮಾರ್ಗ ತಿಳಿದದ್ದು, ಅದರಿಂದ ಶಿವನನ್ನ ಒಲಿಸಿಕೊಂಡು, ಶಿವಪುರಾಣವನ್ನ ಸ್ವತಃ ಶಿವನ ಬಾಯಿಂದಲೇ ಕೇಳಿದ್ದನ್ನ ಹೇಳಿದ. ಹೀಗೆ ವ್ಯಾಸಮುನಿಗಳು ಸನತ್ಕುಮಾರನಿಂದ ಶಿವಪುರಾಣವನ್ನ ಕೇಳಿದರು. ಇಂಥ ಪರಮಪವಿತ್ರವಾದ ಶಿವಪುರಾಣವನ್ನ ವ್ಯಾಸರು ತಮ್ಮ ಪರಮಶಿಷ್ಯ ಸೂತಮುನಿಗೆ ಹೇಳಿದರು. ವ್ಯಾಸರಿಂದ ತಿಳಿದ ಶಿವಪುರಾಣವನ್ನ ಸೂತಮುನಿಯು ಶೌನಕಮುನಿ ಸೇರಿದಂತೆ ಹಲವು ಋಷಿಮುನಿಗಳಿಗೆ ಹೇಳಿದರು. ಈ ಋಷಿಮುನಿಗಳಿಂದ ವ್ಯಾಸವಿರಚಿತ ಶಿವಮಹಾಪುರಾಣ ಭೂಲೋಕದ ಜನರಿಗೆಲ್ಲಾ ಪರಿಚಯವಾಯಿತು. ಶಿವಪುರಾಣ ಹೇಳಿದ ಸೂತಮುನಿಗಳು ಮುಂದೆ ಸೂತಪುರಾಣಿಕರೆಂದೇ ಖ್ಯಾತರಾದರು. *

ಹಬಲ್ ಸೆರೆಹಿಡಿದ ಎನ್‌ಜಿಸಿ 2276 ಸುರುಳಿ ಗ್ಯಾಲಕ್ಸಿಯ ಚಿತ್ರ

ಯಶಸ್ವಿ ದೂರದರ್ಶಕ 'ಹಬಲ್'

1990ರಲ್ಲಿ ನಾಸಾ ಉಡ್ಡಯನ ಮಾಡಿದ್ದ 'ಹಬಲ್' ದೂರದರ್ಶಕವು ಬಾಹ್ಯಾಕಾಶದ ಬಗ್ಗೆ ಇದ್ದ ಜ್ಞಾನವನ್ನು ಇನ್ನಷ್ಟು ವಿಸ್ತರಿಸಿತು. ಸೌರ ವ್ಯವಸ್ಥೆ, ಧೂಮಕೇತು ಹಾಗೂ ಗ್ರಹಗಳ ಬಗ್ಗೆ ಅರಿಯಲು ವಿಜ್ಞಾನಿಗಳಿಗೆ ನೆರವಾಯಿತು. ಗ್ರಹಗಳು ಹಾಗೂ ಗ್ಯಾಲಕ್ಸಿ ಹುಟ್ಟಿದ್ದು ಹೇಗೆ ಎಂದು ತಿಳಿದುಕೊಳ್ಳುವಲ್ಲಿ ಸಹಾಯ ಮಾಡಿತು. ಕೋಟ್ಯಂತರ ನಕ್ಷತ್ರಗಳನ್ನು ಹೊಂದಿರುವ, ಅಲ್ಲಿಯವರೆಗೆ ಕಾಣಿಸದಿದ್ದ ಗ್ಯಾಲಕ್ಸಿಗಳ ಚಿತ್ರಗಳನ್ನು ಸೆರೆಹಿಡಿದು ಕಳುಹಿಸಿತು. ಹಬಲ್‌ನ ಚಿತ್ರಗಳ ಆಧಾರದಲ್ಲಿಯೇ, ವಿಶ್ವವು 1,400 ಕೋಟಿ ವರ್ಷ ಹಳೆಯದು ಎಂದು ಅಂದಾಜು ಮಾಡಲು ಸಾಧ್ಯವಾಯಿತು.

ಪ್ಲೂಟೊ ಆಕಾಶಕಾಯದ ಸುತ್ತಲಿದ್ದ ಉಪಗ್ರಹಗಳನ್ನು ಮೊದಲಿಗೆ ಗುರುತಿಸಿದ್ದು ಇದೇ ಹಬಲ್. ಕಪ್ಪುಕುಳಿಗಳನ್ನು ಹಬಲ್ ಪತ್ತೆಮಾಡಿತು. ಕಪ್ಪುಕುಳಿಗಳು ಬೆಳಕನ್ನೂ ಒಳಗೊಂಡಂತೆ, ತಮ್ಮ ಸುತ್ತಲಿನ ಎಲ್ಲವನ್ನೂ ಕಬಳಿಸುತ್ತವೆ ಎಂದು ಗೊತ್ತಾಯಿತು. ದೊಡ್ಡ ನಕ್ಷತ್ರಗಳ ಸ್ಫೋಟ ವಿದ್ಯಮಾನದ ಬಗ್ಗೆ ಇನ್ನಷ್ಟು ಬೆಳಕು ಚೆಲ್ಲಿತ್ತು. ಈ ಹಬಲ್‌ನ ಯಶಸ್ಸಿನ ಉತ್ತರಾಧಿಕಾರಿಯಾಗಿ ಜೇಮ್ಸ್ ವೆಬ್ ಕಾರ್ಯಾಚರಣೆಗೆ ಇಳಿಯಲು ಸಜ್ಜಾಗಿದೆ. ಹಬಲ್ ಅನ್ನು ಮೀರಿಸಿದ ಹೆಚ್ಚಿನ ಹೊಳಹುಗಳು ಸಿಗುವ ಭಾರಿ ನಿರೀಕ್ಷೆಯಿದೆ.

ಗುಂಡಣ್ಣ



ದಿನ ಭವಿಷ್ಯ

ಸೋಮವಾರ ಡಿಸೆಂಬರ್ 20, 2021

ಶ್ರೀಪ್ಲವ ನಾಮ ಸಂವತ್ಸರ ದಕ್ಷಿಣಾಯಣ ಹೇಮಂತ ಋತು ಮಾರ್ಗಶಿರ (ಧನುರ್ಮಾಸ) ಮಾಸ ಕೃಷ್ಣಪಕ್ಷ ಮಳೆ ನಕ್ಷತ್ರ ಮೂಲ ಪ್ರತಿಪದೆ ಗಂ. 9-35 (ಹ. 10-33) ಸೋಮವಾರ ನಿತ್ಯ ನಕ್ಷತ್ರ ಆದ್ರೆ ಗಂ. 29-16 (ಸಾ. 6-25) ಶುಕ್ಲ ನಾಮ ಯೋಗ ಗಂ. 9-28 ಕೌಲವ ಕರಣ ಗಂ. 9-35 ವಿಷಾಭಾವಃ ಅಮೃತ ಗಂ. 12-24 : ರಾಹುಕಾಲ: ಬೆ. ಗಂ. 7-30 ರಿಂದ 9-00 ಗುಳಿಕ ಮ. ಕಾಲ ಗಂ 1-30 ರಿಂದ 3-00 ಯಮಗಂಡ ಕಾಲ ಬೆ. ಗಂ 10-30 ರಿಂದ 12-00 : ಸೂರ್ಯೋದಯ: 6-39 ಸೂರ್ಯಾಸ್ತ: 5-53 ಅದೃಷ್ಟ ಸಂಖ್ಯೆ 8

ಮೇಷ: ಗೆಳಯರ ಕೆಲಸಗಳಲ್ಲಿ ಸಹಕರಿಸುವ ಸಾಧ್ಯತೆ. ಮಾತುಕತೆಗಳಿಂದಾಗಿ ಗೌರವ ಪ್ರಾಪ್ತಿ. ಹಿರಿಯರ ಸಲಹೆಯನ್ನು ಕಡೆಗಣಿಸದಿರಿ. ಉದ್ಯೋಗಾಕಾಂಕ್ಷಿಗಳಿಗೆ ಉತ್ತಮ ಅವಕಾಶ. ವಿದ್ಯಾರ್ಥಿಗಳಿಗೆ ವ್ಯಾಸಂಗದಲ್ಲಿ ಉತ್ತಮ ಪ್ರಗತಿ.

ವೃಷಭ: ವಿವಾಹಾಕಾಂಕ್ಷಿಗಳಿಗೆ ಸೂಕ್ತ ಸಂಬಂಧಗಳು ಕೂಡಿಬರುವ ಸಾಧ್ಯತೆ. ಆತ್ಮೀಯರೊಂದಿಗೆ ಸಮಾಲೋಚಿಸುವಿರಿ. ಧಾರ್ಮಿಕ ಕಾರ್ಯಗಳಲ್ಲಿ ಭಾಗಿಯಾಗುವ ಸಾಧ್ಯತೆ. ಹೊಸ ಉದ್ಯಮಕ್ಕೆ ಚಾಲನೆ ನೀಡಲು ಸೂಕ್ತ ದಿನ.

ಮಿಥುನ: ವ್ಯಾಪಾರದಲ್ಲಿ ಸ್ವಲ್ಪಮಟ್ಟಿನ ಏರುಪೇರು ಸಾಧ್ಯತೆ. ಮೇಲಧಿಕಾರಿಗಳಿಂದ ಪ್ರಶಂಸೆ. ಆರ್ಥಿಕ ಸಮಸ್ಯೆಗಳು ಪರಿಹಾರವಾಗುವವು. ಮಹಿಳೆಯರಿಗೆ ಸಾಮಾಜಿಕ ಗೌರವಾದರಗಳು ದೊರಕಲಿದೆ. ರಾಜಕೀಯ ವ್ಯಕ್ತಿಗಳಿಗೆ ಹಿನ್ನಡೆ.

ಕರ್ಕಾಟಕ: ಮನೆಯವರೊಂದಿಗೆ ಪ್ರಯಾಣ ಸಾಧ್ಯತೆ. ಆಹಾರ ವ್ಯವಹಾರಗಳ ಬಗ್ಗೆ ಜಾಗ್ರತೆ ವಹಿಸಿ. ವಿದ್ಯಾಭ್ಯಾಸದಲ್ಲಿ ಉತ್ತಮ ಸಾಧನೆಯನ್ನು ಕಾಣುವಿರಿ. ಸ್ವಯಂ ಉದ್ಯೋಗಗಳಲ್ಲಿ ತೊಡಗಿದವರಿಗೆ ಯಶಸ್ಸು.

ಸಿಂಹ: ಮನೆಯಲ್ಲಿ ಶುಭ ಸಮಾರಂಭಗಳು ನಿಶ್ಚಯವಾಗುವ ಸಾಧ್ಯತೆ. ಗುರುದೇವತಾ ದರ್ಶನ ಭಾಗ್ಯ. ದಾಯಾದಿಗಳೊಂದಿಗೆ ವೈಮನಸ್ಸು. ನ್ಯಾಯಾಲಯದ ತೀರ್ಪು ವಿಳಂಬವಾಗಬಹುದು. ಮನೆಯಲ್ಲಿ ನೆಮ್ಮದಿ.

ಕನ್ಯಾ: ವಿದೇಶದಲ್ಲಿರುವ ಮಕ್ಕಳನ್ನು ಸಂದರ್ಶಿಸುವ ಸಾಧ್ಯತೆ. ಮಹಿಳೆಯರ ಇಷ್ಟಾರ್ಥಗಳು ನೆರವೇರುವವು. ನೆರೆಹೊರೆಯವರಿಂದ ಸ್ವಲ್ಪಮಟ್ಟಿನ ಕಿರಿಕಿರಿ ಉಂಟಾಗುವ ಸಾಧ್ಯತೆ ಕಂಡುಬರುವುದು. ಬಂಧುಗಳ ಆಗಮನ ಸಾಧ್ಯತೆ.

ತುಲಾ: ಬಂಧುವರ್ಗದವರಿಂದ ಆರ್ಥಿಕ ಅನುಕೂಲತೆ. ಅಮೂಲ್ಯ ವಸ್ತುಗಳನ್ನು ಖರೀದಿಸುವ ಸಾಧ್ಯತೆ. ದಾಂಪತ್ಯ ಸಮಸ್ಯೆಗಳಿಂದ ಮುಕ್ತಿ ದೊರೆತು ಹರ್ಷಪೂರ್ಣ ಜೀವನಕ್ಕೆ ನಾಂದಿಯಾಗಲಿದೆ. ದೇವಾಲಯ ದರ್ಶನಯೋಗ.

ವೃಶ್ಚಿಕ: ಪಿತ್ರಾರ್ಜಿತ ಆಸ್ತಿಯು ಲಭಿಸಲಿದೆ. ಕಲಾ ನೈಪುಣ್ಯತೆ ಮೆರೆಯಲು ಸೂಕ್ತ ವೇದಿಕೆ ದೊರಕಲಿದೆ. ಆರೋಗ್ಯದಲ್ಲಿ ಸುಧಾರಣೆ. ಲೇವಾದೇವಿ ವ್ಯವಹಾರಸ್ಥರಿಗೆ ಉತ್ತಮ ಲಾಭ. ವಾಹನ ಚಾಲನೆಯಲ್ಲಿ ಎಚ್ಚರಿಕೆ ಅಗತ್ಯ.

ಧನು: ಬೆನ್ನ ಹಿಂದಿನ ಶತ್ರುಗಳಿಂದ ಸಂಕಷ್ಟ. ತಾಯಿಯ ಆರೋಗ್ಯದ ಬಗ್ಗೆ ಗಮನವಿರಲಿ. ವೃತ್ತಿಯಲ್ಲಿನ ಸಮಸ್ಯೆಗಳಿಗೆ ಯೋಗ್ಯ ಪರಿಹಾರ. ಅಧಿಕಾರಿಗಳಿಂದ ಉತ್ತಮ ಸಹಕಾರ ದೊರಕುವುದು. ಗುರು ಆರಾಧನೆ ಸೂಕ್ತ.

ಮಕರ: ಸಹಕಾರಿ ರಂಗದಲ್ಲಿರುವವರಿಗೆ ಎಲ್ಲಿಲ್ಲದ ಗೌರವಾದರ. ರಾಜಕಾರಣಿಗಳಿಗೆ ಇರುಸು ಮುರುಸು ಸಾಧ್ಯತೆ. ಸಿಹಿ ಪದಾರ್ಥಗಳ ವ್ಯಾಪಾರಸ್ಥರಿಗೆ ಉತ್ತಮ ಲಾಭ. ಮದ್ಯಪಾನದಂತಹ ದುಶ್ಚಟದಿಂದಾಗಿ ಅವಘಡ ಸಾಧ್ಯತೆ.

ಕುಂಭ: ಮನೆಯಲ್ಲಿನ ಸಮಸ್ಯೆಗಳು ಉತ್ತಮ ರೀತಿಯಲ್ಲಿ ಪರಿಹಾರ ಕಂಡು ಸಂತಸ. ವಿದ್ವಾಂಸರಿಗೆ ಗೌರವಾದರಗಳು ಪ್ರಾಪ್ತವಾಗುವವು. ಮಹಿಳಾ ಉದ್ಯೋಗಸ್ಥರಿಗೆ ಮತ್ತು ಉದ್ಯಮಿಗಳಿಗೆ ಹೆಚ್ಚಿನ ಪ್ರಗತಿ ಕಂಡುಬರುವುದು.

ಮೀನ: ನೂತನ ಗೃಹ ನಿರ್ಮಾಣ ಸಾಧ್ಯತೆ. ಹೊಸ ವಸ್ತು, ಆಸ್ತಿಗಳ ಖರೀದಿ ಸಾಧ್ಯತೆ. ಮಕ್ಕಳ ಆರೋಗ್ಯದ ಬಗ್ಗೆ ಗಮನವಹಿಸಿ. ವಿದ್ಯಾರ್ಥಿಗಳಲ್ಲಿ ಅತಿಯಾದ ದಣಿವು ಕಾಣಿಸಿಕೊಳ್ಳುವುದು. ವೃತ್ತಿ ಸಂಬಂಧ ಪ್ರಯಾಣ.

ನಿಮ್ಮ ಜನ್ಮದಿನ 20-ಡಿಸೆಂಬರ್ ಇಂದು ಅತ್ಯಂತ ಶುಭದಾಯಕ. ವಿದ್ಯಾರಂಗದಲ್ಲಿ ಅಪರಿಮಿತ ಯಶಸ್ಸು ಸಾಧಿಸುವ ಸಾಧ್ಯತೆ. ನಿಮ್ಮ ಬಗ್ಗೆ ಆಡಿಕೊಳ್ಳುವವರ ಬಗ್ಗೆ ಗಮನ ವಹಿಸದೇ ನಿಮ್ಮ ನೇರ ನಡೆಯಿಂದಾಗಿ ಸಾಮಾಜಿಕ ಗೌರವಕ್ಕೆ ಪಾತ್ರರಾಗುವಿರಿ. ನಿರ್ದಾಕ್ಷಿಣ್ಯ ನಡೆಯಿಂದಾಗಿ ಅನೇಕರು ನಿಮ್ಮಿಂದ ದೂರಸರಿಯುವರು.

ಹಳೆ ತತ್ವ - ಹೊಸ ಯುಕ್ತಿ

ಹೊಸ ಚಿಗುರು ಹಳೆಬೇರು ಕೂಡಿರಲು ಮರಸೊಬಗು |
ಹೊಸಯುಕ್ತಿ ಹಳೆತತ್ತ್ವದೊಡಗೂಡೆ ಧರ್ಮ ||
ಋಷಿವಾಕ್ಯದೊಡನೆ ವಿಜ್ಞಾನಕಲೆ ಮೇಳವಿಸೆ |
ಜಸವು ಜನಜೀವನಕೆ – ಮಂಕುತಿಮ್ಮ || 522 ||

ಪದ-ಅರ್ಥ: ಹಳೆತತ್ತ್ವದೊಡಗೂಡೆ = ಹಳೆ ತತ್ವದ + ಒಡಗೂಡೆ(ಜೊತೆಯಾಗಿರೆ), ಮೇಳವಿಸೆ = ಸಮನ್ವಯಗೊಳಿಸೆ, ಜಸ = ಯಶಸ್ಸು.

ವಾಚ್ಯಾರ್ಥ: ಹಳೆಯ ಬೇರು ಮತ್ತು ಹೊಸ ಚಿಗುರು ಸೇರಿದಾಗ ಮರಕ್ಕೆ ಸೊಬಗು. ಹಳೆಯ ತತ್ವದ ಆಧಾರದ ಮೇಲೆ ನವೀನ ಯುಕ್ತಿಗಳನ್ನು ಬಳಸುವುದು ಧರ್ಮ. ಆರ್ಷೇಯ ನುಡಿಗಳೊಂದಿಗೆ ಹೊಸ ವಿಜ್ಞಾನದ ಕಲೆ ಸೇರಿದರೆ ಜನಜೀವನಕ್ಕೆ ಯಶ.

ವಿವರಣೆ: ಇದೊಂದು ಅತ್ಯಂತ ಜನಪ್ರಿಯವಾದ ಚೌಪದಿ. ಬಹುಶಃ ಇಂದಿನ ಪ್ರಪಂಚದಲ್ಲಿ ಎಲ್ಲರೂ ಸಂತೋಷದಲ್ಲಿರುವುದಕ್ಕೆ ಇದೊಂದರ ಸಂದೇಶವೇ ಸಾಕು ಎನ್ನಿಸುತ್ತದೆ. ಹಳೆಯ ಹೊಸತುಗಳ ಸಮನ್ವಯದ ದೃಷ್ಟಿ ಇದರಲ್ಲಿದೆ.

ನೂರಾರು ವರ್ಷಗಳ ಕಾಲ ಪಾಶ್ಚಾತ್ಯ ಪ್ರಪಂಚದೊಂದಿಗೆ ಬೆರೆತು ನಮ್ಮ ಜೀವನಕ್ರಮವೆಲ್ಲ ಬದಲಾಗಿದೆ. ವಿಜ್ಞಾನ ತಂದ ಅವಿಷ್ಕಾರಗಳಿಂದ ಮನಸ್ಸು ಆ ಕಡೆಗೆ ವಾಲಿದೆ. ಅದರ ಬೆರಗು ನಮ್ಮನ್ನು ಹೆಚ್ಚಾಗಿ ಸೆಳೆದಿದ್ದರಿಂದ ಆ ಜೀವನಕ್ರಮವೇ ಹೆಚ್ಚು ಶ್ರೇಷ್ಠವೆಂಬ ಭಾವನೆ ಬಲಿಯಿತು. ಅದರಲ್ಲೇನೂ ತಪ್ಪಿಲ್ಲ. ಆದರೆ ಅದಕ್ಕೆ ಹೆಚ್ಚು ಮರ್ಯಾದೆ ಕೊಡುವ ಆತುರದಲ್ಲಿ ನಮ್ಮ ಜೀವನಶೈಲಿ ಅರ್ಥಹೀನ, ಪ್ರಯೋಜನಕಾರಿಯಲ್ಲ ಎಂದು ಚಿಂತಿಸುತ್ತ ಅದನ್ನು ಮರೆಯತೊಡಗಿದೆವು. ನಮ್ಮ ಹಿಂದಿನ ಸಂಪ್ರದಾಯಗಳು ನಂಬಿಕೆಗಳು ಹುಸಿ ಎನ್ನಿಸತೊಡಗಿದವು.

ಪಾಶ್ಚಾತ್ಯ ನಾಗರಿಕತೆಯಲ್ಲಿ ಸಾಕಷ್ಟು ಒಳ್ಳೆಯ ಗುಣಗಳಿವೆ. ಅವರಲ್ಲಿ ಕಾಣುವ ಸಮಯ ಪ್ರಜ್ಞೆ, ಗೊತ್ತಿಲ್ಲದ್ದನ್ನು ಗೊತ್ತಿಲ್ಲವೆಂದು ಹೇಳುವ ನೇರಗುಣ, ಪರಿಶ್ರಮದ ಜೀವನ, ಪ್ರತಿಯೊಂದು ಜೀವಕ್ಕೂ ಅವರು ಕೊಡುವ ಮಹತ್ವ, ವಿಜ್ಞಾನಕ್ಕೆ, ಹೊಸ ಚಿಂತನೆಗಳಿಗೆ ತೆರೆದ ಮನ, ಯಾವುದೇ ಕಾರ್ಯದಲ್ಲಿ ಅವರು ತೋರುವ ನಿಷ್ಠೆ, ಕಾಯಿದೆಯನ್ನು ಮೀರದೆ ಇರುವ ಬುದ್ಧಿ, ಇವುಗಳನ್ನು ನಾವು ಮೆಚ್ಚುವುದು ಮಾತ್ರವಲ್ಲ, ಅನುಸರಿಸುವುದೂ ಕ್ಷೇಮ. ಹಾಗಾದರೆ ನಮ್ಮ ಸಂಸ್ಕೃತಿಯಲ್ಲಿ ಒಳ್ಳೆಯ ಅಂಶಗಳಿಲ್ಲವೆ? ಖಂಡಿತವಾಗಿಯೂ ಬೇಕಾದಷ್ಟಿವೆ. ನಮ್ಮ ಕುಟುಂಬ ವ್ಯವಸ್ಥೆ, ಅಂತಃಕರಣದ ನೆಲೆಯಲ್ಲಿ ಸಾಮಾಜಿಕ ಜೀವನ, ಧಾರ್ಮಿಕತೆ, ಪುರಾತನವಾದ ಹಿನ್ನೆಲೆ, ಪ್ರಪಂಚಕ್ಕೆ ಮಾದರಿಯಾಗಬಲ್ಲ ಮಹಾನ್ ಕಾವ್ಯಗಳಾದ ರಾಮಾಯಣ, ಮಹಾಭಾರತಗಳ ನೆಲೆ, ಸಂಪ್ರದಾಯಗಳ ಸೊಗಸು, ಇವೆಲ್ಲ ನಮ್ಮವಲ್ಲವೆ? ದೇಹ ಭೋಗಕ್ಕಿಂತ ಆತ್ಮಸಮಾಧಾನ ದೊಡ್ಡದು, ದೇಹಕ್ಕಿಂತ ಆತ್ಮ ಮುಖ್ಯ, ಮಮತೆಗಿಂತ ನಿರ್ಮಮತೆ ದೊಡ್ಡದು, ಸಂಪಾದನೆಗಿಂತ ದಾನ ದೊಡ್ಡದು, ಬಲಕ್ಕಿಂತ ಧರ್ಮ ದೊಡ್ಡದು, ಇದು ಭಾರತೀಯ ಸಂಸ್ಕೃತಿ.

ಹೀಗೆ ಎರಡೂ ಸಂಸ್ಕೃತಿಗಳಲ್ಲಿ ಮೆಚ್ಚಿಕೊಳ್ಳಬೇಕಾದ ಅಂಶಗಳು ಇದ್ದಂತೆ ತ್ಯಾಜ್ಯ ಮಾಡಬೇಕಾದ ಅಂಶಗಳೂ ಇಲ್ಲದಿಲ್ಲ. ಈ ಕೊರತೆಯನ್ನು ನೀಗಿಸಿಕೊಳ್ಳಲು ಪಾಶ್ಚಾತ್ಯರಿಂದ ನಾವು ಕಲಿಯಬೇಕು, ನಮ್ಮಿಂದ ಅವರೂ ಕಲಿಯಬೇಕು. ಈ ಅನ್ಯೋನ್ಯ ಶಿಕ್ಷಣವೇ ಲೋಕಕ್ಕೆ ಶುಭದ ಮಾರ್ಗ. ಇದನ್ನು ಕಗ್ಗ ಸೂಕ್ಷ್ಮವಾಗಿ ತಿಳಿಸುತ್ತದೆ. ಹಳೆಯ ಬೇರು, ಸಾರವನ್ನು ಗಿಡಕ್ಕೆಲ್ಲ ಹರಿಸಿ ಚಿಗುರನ್ನು ಕೊನರಿಸುತ್ತದೆ. ಹೊಸ ಬೇರಿಗೆ ಆ ಶಕ್ತಿ ಇಲ್ಲ. ತತ್ವ ಹಳೆಯದಿರಲಿ ಆದರೆ ಯುಕ್ತಿ ಆ ಕಾಲಕ್ಕೆ ತಕ್ಕಂತಿರಲಿ. ಹಿಂದಿನ ಆರ್ಷೇಯ ವಾಣಿಗೆ ವಿಜ್ಞಾನದ ಕಸಿ ಮಾಡಬೇಕು. ಆಗ ಜನಜೀವನಕ್ಕೆ ಸೌಖ್ಯ ಮತ್ತು ಕ್ಷೇಮ. ❖

ಪದಬಂಧ 4813 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಬಿಡುವು ಹೀಗೆ ದೊರಕಿದೆ (3)
4.ಕಂಬನಿ ಅಥವಾ ಅಶ್ರು (3)
6.ನೀರಿನಿಂದಾದ ಅನಿಲ (5)
7.ಇಂದ್ರಿಯವನ್ನು ಹಿಡಿತದಲ್ಲಿಟ್ಟುಕೊಂಡವನು (2)
9.ಕಾಣದಾಗುವಿಕೆ (2)
10.ತಾವರೆಗಳ ದಂಟು (2)
11.ಜನಿವಾರ ಧರಿಸಿದವನು ಹೇಳಿದ ಸತ್ಯ (2)
13.ವ್ಯಾಕರಣದಲ್ಲಿ ವಸ್ತು ಅಥವಾ ವ್ಯಕ್ತಿಯ ಗುಣವನ್ನು ತಿಳಿಸುವ ಪದ (5)
16.ಸೀಸೆಯ ಮುಚ್ಚಳವಿಲ್ಲಿ ಉಲ್ಟಾ ಆಗಿದೆ (3)
17.ರಕ್ತವನ್ನು ಹೀಗೂ ಹೇಳುವರು (3)

ಮೇಲಿಂದ ಕೆಳಕ್ಕೆ
1.ಕನ್ನಡಿಗನು ಮಾಡಿದ ಎಕ್ಸ್‌ಚೇಂಜ್! (4)
2.ಮಜದಲ್ಲಿರುವ ಮನುಷ್ಯ ಕಾಣುತ್ತಿರುವನೇ? (3)
3.ಸ್ವಭಾವ ಸಿದ್ಧವಾದುದು (3)
4.ನಿಂದೆ ಹೀಗೆ ಬಂದಿದೆಯಲ್ಲಾ! (3)
5.ಇದು ಆಸ್ಪತ್ರೆ (4)
8.ಕುಂಬಾರನ ಚಕ್ರ (3)
9.ಬೆಕ್ಕು ಇಲ್ಲಿ ಕಾಣುತ್ತಿದೆ (3)
10.ಛತ್ರಿ ಹತ್ತಿರ ಬೆಳೆದ ಅಣಬೆ (4)
12.ಯಜ್ಞೋಪವೀತವಿದು (4)
13.ಮುಳ್ಳುಗಳ ನಡುವೆ ಅರಳಿದ ಹೂ (3)
14.ಸಮಾಚಾರವನ್ನು ತರುವವನು (3)
15.ಬೆನ್ನೆಲುಬಿರುವ ಪ್ರಾಣಿ (3)



4812ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 3.ಮನೋರಥ 5.ರೂಪಾಂತರ 6.ಬಾಕು 7.ಗಡಿಯಾರ 10.ಪಾಕಶಾಲೆ 12.ವ್ಯಥೆ 14.ಸಂಚಾಲಕ 15.ತಾರುಮಾರು

ಮೇಲಿಂದ ಕೆಳಕ್ಕೆ: 1.ಜರೂರು 2.ಅಂತರಂಗ 3.ಮನ್ವಂತರ 4.ಥಳಕು 6.ಬಾಷ್ಪ 8.ಯಾಮಿಕ 9.ಕಥೆ 10.ಪಾಪಭೀರು 11.ಲೆಕ್ಕಾಚಾರ 12.ವ್ಯಲತಾ 13.ಸೌಕರ್ಯ

ಸುಡೊಕು 5199

			7		2		8	6
						3		4
	7	8	3		9		1	
1		4			5		2	3
	2			3				
8		7	6					9
		3	9		6	5	4	8
5	4					1		
	8		5		4		3	2

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5198 ಸುಡೊಕು

5	6	3	9	2	7	8	1	4
8	1	7	6	5	4	2	3	9
4	2	9	3	8	1	7	5	6
2	4	6	7	1	3	9	8	5
3	9	1	8	4	5	6	7	2
7	5	8	2	9	6	3	4	1
6	8	5	1	7	9	4	2	3
1	3	2	4	6	8	5	9	7
9	7	4	5	3	2	1	6	8

ಮೂಲಸೌಕರ್ಯ ನಿಗಮ ಪ್ರಸ್ತಾವಕ್ಕೆ ಸ್ಪಂದಿಸದ ಕೇಂದ್ರ: ರಮಣ ಅತೃಪ್ತಿ

ವರಂಗಲ್ (ಪಿಟಿಐ): ನ್ಯಾಯಾಂಗ ಮೂಲಸೌಕರ್ಯ ನಿಗಮ ಸ್ಥಾಪನೆ, ಕೋವಿಡ್ ಸಾಂಕ್ರಾಮಿಕದ ಸಂದರ್ಭದಲ್ಲಿ ಜೀವನೋಪಾಯ ಕಳೆದುಕೊಂಡ ವಕೀಲರ ಕುಟುಂಬದವರಿಗೆ ಆರ್ಥಿಕ ನೆರವು ಮುಂತಾದ ವಿಷಯಗಳಿಗೆ ಕೇಂದ್ರ ಸರ್ಕಾರವು 'ಇನ್ನಷ್ಟೇ ಸ್ಪಂದಿಸಬೇಕಿದೆ' ಎಂದು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಎನ್.ವಿ. ರಮಣ ಭಾನುವಾರ ಹೇಳಿದ್ದಾರೆ. ವರಂಗಲ್‌ನಲ್ಲಿ ನ್ಯಾಯಾಲಯ ಸಂಕೀರ್ಣದ ಕಟ್ಟಡ ಉದ್ಘಾಟಿಸಿ ಅವರು ಮಾತನಾಡಿದರು.

ನ್ಯಾಯಾಂಗ ಮೂಲಸೌಕರ್ಯ ನಿಗಮ ಸ್ಥಾಪನೆ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಮೊಬೈಲ್ ಇಂಟರ್‌ನೆಟ್ ಸೌಲಭ್ಯ ನೀಡಿಕೆಯ ಪ್ರಸ್ತಾವವನ್ನು ಕ್ರಮವಾಗಿ ಜುಲೈ ಮತ್ತು ಜೂನ್‌ನಲ್ಲಿ ಸಲ್ಲಿಸಲಾಗಿತ್ತು. ಆದರೆ, ಈವರೆಗೆ ಯಾವ ಕ್ರಮವೂ ಆಗಿಲ್ಲ. ನಿಗಮ ಸ್ಥಾಪನೆಗೆ ಅಗತ್ಯವಾದ ಮಸೂದೆಯನ್ನು ಸಂಸತ್ತಿನ ಚಳಿಗಾಲದ ಅಧಿವೇಶನದಲ್ಲಿ ಮಂಡಿಸುವ ವಿಶ್ವಾಸ ಇದೆ ಎಂದು ಅವರು ಹೇಳಿದ್ದಾರೆ.

'ಕೋವಿಡ್ ನಿಂದಾಗಿ ಜೀವನೋಪಾಯ ಕಳೆದುಕೊಂಡ ವಕೀಲರ ಕುಟುಂಬಗಳಿಗೆ ನೆರವಾಗಬೇಕು ಎಂದು ಸರ್ಕಾರವನ್ನು ಕೋರಿದ್ದೆ. ಈ ಕೋರಿಕೆಗೆ ಈ ವರೆಗೆ ಯಾವ ಪ್ರತಿಕ್ರಿಯೆಯೂ ಬಂದಿಲ್ಲ. ಪ್ರಧಾನಿ ಮತ್ತು ರಾಷ್ಟ್ರಪತಿ ಇದ್ದ ಎಲ್ಲ ವೇದಿಕೆಗಳಲ್ಲಿಯೂ ಅವಕಾಶ ಸಿಕ್ಕಾಗಲೆಲ್ಲ ಈ ವಿಚಾರಗಳನ್ನು ನಾನು ಪ್ರಸ್ತಾಪಿಸಿದ್ದೇನೆ' ಎಂದು ತಮ್ಮ ಅಸಮಾಧಾನವನ್ನು ರಮಣ ಹೊರ ಹಾಕಿದ್ದಾರೆ.

'ಅನುಪಯೋಗಿ ಮುಖ್ಯಮಂತ್ರಿ' ಆಳ್ವಿಕೆಯಲ್ಲಿ ಯುವ ಜನರಿಗೆ ಉದ್ಯೋಗ ಸಿಗುತ್ತಿಲ್ಲ: ಎಸ್‌ಪಿ ಮುಖ್ಯಸ್ಥ ಆರೋಪ

ಯೋಗಿಯಿಂದ ಕರೆ ಕದ್ದಾಲಿಕೆ: ಅಖಿಲೇಶ್

ಪ್ರಜಾ ಮತ
ಜನತಂತ್ರದ ಹಬ್ಬ 2021

ಪ್ರಜಾವಾಣಿ ವಾರ್ತೆ

ಲಖನೌ: ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ತಮ್ಮ ದೂರವಾಣಿ ಕರೆಗಳನ್ನು ಕದ್ದಾಲಿಸುತ್ತಿದ್ದಾರೆ ಎಂದು ಸಮಾಜವಾದಿ ಪಕ್ಷದ (ಎಸ್‌ಪಿ) ಮುಖ್ಯಸ್ಥ ಅಖಿಲೇಶ್ ಯಾದವ್ ಭಾನುವಾರ ಆರೋಪಿಸಿದ್ದಾರೆ.

'ನನ್ನ ಮತ್ತು ನನ್ನ ಪಕ್ಷದ ಇತರ ಮುಖಂಡರ ದೂರವಾಣಿ ಕದ್ದಾಲಿಕೆ ನಡೆಯುತ್ತಿದೆ. ರೆಕಾರ್ಡ್ ಮಾಡಲಾದ ದೂರವಾಣಿ ಕರೆಗಳನ್ನು ಮುಖ್ಯಮಂತ್ರಿಯೇ ಸಂಜೆ ಹೊತ್ತು ಆಲಿಸುತ್ತಾರೆ. ಕೆಲವು ಹಿರಿಯ ಅಧಿಕಾರಿಗಳೇ ರಾಜ್ಯ ಸರ್ಕಾರದ ಕುಮ್ಮಕ್ಕಿನಂತೆ ಈ ಕೃತ್ಯದಲ್ಲಿ ಭಾಗಿಯಾಗಿದ್ದಾರೆ' ಎಂದು ಅಖಿಲೇಶ್ ಹೇಳಿದ್ದಾರೆ. 'ಸರ್ಕಾರದ ಸೂಚನೆಯಂತೆ ದೂರವಾಣಿ ಕರೆ ಕದ್ದಾಲಿಸುತ್ತಿರುವ ಅಧಿಕಾರಿಗಳ ಹೆಸರು ನನ್ನ ಬಳಿ ಇದೆ. ವಿಧಾನಸಭಾ ಚುನಾವಣೆಯ ಬಳಿಕ, ನಮ್ಮ ಸರ್ಕಾರ ಆಳ್ವಿಕೆಗೆ ಬಂದ ನಂತರ ಈ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುತ್ತೇವೆ' ಎಂದಿದ್ದಾರೆ.

ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ನಿರ್ಮೂಲನೆ ಆಗಲಿದೆ ಎಂಬುದು ಮುಖ್ಯಮಂತ್ರಿಗೆ ತಿಳಿದಿದೆ. ಹಾಗಾಗಿಯೇ, ಆದಾಯ ತೆರಿಗೆ ಇಲಾಖೆಯಂತಹ ಕೇಂದ್ರೀಯ ಸಂಸ್ಥೆಗಳನ್ನು ಬಳಸಿಕೊಳ್ಳಲಾಗುತ್ತಿದೆ ಎಂದರು. ಲಖಿಂಪುರ ಖೇರಿಯಲ್ಲಿ ರೈತರ ಮೇಲೆ ವಾಹನ ಹರಿಸಿ ಹತ್ಯೆ ನಡೆಸಿದ ಆರೋಪಿಯ ಅಪ್ಪ ಅಜಯ್ ಮಿಶ್ರಾ ಅವರನ್ನು ಕೇಂದ್ರ ಸಚಿವ ಸ್ಥಾನದಿಂದ ಇನ್ನೂ ಯಾಕೆ ವಜಾ ಮಾಡಿಲ್ಲ ಎಂದು ಪ್ರಶ್ನಿಸಿದ್ದಾರೆ.

ಕೇಂದ್ರದ ಹೆಚ್ಚಿನ ಸಂಖ್ಯೆಯ ಸಚಿವರು ಉತ್ತರ ಪ್ರದೇಶಕ್ಕೆ ಬರುತ್ತಿರುವುದೇ ಬಿಜೆಪಿ ಸೋಲಲಿದೆ ಎಂಬುದರ ಸೂಚನೆ. ಮುಂದೆ, ಕೇಂದ್ರ ಸಚಿವರು ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಬರಲಿದ್ದಾರೆ

ಅಖಿಲೇಶ್ ಯಾದವ್, ಎಸ್‌ಪಿ ಮುಖ್ಯಸ್ಥ

ಐ.ಟಿ ದಾಳಿ ಸಮರ್ಥಿಸಿದ ಯೋಗಿ

ಲಖನೌ: ಎಸ್‌ಪಿ ಅಧ್ಯಕ್ಷ ಅಖಿಲೇಶ್ ಯಾದವ್ ಅವರ ಆಪ್ತರ ಕಚೇರಿ ಮತ್ತು ಮನೆಗಳಲ್ಲಿ ಆದಾಯ ತೆರಿಗೆ ಇಲಾಖೆ (ಐ.ಟಿ) ಅಧಿಕಾರಿಗಳು ಶೋಧ ನಡೆಸಿದ್ದನ್ನು ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಭಾನುವಾರ ಸಮರ್ಥಿಸಿದ್ದಾರೆ. ಇದೇ ವೇಳೆ, ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ವಾದ್ರಾ ಐ.ಟಿ ತಪಾಸಣೆಯನ್ನು ಟೀಕಿಸಿದ್ದಾರೆ.

ಮಥುರಾದಲ್ಲಿ ಸಾರ್ವಜನಿಕ ಸಭೆ ನಡೆಸಿದ ಆದಿತ್ಯನಾಥ, 'ಯಾರಿಗೆ ತಮ್ಮ ತಪ್ಪಿನ ಅರಿವಿರುತ್ತದೆಯೋ ಅವರಿಗೆ ಶೋಧದ ಕುರಿತು ಭಯವಿರುತ್ತದೆ. ಐದು ವರ್ಷಗಳಲ್ಲಿ ವ್ಯಕ್ತಿಯ ಸಂಪತ್ತು ಹೇಗೆ ದುಪ್ಪಟ್ಟಾಗಲು ಸಾಧ್ಯ. ಇದು ಸಾಧ್ಯವಾಗುವುದು ಕೇವಲ ಎಸ್‌ಪಿ ಆಡಳಿತದಲ್ಲಿ' ಎಂದಿದ್ದಾರೆ.

ವಿರೋಧ ಪಕ್ಷಗಳನ್ನು ಬೆದರಿಸಲು ಕೇಂದ್ರೀಯ ಸಂಸ್ಥೆಗಳನ್ನು ಬಿಜೆಪಿ ಸರ್ಕಾರ ದುರ್ಬಳಕೆ ಮಾಡಿಕೊಳ್ಳುತ್ತಿದೆ ಎಂದು ಪ್ರಿಯಾಂಕಾ ಹೇಳಿದ್ದಾರೆ. 'ಚುನಾವಣೆಗಳು ಹತ್ತಿರ ಆಗುತ್ತಿದ್ದಂತೆಯೇ ವಿರೋಧಿಗಳ ಮೇಲೆ ಒತ್ತಡ ತರಲು ಕೇಂದ್ರೀಯ ಸಂಸ್ಥೆಗಳನ್ನು ಬಳಸಿಕೊಳ್ಳುವುದು ನರೇಂದ್ರ ಮೋದಿ ನೇತೃತ್ವದ ಸರ್ಕಾರಕ್ಕೆ ಚಟವಾಗಿದೆ' ಎಂದಿದ್ದಾರೆ.

ಸಂಘಟಿತರಾಗಿ ಮತ ನೀಡಿ; ಮಹಿಳೆಯರಿಗೆ ಪ್ರಿಯಾಂಕಾ ಕರೆ

ಲಖನೌ: 'ಎಲ್ಲ ಮಹಿಳೆಯರು ಸಂಘಟಿತರಾಗಿ ಮತ ನೀಡಿದರೆ ಮಾತ್ರ ನಿಮ್ಮನ್ನು ರಾಜಕೀಯದಲ್ಲಿ ಗಂಭೀರವಾಗಿ ಪರಿಗಣಿಸುತ್ತಾರೆ' ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಉತ್ತರ ಪ್ರದೇಶದ ರಾಯಬರೇಲಿಯಲ್ಲಿ ಭಾನುವಾರ ಹೇಳಿದರು. ಉತ್ತರ ಪ್ರದೇಶ ವಿಧಾನಸಭೆ ಚುನಾವಣೆಯಲ್ಲಿ ಮಹಿಳಾ ಶಕ್ತಿಯನ್ನು ಕ್ರೋಡೀಕರಿಸಿ ತಮ್ಮ ಪಕ್ಷಕ್ಕೆ ಬಲ ತುಂಬುವ ಪ್ರಯತ್ನದಲ್ಲಿರುವ ಪ್ರಿಯಾಂಕಾ ಅವರು ರಾಯಬರೇಲಿಯಲ್ಲಿ ಮಹಿಳೆಯರ ಜೊತೆ ಸಂವಾದ ನಡೆಸಿದರು.

ಪ್ರಿಯಾಂಕಾ ಗಾಂಧಿ ಅವರು ರಾಯಬರೇಲಿಯಲ್ಲಿ ಮಹಿಳೆಯರ ಜತೆಗೆ ಭಾನುವಾರ ಸಂವಾದ ನಡೆಸಿದರು

'ಬದಲಾವಣೆ ತರಲು ಬಯಸುವುದಾದರೆ ನೀವು ಒಗ್ಗೂಡಬೇಕು. ನಮ್ಮನ್ನು ಏಕೆ ಯಾರೂ ಗಂಭೀರವಾಗಿ ಪರಿಗಣಿಸುತ್ತಿಲ್ಲ ಎಂದು ವಿಮರ್ಶೆ ಮಾಡಿಕೊಳ್ಳಬೇಕು. ನಾವು ಈಗಾಗಲೇ ಸಾಕಷ್ಟು ಕಷ್ಟಪಟ್ಟಿದ್ದೇವೆ. ಇನ್ನೂ ಕಷ್ಟಪಡುವುದಿಲ್ಲ ಎಂದು ಈಗ ನಾವು ನಿರ್ಧಾರ ಮಾಡಬೇಕು. ನಾವು ಜನಸಂಖ್ಯೆಯ ಅರ್ಧದಷ್ಟು ಇದ್ದೇವೆ. ನಾವು ನಮ್ಮ ಸಾಮರ್ಥ್ಯವನ್ನು ಕಂಡುಕೊಳ್ಳಬೇಕು. ನಾವು ಸಂಘಟಿತರಾಗಿ ಮತ ಚಲಾಯಿಸಿದರೆ, ನಮ್ಮನ್ನು ಗಂಭೀರವಾಗಿ ಪರಿಗಣಿಸುತ್ತಾರೆ' ಎಂದರು.

ಹೆಣ್ಣುಮಕ್ಕಳ ಮದುವೆ ವಯಸ್ಸನ್ನು ಕೇಂದ್ರ ಸರ್ಕಾರವು 21 ವರ್ಷ ವಯಸ್ಸಿಗೆ ಏರಿಸಿರುವ ಕುರಿತು ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, 'ಮಹಿಳೆಯರ ಪರವಾಗಿ ನಾವು ಅಭಿಯಾನ ಆರಂಭಿಸಿದಾಗಿನಿಂದ ಸರ್ಕಾರ ಮಹಿಳೆಯರಿಗಾಗಿ ಪ್ರತಿದಿನ ಏನಾದರೊಂದು ಘೋಷಣೆಗಳನ್ನು ಹೊರಡಿಸುತ್ತಿದೆ' ಎಂದರು. ಜೊತೆಗೆ, 'ಹಿಂದು ಮತ್ತು ಹಿಂದುತ್ವವಾದಿ' ನಡುವಿನ ವ್ಯತ್ಯಾಸ ಕುರಿತು ಸಹೋದರ ರಾಹುಲ್ ಗಾಂಧಿ ನೀಡಿರುವ ವ್ಯಾಖ್ಯಾನವನ್ನು ಸಮರ್ಥಿಸಿದರು. ಉತ್ತರ ಪ್ರದೇಶ ಕಾಂಗ್ರೆಸ್ ಉಸ್ತುವಾರಿ ಹೊತ್ತಿರುವ ಪ್ರಿಯಾಂಕಾ, ಸಾರ್ವಜನಿಕ ಸಭೆಗಳಲ್ಲಿ ಮಾಡುವ ಭಾಷಣಗಳಲ್ಲಿ ಮಹಿಳೆಗೆ ಹೆಚ್ಚು ಒತ್ತು ನೀಡುತ್ತಿದ್ದಾರೆ. ಮಹಿಳಾ ಸಂಘಟನೆಯನ್ನು ಗುರಿಯಾಗಿರಿಸಿಕೊಂಡು ಕಾಂಗ್ರೆಸ್ ಹಲವಾರು ಭರವಸೆಗಳನ್ನು ನೀಡಿದೆ. ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಸರ್ಕಾರಿ ಉದ್ಯೋಗಗಳಲ್ಲಿ ಮಹಿಳೆಯರಿಗೆ ಶೇ 40ರಷ್ಟು ಮೀಸಲಾತಿ ನೀಡುವ ಮತ್ತು ಚುನಾವಣೆಯಲ್ಲಿ ಸ್ಪರ್ಧಿಸಲು ಶೇ 40ರಷ್ಟು ಮಹಿಳೆಯರಿಗೆ ಟಿಕೆಟ್ ನೀಡುವ ಭರವಸೆಗಳು ಇವುಗಳಲ್ಲಿ ಪ್ರಮುಖವಾಗಿವೆ.

ಚುನಾವಣೆ ನಿರ್ವಹಣೆ: ದೆಹಲಿ ಮುಖಂಡರ ನಿಯೋಜನೆ

ನವದೆಹಲಿ (ಪಿಟಿಐ): ಉತ್ತರ ಪ್ರದೇಶ ಹಾಗೂ ಉತ್ತರಾಖಂಡ ವಿಧಾನಸಭಾ ಚುನಾವಣೆಗಳಲ್ಲಿ ಗೆಲುವು ಸಾಧಿಸುವ ಉದ್ದೇಶದಿಂದ, ದೆಹಲಿಯ 150ಕ್ಕೂ ಹೆಚ್ಚು ಬಿಜೆಪಿ ಮುಖಂಡರನ್ನು ಈ ಎರಡೂ ರಾಜ್ಯಗಳಿಗೆ ನಿಯೋಜನೆ ಮಾಡಲಾಗಿದೆ.

ಉತ್ತರ ಪ್ರದೇಶದ ಪಶ್ಚಿಮ ಭಾಗದಲ್ಲಿರುವ 44 ವಿಧಾನಸಭಾ ಕ್ಷೇತ್ರಗಳ ಜಿಲ್ಲಾ ಉಸ್ತುವಾರಿಯಾಗಿ ಕೆಲಸ ಮಾಡಲು 100ಕ್ಕೂ ಹೆಚ್ಚು ಮುಖಂಡರನ್ನು ನಿಯೋಜನೆ ಮಾಡಲಾಗಿದೆ. ಮತಗಟ್ಟೆ ಮಟ್ಟದಲ್ಲಿ ಚುನಾವಣೆ ನಿರ್ವಹಣೆ, ತಳಮಟ್ಟದಿಂದ ಪ್ರಚಾರ, ಪಕ್ಷ–ಕಾರ್ಯಕರ್ತರ ನಡುವೆ ಸಂವಹನ ಏರ್ಪಡಿಸುವ ಜವಾಬ್ದಾರಿ ವಹಿಸಲಾಗಿದೆ. ಜಿಲ್ಲಾ ಹಾಗೂ ವಿಧಾನಸಭಾ ಕ್ಷೇತ್ರ ಮಟ್ಟದಲ್ಲಿ ಕೆಲಸ ಮಾಡಲಿರುವ ಮುಖಂಡರ ತಂಡದ ಮೇಲ್ವಿಚಾರಣೆಯನ್ನು ದೆಹಲಿ ಬಿಜೆಪಿ ಘಟಕದ ಮಾಜಿ ಅಧ್ಯಕ್ಷ ವಿಜೇಂದ್ರ ಗುಪ್ತಾ ಮತ್ತು ಪ್ರಧಾನ ಕಾರ್ಯದರ್ಶಿ ದಿನೇಶ್ ಪ್ರತಾಪ್ ಸಿಂಗ್ ನೋಡಿಕೊಳ್ಳಲಿದ್ದಾರೆ. 'ಚುನಾವಣೆ ನಡೆಯುವ ರಾಜ್ಯಗಳಿಗೆ ಬೇರೆ ರಾಜ್ಯಗಳಿಂದ ಮುಖಂಡರನ್ನು ಕಳುಹಿಸುವುದು ಸಾಮಾನ್ಯ ಪ್ರಕ್ರಿಯೆ. ದೆಹಲಿಗೆ ಹತ್ತಿರದಲ್ಲಿರುವ ಉತ್ತರಾಖಂಡ ಹಾಗೂ ಉತ್ತರ ಪ್ರದೇಶದ ಮುಖಂಡರು ಕೆಲಸ ಮಾಡುವುದರಿಂದ ಆಯಾ ಭಾಗದ ಚುನಾವಣಾ ಫಲಿತಾಂಶದ ಮೇಲೆ ಒಂದಷ್ಟು ಪರಿಣಾಮ ಉಂಟಾಗಲಿದೆ' ಎಂದು ಮುಖಂಡರೊಬ್ಬರು ಹೇಳಿದ್ದಾರೆ.

ಮೀಸಲಾತಿ: ನಿಷಾದ್ ಎಚ್ಚರಿಕೆ

ಉತ್ತರ ಪ್ರದೇಶ ವಿಧಾನಸಭೆಗೆ ನಡೆಯಲಿರುವ ಚುನಾವಣೆಯಲ್ಲಿ ನಿಷಾದ್ (ಮೀನುಗಾರರು) ಸಮುದಾಯದ ಮತಗಳು ಬಿಜೆಪಿಗೆ ಸಿಗಬೇಕಿದ್ದರೆ, ಸಮುದಾಯಕ್ಕೆ ಉದ್ಯೋಗ ಮತ್ತು ಶಿಕ್ಷಣದಲ್ಲಿ ಮೀಸಲಾತಿಯನ್ನು ಚುನಾವಣೆಗೆ ಮೊದಲೇ ಘೋಷಿಸಬೇಕು ಎಂದು ನಿಷಾದ್ ಪಕ್ಷವು ಹೇಳಿದೆ. ನಿಷಾದ್ ಪಕ್ಷ ಮತ್ತು ಬಿಜೆಪಿಯ ಜಂಟಿ ಸಮಾವೇಶವು ಇತ್ತೀಚೆಗಷ್ಟೇ ನಡೆದಿತ್ತು. ನಿಷಾದ್ ಸಮುದಾಯದ ಜನರು ರಾಮಭಕ್ತರು ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಈ ಸಮಾವೇಶದಲ್ಲಿ ಹೇಳಿದ್ದರು. ನಿಷಾದ್ ಪಕ್ಷವು ಉತ್ತರ ಪ್ರದೇಶದಲ್ಲಿ ಬಿಜೆಪಿಯ ಪ್ರಮುಖ ಮಿತ್ರ ಪಕ್ಷವಾಗಿದೆ.

ನಿಷಾದ್ ಪಕ್ಷದ ಅಧ್ಯಕ್ಷ ಸಂಜಯ್ ನಿಷಾದ್ ಅವರು ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರಿಗೆ ಪತ್ರ ಬರೆದಿದ್ದಾರೆ. ಸಮುದಾಯಕ್ಕೆ ಮೀಸಲಾತಿ ನೀಡಲು ಇರುವ ಸಮಸ್ಯೆಯನ್ನು ಚುನಾವಣೆಗೆ ಮುನ್ನವೇ ಬಗೆಹರಿಸಿಕೊಳ್ಳಿ ಎಂದು ಈ ಪತ್ರದಲ್ಲಿ ಹೇಳಿದ್ದಾರೆ.

ಅಕ್ರಮ ಮರಳು ಗಣಿಗಾರಿಕೆಗೆ ಕಡಿವಾಣ: ಪ್ರತ್ಯೇಕ ಕಾವಲು ಪಡೆ ರಚನೆ

ಪ್ರಜಾವಾಣಿ ವಾರ್ತೆ

ನವದೆಹಲಿ: 'ರಾಜ್ಯದಲ್ಲಿ ಅಕ್ರಮ ಮರಳು ಗಣಿಗಾರಿಕೆಗೆ ಕಡಿವಾಣ ಹಾಕುವ ಸಂಬಂಧ ಪ್ರತ್ಯೇಕ ಕಾವಲು ಪಡೆಯನ್ನು ಸ್ಥಾಪಿಸಲಾಗುವುದು' ಎಂದು ಕರ್ನಾಟಕದ ಗಣಿ ಮತ್ತು ಭೂವಿಜ್ಞಾನ ಇಲಾಖೆಯು ರಾಷ್ಟ್ರೀಯ ಹಸಿರು ನ್ಯಾಯಮಂಡಳಿಗೆ (ಎನ್‌ಜಿಟಿ) ತಿಳಿಸಿದೆ.

ರಾಜ್ಯದ ವಿಜಯಪುರ ಹಾಗೂ ರಾಯಚೂರು ಜಿಲ್ಲೆಗಳಲ್ಲಿ ಅಕ್ರಮ ಗಣಿಗಾರಿಕೆ ನಡೆಯುತ್ತಿರುವುದಕ್ಕೆ ಸಂಬಂಧಿಸಿದ ಅರ್ಜಿಯ ವಿಚಾರಣೆ ನಡೆಸಿದ ಎನ್‌ಜಿಟಿಯ ದಕ್ಷಿಣ ಪೀಠಕ್ಕೆ ಸಲ್ಲಿಸಿರುವ ಅಫಿಡವಿಟ್‌ನಲ್ಲಿ ಇಲಾಖೆ ಈ ಮಾಹಿತಿ ನೀಡಿದೆ.

'ಅಕ್ರಮ ಮರಳು ಗಣಿಗಾರಿಕೆ ನಿಯಂತ್ರಿಸಲು ಸರ್ಕಾರ ಕಠಿಣ ಕ್ರಮಗಳನ್ನು ಕೈಗೊಂಡಿದೆ. ಅಕ್ರಮ ಗಣಿಗಾರಿಕೆ ಮೇಲೆ ನಿಗಾ ಇಡುವಂತೆ ಸಂಬಂಧಪಟ್ಟ ಜಿಲ್ಲೆಗಳ ಭೂವಿಜ್ಞಾನಿಗಳಿಗೆ ಸೂಚಿಸಲಾಗಿದೆ. ಅಕ್ರಮದಲ್ಲಿ ತೊಡಗಿರುವವರ ವಿರುದ್ಧ ಕ್ರಮ ಕೈಗೊಳ್ಳಲು ಪೊಲೀಸ್, ಕಂದಾಯ, ಅರಣ್ಯ ಇಲಾಖೆ ಹಾಗೂ ಪಿಡಬ್ಲ್ಯೂಡಿಗೆ ಅಧಿಕಾರ ನೀಡಲಾಗಿದೆ' ಎಂದೂ ಇಲಾಖೆ ತಿಳಿಸಿದೆ. 'ಅಕ್ರಮ ಮರಳು ಗಣಿಗಾರಿಕೆ ನಿಯಂತ್ರಿಸುವ ಸಂಬಂಧ, ಕೆರೆಗಳು, ಹೊಂಡಗಳು ಹಾಗೂ ನದಿಗಳಿಗೆ ಸಂಪರ್ಕ ಕಲ್ಪಿಸುವ ಅನಧಿಕೃತ ಗ್ರಾಮೀಣ ರಸ್ತೆಗಳನ್ನು ಬಂದ್ ಮಾಡಲಾಗಿದೆ. ಇಲಾಖೆಯು ಮರಳು ಬ್ಲಾಕ್‌ಗಳನ್ನು ಗುರುತಿಸಿ, ವೈಜ್ಞಾನಿಕ ರೀತಿಯಲ್ಲಿ ಅವುಗಳನ್ನು ಹರಾಜು ಹಾಕುತ್ತಿದೆ' ಎಂದು ತಿಳಿಸಿದೆ.

'ಗುತ್ತಿಗೆದಾರರು ಮರಳು ಸಾಗಿಸಲು ಬಳಸುವ ವಾಹನಗಳಿಗೆ ಜಿಪಿಎಸ್ ವ್ಯವಸ್ಥೆಯನ್ನು ಅಳವಡಿಸಲಾಗಿದೆ. ಇದರಿಂದ ಮರಳು ಸಾಗಾಟದ ಮೇಲೆ ನಿಗಾ ಇಡಲು ಸಾಧ್ಯವಾಗಲಿದೆ. ಪ್ರಮುಖ ಸ್ಥಳಗಳಲ್ಲಿ ವೇಬ್ರಿಡ್ಜ್ ಗಳು ಹಾಗೂ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಲಾಗಿದೆ' ಎಂದು ಇಲಾಖೆಯು ಎನ್‌ಜಿಟಿಗೆ ಮಾಹಿತಿ ನೀಡಿದೆ.

ಗುಲಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
ನಂ: ಜೆಸ್ಕಾಂ/ಮು.ಅ(ವಿ)/ಅ.ಅ(ಕ)/ಸಕಾನಿಅ(ವಿ)–2/2021–22/5248 ದಿನಾಂಕ: 17–12–2021
:: ಟೆಂಡರ್ ಪ್ರಕಟಣೆ ::
1) ಕಾಮಗಾರಿ ವಿವರ: ಕಲಬುರಗಿ ನಗರ ವಿಭಾಗಕ್ಕೆ ಅಗತ್ಯವಿರುವ Providing new 33kV link line to existing 33kv Azadpur line from 110/33/11kv North MUSS & replacing of existing rabbit conductor till Maniyar function hall in Kalaburagi District. on Total Turnkey Basis, 2) ಕಾಮಗಾರಿ ಅಂದಾಜು ಮೊತ್ತ : **2,27,23,269/-,** 3) ಗುತ್ತಿಗೆದಾರರ ಅರ್ಹತೆ ವಿವರ : ಐ.ಎಫ್.ಬಿ/ಐ.ಟಿ.ಬಿ ಪ್ರಕಾರ, 4) ಬಿಡ್ ದಾಖಲೆಗಳು ಲಭ್ಯವಿರುವ ದಿನಾಂಕ ಅಥವಾ ನಂತರ : 21.12.2021, 5) ಪ್ರೀ–ಬಿಡ್ ಮೀಟಿಂಗ್ ದಿನಾಂಕ : **29.12.2021 ಬೆಳಿಗ್ಗೆ 11:00,** 6) ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ : **20.01.2022 ಸಾಯಂಕಾಲ 5:00,** 7) ತಾಂತ್ರಿಕ ಬಿಡ್‌ತೆರೆಯುವ ದಿನಾಂಕ : **21.01.2022 ಸಾಯಂಕಾಲ 5:10,** 8) ಆರ್ಥಿಕ ಬಿಡ್ ತೆರೆಯುವ ದಿನಾಂಕ : **24.01.2022 ಬೆಳಿಗ್ಗೆ 11:00,** 9) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ: ಅಧೀಕ್ಷಕ ಅಭಿಯಂತರರು(ವಿ), ಕಾ ಮತ್ತು ಪಾ ವಲಯಕಛೇರಿ, ಗು.ವಿ.ಸ.ಕಂ.ನಿ. ಕಲಬುರಗಿ, ಮೋ: 9449597445, 10) ಅಂತರಜಾಲತಾಣದ ವಿಳಾಸ : www. e-proc.Karnataka.gov.in
ಸಹಿ/– ಮುಖ್ಯ ಅಭಿಯಂತರರು (ವಿ).,
ಕಾ ಮತ್ತು ಪಾ ವಲಯ ಕಛೇರಿ, ಗು.ವಿ.ಸ.ಕಂ.ನಿ, ಕಲಬುರಗಿ.
ವಾ.ಸಾ.ಸಂ.ಇ/ಕಲಬುರಗಿ/819/ಎಂ.ಸಿ&ಎ/2021–22

ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ
(ಕರ್ನಾಟಕ ಸರ್ಕಾರದ ಸ್ವಯತ್ತತಾ ಸಂಸ್ಥೆ)
ಡಾ. ಎಂ.ಹೆಚ್. ಮರಿಗೌಡ ರಸ್ತೆ, ಬೆಂಗಳೂರು–560 029.
ದೂರವಾಣಿ: 91–80–26560722 (Dir), 26094000 ಫ್ಯಾಕ್ಸ್: 080–26560723
No.KMIO/SME(1)/Tender/M.Equip/283/2021-22 Date: 18.12.2021
ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ
ಈ ಕೆಳಗಿನ ವೈದ್ಯಕೀಯ ಸಲಕರಣೆಗಳ ಪೂರೈಕೆಗಾಗಿ ದ್ವಿ–ಲಕೋಟೆ ಪದ್ಧತಿಯಲ್ಲಿ ಆನ್‌ಲೈನ್ ಮುಖಾಂತರ ಟೆಂಡರುಗಳನ್ನು ಆಹ್ವಾನಿಸಲಾಗಿದೆ.

Sl. No.	Name of the Equipment	Quantity
1	Request for Proposal for Installation of PET CT Scanner under PPP Model at KMIO.,	2 Nos.

ಆನ್‌ಲೈನ್‌ನಲ್ಲಿ ಬಿಡ್ ದಾಖಲೆಗಳ ಲಭ್ಯತೆ: **22.12.2021 ರಿಂದ 22.01.2022 ರವರೆಗೆ.** ವೆಬ್‌ಸೈಟ್: **https://eproc.karnataka.gov.in**ನಲ್ಲಿ ನೋಡಿ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಶುಲ್ಕ **ರೂ.500/–**ನ್ನು ಪಾವತಿಸಿ, ಬಿಡ್‌ನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಸಲ್ಲಿಸಬಹುದಾಗಿದೆ. ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಬಿಡ್ ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ **22.01.2022 ರಂದು ಮಧ್ಯಾಹ್ನ 3.00 ಗಂಟೆಗೆ.** ಟೆಂಡರ್ ಸ್ವೀಕರಿಸುವ ಪ್ರಾಧಿಕಾರವು ಯಾವುದೇ ಕಾರಣ ನೀಡದೆ ಟೆಂಡರನ್ನು ಸ್ವೀಕರಿಸುವ/ತಿರಸ್ಕರಿಸುವ/ರದ್ದುಪಡಿಸುವ ಹಕ್ಕನ್ನು ಕಾಯ್ದಿರಿಸಿಕೊಂಡಿರುತ್ತದೆ.
ಸಹಿ/–
ನಿರ್ದೇಶಕರು
DIPR/DDU/2448/AAPL/2021-22
ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿ
ಟೆಂಡರ್‌ಗಳಿಗಾಗಿ ಆಹ್ವಾನ (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)
ಬೆಂಗಳೂರು ಜಲ ಮಂಡಳಿಯು ಕೆಳಕಂಡ ಕಾಮಗಾರಿಗಳಿಗಾಗಿ ನೋಂದಾಯಿತ ಏಜೆನ್ಸಿಗಳಿಂದ ಟೆಂಡರುಗಳನ್ನು ಆಹ್ವಾನಿಸಿದೆ.

ಕ್ರ. ಸಂ.	ವಿಭಾಗ	ಐಎಫ್‌ಟಿ ಸಂಖ್ಯೆ	ಟೆಂಡರ್‌ಗಿಟ್ಟ ಮೊತ್ತ(ರೂ.ಗಳಲ್ಲಿ)	ಇಎಂಡಿ ಮೊತ್ತ (ರೂ.ಗಳಲ್ಲಿ)	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ
ಮುಖ್ಯ ಅಭಿಯಂತರರ ಕಛೇರಿ (ಪೂರ್ವ), 7ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು–560009						
1	ಆಗ್ನೇಯ–1	ಬೆಂಜಮಂ/ಕಾನಿಅ(ಆಗ್ನೇಯ)–1/ಪಿಬಿ/2648/2021–22 ದಿನಾಂಕ:10.12.2021	1 ರೂ. 11,66,677/–	ರೂ. 29,200/–	03.01.2022, ಸಂಜೆ 5:00 ಗಂಟೆಯವರೆಗೆ	04.01.2022, ಸಂಜೆ 5:30 ಗಂಟೆಯ ನಂತರ
2			2 ರೂ. 19,75,793/–	ರೂ. 49,400/–		
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ಆಗ್ನೇಯ–1)						
ಮುಖ್ಯ ಅಭಿಯಂತರರ ಕಛೇರಿ (ತ್ಯಾನೀನಿ), 5ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು–560009						
3	ಎಸ್‌ಟಿಪಿ–ವಿ.ವ್ಯಾಲಿ	ಬೆಂಜಮಂ/ಕಾನಿಅ(ಎಸ್‌ಟಿಪಿ)ವಿ.ವಿ/ಪಿಬಿ/847/2021–22 ದಿನಾಂಕ: 15.12.2021	ರೂ. 92.61 ಲಕ್ಷಗಳು	ರೂ. 1,86,000/–	03.01.2022, ಸಂಜೆ 5:30 ಗಂಟೆಯವರೆಗೆ	05.01.2022, ಸಂಜೆ 4:00 ಗಂಟೆಯ ನಂತರ
4		ಬೆಂಜಮಂ/ಕಾನಿಅ(ಎಸ್‌ಟಿಪಿ)ವಿ.ವಿ/ಪಿಬಿ/849/2021–22 ದಿನಾಂಕ: 15.12.2021	ರೂ. 10.16 ಲಕ್ಷಗಳು	ರೂ. 25,500/–	29.12.2021, ಸಂಜೆ 5:30 ಗಂಟೆಯವರೆಗೆ	31.12.2021, ಸಂಜೆ 4:00 ಗಂಟೆಯ ನಂತರ
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ಎಸ್‌ಟಿಪಿ–ವಿ.ವ್ಯಾಲಿ)						
5	ತ್ಯಾನೀನಿ–ವಿ.ವ್ಯಾಲಿ	ಬೆಂಜಮಂ/ಕಾನಿಅ(ತ್ಯಾನೀನಿ–ವಿ.ವಿ)/ಪಿಬಿ/1222/2021–22 ದಿನಾಂಕ: 16.12.2021	ರೂ. 59.63 ಲಕ್ಷಗಳು	ರೂ. 1.20 ಲಕ್ಷಗಳು	03.01.2022, ಸಂಜೆ 5:30 ಗಂಟೆಯವರೆಗೆ	05.01.2022, ಸಂಜೆ 4:00 ಗಂಟೆಗೆ
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ತ್ಯಾನೀನಿ–ವಿ.ವ್ಯಾಲಿ)						
6	ತ್ಯಾನೀನಿ–ಕೆ&ಟಿ ವ್ಯಾಲಿ	ಬೆಂಜಮಂ/ಇಡಬ್ಲ್ಯೂಕೆಟಿ/ಪಿಬಿ/1761/2021–22 ದಿನಾಂಕ: 14.12.2021	ರೂ. 68.29 ಲಕ್ಷಗಳು	ರೂ. 1.37 ಲಕ್ಷಗಳು	27.12.2021, ಸಂಜೆ 4:00 ಗಂಟೆಯವರೆಗೆ	29.12.2021, ಸಂಜೆ 4:00 ಗಂಟೆಗೆ
7		ಬೆಂಜಮಂ/ಇಡಬ್ಲ್ಯೂಕೆಟಿ/ಪಿಬಿ/1762/2021–22 ದಿನಾಂಕ: 14.12.2021	ರೂ. 33.767 ಲಕ್ಷಗಳು	ರೂ. 0.68 ಲಕ್ಷಗಳು		
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ತ್ಯಾನೀನಿ–ಕೆ&ಟಿ) ವ್ಯಾಲಿ						
ಮುಖ್ಯ ಅಭಿಯಂತರರ ಕಛೇರಿ (ವಿನ್ಯಾಸ), 9ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು–560009						
8	ಕೇಂದ್ರ ಉಗ್ರಾಣ	ಬೆಂಜಮಂ/ಇಇಎಸ್‌ಟಿ/ಸಕಾನಿಅ/ಸಅ/591/2021–22 ದಿನಾಂಕ: 15.12.2021	ರೂ. 47,79,000/–	ರೂ. 1,19,475/–	06.01.2022 3:00 ಗಂಟೆಯವರೆಗೆ	10.01.2022, ಮಧ್ಯಾಹ್ನ 12:00 ಗಂಟೆಗೆ
9		ಬೆಂಜಮಂ/ಕಾನಿಅ(ಕೇಂ.ಉ)/ಸಕಾನಿಅ/ಸಅ/ಉ/593/2021–22 ದಿನಾಂಕ: 15.12.2021	ರೂ. 72,60,840/–	ರೂ. 1,45,220/–	31.12.2021, ಸಂಜೆ 4:00 ಗಂಟೆಯೊಳಗೆ	03.01.2022, ಮಧ್ಯಾಹ್ನ 12:00 ಗಂಟೆಗೆ
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ಕೇಂದ್ರ ಉಗ್ರಾಣ)						
10	ಗುಣ ಆಶ್ವಾಸನೆ	ಬೆಂಜಮಂ/ಇಕ್ಯೂಎಟಿಇ/ಕಿಅ/825/2021–22 ದಿನಾಂಕ: 14.12.2021	ರೂ. 86,40,000/–	ರೂ. 1,73,000/–	31.12.2021, ಸಂಜೆ 4:00 ಗಂಟೆಯವರೆಗೆ	03.01.2022 ಬೆಳಗ್ಗೆ 10:30 ಗಂಟೆಗೆ
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ಗುಣ ಆಶ್ವಾಸನೆ)						
11	ಡಿಸಿ & ಬಿವಿಎಂ	ಬೆಂಜಮಂ/ಕಾನಿಅ(ಡಿಸಿ&ಬಿವಿಎಂ)ಡಿ/ಪಿಬಿ/ಬಿವಿಎಂ/4271/2021–22 ದಿನಾಂಕ: 17.12.2021	ರೂ. 48,56,789/–	ರೂ. 97,136/–	03.01.2022, ಸಂಜೆ 4:00 ಗಂಟೆಯವರೆಗೆ	05.01.2022, ಮಧ್ಯಾಹ್ನ 12:00 ಗಂಟೆಗೆ
12		ಬೆಂಜಮಂ/ಕಾನಿಅ(ಡಿಸಿ&ಬಿವಿಎಂ)ಡಿ/ಪಿಬಿ/ಬಿವಿಎಂ/4275/2021–22 ದಿನಾಂಕ: 17.12.2021	ರೂ. 22,54,521/–	ರೂ. 56,363/–		
13		ಬೆಂಜಮಂ/ಕಾನಿಅ(ಡಿಸಿ&ಬಿವಿಎಂ)ಡಿ/ಪಿಬಿ/ಬಿವಿಎಂ/4277/2021–22 ದಿನಾಂಕ: 17.12.2021	ರೂ. 44,98,431/–	ರೂ. 89,969/–		
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ಡಿಸಿ&ಬಿವಿಎಂ)						
14	ಆರ್‌ಬಿ–ಐಟಿ	ಬೆಂಜಮಂ/ಇಆರ್‌ಬಿ/447/2021–22 ದಿನಾಂಕ: 16.12.2021	ರೂ. 24,28,385/–	ರೂ. 48,568/–	29.12.2021, ಸಂಜೆ 4:00 ಗಂಟೆಯವರೆಗೆ	30.12.2021 ಸಂಜೆ 4:30 ಗಂಟೆಗೆ
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ಆರ್‌ಬಿ–ಐಟಿ)						
ಮುಖ್ಯ ಅಭಿಯಂತರರ ಕಛೇರಿ (ಕಾವೇರಿ), 5ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು–560009						
15	ಕಾವೇರಿ ಮುಖ್ಯ ಕಾಮಗಾರಿಗಳ ವಿಭಾಗ	ಬೆಂಜಮಂ/ಕಾನಿಅ(ಸಿಹೆಚ್)/ಸಕಾನಿಅ(ಸಿಹೆಚ್–3)4182/2021–22 ದಿನಾಂಕ: 17.12.2021	ರೂ. 31,98,852/–	ರೂ. 64,000/–	05.01.2022, ಸಂಜೆ 3:00 ಗಂಟೆಯವರೆಗೆ	07.01.2022 ಸಂಜೆ 4:00 ಗಂಟೆಗೆ
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ಕಾ.ಮು.ಕಾ.ವಿ)						
16	ಕಾವೇರಿ–4	ಬೆಂಜಮಂ/ಕಾನಿಅ(ಕೆ–4)/ಎಪಿ/ಪಿಬಿ/1554/2021–22 ದಿನಾಂಕ: 09.12.2021	ರೂ. 7,20,000/–	ರೂ. 18,000/–	19.01.2022, ಸಂಜೆ 4:00 ಗಂಟೆಯವರೆಗೆ	21.01.2022 ಸಂಜೆ 4:00 ಗಂಟೆಗೆ
17		ಬೆಂಜಮಂ/ಕಾನಿಅ(ಕೆ–4)/ಎಪಿ/ಪಿಬಿ/1555/2021–22 ದಿನಾಂಕ: 09.12.2021	ರೂ. 14,35,000/–	ರೂ. 36,000/–		
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ಕೆ–4)						

ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತು ಮಾಹಿತಿಗಳನ್ನು https://eproc.karnataka.gov.in ಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಕೆಳಸಹಿದಾರರ ಕಚೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.
ವಾಸಾಸಂಇ/ಬೆಂ.ನ/ಜೆಎ/2434/2021–22
ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಭಾರತೀಯ ರಿಸರ್ವ್ ಬ್ಯಾಂಕ್
RESERVE BANK OF INDIA
www.rbi.org.in
Azadi Ka Amrit Mahotsav
10 ಮತ್ತು 12 ವರ್ಷ ಪಕ್ವತಾ ಅವಧಿಯ ಕರ್ನಾಟಕ ಸರ್ಕಾರದ ಭದ್ರತಾ ಪತ್ರಗಳ ಹರಾಜು
ಕರ್ನಾಟಕ ರಾಜ್ಯ ಸರ್ಕಾರವು ಒಟ್ಟು ₹2,000.00 ಕೋಟಿ ರೂಪಾಯಿಗಳ (ಮುಖ ಬೆಲೆ) ಭದ್ರತಾ ಪತ್ರಗಳನ್ನು ಹರಾಜಿನ ಮೂಲಕ ಮಾರಾಟ ಮಾಡಲು ಉದ್ದೇಶಿಸಿದೆ.
ಬಹು ದರ ನಮೂನೆಯ ಅಡಿಯಲ್ಲಿ, ಹುಟ್ಟುವಳಿ ಆಧಾರಿತ ಹರಾಜನ್ನು ಭಾರತೀಯ ರಿಸರ್ವ್ ಬ್ಯಾಂಕ್ ಕೋರ್ ಬ್ಯಾಂಕಿಂಗ್ ಸೊಲ್ಯೂಶನ್ (ಈ–ಕುಬೇರ್) ವ್ಯವಸ್ಥೆಯ ಮೂಲಕ **ಡಿಸೆಂಬರ್ 21, 2021 (ಮಂಗಳವಾರ)** ರಂದು ನಡೆಸಲಾಗುವುದು.
ವೈಯಕ್ತಿಕ ಹೂಡಿಕೆದಾರರು **ರಿಟೇಲ್ ಡೈರೆಕ್ಟ್ ಪೋರ್ಟಲ್ (https://rbiretaildirect.org.in)** ಮೂಲಕ ಸ್ಪರ್ಧಾತ್ಮಕವಲ್ಲದ ಯೋಜನೆಯ ಪ್ರಕಾರ ಬಿಡ್‌ಗಳನ್ನು ಹಾಕಬಹುದು. ಹೆಚ್ಚಿನ ವಿವರಗಳಿಗೆ ಭಾರತೀಯ ರಿಸರ್ವ್ ಬ್ಯಾಂಕಿನ **ಡಿಸೆಂಬರ್ 17, 2021 (ಶುಕ್ರವಾರ)** ದಿನಾಂಕದ ಪತ್ರಿಕಾ ಪ್ರಕಟಣೆಯ RBI (ವೆಬ್ ತಾಣ www.rbi.org.in) ಯನ್ನು ನೋಡಿ.
"ಹಣ ನೀಡುವ ಭರವಸೆ ಕೊಡುವ ಇ-ಮೇಲ್/ಎಸ್‌ಎಂಎಸ್/ದೂರವಾಣಿ ಕರೆಗಳಿಂದ ಮೋಸ ಹೋಗಬೇಡಿ"

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ
ನಂ.16 ಸಿ–1, ಮಿಲ್ಲರ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು – 560 052.
ದೂರವಾಣಿ : 080–22268677/78/79 ಫ್ಯಾಕ್ಸ್ : 080–22268667
ಇ–ಮೇಲ್: kerc-ka@nic.in ವೆಬ್‌ಸೈಟ್: www.karunadu.karnataka.gov.in/kerc
ಸಂಖ್ಯೆ: ಕವಿನಿಆ/3/ಡಿಡಿಡಿ/2021–22/1181/ಬೆಂಗಳೂರು ದಿನಾಂಕ : 13.12.2021
ಸೂಚನೆ
ವಿಷಯ: ಕರಡು–ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ವಿದ್ಯುಚ್ಛಕ್ತಿ ಗ್ರಾಹಕರ ಹಕ್ಕುಗಳು, ವಿದ್ಯುತ್ ಸರಬರಾಜಿಗಾಗಿ ಪರವಾನಿಗೆದಾರರ ಕರ್ತವ್ಯಗಳು, ಗ್ರಾಹಕರ ದೂರು ನಿರ್ವಹಣಾ ಕಾರ್ಯವಿಧಾನ ಮತ್ತು ಪರವಾನಿಗೆದಾರರ ಕಾರ್ಯಕ್ಷಮತೆಯ ಮಾನದಂಡಗಳು) ವಿನಿಯಮಗಳು 2021.
ವಿಷಯದಲ್ಲಿ ಪ್ರಸ್ತಾಪಿಸಿರುವ ಕರಡು ವಿನಿಯಮವನ್ನು, ಕರ್ನಾಟಕ ರಾಜ್ಯ ಪತ್ರದಲ್ಲಿ ದಿನಾಂಕ:23.11.2021ರಂದು ಪ್ರಕಟಗೊಳಿಸಲಾಗಿದ್ದು, ಸದರಿ ಪ್ರತಿಯನ್ನು ಕ.ವಿ.ನಿ.ಆ.ದ ವೆಬ್‌ಸೈಟ್: **www.karunadu.karnataka.gov.in/kerc** ನಲ್ಲಿ ಲಭ್ಯವಿರಿಸಲಾಗಿದೆ. ಆಯೋಗವು **ದಿನಾಂಕ: 27.12.2021ರಂದು ಬೆಳಿಗ್ಗೆ 11.00 ಗಂಟೆಗೆ** ಆಯೋಗದ ನ್ಯಾಯಾಂಗ ಸಭಾಂಗಣದಲ್ಲಿ ಸಾರ್ವಜನಿಕ ವಿಚಾರಣೆಯನ್ನು ಏರ್ಪಡಿಸಿದ್ದು, ಆಸಕ್ತರು ಈ ವಿಚಾರಣೆಯಲ್ಲಿ ಭಾಗವಹಿಸಿ ಆಯೋಗದ ಮುಂದೆ ಖುದ್ದಾಗಿ ಹಾಜರಾಗಬಹುದು ಮತ್ತು ಮೌಖಿಕ ಸಲ್ಲಿಕೆಗಳನ್ನು ಮಾಡಬಹುದು.
ಸಹಿ/- ಕಾರ್ಯದರ್ಶಿ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ

BANGALORE DEVELOPMENT AUTHORITY
T. Chowdaiah Road, Kumara Park West, Bengaluru- 560 020
No. BDA/RMP-2041/1453/2021-22 Date: 17.12.2021
Notice Inviting Tender for selection of consultant for preparation of Revised Master Plan-2041 for Bangalore Local Planning Area.
Bangalore Development Authority intends to prepare RMP-2041 for Bangalore Local Planning Area. Commissioner, Bangalore Development Authority invities tender for engaging services of reputed consultants for the above said work through e-Procurement process. Tender document containing details of eligibility criteria, scope of work and other terms and conditions & other details may be obtained from e-Procurement Portal, Gok. Last date for submission of tender at **http://www.eproc.karnataka.gov.in** is **24.01.2022 at 17.30 hours.** BDA reserves the right to reject any or all proposals without assigning any reason.
Sd/- Town Planner Member
BDA/PRO/CLU/49/2021-22

ಮುಖ್ಯಾಧಿಕಾರಿ
ಪಟ್ಟಣ ಪಂಚಾಯತ ಕಾರ್ಯಾಲಯ, ಕೆರೂರ
ತಾ॥ಬದಾಮಿ. ಜಿ॥ಬಾಗಲಕೋಟ. Phone No:08357-230037
Website:www.kerurtown.gov.in e-mail: itstaff_ulb_kerur@yahoo.co.in
ಕ್ರ.ಸಂ:ಪಪಂಕೆ:ಲೋವಿ:ಟೆಂ.ಪ್ರ :2020–21 ದಿನಾಂಕ: 16–12–2021
ಅಲ್ಪಾವಧಿ ಇ–ಪ್ರೊಕ್ಯೂರಮೆಂಟ್ ಟೆಂಡರ್ ಪ್ರಕಟಣೆ
e-procurement portal ಮುಖಾಂತರ e-protal: https://eproc.karnataka.gov.in
ಕರ್ನಾಟಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಆದ್ಯಾದೇಶ 1999, ನಿಯಮಾವಳಿಗಳು 2000 ರಂತೆ ಕೆರೂರ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಸನ್ 2008–09 ರಿಂದ ಸನ್ 2019–20 ನೇ ಸಾಲಿನ ಎಸ್‌ಎಫ್‌ಸಿ, ಉಳಿತಾಯ, 15ನೇ ಹಣಕಾಸು ಆಯೋಗದ ಸಾಮಾನ್ಯ ಮೂಲ ಅನುದಾನ ಹಾಗೂ ಸ್ಥಳಿಯ ಸಂಸ್ಥೆಯ ಅನುದಾನದಲ್ಲಿ ಕೆಳಗೆ ನಮೂದಿಸಿದ ಕಾಮಗಾರಿಗಳಿಗೆ **ಪಟ್ಟಣ ಪಂಚಾಯತ ಕೆರೂರನಲ್ಲಿ ನೋಂದಾಯಿತ/ಲೋಕೋಪಯೋಗಿ** ಇಲಾಖೆಯಲ್ಲಿ ನೋಂದಾಯಿತ ಸಿವ್ಹಿಲ್ ಗುತ್ತಿಗೆದಾರರು ಹಾಗೂ ಮುಖ್ಯ ವಿದ್ಯುತ ಪರಿವೀಕ್ಷಕರಿಲ್ಲಿ ನೋದಾಯಿತ ವಿದ್ಯುತ ಅರ್ಹ ಗುತ್ತಿಗೆದಾರರಿಂದ E-Proceurement portal ನಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ Standard Tender Documents ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕೆ (ತಿದ್ದುಪಡಿ) ಅಧಿನಿಯಮ 2016 ಗೆಜೆಟ್ ಅಧಿಸೂಚನೆ ದಿನಾಂಕ : 29.06.2017 ರನ್ವಯ ಟೆಂಡರನ್ನು ಆಹ್ವಾನಿಸಲಾಗಿದ್ದು, ವಿವರ ಕೆಳಗಿನಂತಿರುತ್ತದೆ.
ಅಲ್ಪಾವಧಿ ಇ–ಪ್ರೊಕ್ಯೂರಮೆಂಟ್ ಟೆಂಡರ್ ಪ್ರಕಟಣೆ

ಕ್ರ ಸಂ	ಪ್ಯಾ ಸಂ	ಇಂಡೆಂಟ್ ಸಂಖ್ಯೆಗಳು	ಅಂದಾಜು ಮೊತ್ತ ಲಕ್ಷಗಳಲ್ಲಿ	ಇ.ಎಮ್.ಡಿ (ರೂ ಗಳಲ್ಲಿ)	ಕಾಮಗಾರಿಗಳ ಒಟ್ಟು ಮೊತ್ತ
1	1	DMA/2021-22/RD/WORK_ INDENT123762	52.73	132000.00	108.18 ಲಕ್ಷಗಳು
	2	DMA/2021-22/OW/WORK_ INDENT123756	7.31	18500.00	
	3	DMA/2021-22/OW/WORK_ INDENT123699	8.99	22500.00	
	4	DMA/2021-22/OW/WORK_ INDENT123702	11.25	28200.00	
	5	DMA/2021-22/BD/WORK_ INDENT123726	9.62	24100.00	
	6	DMA/2021-22/RD/WORK_INDENT123732	9.8	24500.00	
	7	DMA/2021-22/EL/WORK_ INDENT123727	3.92	10000.00	
	8	DMA/2021-22/RD/WORK_ INDENT123753	4.56	11625.00	

ಮೇಲೆ ವಿವರಿಸಿದಂತೆ ಕಾಮಗಾರಿಗಳ ಬಗ್ಗೆ ಹೆಚ್ಚಿನ ಮಾಹಿತಿಗಾಗಿ http://eproc.karnataka.gov.in ದಲ್ಲಿ ಅಥವಾ ಈ ಕಛೇರಿಯ ತಾಂತ್ರಿಕ ವಿಭಾಗದಲ್ಲಿ ಸಂಪರ್ಕಿಸಬಹುದಾಗಿದೆ ಮತ್ತು ಕ್ರಸಂ 1 ರಿಂದ 18 ರವರೆಗಿನ ಷರತ್ತುಗಳು ಅನ್ವಯವಾಗುತ್ತವೆ.
1. Last date for submission of bid through e- procurement portal before : 07 -01-2022 At 16.30 hours.
2. Opening of Technical and Financial bid is on or after 08 -01- 2022 at 17.00 Hrs.
ಸಹಿ/– (ಶ್ರೀ. ಎನ್. ಕೆಂಚಪ್ಪ) ಮುಖ್ಯಾಧಿಕಾರಿ ಪಟ್ಟಣ ಪಂಚಾಯತ, ಕೆರೂರ
ಸಹಿ/– (ಶ್ರೀಮತಿ. ಎಮ್. ಎಮ್. ತಿಮ್ಮಾಪೂರ) ಅಧ್ಯಕ್ಷರು ಪಟ್ಟಣ ಪಂಚಾಯತ, ಕೆರೂರ

ಕರ್ನಾಟಕ ಆದಿಜಾಂಬವ ಅಭಿವೃದ್ಧಿ ನಿಗಮ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ನಂ. 17/5, ಓಬ್ಲಾಂಗ್ ಬ್ಲಾಕ್, 2ನೇ ಮಹಡಿ, ಯೂನಿಟಿ ಕಟ್ಟಡ, ಜೆ.ಸಿ.ರಸ್ತೆ, ಬೆಂಗಳೂರು–560002
ಸಂಖ್ಯೆ: ಕಆಜಾಅನಿ/ಗಂಕಯೋ/ಟೆಂಡರ್/106-P3/Call-2/2020–21 ದಿನಾಂಕ: 18.12.2021
ಅಲ್ಪಾವಧಿ ಮರು ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)
ಕರ್ನಾಟಕ ಆದಿಜಾಂಬವ ಅಭಿವೃದ್ಧಿ ನಿಗಮದ ವತಿಯಿಂದ 2020–21ನೇ ಸಾಲಿಗೆ ಗಂಗಾ ಕಲ್ಯಾಣ ಯೋಜನೆಯಡಿ ಕರ್ನಾಟಕ ರಾಜ್ಯದ ಬೆಂಗಳೂರು ನಗರ, ಚಿತ್ರದುರ್ಗ, ದಾವಣಗೆರೆ ಹಾಗೂ ಶಿವಮೊಗ್ಗ ಜಿಲ್ಲೆಗಳಲ್ಲಿ 165 ಮಿ.ಮಿ ವ್ಯಾಸದ ಕೊಳವೆಬಾವಿಗಳನ್ನು ಕೊರೆದು, ಕೊರೆದ ಕೊಳವೆಬಾವಿಗಳಿಗೆ ಸಬ್‌ಮರ್ಸಿಬಲ್ ಪಂಪ್‌ಸೆಟ್ ಮತ್ತು ಪೂರಕ ಸಾಮಗ್ರಿಗಳ ಸರಬರಾಜು, ಅಳವಡಿಕೆ ಹಾಗೂ ವಿದ್ಯುದ್ದೀಕರಣದ ಎಲ್ಲಾ ಕಾಮಗಾರಿಗಳನ್ನು ಟೆಂಡರ್‌ನಡಿ ಸೇರಿದಂತೆ ಕಂಪನಿ/ಸಂಸ್ಥೆಗಳಿಂದ (Individual companies/Firms) ಇ–ಪೋರ್ಟಲ್ ಮುಖಾಂತರ ಪ್ಯಾಕೇಜ್–3 ಗೆ (Call-2) ಟೆಂಡರ್‌ನ್ನು ಅಹ್ವಾನಿಸಲಾಗಿದೆ.
ಟೆಂಡರ್‌ಗಳಲ್ಲಿ ಭಾಗವಹಿಸಲು ಬೇಕಾದ ಅರ್ಹತೆ, ಟೆಂಡರ್ ಸಲ್ಲಿಸುವ ವಿಧಾನ, ನಿಭಂದನೆಗಳು, ಇ.ಎಂ.ಡಿ ಮೊತ್ತ, ಆಯಾ ಜಿಲ್ಲೆಯಲ್ಲಿ ಕೊರೆಯಬೇಕಾದ ಕೊಳವೆಬಾವಿಗಳ ಸಂಖ್ಯೆ, ಸರಬರಾಜು ಮಾಡಬೇಕಾದ ಪಂಪ್‌ಸೆಟ್‌ಗಳ ಸಂಖ್ಯೆ ಹಾಗೂ ಹೆಚ್ಚಿನ ಮಾಹಿತಿಗಾಗಿ ಅಂತರ್ಜಾಲ ತಾಣ https:\\eproc.karnataka.gov.in ನಲ್ಲಿ ಅಥವಾ ಕಛೇರಿ ವೇಳೆಯಲ್ಲಿ ಸಂಬಂಧಿಸಿದ ಅಧಿಕಾರಿಗಳನ್ನು ಸಂಪರ್ಕಿಸಬಹುದಾಗಿದೆ.
1) ಇ–ಪೋರ್ಟಲ್‌ನಲ್ಲಿ **ದಿನಾಂಕ: 21.12.2021 ಬೆಳಿಗ್ಗೆ 11:00 ಗಂಟೆಯಿಂದ** ಟೆಂಡರ್ ದಾಖಲಾತಿಗಳನ್ನು ಡೌನ್‌ಲೋಡ್ ಮಾಡಿಕೊಂಡು **ದಿನಾಂಕ: 04.01.2022 ಸಂಜೆ 5:00 ಗಂಟೆಯವರೆಗೆ** ಇ–ಪೋರ್ಟಲ್ ಮುಖಾಂತರ ಸಲ್ಲಿಸಬಹುದಾಗಿದೆ. **2)** ಆನ್‌ಲೈನ್‌ನಲ್ಲಿ ಆಕ್ಷೇಪಣೆಗಳನ್ನು ಇ–ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಲು ಕೊನೆಯ **ದಿನಾಂಕ: 27.12.2021 ಸಂಜೆ: 5.00 ಗಂಟೆಯವರೆಗೆ.** 3) ಪ್ರಿ–ಬಿಡ್ ಮೀಟಿಂಗ್ **ದಿನಾಂಕ: 28.12.2021 ಬೆಳಿಗ್ಗೆ 11:30 ಗಂಟೆ. 4)** ಟೆಂಡರ್‌ಗೆ ಸಂಬಂಧಿಸಿದಂತೆ ಮುಂದೂಡಿಕೆ/ತಿದ್ದುಪಡಿಗಳು ಏನಾದರೂ ಇದ್ದಲ್ಲಿ ಇ–ಪೋರ್ಟ್‌ಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು. **5)** ಕಂಡೀಷನಲ್ ಟೆಂಡರ್‌ಗಳನ್ನು ಮಾನ್ಯ ಮಾಡಲಾಗುವುದಿಲ್ಲ.
ಸಹಿ/– ಪ್ರಧಾನ ವ್ಯವಸ್ಥಾಪಕರು ಹಾಗೂ ಟೆಂಡರ್ ಆಹ್ವಾನಿಸುವ ಪ್ರಾಧಿಕಾರ, ಕ.ಆಜಾ.ಅ.ನಿ, ಬೆಂಗಳೂರು–02
ವಾಸಾಸಂಇ/ಬೆಂ.ನ/ಜೆಎ/2429/2021–22
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ



ವಿಪುಲ ಉದ್ಯೋಗಾವಕಾಶಗಳ

ರಿಟೇಲ್ ಮ್ಯಾನೇಜ್‌ಮೆಂಟ್ ಕೋರ್ಸ್



ಆರ್.ಬಿ. ಗುರುಬಸವರಾಜ

ದೇಶದ ಆರ್ಥಿಕತೆಯಲ್ಲಿ ಚಿಲ್ಲರೆ ವ್ಯಾಪಾರವು ಹೆಚ್ಚು ಪ್ರಬಲವಾದದ್ದು. ಇದು ವಿಶ್ವದಲ್ಲಿ ವೇಗವಾಗಿ ಬೆಳೆಯುತ್ತಿರುವ ಮತ್ತು ಅತ್ಯಂತ ಹೆಚ್ಚು ಸವಾಲಿನ ಉದ್ಯಮ. ಚಿಲ್ಲರೆ ಉದ್ಯಮದಲ್ಲಿ ಕಳೆದ ಕೆಲವು ವರ್ಷಗಳಿಂದ ನುರಿತ ಹಾಗೂ ಕೌಶಲಭರಿತ ವೃತ್ತಿ ಪರಿಣತರಿಗೆ ಹೆಚ್ಚು ಬೇಡಿಕೆ ಇದೆ. ಇದಕ್ಕೆ ಕಾರಣಗಳು ಹಲವಾರು. ಬೆರಳ ತುದಿಯ ವ್ಯವಹಾರದ ದಿನಗಳಲ್ಲಿ ರಿಟೇಲ್ ವ್ಯಾಪಾರ ವಿಭಿನ್ನ ಸ್ವರೂಪಗಳಲ್ಲಿ ಬೆಳವಣಿಗೆ ಆಗುತ್ತಿದೆ.

ಈಗ ನಗರ, ಪಟ್ಟಣ, ದೊಡ್ಡ ಹಳ್ಳಿಗಳಿಗಳಲ್ಲೂ ಮಾಲ್, ಮಾರ್ಟ್‌ಗಳು ತಲೆ ಎತ್ತುತ್ತಿವೆ. ಒಬ್ಬಿಬ್ಬರು ಕೆಲಸಗಾರರಿಂದ ನಡೆಯುತ್ತಿದ್ದ ಅಂಗಡಿಗಳಲ್ಲಿ ಈಗ ಹತ್ತಾರು ಕೆಲಸಗಾರರು ಗ್ರಾಹಕರ ಹಿಂದೆ ಬಿದ್ದಿರುವುದನ್ನು ಕಾಣುತ್ತೇವೆ. ಅಲ್ಲದೇ ಇತ್ತೀಚಿನ ದಿನಗಳಲ್ಲಿ ಅದರಲ್ಲೂ ಕೋವಿಡ್ ಬಂದ ನಂತರ 'ಸಂಚಾರಿ ವ್ಯಾಪಾರ' ಎಲ್ಲೆಡೆಯೂ ವ್ಯಾಪಿಸಿದೆ. ಪ್ರತಿ ನಗರ, ಹಳ್ಳಿಗಳ ಗಲ್ಲಿಗಲ್ಲಿಗಳಲ್ಲಿ ವೈವಿಧ್ಯಮಯ ಸಂಚಾರಿ ವ್ಯಾಪಾರಿಗಳು ಸುತ್ತಾಡಿ ತಮ್ಮ ವ್ಯವಹಾರ ನಡೆಸುತ್ತಿರುವುದನ್ನು ಕಾಣಬಹುದು. ಇಂತಹ ವ್ಯಾಪಾರಿ ಕೌಶಲಕ್ಕೆ ರಿಟೇಲ್ ಮ್ಯಾನೇಜ್‌ಮೆಂಟ್ ಕೋರ್ಸ್ ಅಗತ್ಯ.

ಏನಿದು ರಿಟೇಲ್ ಮ್ಯಾನೇಜ್‌ಮೆಂಟ್ ಕೋರ್ಸ್?

ತಂತ್ರಜ್ಞಾನ ಮತ್ತು ಚಿಲ್ಲರೆ ವಹಿವಾಟು ಪದ್ಧತಿ ಉಪಯೋಗಿಸಿಕೊಂಡು ಮಾರಾಟ ಮತ್ತು ಗ್ರಾಹಕರ ಸೇವೆಗಳನ್ನು ಉತ್ತೇಜಿಸುವುದೇ ರಿಟೇಲ್ ಮ್ಯಾನೇಜ್‌ಮೆಂಟ್ ಕೋರ್ಸ್‌ನ ಉದ್ದೇಶ. ಚಿಲ್ಲರೆ ವ್ಯಾಪಾರದ ಅಗತ್ಯವನ್ನು ಅರ್ಥೈಸಿಕೊಂಡು, ಅದರಲ್ಲಿನ ಅಡೆತಡೆಗಳನ್ನು ನಿವಾರಿಸುವ ಹಾಗೂ ಮಾರಾಟ ಜಾಲವನ್ನು ವಿಸ್ತರಿಸುವ ಕೌಶಲವನ್ನೂ ಈ ಕೋರ್ಸ್ ಕಲಿಸುತ್ತದೆ.

ಏಕೆ ಈ ಕೋರ್ಸ್?

ಭಾರತೀಯ ಮಾರುಕಟ್ಟೆಯಲ್ಲಿ ವಿದೇಶಿ ಚಿಲ್ಲರೆ ವ್ಯಾಪಾರದ ಪೈಪೋಟಿ ಎದುರಿಸಲು ಕೌಶಲ ಅಗತ್ಯ. ಉತ್ಪನ್ನಗಳ ಬಗ್ಗೆ ಗ್ರಾಹಕರಿಗೆ ತಿಳಿಸಲು, ಸ್ಥಳೀಯ ಮಾರುಕಟ್ಟೆಯನ್ನು ಜಾಗತಿಕ ಮಟ್ಟಕ್ಕೆ ಪರಿವರ್ತಿಸುವುದು ವ್ಯಾಪಾರದ ಒಂದು ತಂತ್ರ. ರಿಟೇಲ್ ಮ್ಯಾನೇಜ್‌ಮೆಂಟ್ ಎಂಬುದು ವ್ಯಾಪಾರದ ಒಂದು ಅಂಗವಾಗಿದ್ದು, ಗ್ರಾಹಕರನ್ನು ವ್ಯಾಪಾರದ ಸ್ಥಳಕ್ಕೆ ಆಕರ್ಷಿಸಲು ಮತ್ತು ವ್ಯಾಪಾರವನ್ನು ಸುಗಮವಾಗಿಸಲು ರಿಟೇಲ್ ಮ್ಯಾನೇಜ್‌ಮೆಂಟ್ ಅಗತ್ಯವಾಗಿದೆ. ಅದಕ್ಕಾಗಿ ಸೂಕ್ತ ತರಬೇತಿ ಮತ್ತು ನಿರ್ವಹಣಾ ಕೌಶಲಗಳಿರುವ ನೌಕರರ ಅಗತ್ಯವಿದೆ.

> ತಂತ್ರಜ್ಞಾನ ಮತ್ತು ಚಿಲ್ಲರೆ ವಹಿವಾಟು ಪದ್ಧತಿ ಉಪಯೋಗಿಸಿಕೊಂಡು ಮಾರಾಟ ಮತ್ತು ಗ್ರಾಹಕರ ಸೇವೆಗಳನ್ನು ಉತ್ತೇಜಿಸುವುದೇ ರಿಟೇಲ್ ಮ್ಯಾನೇಜ್‌ಮೆಂಟ್ ಕೋರ್ಸ್‌ನ ಉದ್ದೇಶ.

ಇಂತಹ ಅಗತ್ಯವನ್ನು ಪೂರೈಸುವುದು ರಿಟೇಲ್ ಮ್ಯಾನೇಜ್‌ಮೆಂಟ್ ಕೋರ್ಸ್‌ನ ಮೂಲ ಉದ್ದೇಶವಾಗಿದೆ. ಇವುಗಳ ಜೊತೆಗೆ ವ್ಯವಹಾರ ನಿರ್ವಹಣಾ ಕೌಶಲ, ಮಾರುಕಟ್ಟೆ ಅಭಿವೃದ್ಧಿಯ ತಂತ್ರಗಳು, ವ್ಯವಹಾರ ಜಾಲದ ವಿಸ್ತರಣೆ, ನಿಖರವಾದ ಲೆಕ್ಕ ನಿರ್ವಹಣೆ ಇವುಗಳ ಕೌಶಲವನ್ನು ಬೆಳೆಸಲಾಗುತ್ತದೆ.

ಅರ್ಹತೆ, ಮಾನದಂಡ

ರಿಟೇಲ್ ಮ್ಯಾನೇಜ್‌ಮೆಂಟ್‌ನಲ್ಲಿ ಡಿಪ್ಲೊಮಾ, ಪದವಿ, ಪಿ.ಜಿ. ಡಿಪ್ಲೊಮಾ ಮತ್ತು ಸ್ನಾತಕೋತ್ತರ ಪದವಿ ಹಂತದ ಕೋರ್ಸ್‌ಗಳಿವೆ. ಆಯಾ ಕೋರ್ಸ್‌ಗೆ ಅನುಗುಣವಾಗಿ ಅರ್ಹತಾ ಮಾನದಂಡಗಳು ವಿಭಿನ್ನವಾಗಿವೆ.

ಕಲಿಕಾ ಪಠ್ಯಕ್ರಮ

ರಿಟೇಲ್ ಮ್ಯಾನೇಜ್‌ಮೆಂಟ್ ಕೋರ್ಸ್‌ಗೆ ನಿಗದಿಪಡಿಸಿದ ಪಠ್ಯಕ್ರಮ ಹೀಗಿದೆ. ಪೂರೈಕೆ ಜಾಲ ವ್ಯವಸ್ಥೆ, ಮಾರ್ಕೆಟಿಂಗ್ ಮಾಹಿತಿ, ಹಣಕಾಸು ನಿರ್ವಹಣೆ, ಗ್ರಾಹಕರೊಂದಿಗಿನ ಸಂಬಂಧ, ವ್ಯಾಪಾರ ನೀತಿ, ರಿಟೇಲ್ ಬ್ರ್ಯಾಂಡ್ ನಿರ್ವಹಣೆ, ನಿರ್ವಹಣೆ ಮತ್ತು ಸಾಂಸ್ಥಿಕ ನಡವಳಿಕೆ, ಚಿಲ್ಲರೆ ವ್ಯಾಪಾರದಲ್ಲಿ ಲೆಕ್ಕಪತ್ರ ನಿರ್ವಹಣೆ, ಎಲೆಕ್ಟ್ರಾನಿಕ್ ಚಿಲ್ಲರೆ ವ್ಯಾಪಾರ, ಮರ್ಚಂಡೈಸ್ ನಿರ್ವಹಣೆ, ಮಾರ್ಕೆಟಿಂಗ್ ಮತ್ತು ವ್ಯವಹಾರ ಸಂವಹನ, ಮಾರಾಟ ಪ್ರಚಾರ, ಸಾರ್ವಜನಿಕ ಸಂಪರ್ಕ, ದಾಸ್ತಾನು ನಿರ್ವಹಣೆ, ಚಿಲ್ಲರೆ ವ್ಯಾಪಾರಿಗಳ ಮನಶಾಸ್ತ್ರ.. ಹೀಗೆ ವಿವಿಧ ವ್ಯಾಪಾರ ಕೌಶಲಗಳನ್ನು ಈ ಕೋರ್ಸ್‌ನಲ್ಲಿ ಕಲಿಸಲಾಗುತ್ತದೆ.

ಕೋರ್ಸ್ ನಂತರದ ಉದ್ಯೋಗಗಳು

ಡಿಪಾರ್ಟ್‌ಮೆಂಟಲ್ ಸ್ಟೋರ್‌ಗಳು, ಜಾಹೀರಾತು ಏಜೆನ್ಸಿಗಳು, ಸೂಪರ್ ಮಾರ್ಕೆಟ್‌ಗಳು, ಮಾಲ್‌ಗಳು ಮುಂತಾದ ಕಡೆಗಳಲ್ಲಿ ಈ ಕೋರ್ಸ್ ಮಾಡಿದವರಿಗೆ ಹೆಚ್ಚು ಆದ್ಯತೆ. ಮಳಿಗೆ ವ್ಯವಸ್ಥಾಪಕರು, ಮಳಿಗೆ ಅಧಿಕಾರಿ, ಮಾರಾಟ ವ್ಯವಸ್ಥಾಪಕರು, ಮಾರ್ಕೆಟಿಂಗ್ ಡೆವಲಪರ್, ರಿಟೇಲ್ ವ್ಯವಸ್ಥಾಪಕರು, ಮಾರುಕಟ್ಟೆ ವಿತರಕರು, ಗ್ರಾಹಕ ಸ್ನೇಹಿ ಅಧಿಕಾರಿ, ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್, ಮರ್ಚಂಡೈಸರ್, ಗೋದಾಮು ನಿರ್ವಾಹಕ ಮತ್ತಿತರ ಹುದ್ದೆಗಳಿರುತ್ತವೆ.

ಕೋರ್ಸ್ ಹೆಸರು	ಕೋರ್ಸ್ ಅವಧಿ	ಅರ್ಹತಾ ಮಾನದಂಡ
ರಿಟೇಲ್ ಮ್ಯಾನೇಜ್‌ಮೆಂಟ್‌ನಲ್ಲಿ ಡಿಪ್ಲೊಮಾ	1 ವರ್ಷ	12ನೇ ತರಗತಿ ಉತ್ತೀರ್ಣ
ಬಿ.ಬಿ.ಎ ಇನ್ ರಿಟೇಲ್ ಮ್ಯಾನೇಜ್‌ಮೆಂಟ್	3 ವರ್ಷ	12 ನೇ ತರಗತಿ ಉತ್ತೀರ್ಣ
ಬ್ಯಾಚುಲರ್ ಆಫ್ ಫ್ಯಾಷನ್ ಮರ್ಚಂಡೈಸಿಂಗ್ ಅಂಡ್ ರಿಟೇಲ್ ಮ್ಯಾನೇಜ್‌ಮೆಂಟ್	4 ವರ್ಷ	12 ನೇ ತರಗತಿ ಉತ್ತೀರ್ಣ
ಎಂ.ಬಿ.ಎ. ಇನ್ ರಿಟೇಲ್ ಮ್ಯಾನೇಜ್‌ಮೆಂಟ್	2 ವರ್ಷ	ಯಾವುದೇ ಪದವಿ
ಎಂ.ಎಸ್ಸಿ. ಇನ್ ರಿಟೇಲ್ ಮ್ಯಾನೇಜ್‌ಮೆಂಟ್	2 ವರ್ಷ	ಯಾವುದೇ ಪದವಿ
ಪಿ.ಜಿ. ಡಿಪ್ಲೊಮಾ ಇನ್ ರಿಟೇಲ್ ಮ್ಯಾನೇಜ್‌ಮೆಂಟ್	1-2 ವರ್ಷ	ಯಾವುದೇ ಪದವಿ
ಪಿ.ಜಿ.ಡಿಪ್ಲೊಮಾ ಇನ್ ಫ್ಯಾಷನ್ ಮರ್ಚಂಡೈಸಿಂಗ್ ಅಂಡ್ ರಿಟೇಲ್ ಮ್ಯಾನೇಜ್‌ಮೆಂಟ್	1-2 ವರ್ಷ	ಯಾವುದೇ ಪದವಿ

ಸರ್ಕಾರಿ ಮತ್ತು ಅರೆ ಸರ್ಕಾರಿ ಕ್ಷೇತ್ರಗಳಲ್ಲಿ ಕಾಯಂ ಅಥವಾ ಅರೆಕಾಲಿಕ ಹುದ್ದೆಗಳಿಗೆ ಅವಕಾಶವಿದೆ. ಖಾಸಗಿ ವಲಯದಲ್ಲಿ ಕೆಲಸ ಮಾಡಬಯಸುವವರಿಗೆ ವಿಪುಲ ಅವಕಾಶಗಳಿವೆ. ಸಿನಿಮಾ ಮಂದಿರ, ಸೂಪರ್ ಮಾರ್ಕೆಟ್‌ಗಳು, ಹೈಪರ್ ಮಾರ್ಕೆಟ್‌ಗಳಲ್ಲಿ ಉದ್ಯೋಗಾವಕಾಶಗಳಿವೆ.

ಈ ಕೋರ್ಸ್ ಮಾಡಿದವರಿಗೆ ಉತ್ತಮ ವೇತನವೂ ಇದೆ. ಅದು ಅಭ್ಯರ್ಥಿಯ ಕೌಶಲ, ಅನುಭವದ ಮೇಲೆ ನಿರ್ಧಾರವಾಗುತ್ತದೆ. ಕೌಶಲ, ಅನುಭವ ಹೆಚ್ಚಿದಂತೆ ವೇತನವೂ ಹೆಚ್ಚಾಗುತ್ತದೆ. ಕೆಲ ಕಂಪನಿಗಳು ವೇತನದ ಜೊತೆಗೆ ಬೋನಸ್ ಮತ್ತು ವಿಶೇಷ ಪ್ಯಾಕೇಜ್‌ಗಳನ್ನು ನೀಡುತ್ತವೆ. ಮಾರುಕಟ್ಟೆ ಕ್ಷೇತ್ರದಲ್ಲಿ ಸಫಲರಾಗಬೇಕೆಂಬ ಕನಸಿರುವವರಿಗೆ ಇದೊಂದು ಉತ್ತಮ ಕೋರ್ಸ್.

ರಾಜ್ಯದ ಹಲವು ಮ್ಯಾನೇಜ್‌ಮೆಂಟ್ ಕೋರ್ಸ್‌ಗಳಿರುವ ಖಾಸಗಿ ಕಾಲೇಜುಗಳಲ್ಲಿ ಈ ಕೋರ್ಸ್‌ಗಳು ಲಭ್ಯವಿವೆ. ಪದವಿ ಮ್ಯಾನೇಜ್‌ಮೆಂಟ್ ಕೋರ್ಸ್‌ಗಳಿರುವ (ಬಿಬಿಎಂ) ಆಯ್ದ ಕಾಲೇಜುಗಳಲ್ಲಿ ಈ ಕೋರ್ಸ್‌ಗಳಿವೆ. ಕೋರ್ಸ್ ಕುರಿತ ಹೆಚ್ಚಿನ ಮಾಹಿತಿಗೆ ಇಲ್ಲಿದೆ: https://bit.ly/3e6lKHa

ಡೇಟಾ ಅನಾಲಿಟಿಕ್ಸ್ ಕಲಿಕೆಗೆ ಅನ್‌ಲೈನ್ ಕೋರ್ಸ್

ಗುರುರಾಜ್ ಎಸ್. ದಾವಣಗೆರೆ

ಆರ್ಥಿಕ ವ್ಯವಹಾರ ತಜ್ಞರು ಜಗತ್ತಿನಾದ್ಯಂತ ಲಭ್ಯವಿರುವ ದತ್ತಾಂಶವನ್ನು 'ನ್ಯೂ ಆಯಿಲ್' ಎನ್ನುತ್ತಾರೆ. ಪ್ರಪಂಚದ ತುಂಬ ಪ್ರತಿಯೊಂದರ ಕುರಿತು ಅಗಾಧ ಮಾಹಿತಿ ಇದೆ. ಸರಿಯಾದುದನ್ನು ಆಯ್ದು, ವಿಶ್ಲೇಷಿಸಿ ಬಳಸುವುದನ್ನು ಹೇಳಿಕೊಡುವ ಶಿಕ್ಷಣ ಪ್ರಾಕಾರಕ್ಕೆ ಡೇಟಾ ಅನಾಲಿಟಿಕ್ಸ್ ಅಥವಾ ಬಿಗ್ ಡೇಟಾ ಅನಾಲಿಟಿಕ್ಸ್ ಎನ್ನುತ್ತಾರೆ.

ವಿಶ್ವದ 730 ಕೋಟಿ ಜನರನ್ನೂ ಏಕಕಾಲಕ್ಕೆ ಒಂದೇ ವೇದಿಕೆಗೆ ತರಬಲ್ಲ ತಾಕತ್ತಿರುವ ಇಂಟರ್‌ನೆಟ್ ಅಗಾಧ ಮಾಹಿತಿ ಹೊಂದಿದೆ. ಮಾಹಿತಿಯನ್ನು ಅವಶ್ಯಕತೆ ಮತ್ತು ಅದ್ಯತೆಗಳ ಮೇಲೆ ಕ್ರೋಡೀಕರಿಸಿ ಉಪಯೋಗಿಸಿದರೆ ಅಭಿವೃದ್ಧಿಯ ಎಲ್ಲ ಕೆಲಸಗಳೂ ಸಲೀಸು. ಅದಕ್ಕೆಂದೇ ಉನ್ನತ ಶಿಕ್ಷಣ ನೀಡುವ ಕೋಯಿಕ್ಕೋಡ್‌ನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ (ಐಐಎಂ) ಆನ್‌ಲೈನ್ ಸರ್ಟಿಫಿಕೇಟ್ ಕೋರ್ಸ್ ಆರಂಭಿಸುತ್ತಿದೆ.

ವಿದ್ಯಾರ್ಹತೆ ಕೌಶಲ ಮತ್ತು ಅನುಭವ

ವಿದ್ಯಾರ್ಹತೆ: ಅಭ್ಯರ್ಥಿಯು ಮಾನ್ಯತೆ ಪಡೆದ ಯಾವುದಾದರೂ ವಿಶ್ವ ವಿದ್ಯಾಲಯದ ಪದವಿ ಅಥವಾ ಡಿಪ್ಲೊಮಾ ಹೊಂದಿರಬೇಕು.

ಶುದ್ಧ ಹಾಗೂ ಅನ್ವಯಿಕ ಗಣಿತ ಎರಡರಲ್ಲೂ ಪರಿಣತಿ, ಪ್ರಮಾಣಿತ ಪ್ರಶ್ನೆ ಭಾಷೆ (Standardized Query language -SQL) ಗಳಾದ, ಹೈವ್ (Hive), ಪಿಗ್, ಸ್ಕ್ರಿಪ್ಟಿಂಗ್ ಲಾಂಗ್ವೇಜ್ ಪೈಥಾನ್, ಹಡೂಪ್, ಮೆಶೀನ್ ಲರ್ನಿಂಗ್, ಮ್ಯಾಟ್‌ಲ್ಯಾಬ್, ಮೈಕ್ರೋಸಾಫ್ಟ್‌ನ ಎಕ್ಸೆಲ್ ಹಾಗೂ ಆರ್ - ಪ್ರೋಗ್ರಾಮಿಂಗ್ ಲಾಂಗ್ವೇಜ್‌ಗಳನ್ನು ಬಳಸಿ ಒಂದು ವರ್ಷ ಕೆಲಸ ಮಾಡಿರಬೇಕು. ಜೊತೆಗೆ ಸಮಸ್ಯೆ ಬಿಡಿಸುವ ಕೌಶಲ, ಕ್ರಿಟಿಕಲ್ ಥಿಂಕಿಂಗ್ ಹಾಗೂ ಶ್ರಮವಹಿಸಿ ದುಡಿಯುವ ಸಾಮರ್ಥ್ಯ ಎಲ್ಲವೂ ಇದ್ದರೆ ಡೇಟಾ ಅನಾಲಿಟಿಕ್ಸ್‌ನ ಕೆಲಸ ಸುಲಭವಾಗುತ್ತದೆ.

ಕೋರ್ಸ್ ಅವಧಿ: 10 ತಿಂಗಳು **ಕೋರ್ಸ್ ಪ್ರಾರಂಭದ ದಿನಾಂಕ:** 26 ಡಿಸೆಂಬರ್ 2021 **ತರಗತಿ ಸಮಯ:** ಪ್ರತಿ ಭಾನುವಾರ ಸಂಜೆ 6.45 - 9.30 ರ ವರೆಗೆ (ಲೈವ್ ತರಗತಿಗಳು) **ಶುಲ್ಕ:** ₹1.95 ಲಕ್ಷ + ಜಿ ಎಸ್‌ಟಿ. ಮೂರು ಕಂತುಗಳಲ್ಲಿ ಶುಲ್ಕ ಭರಿಸಬಹುದು. ಐಐಎಂ ಕೋಯಿಕ್ಕೋಡ್‌ನ ಪ್ರಾಧ್ಯಾಪಕರು, ಡೇಟಾ ಕೈಗಾರಿಕೋದ್ಯಮ ನಡೆಸುವ ಪರಿಣತರು ಆನ್‌ಲೈನ್‌ನ ಒಟ್ಟು 10 ಮಾಡ್ಯೂಲ್‌ಗಳಲ್ಲಿ ಇಡೀ ಕೋರ್ಸ್ ಕಲಿಸುತ್ತಾರೆ.

ಯಾರಿಗೆ ಅನುಕೂಲ?

ದೊಡ್ಡ ರಿಟೇಲ್‌ಚೈನ್, ಹಡಗು ನಿರ್ಮಾಣ, ವಿಮಾನಯಾನ, ಪ್ರವಾಸೋದ್ಯಮ, ಬ್ಯಾಂಕಿಂಗ್, ಇ-ಕಾಮರ್ಸ್, ಡಿಫೆನ್ಸ್, ಹಣಕಾಸು, ಆರೋಗ್ಯ ಕ್ಷೇತ್ರ, ಆಮದು ಮತ್ತು ರಫ್ತು, ಸರ್ಕಾರಿ ಹಾಗೂ ಸಾಫ್ಟ್‌ಉದ್ಯಮ, ಆನ್‌ಲೈನ್ ಶಿಕ್ಷಣ, ಮಾರಾಟ ಜಾಲಗಳಿಗೆ ಡೇಟಾ ಅನಾಲಿಟಿಕ್ಸ್ ಹೆಚ್ಚಿನ ರೀತಿಯಲ್ಲಿ ನೆರವಾಗುತ್ತದೆ. ಮೆಕೆನ್ಸೀ ಅಂತರಾಷ್ಟ್ರೀಯ ಸಂಸ್ಥೆಯ ಪ್ರಕಾರ 2023 ರ ವೇಳೆಗೆ ಅಮೆರಿಕಾದಲ್ಲಿ ಡೇಟಾ ಅನಾಲಿಟಿಕ್ಸ್ ಕ್ಷೇತ್ರದಲ್ಲಿ 20 ಲಕ್ಷ ಹುದ್ದೆಗಳು ಸೃಷ್ಟಿಯಾಗಲಿವೆ. ಫೋರ್ಬ್ಸ್ ವರದಿಯಂತೆ ಭಾರತದಲ್ಲಿ ಪ್ರತಿ ತಿಂಗಳು 3000 ಡೇಟಾ ಅನಾಲಿಸ್ಟ್ ಹುದ್ದೆಗಳು ಸೃಷ್ಟಿಯಾಗುತ್ತಿವೆ. 3 ರಿಂದ 10 ವರ್ಷಗಳ ಅನುಭವ ಇರುವವರಿಗೆ ವಾರ್ಷಿಕ ₹ 25 ಲಕ್ಷ ರಿಂದ ₹65 ಲಕ್ಷ ವೇತನವಿದೆ.

ಹೆಚ್ಚಿನ ಮಾಹಿತಿಗೆ : iimk.eruditus.com

ಜಾವಾ, ಸಿ++: ಯಾವುದು ಉತ್ತಮ?

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ವಿ. ಪ್ರದೀಪ್ ಕುಮಾರ್

- **1. ಬಿಸಿಎ ಮುಗಿದ ಮೇಲೆ ಯಾವುದನ್ನು ಆರಿಸಿಕೊಂಡರೆ ಉತ್ತಮ? ಜಾವಾ ಅಥವಾ ಸಿ + + ? ಐಟಿ ಕ್ಷೇತ್ರದ ಬಗ್ಗೆ ಮಾಹಿತಿ ನೀಡಿ.**

ಹೆಸರು, ಊರು ತಿಳಿಸಿಲ್ಲ.

ಐಟಿ ವಿಸ್ತಾರವಾದ ಕ್ಷೇತ್ರ. ಈಗ ತ್ವರಿತಗತಿಯಲ್ಲಿ ಅಭಿವೃದ್ಧಿಯಾಗುತ್ತಿರುವ ಐಟಿ ಕ್ಷೇತ್ರದಲ್ಲಿರುವ ಅನೇಕ ಪ್ರೋಗ್ರಾಮಿಂಗ್ ಭಾಷೆಗಳಲ್ಲಿ ಒಂದನ್ನು ಆಯ್ಕೆ ಮಾಡುವುದು ಸುಲಭದ ಕೆಲಸವಲ್ಲ. ಹಾಗೆಯೇ, ಈ ಕ್ಷೇತ್ರದಲ್ಲಿರುವ ಆಕರ್ಷಕ ಮತ್ತು ವೈವಿಧ್ಯಮಯ ಉದ್ಯೋಗಾವಕಾಶಗಳನ್ನು ಬಳಸಿಕೊಳ್ಳಲು ಸ್ಪಷ್ಟವಾದ ವೃತ್ತಿಯೋಜನೆಯಿರಲೇಬೇಕು. ಆದ್ದರಿಂದ, ನಿಮ್ಮ ಸ್ವಾಭಾವಿಕ ಪ್ರತಿಭೆ, ಆಸಕ್ತಿ, ಅಭಿರುಚಿಯಂತೆ ವೃತ್ತಿಯೋಜನೆಯನ್ನು ಮಾಡಿದರೆ ನಿಮಗೆ ಯಾವ ಪ್ರೋಗ್ರಾಮಿಂಗ್ ಭಾಷೆಯ ಪರಿಣತಿ ಬೇಕಾಗಬಹುದು ಎಂದು ಅರಿವಾಗುತ್ತದೆ. ಏಕೆಂದರೆ, ಪ್ರತಿ ಭಾಷೆಗೆ ತನ್ನದೇ ಆದ ಉಪಯುಕ್ತತೆ ಮತ್ತು ಇತಿಮಿತಿಯಿರುತ್ತದೆ.

ಪ್ರೋಗ್ರಾಮಿಂಗ್ ಭಾಷೆಗಳಲ್ಲಿ, ಮೇಲ್ನೋಟಕ್ಕೆ ಸಿ + + ಕೋರ್ಸ್ ಉತ್ತಮವೆಂದೆನಿಸಿದರೂ ಜೊತೆಯಲ್ಲಿ ಜಾವಾ ಮತ್ತು ಪೈಥಾನ್ ಕೋರ್ಸ್‌ಗಳನ್ನು ಮಾಡುವುದರಿಂದ ನಿಮ್ಮ ಕೌಶಲಗಳಲ್ಲಿ ವೈವಿಧ್ಯವಿದ್ದು ಹೆಚ್ಚಿನ ಉದ್ಯೋಗಾವಕಾಶಕ್ಕೆ ಅರ್ಹರಾಗಬಲ್ಲಿರಿ. ಈ ಕೋರ್ಸ್‌ಗಳನ್ನು ಮಾಡಿದ ನಂತರ ಐಟಿ ಕ್ಷೇತ್ರದಲ್ಲಿ ಪ್ರೋಗ್ರಾಮರ್, ಸಾಫ್ಟ್‌ವೇರ್ ಡೆವಲಪರ್, ಕ್ವಾಲಿಟಿ ಅನಾಲಿಸ್ಟ್ ಮುಂತಾದ ಹುದ್ದೆಗಳನ್ನು ಹುಡುಕಿಕೊಂಡು ನಿಮ್ಮ ವೃತ್ತಿ ಜೀವನವನ್ನು ರೂಪಿಸಿಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ಗಮನಿಸಿ: https://hackr.io/blog/best-programming-languages-to-learn-2022-jobs-future

- **2. ನಾನು ಬಿಎಸ್‌ಸಿ (ಫಿಸಿಕ್ಸ್, ಎಲೆಕ್ಟ್ರಾನಿಕ್ಸ್ ಮತ್ತು ಕಂಪ್ಯೂಟರ್ ಸೈನ್ಸ್) ಪದವಿ ಮುಗಿಸಿದ್ದೇನೆ. ಎಂಎಸ್‌ಸಿ(ಕಂಪ್ಯೂಟರ್ ಸೈನ್ಸ್) ಮುಗಿಸಿದ್ದೇನೆ. ಮುಂದೆ ಬಿಇಡ್ ಮಾಡಬೇಕು ಎಂದುಕೊಂಡಿದ್ದೇನೆ. ಆದರೆ, ಡಿಗ್ರಿಯಲ್ಲಿ ಗಣಿತ ಓದಿಲ್ಲದ ಕಾರಣ ಬಿಇಡಿ ಮಾಡಲಾಗುವುದಿಲ್ಲ ಎನ್ನುತ್ತಿದ್ದಾರೆ. ದಯವಿಟ್ಟು ಮಾರ್ಗದರ್ಶನ ಮಾಡಿ.**

ಮಂಜುನಾಥ್ ಎಸ್.ಕೆ., ಊರು ತಿಳಿಸಿಲ್ಲ.

ಬಿಎಸ್‌ಸಿ ಸೇರಿದಂತೆ ಯಾವುದೇ ಪದವಿ ಪರೀಕ್ಷೆಯಲ್ಲಿ ಶೇ 50 ಅಂಕಗಳಿದ್ದಲ್ಲಿ ಬಿಇಡಿ ಮಾಡಲು ಅರ್ಹತೆಯಿದೆ ಎನ್ನುವುದು ನನ್ನ ಅಭಿಪ್ರಾಯ.

- **3. ನಾನು ಬಿಕಾಂ ಅಂತಿಮ ವರ್ಷದಲ್ಲಿದ್ದೇನೆ, ಎಂಕಾಂ ಮಾಡಬೇಕೆಂದುಕೊಂಡಿದ್ದೇನೆ. ಎಂಕಾಂ ಕೋರ್ಸ್ ಅನ್ನು ಪ್ರತ್ಯೇಕ ವಿಷಯಗಳ ಕುರಿತು ಮಾಡಬೇಕಾ ಅಥವಾ ಸಾಮಾನ್ಯವಾದ ಕೋರ್ಸ್ ಇದೆಯೇ? ಎಂಕಾಂನಲ್ಲಿ ವಿಷಯಾಧಾರಿತ ಅಧ್ಯಯನವಿದ್ದರೆ ತಿಳಿಸಿ.**

ದೇವರಾಜ ಸಿಂಗಡದಿನ್ನಿ, ರಾಯಚೂರು.

ಎಂಕಾಂ ಕೋರ್ಸ್‌ನಲ್ಲಿ ಎರಡು ವಿಧಗಳಿರುತ್ತವೆ.

- ಎಂಕಾಂ
- ಎಂಕಾಂ (ಸ್ಪೆಷಲೈಜೇಷನ್-ಅಕೌಂಟಿಂಗ್, ಅಕೌಂಟಿಂಗ್ ಮತ್ತು ಫೈನಾನ್ಸ್, ಟ್ಯಾಕ್ಸೇಷನ್, ಬ್ಯಾಂಕಿಂಗ್ ಮತ್ತು ಇನ್ಶೂರೆನ್ಸ್, ಇಂಟರ್‌ನ್ಯಾಷನಲ್ ಬಿಸಿನೆಸ್, ಮಾರ್ಕೆಟಿಂಗ್, ಇನ್ವೆಸ್ಟ್‌ಮೆಂಟ್ಸ್, ಎಕನಾಮಿಕ್ಸ್ ಇತ್ಯಾದಿ).

ಈ ಕೋರ್ಸ್‌ಗಳಲ್ಲಿ ಕಡ್ಡಾಯವಾದ ವಿಷಯಗಳ ಜೊತೆಗೆ ಐಚ್ಛಿಕ ವಿಷಯಗಳಿರುತ್ತವೆ. ನಿಮ್ಮ ವೃತ್ತಿಜೀವನದ ಆದ್ಯತೆಯಂತೆ ಕೋರ್ಸ್ ಆಯ್ಕೆ ಮಾಡಿಕೊಳ್ಳಬೇಕು. ಹೆಚ್ಚಿನ ವಿವರಗಳಿಗೆ ಗಮನಿಸಿ: https://www.shiksha.com/m-com-chp

- **4. ನಾನು ನಾಯಕ (ಪರಿಶಿಷ್ಟ ಪಂಗಡ) ಸಮುದಾಯಕ್ಕೆ ಸೇರಿದ್ದೇನೆ. ಪೊಲೀಸ್ ಕಾನ್ಸ್‌ಟೆಬಲ್(ಪಿ.ಸಿ) ಆಗಲು ವಯಸ್ಸು ಮೀರಿದೆ. ಈಗ ಸಬ್ ಇನ್‌ಸ್ಪೆಕ್ಟರ್ ಓದುತ್ತಿದ್ದೇನೆ. ಪಿಎಸ್‌ಐ, ಪಿಡಿಒ, ಎಸ್‌ಡಿಎ ಹಾಗೂ ಕೆಎಎಸ್ ಪರೀಕ್ಷೆಯ ವಯೋಮಿತಿ ಬಗ್ಗೆ ಮಾಹಿತಿ ನೀಡಿ.**

ದುರ್ಗೇಶ್ ಜಿ. ಪಾಟೀಲ್, ಜಿನ್ನಾಪೂರ್.

ನನಗಿರುವ ಮಾಹಿತಿಯಂತೆ ಪರಿಶಿಷ್ಟ ಪಂಗಡಗಳಿಗೆ ಅನ್ವಯವಾಗುವ ವಯೋಮಿತಿ ಹೀಗಿರುತ್ತದೆ: ಪಿಎಸ್‌ಐ (32ವರ್ಷ), ಪಿಡಿಒ (40 ವರ್ಷ) ಎಸ್‌ಡಿಎ (40ವರ್ಷ) ಮತ್ತು ಕೆಎಎಸ್ (40ವರ್ಷ).

- **5. ನಾನು ಪಿಯುಸಿ (ವಿಜ್ಞಾನ) ಓದಿ, ಸ್ಪರ್ಧಾತ್ಮಕ ಪರೀಕ್ಷೆ ಬರೆಯುವುದಕ್ಕಾಗಿ ಬಿಎ ಮಾಡಿದ್ದೇನೆ. ಸ್ಪರ್ಧಾತ್ಮಕ ಪರೀಕ್ಷೆಗೆ ಹೇಗೆ ತಯಾರಿ ನಡೆಸಬೇಕು?**

ಈರಯ್ಯ ಹಿರೇಮಠ, ಊರು ತಿಳಿಸಿಲ್ಲ.

ಸ್ಪರ್ಧಾತ್ಮಕ ಪರೀಕ್ಷೆಗಳ ತಯಾರಿ ಕುರಿತು ಇದೇ ತಿಂಗಳ 6ನೇ ತಾರೀಖಿನ ಪ್ರಶ್ನೋತ್ತರದಲ್ಲಿ ಉತ್ತರಿಸಲಾಗಿದೆ. ದಯವಿಟ್ಟು ಓದಿಕೊಳ್ಳಿ. ಇನ್ನೂ ಹೆಚ್ಚಿನ ಮಾಹಿತಿಗಾಗಿ ಗಮನಿಸಿ: http://www.vpradeepkumar.com/how-to-succeed-in-entrance-exams/

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣ ತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್ ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು shikshana@prajavani.co.in ಗೆ ಕಳಿಸಬಹುದು.

ಮಕ್ಕಳ ಕಲಿಕಾ ಆಸಕ್ತಿ ಹೆಚ್ಚಿಸಲು ಸರಳ ಸೂತ್ರಗಳು

ವೆಂಕಟ ಸುಬ್ಬರಾವ್ ವಿ.

ಭಾಗ 3

ಕಳೆದೆರಡು ವಾರಗಳಲ್ಲಿ ಮಕ್ಕಳಲ್ಲಿ ಕಲಿಕಾ ಆಸಕ್ತಿ ಹೆಚ್ಚಿಸಲು ಪೋಷಕರು ಮನೆಯಲ್ಲಿ ಯಾವ್ಯಾವ ರೀತಿಯ ಪೂರಕ ಕಲಿಕಾ ವಾತಾವರಣ ನಿರ್ಮಿಸಬೇಕೆಂದು ತಿಳಿದುಕೊಂಡಿದ್ದೆವು. ಓದಿನ ವಾತಾವರಣ ರೂಪಿಸುವುದು, ಮಕ್ಕಳೊಂದಿಗೆ ಹೇಗೆ ಬೆರೆಯಬೇಕು, ಪ್ರತಿ ಮಗುವಿನಲ್ಲಿ ರುವ ವೈಶಿಷ್ಟ್ಯವನ್ನು ಗುರುತಿಸುವ ಬಗೆ, ಸಮಯದ ಉಳಿತಾಯ, ಶಿಸ್ತಿನ ಕಲಿಕೆ, ಕಲಿಕಾ ಸಾಮಗ್ರಿ ಒಪ್ಪ ಓರಣ, ಮಕ್ಕಳೊಂದಿಗೆ ಮುಕ್ತವಾಗಿ ಮಾತನಾಡುವ ಕುರಿತು ತಿಳಿದುಕೊಂಡಿದ್ದೇವೆ. ಈ ಸರಣಿಯ ಕೊನೆಯ ಭಾಗದಲ್ಲಿ ಇನ್ನಷ್ಟು ಸರಳ ಸೂತ್ರಗಳನ್ನು ತಿಳಿದುಕೊಳ್ಳೋಣ.

8. ಮಕ್ಕಳಿಕೆ ಕಲಿಕೆಯ ಜೊತೆಗೆ ಸಮಸ್ಯೆಗಳನ್ನು ಎದುರಿಸುವ ಧೈರ್ಯವನ್ನು ಕಲಿಸಿ, ಅವರಲ್ಲಿರುವ ಆತ್ಮವಿಶ್ವಾಸ ಹೆಚ್ಚಿಸಬೇಕು.

ಈ ವಿಷಯವನ್ನು ಝೆನ್ ಕಥೆಯೊಂದಿಗೆ ತಿಳಿಯೋಣ;

ಒಮ್ಮೆ ಒಬ್ಬ ವಿದ್ಯಾರ್ಥಿಯು ಝೆನ್ ಗುರುಗಳ ಬಳಿ 'ಗುರುಗಳೇ, ನಾನು ಈಗ ಧನುರ್ವಿದ್ಯೆಯಲ್ಲಿ ಸಂಪೂರ್ಣ ಹಿಡಿತ ಸಾಧಿಸಿದ್ದೇನೆ' ಎಂದು ಹೇಳಿದ. ಶಿಷ್ಯನ ಸಾಧನೆ ಮೆಚ್ಚಿದ ಗುರುಗಳು, ಆತನನ್ನು ಪ್ರಶಂಸಿಸಿದರು. ಹಾಗೆಯೇ ಅರಣ್ಯದೊಳಗಿನ ಕಡಿದಾದ ಬೆಟ್ಟದ ತುದಿಯಲ್ಲಿ ಹೊರಚಾಚಿಕೊಂಡಿರುವ ಬಂಡೆಯ ಅಂಚಿಗೆ ಕರೆದೊಯ್ದುದರು. ದೂರದಲ್ಲಿರುವ ಗುರಿ ತೋರಿ, ಅದಕ್ಕೆ ಬಾಣ ಹೊಡೆಯುವಂತೆ ಸೂಚಿಸಿದರು. ಬಿಲ್ವಿದ್ಯೆಯಲ್ಲಿ ನಿಪುಣನಾಗಿದ್ದ ಶಿಷ್ಯ, ಬಂಡೆಯ ಅಂಚಿಗೆ ನಿಂತು ಕೆಳಗಿನ ಪ್ರಪಾತ ನೋಡುತ್ತಿದ್ದಂತೆ, ನಡುಗಿ ಹೋದ. ಬಾಣ ಹೊಡುವುದಿರಲಿ, ಅವನಿಗೆ ಅಲ್ಲಿ ನಿಲ್ಲಲೂ ಸಾಧ್ಯವಾಗಲಿಲ್ಲ !!

ಆಗ ಗುರುಗಳು ನಕ್ಕು ಹೇಳಿದರು 'ಮಗು ನೀನು ಬಿಲ್ವಿದ್ಯೆಯ ಮೇಲೆ ಸಂಪೂರ್ಣ ಹಿಡಿತ ಸಾಧಿಸಿದ್ದೀಯ. ಆದರೆ ನಿನ್ನ ಮನಸ್ಸಿನ ಮೇಲೆ ಇನ್ನೂ ಹಿಡಿತ ಸಾಧಿಸಲಾಗಿಲ್ಲ. ಮೊದಲು ಅದನ್ನು ಕಲಿ' ಎಂದು ಹೇಳಿದರು.

ಎಷ್ಟು ಚಂದದ ಕಥೆ ಅಲ್ಲವಾ ? ಈ ಕಥೆಯಲ್ಲಿ ರುವಂತೆ ಅದೆಷ್ಟೋ ಪೋಷಕರು ಮಕ್ಕಳಿಗೆ ಓದುವ ವಿಷಯಗಳ ಮೇಲೆ ಹಿಡಿತ ಸಾಧಿಸಲು ಒತ್ತಾಯಿಸುತ್ತಾರೆ. ಆದರೆ, ಜೀವನದಲ್ಲಿ ಬರುವಂತಹ ಸಣ್ಣ ಸಮಸ್ಯೆಗಳನ್ನು ಎದುರಿಸಲು ಮಕ್ಕಳ ಮನಸ್ಸನ್ನು ಅಣಿಗೊಳಿಸುವುದರಲ್ಲಿ ಹಿಂದೆ ಬೀಳುತ್ತಾರೆ. ಪೋಷಕರು ಮಕ್ಕಳನ್ನು ವಿಷಯ ನಿಷ್ಣಾತರನ್ನಾಗಿಸುವಂತೆಯೇ, ಜೀವನದ ಸಮಸ್ಯೆಗಳನ್ನು ಎದುರಿಸಲು ಅವರ ಮನಸ್ಸನ್ನು ಅಣಿಗೊಳಿಸಬೇಕು. ಅವರಲ್ಲಿ ಆತ್ಮವಿಶ್ವಾಸವನ್ನು ಹೆಚ್ಚಿಸಬೇಕು.

ಗೆಲುವಿನ ಜೊತೆಗೆ ಸೋಲು ಸ್ವೀಕರಿಸುವ ಮನೋಭಾವವನ್ನು ಮಕ್ಕಳಲ್ಲಿ ಬೆಳೆಸಬೇಕು. ಸೋಲಿಗೆ ಕಾರಣಗಳನ್ನು ಹುಡುಕಿ, ವಿಶ್ಲೇಷಣೆ ಮಾಡುವುದನ್ನು ಕಲಿಸಬೇಕು. ಮುಂದಿನಬಾರಿ ಗೆಲುವು ಸಾಧಿಸಲು ಬೇಕಾದ ಅಂಶಗಳನ್ನು ಪಟ್ಟಿಮಾಡಲು ಹೇಳಿಕೊಡಬೇಕು.

9. ಮಕ್ಕಳಲ್ಲಿ ಧನಾತ್ಮಕ ರೀತಿಯಲ್ಲಿ ಶಿಸ್ತನ್ನು ಮೂಡಿಸಲು ಪ್ರಯತ್ನಿಸಿ

ಮಕ್ಕಳಲ್ಲಿ ಸರಿಯಾದ ಶಿಸ್ತನ್ನು ಮೂಡಿಸುವಲ್ಲಿ ಮನೆಯ ವಾತಾವರಣದ್ದೇ ಸಿಂಹಪಾಲು. ಆದರೆ, ಶಿಸ್ತನ್ನು ಕಲಿಸುವ ಭರದಲ್ಲಿ ಅವರ ಭಾವನೆಗಳಿಗೆ ಹಾನಿಯಾಗದಂತೆ ಎಚ್ಚರವಹಿಸಬೇಕು. ಶಿಸ್ತನ್ನು ಕಲಿಸುವಾಗ, ಅದರ ಹಿಂದಿನ ಕಾರಣವನ್ನು ಮಕ್ಕಳಿಗೆ ತಿಳಿಸಿ ಹೇಳಿ. ಇದರಿಂದ ಅವರು ಸಂತೋಷವಾಗಿ ಆ ಶಿಸ್ತನ್ನು ಪಾಲಿಸುತ್ತಾರೆ.

ಪೋಷಕರು ಎರಡು ರೀತಿಯಲ್ಲಿ ಶಿಸ್ತನ್ನು ಮೂಡಿಸಲು ಪ್ರಯತ್ನಿಸುತ್ತಾರೆ. ಒಂದು ನಕಾರಾತ್ಮಕ ರೀತಿ ಮತ್ತೊಂದು ಸಕಾರಾತ್ಮಕ ರೀತಿ.

ನಕಾರಾತ್ಮಕ ವಿಧಾನ: ಮಕ್ಕಳು ತಪ್ಪು ಮಾಡಿ ದಾಗ, ಪೋಷಕರು ಅವರಿಗೆ ಶಿಕ್ಷೆ ಕೊಡುವುದೋ ಅಥವಾ ಬೈಯುವುದೋ ಮಾಡುತ್ತಾರೆ. ಮೊದ ಮೊದಲು ಈ ಶಿಕ್ಷೆಗೆ ಹೆದರುವ ಮಕ್ಕಳು, ನಂತರದಲ್ಲಿ ಆ ಶಿಕ್ಷೆಗಳಿಗೇ ಹೊಂದಿಕೊಂಡು. ಪೋಷಕರ ಮಾತನ್ನು ಕೇಳದಿರುವ ಸಂಭವ ಹೆಚ್ಚು. ಆದ್ದರಿಂದ, ನಕಾರಾತ್ಮಕ ವಿಧಾನವನ್ನು ಪಾಲಿಸದಿರುವುದು ಉತ್ತಮ.

ಸಕಾರಾತ್ಮಕ ವಿಧಾನ: ಮಕ್ಕಳು ಯಾವುದೇ ಒಳ್ಳೆಯ ಕೆಲಸ ಮಾಡಿದಾಗ, ಅದನ್ನು ಗುರುತಿಸುವುದು. ಅವರನ್ನು ಪ್ರಶಂಸಿಸಿ, ಇನ್ನೂ ಹೆಚ್ಚಿನ ಒಳ್ಳೆಯ ಕೆಲಸಗಳನ್ನು ಮಾಡುವಂತೆ ಪ್ರೋತ್ಸಾಹಿಸುವುದು. ಇದು ಉತ್ತಮವಾದ ವಿಧಾನ. ಮಕ್ಕಳನ್ನು ಹೀಗೆ ಪ್ರೋತ್ಸಾಹಿಸುವುದರಿಂದ, ಅವರು ಪೋಷಕರನ್ನು ಗೌರವಿಸುತ್ತಾರೆ ಮತ್ತು ಅವರ ಮಾತನ್ನೂ ಕೇಳುತ್ತಾರೆ.

10. ಮಕ್ಕಳಿಗೆ ಜವಾಬ್ದಾರಿಯನ್ನು ಕಲಿಸಿ.

ಇದು ಬಹಳ ಮುಖ್ಯ, ಎಷ್ಟೋ ಮಕ್ಕಳು ಓದಿನಲ್ಲಿ ಬಹಳ ಮುಂದಿದ್ದರೂ, ದಿನ ನಿತ್ಯದ ವ್ಯವಹಾರಗಳ ಬಗ್ಗೆ ಅರಿವಿರುವುದಿಲ್ಲ. ಪೋಷಕರು ಮನೆಯ ಕೆಲಸಗಳನ್ನು ಮಾಡುವಾಗ ಅಥವಾ ಯಾವುದಾದರೂ ನಿರ್ಧಾರಗಳನ್ನು ತೆಗೆದುಕೊಳ್ಳುವಾಗ ಮಕ್ಕಳ ಸಲಹೆಯನ್ನೂ ತೆಗೆದುಕೊಳ್ಳಿ. ಅವರ ಸಲಹೆಗಳನ್ನೂ ಗೌರವಿಸಿ. ಅವರಿಗೆ ಜವಾಬ್ದಾರಿಯನ್ನು ತೆಗೆದುಕೊಳ್ಳುವಂತೆ ಪ್ರೋತ್ಸಾಹಿಸಿ.

ಹೀಗೆ ಮಕ್ಕಳಲ್ಲಿ ಸರಿಯಾದ ಜೀವನದ ಮೌಲ್ಯಗಳನ್ನು ತುಂಬಿದಾಗ ಮಾತ್ರ ಸಮಾಜವು ಸ್ವಸ್ಥ, ಶಾಂತಿಯುತ ಹಾಗೂ ಮೌಲ್ಯಾಧಾರಿತವಾಗಿರಲು ಸಾಧ್ಯ. ಇದರಲ್ಲಿ ಪೋಷಕರ ಪಾತ್ರ ಬಹಳ ಪ್ರಮುಖವಾಗಿದೆ.

(ಮುಗಿಯಿತು)

ವಿದ್ಯಾರ್ಥಿ ವೇತನ ಕೈಪಿಡಿ

ಐಐಟಿ ರೂರ್ಕಿ ಡಿಪಾರ್ಟ್‌ಮೆಂಟ್ ಆಫ್ ಕೆಮಿಸ್ಟ್ರಿ (ಡಿಓಎಫ್) ಪೋಸ್ಟ್ ಡಾಕ್ಟರಲ್ ಫೆಲೋಶಿಪ್ (ಪಿಡಿಎಫ್) 2021

ವಿವರ: ಐಐಟಿ ರೂರ್ಕಿ ಡಿಪಾರ್ಟ್‌ಮೆಂಟ್ ಆಫ್ ಕೆಮಿಸ್ಟ್ರಿ (ಡಿಓಎಫ್) ಪೋಸ್ಟ್ ಡಾಕ್ಟರಲ್ ಫೆಲೋಶಿಪ್ (ಪಿಡಿಎಫ್) 2021 ಕ್ಕೆ ಪಿಎಚ್‌ಡಿ ಪದವಿಧರರಿಂದ ಅರ್ಜಿ ಆಹ್ವಾನಿಸಿದೆ. ಆಯ್ಕೆಯಾದ ಅಭ್ಯರ್ಥಿಯು 'ಎಯು ಡೋಪ್ಡ್ ಮ್ಯಾಗ್ನೆಟಿಕ್ ಫೆಕ್ಸಾಯ್ ನ್ಯಾನೋಪಾರ್ಟಿಕಲ್ಸ್ ಟಾರ್ಗೆಟಿಂಗ್ ಟ್ರಿಪಲ್-ನೆಗೆಟಿವ್ ಬ್ರೆಸ್ಟ್ ಕ್ಯಾನ್ಸರ್' ಎನ್ನುವ ಶೀರ್ಷಿಕೆಯ ಮೇಲೆ ಫೆಲೋಶಿಪ್ ಮಾಡಬೇಕಿದೆ.

ಅರ್ಹತೆ: ಬಯೋಟೆಕ್ನಾಲಜಿಯಲ್ಲಿ ಪಿಎಚ್‌ಡಿ ಪದವಿ ಪಡೆದಿರುವ ಅಭ್ಯರ್ಥಿಗಳು ಈ ಫೆಲೋಶಿಪ್‌ಗೆ ಅರ್ಹರು.

ಆರ್ಥಿಕ ನೆರವು: ತಿಂಗಳಿಗೆ ₹ 60,000 ವೇತನ ಭತ್ಯೆ ನೀಡಲಾಗುವುದು.

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: ಡಿಸೆಂಬರ್ 25, 2021

ಅರ್ಜಿ ಸಲ್ಲಿಕೆ ವಿಧಾನ: ಆನ್‌ಲೈನ್ ಮೂಲಕ

ಹೆಚ್ಚಿನ ಮಾಹಿತಿಗೆ: www.b4s.in/praja/CFP7

ಜಿಎಸ್‌ಕೆ ಸ್ಕಾಲರ್ಸ್ ಪ್ರೋಗ್ರಾಂ 2021-22

ವಿವರ: ಜಿಎಸ್‌ಕೆ ಸ್ಕಾಲರ್ಸ್ ಪ್ರೋಗ್ರಾಂ 2021-22, ದೇಶದ ಸರ್ಕಾರಿ ಕಾಲೇಜುಗಳಲ್ಲಿ ಮೊದಲ ವರ್ಷದ ಎಂಬಿಬಿಎಸ್ ಮಾಡುತ್ತಿರುವ ಅರ್ಹ ಮತ್ತು ಆರ್ಥಿಕವಾಗಿ ಹಿಂದುಳಿದ ಅಭ್ಯರ್ಥಿಗಳಿಂದ ವಿದ್ಯಾರ್ಥಿವೇತನಕ್ಕಾಗಿ ಅರ್ಜಿ ಆಹ್ವಾನಿಸಿದೆ.

ಅರ್ಹತೆ: ದ್ವಿತೀಯ ಪಿಯುಸಿಯಲ್ಲಿ ಕನಿಷ್ಠ ಶೇ 65 ರಷ್ಟು ಅಂಕ ಪಡೆದಿರುವ ಮೊದಲ ವರ್ಷದ ಎಂಬಿಬಿಎಸ್ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಅರ್ಜಿದಾರರ ಕುಟುಂಬದ ವಾರ್ಷಿಕ ಆದಾಯವು ₹ 6ಲಕ್ಷವನ್ನು ಮೀರಿರಬಾರದು.

ಆರ್ಥಿಕ ನೆರವು: ವರ್ಷಕ್ಕೆ ₹1 ಲಕ್ಷದವರೆಗೆ ವೇತನ ಭತ್ಯೆ ನೀಡಲಾಗುವುದು.

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: ಡಿಸೆಂಬರ್ 31, 2021

ಅರ್ಜಿ ಸಲ್ಲಿಕೆ ವಿಧಾನ: ಆನ್‌ಲೈನ್ ಮೂಲಕ

ಹೆಚ್ಚಿನ ಮಾಹಿತಿಗೆ: www.b4s.in/praja/GSKP1

₹ 17,696 ಕೋಟಿ ವಿದೇಶಿ ಬಂಡವಾಳ ಹೊರಹರಿವು

ಮುಖ್ಯಾಂಶಗಳು

- ಓಮೈಕ್ರಾನ್ ಸೃಷ್ಟಿಸಿರುವ ಆತಂಕ
- ಜಾಗತಿಕ ಮಾರುಕಟ್ಟೆಯಲ್ಲಿ ಸೃಷ್ಟಿಯಾದ ಅನಿಶ್ಚಿತ ಸ್ಥಿತಿ

ನವದೆಹಲಿ (ಪಿಟಿಐ): ವಿದೇಶಿ ಬಂಡವಾಳ ಹೂಡಿಕೆದಾರರು (ಎಫ್‌ಪಿಐ) ಡಿಸೆಂಬರ್ 1 ರಿಂದ 17ರವರೆಗಿನ ಅವಧಿಯಲ್ಲಿ ಭಾರತದ ಬಂಡವಾಳ ಮಾರುಕಟ್ಟೆಯಿಂದ ₹ 17,696 ಕೋಟಿ ಹಿಂದಕ್ಕೆ ಪಡೆದಿದ್ದಾರೆ.

ಓಮೈಕ್ರಾನ್ ಸೃಷ್ಟಿಸಿರುವ ಆತಂಕದ ಜೊತೆಗೆ ಅಮೆರಿಕದ ಕೇಂದ್ರೀಯ ಬ್ಯಾಂಕ್ ಫೆಡರಲ್ ರಿಸರ್ವ್ ಸ್ವತ್ತು ಖರೀದಿಸುವ ಪ್ರಕ್ರಿಯೆಯನ್ನು ಶೀಘ್ರವೇ ನಿಲ್ಲಿಸುವ ಕುರಿತು ನಿರ್ಧಾರ ಪ್ರಕಟಿಸುವ ಸಾಧ್ಯತೆ ವ್ಯಕ್ತವಾಗಿದೆ. ಈ ಕಾರಣಗಳಿಂದಾಗಿ ಬಂಡವಾಳ ಹೊರಹರಿವು ಕಂಡುಬಂದಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಹೂಡಿಕೆದಾರರು ₹ 13,470 ಕೋಟಿ ಮೌಲ್ಯದ ಷೇರುಗಳನ್ನು ಹಾಗೂ ₹ 4,066 ಕೋಟಿ ಮೌಲ್ಯದ ಸಾಲಪತ್ರ-ಗಳನ್ನು ಮಾರಾಟ ಮಾಡಿದ್ದಾರೆ.

ನವೆಂಬರ್ ತಿಂಗಳಿನಲ್ಲಿ ಬಂಡವಾಳ ಮಾರುಕಟ್ಟೆಯಿಂದ ₹ 2,521 ಕೋಟಿ ಮೌಲ್ಯದ ಬಂಡವಾಳ ಹಿಂದಕ್ಕೆ ಪಡೆದಿದ್ದರು.

ದೇಶಿ ಮತ್ತು ಜಾಗತಿಕ ಮಟ್ಟದಲ್ಲಿ ಅನಿಶ್ಚಿತ ಸ್ಥಿತಿಯು ಮುಂದುವರಿದಿದೆ ಎಂದು ಮಾರ್ನಿಂಗ್‌ಸ್ಟಾರ್ ಇಂಡಿಯಾದ ಸಹಾಯಕ ನಿರ್ದೇಶಕ ಹಿಮಾಂಶು ಶ್ರೀವಾಸ್ತವ ತಿಳಿಸಿದ್ದಾರೆ.

ಕೊರೊನಾದ ಹೊಸ ತಳಿ ಓಮೈಕ್ರಾನ್ ಅತ್ಯಂತ ವೇಗವಾಗಿ ಹರಡುತ್ತಿರುವುದು ಆತಂಕ ಸೃಷ್ಟಿಸಿದ್ದು, ಜಾಗತಿಕ ಆರ್ಥಿಕ ಬೆಳವಣಿಗೆಯ ಮುನ್ನೋಟದ ಮೇಲೆ ಪರಿಣಾಮ ಉಂಟುಮಾಡುತ್ತಿದೆ. ಇದೇ ಪರಿಸ್ಥಿತಿ ಮುಂದುವರಿದಲ್ಲಿ ಭಾರತದಂತಹ ಪ್ರವರ್ಧಮಾನಕ್ಕೆ ಬರುತ್ತಿರುವ ದೇಶಗಳಿಂದ ಬಂಡವಾಳ ಹೊರಹರಿವು ಇನ್ನಷ್ಟು ಹೆಚ್ಚಾಗುವ ಸಾಧ್ಯತೆ ಇದೆ ಎಂದು ಅವರು ಎಚ್ಚರಿಕೆ ನೀಡಿದ್ದಾರೆ.

ರಾಮನಗರ ರೇಷ್ಮೆ

ಮಿಶ್ರತಳಿ	₹350-722
ದ್ವಿತಳಿ	₹633-950

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ

ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ದಯವಿಟ್ಟು ಸಂಪರ್ಕಿಸಿ:

Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036

ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಎಂಎಫ್ ಹೂಡಿಕೆ: ನಾಮಿನಿ ಮರೆಯದಿರಿ

ಬಂಡವಾಳ ಮಾರುಕಟ್ಟೆ

ಅವಿನಾಶ್ ಕೆ.ಟಿ.

ಮ್ಯೂಚುಯಲ್ ಫಂಡ್ (ಎಂಎಫ್) ಹೂಡಿಕೆ ಮಾಡುವಾಗ ನಾಮಿನಿ (ನಾಮ ನಿರ್ದೇಶನ) ಮಾಡುವ ಬಗ್ಗೆ ಅನೇಕರು ತಲೆ ಕೆಡಿಸಿಕೊಳ್ಳು-ವುದಿಲ್ಲ. ನಾಮಿನಿ ಮಾಡದಿದ್ದರೆ ಏನಾಗುತ್ತದೆ ಎಂದು ಕೆಲವರು ಪ್ರಶ್ನೆ ಮಾಡಿದರೆ, ಕೆಲವರು ಆಮೇಲೆ ನಾಮಿನಿ ಸೇರಿಸಿದರಾಯಿತು ಎಂದು ಅಕೌಂಟ್ ಓಪನ್ ಮಾಡಿಬಿಡುತ್ತಾರೆ. ಹೀಗೆ ನಾಮಿನಿ ಮಾಡುವುದಕ್ಕೆ ಗಮನಕೊಡದಿದ್ದರೆ ಏನೆಲ್ಲಾ ಸಮಸ್ಯೆ ಎದುರಿಸಬೇಕಾಗುತ್ತದೆ ಎನ್ನುವ ಬಗ್ಗೆ ಸಂಪೂರ್ಣ ಮಾಹಿತಿ ಇಲ್ಲಿದೆ.

ಸಾಮಾನ್ಯ ಪ್ರಶ್ನೆಗಳು: ಎಂಎಫ್ ಯೋಜನೆಯಲ್ಲಿ ಹೂಡಿಕೆ ಮಾಡುತ್ತಿರುವ ವ್ಯಕ್ತಿಯು ಸಾವನ್ನಪ್ಪಿದರೆ ಅದರಲ್ಲಿನ ಹೂಡಿಕೆ ಹಣ ಏನಾಗುತ್ತದೆ? ಆ ಬಗ್ಗೆ ಅವರ ಕುಟುಂಬಸ್ಥರಿಗೆ ತಿಳಿದಿರದಿದ್ದರೆ ಹೂಡಿಕೆ ಹಣ ನಷ್ಟವಾಗುವುದೇ? ನಾಮಿನಿ ಹೆಸರಿಸದೆ ಹೂಡಿಕೆ ಮಾಡಿದರೆ ಆಗುವ ಸಮಸ್ಯೆ ಏನು? ಜಂಟಿ ಖಾತೆ ಹೊಂದಿದ್ದರೆ ಅದರ ವರ್ಗಾವಣೆ ಸಾಧ್ಯವೆ ? ಹೀಗೆ ಎಂಎಫ್ ಹೂಡಿಕೆಯ ಮಾಲೀಕತ್ವದ ಸುತ್ತ ಇರುವ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳೋಣ. ಅದಕ್ಕಾಗಿ ನಾಲ್ಕು ಪ್ರಮುಖ ಸನ್ನಿವೇಶಗಳನ್ನು ಗಮನಿಸೋಣ.

ರವಿ(ಹೆಸರು ಬದಲಿಸಲಾಗಿದೆ) 10 ವರ್ಷಗಳ ಕಾಲ ನಿಯಮಿತವಾಗಿ 'ಎಂಎಫ್'ನಲ್ಲಿ ಹೂಡಿಕೆ ಮಾಡಿ ₹ 30 ಲಕ್ಷ ಗಳಿಸಿಕೊಂಡಿದ್ದರು. ಆದರೆ ವಿಧಿಯಾಟ ಎನ್ನುವಂತೆ ರವಿ ಅಕಾಲಿಕ ಮರಣಕ್ಕೆ ತುತ್ತಾದರು. ಇದೀಗ ಎದುರಾಗುವ ಪ್ರಶ್ನೆ ಎಂದರೆ, ಆ ₹ 30 ಲಕ್ಷ ಯಾರ ಪಾಲಾಗುತ್ತದೆ ಎನ್ನುವುದು. ಈ ಪ್ರಶ್ನೆಗೆ ಉತ್ತರ ನೀಡಬೇಕಾದರೆ ವಿವಿಧ ಸಂದರ್ಭಗಳನ್ನು ವಿವರಿಸಬೇಕಾಗುತ್ತದೆ. ಸಂದರ್ಭಕ್ಕೆ ಅನುಗುಣವಾಗಿ ಉತ್ತರವೂ ಬೇರೆ ಬೇರೆ ಆಗುತ್ತದೆ.

ಸಂದರ್ಭ -1: ರವಿ ಅವರು 'ಎಂಎಫ್'ನಲ್ಲಿ ₹ 30 ಲಕ್ಷ ಹೂಡಿಕೆಯ ಬಗ್ಗೆ ತಮ್ಮ ಪತ್ನಿಗೆ ಯಾವುದೇ ಮಾಹಿತಿ ನೀಡಿರದಿದ್ದರೆ ಸಂಕಷ್ಟದ ಸ್ಥಿತಿ ಬಂದೊದಗುತ್ತದೆ. ಹೂಡಿರುವ ಹಣವನ್ನು ಕ್ಲೇಮ್ ಮಾಡಬೇಕು ಎನ್ನುವ ಬಗ್ಗೆ ಕುಟುಂಬದವರಿಗೆ ಮಾಹಿತಿಯೇ ಇಲ್ಲದಿದ್ದರೆ ಅದನ್ನು ಪಡೆಯಲು ಸಾಧ್ಯವಾಗುವುದಿಲ್ಲ. ಇದರಿಂದ ಕುಟುಂಬಸ್ಥರಿಗೆ ಆರ್ಥಿಕ ನಷ್ಟವಾಗುತ್ತದೆ.

ಸಂದರ್ಭ- 2: ರವಿ ಅವರು ತಮ್ಮ ಪತ್ನಿಯನ್ನು ನಾಮಿನಿಯಾಗಿಸಿದ್ದರೆ ₹ 30 ಲಕ್ಷ ಹಣದ ಬಗ್ಗೆ ಚಿಂತಿಸಬೇಕಿಲ್ಲ. ಶ್ರೀಮತಿ ರವಿ ಅವರು ಪತಿ ಹೆಸರಿನಲ್ಲಿರುವ ಹೂಡಿಕೆಯನ್ನು ತಮ್ಮ ಹೆಸರಿಗೆ ವರ್ಗಾಯಿಸಿಕೊಳ್ಳಬಹುದು. ಎಂಎಫ್ ನಿರ್ವಹಣೆ ತಿಳಿದಿಲ್ಲ ಎಂದಾದರೆ ಹೂಡಿಕೆ ಸ್ಥಗಿತಗೊಳಿಸಿ ಲಾಭಾಂಶದ ಹಣವನ್ನು 3 ವಾರಗಳ ಒಳಗಾಗಿ ತಮ್ಮ ಬ್ಯಾಂಕ್ ಖಾತೆಗೆ ವರ್ಗಾಯಿಸಿಕೊಳ್ಳಬಹುದು.

ಸಂದರ್ಭ-3: ರವಿ ಅವರು ಜಂಟಿ ಖಾತೆ ಮಾಡಿಸಿ ತಮ್ಮ ಪತ್ನಿಯನ್ನು ಭಾಗಿದಾರರಾಗಿಸಿದ್ದರೆ ₹ 30 ಲಕ್ಷ ಹಣದ ಬಗ್ಗೆ ಚಿಂತಿಸಬೇಕಿಲ್ಲ. ಶ್ರೀಮತಿ ರವಿ ಅವರು ಪತಿ ಹೆಸರಿನಲ್ಲಿರುವ ಹೂಡಿಕೆಯನ್ನು ತಮ್ಮ ಹೆಸರಿಗೆ ಪೂರ್ಣಪ್ರಮಾಣದಲ್ಲಿ ವರ್ಗಾಯಿಸಿಕೊಳ್ಳಬಹುದು. ಎಂಎಫ್ ನಿರ್ವಹಣೆ ತಿಳಿದಿಲ್ಲ ಎಂದಾದರೆ ಹೂಡಿಕೆ ಸ್ಥಗಿತಗೊಳಿಸಿ ಲಾಭಾಂಶದ ಹಣವನ್ನು 3 ವಾರಗಳ ಒಳಗಾಗಿ ತಮ್ಮ ಬ್ಯಾಂಕ್ ಖಾತೆಗೆ ವರ್ಗಾಯಿಸಿಕೊಳ್ಳಬಹುದು.

ಸಂದರ್ಭ-4: ರವಿ ಅವರು ಎಂಎಫ್‌ನಲ್ಲಿ ₹ 30 ಲಕ್ಷ ಹೂಡಿಕೆಯ ಬಗ್ಗೆ ತಮ್ಮ ಪತ್ನಿಗೆ ಮಾಹಿತಿ ನೀಡಿ, ಆದರ ನಾಮಿನಿಯಾಗಿ ಮಾಡದಿದ್ದರೂ ಸಮಸ್ಯೆಯಾಗುತ್ತದೆ. ₹ 30 ಲಕ್ಷವನ್ನು ಎಂಎಫ್ ಕಂಪನಿಯಿಂದ ಪಡೆದುಕೊಳ್ಳಲು ಸಾಕಷ್ಟು ಅಲೆದಾಡಬೇಕಾಗುತ್ತದೆ. ಪತಿಯ ಮ್ಯೂಚುಯಲ್ ಫಂಡ್ ಹಣಕ್ಕೆ ಕಾನೂನುಬದ್ಧ ಉತ್ತರಾಧಿಕಾರಿ ತಾವೇ ಎಂದು ಸಾಬೀತುಪಡಿಸಲು ಪತ್ನಿ ಹೆಣಗಾಡಬೇಕಾಗುತ್ತದೆ. ಕಂಪನಿ ಕೇಳುವ ಎಲ್ಲ ಪೂರಕ ದಾಖಲೆಗಳನ್ನು ಒದಗಿಸಬೇಕಾಗುತ್ತದೆ. ಇದು ಪ್ರಯಾಸದ ಕೆಲಸ ಎನಿಸಿದರೂ ಹಣ ಪಡೆದುಕೊಳ್ಳಲು ಸಾಧ್ಯವಿದೆ.

(ಲೇಖಕ: ಇಂಡಿಯನ್ ಮನಿ ಡಾಟ್ ಕಾಂನ ಹಣಕಾಸು ಸಲಹಾ ವಿಭಾಗದ ಮುಖ್ಯಸ್ಥ)

ಮಾರಾಟದ ಒತ್ತಡಕ್ಕೆ ಕುಸಿದ ಸೂಚ್ಯಂಕಗಳು

ಷೇರುಪೇಟೆ

ಎರಡು ವಾರಗಳಿಂದ ಗಳಿಕೆಯ ಹಾದಿಯಲ್ಲಿದ್ದ ಷೇರುಪೇಟೆ ಸೂಚ್ಯಂಕಗಳು ಮತ್ತೆ ನಕಾರಾತ್ಮಕ ಹಾದಿ ತುಳಿದಿವೆ. ಡಿಸೆಂಬರ್ 17 ಕ್ಕೆ ಕೊನೆಗೊಂಡ ವಾರದಲ್ಲಿ ಸೆನ್ಸೆಕ್ಸ್ ಮತ್ತು ನಿಫ್ಟಿ ಸೂಚ್ಯಂಕಗಳು ಕುಸಿತ ಕಂಡಿವೆ. 57,011 ಅಂಶಗಳಲ್ಲಿ ವಹಿವಾಟು ಮುಗಿಸಿರುವ ಸೆನ್ಸೆಕ್ಸ್ ಶೇ 3 ರಷ್ಟು ಕುಸಿದಿದ್ದರೆ, 16,985 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ನಿಫ್ಟಿ ಶೇ 3 ರಷ್ಟು ಇಳಿಕೆಯಾಗಿದೆ. ನಿಫ್ಟಿ ಮಿಡ್ ಕ್ಯಾಪ್ ಸೂಚ್ಯಂಕ ಶೇ 4 ಮತ್ತು ಸ್ಮಾಲ್ ಕ್ಯಾಪ್ ಸೂಚ್ಯಂಕ ಶೇ 3.6 ರಷ್ಟು ಕುಸಿದಿವೆ.

ಜಾಗತಿಕವಾಗಿ ಆಯಾ ದೇಶದ ಕೇಂದ್ರೀಯ ಬ್ಯಾಂಕ್‌ಗಳು ಬಡ್ಡಿ ದರ ಹೆಚ್ಚಳಕ್ಕೆ ಮುಂದಾಗಿರುವುದು, ಒಮೈಕ್ರಾನ್ ಪ್ರಕರಣಗಳು ಹೆಚ್ಚಾಗುತ್ತಿರುವುದು, ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಲಾಭ ಗಳಿಕೆಗೆ ಮುಂದಾಗಿರುವುದು ಸೇರಿ ಪ್ರಮುಖ ಅಂಶಗಳು ಸೂಚ್ಯಂಕಗಳ ಕುಸಿತಕ್ಕೆ ಕಾರಣವಾಗಿವೆ. ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಡಿಸೆಂಬರ್‌ನಲ್ಲಿ ಈವರೆಗೆ ₹ 26,687 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ.

ವಲಯವಾರು ಪ್ರಗತಿಯಲ್ಲಿ ನಿಫ್ಟಿ ಮಾಹಿತಿ ತಂತ್ರಜ್ಞಾನ ಸೂಚ್ಯಂಕ ಹೊರತುಪಡಿಸಿ ಎಲ್ಲ ಸೂಚ್ಯಂಕಗಳು ಕುಸಿತ ಕಂಡಿವೆ. ರಿಯಲ್ ಎಸ್ಟೇಟ್ ಸೂಚ್ಯಂಕ ಶೇ 8 ರಷ್ಟು, ಮಾಧ್ಯಮ ಸೂಚ್ಯಂಕ ಶೇ 8, ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಸೂಚ್ಯಂಕ ಶೇ 7.7 ಮತ್ತು ಎಫ್ ಎಂಸಿಜಿ ಶೇ 4.6 ರಷ್ಟು ಇಳಿಕೆಯಾಗಿವೆ.

ಏರಿಕೆ-ಇಳಿಕೆ: ನಿಫ್ಟಿಯಲ್ಲಿ ವಿಪ್ರೊ ಶೇ 5, ಪವರ್ ಗ್ರಿಡ್ ಶೇ 4, ಇನ್ಫೊಸಿಸ್ ಶೇ 3, ಟೆಕ್ ಮಹೀಂದ್ರ ಶೇ 2.5 ಮತ್ತು ಸನ್ ಫಾರ್ಮಾ ಶೇ 1 ರಷ್ಟು ಗಳಿಸಿಕೊಂಡಿವೆ. ಬಜಾಜ್ ಫಿನ್‌ಸರ್ವ್ ಶೇ 8, ಐಟಿಸಿ ಶೇ 8, ಬಜಾಜ್ ಫೈನಾನ್ಸ್ ಶೇ 7, ಎಚ್‌ಡಿಎಫ್‌ಸಿ ಶೇ 6.5 ಮತ್ತು ಏರ್‌ಟೆಲ್ ಶೇ 6 ರಷ್ಟು ಕುಸಿತ ಕಂಡಿವೆ.

ಮುನ್ನೋಟ: ಜಾಗತಿಕವಾಗಿ ವಿವಿಧ ದೇಶಗಳ ಕೇಂದ್ರೀಯ ಬ್ಯಾಂಕ್‌ಗಳ ಬಡ್ಡಿ ದರ ಹೆಚ್ಚಳ ಯಾವ ದಿಕ್ಕಿನಲ್ಲಿ ಸಾಗಲಿದೆ ಮತ್ತು ಒಮೈಕ್ರಾನ್ ಪ್ರಕರಣಗಳ ಸ್ಥಿತಿಗತಿ ಏನಾಗಲಿದೆ ಎನ್ನುವುದು ಷೇರು ಮಾರುಕಟ್ಟೆ ಸೂಚ್ಯಂಕಗಳ ಗತಿ ನಿರ್ಧರಿಸಲಿದೆ. ಷೇರು ಮಾರುಕಟ್ಟೆ ಈ ವರ್ಷ ಅನಿರೀಕ್ಷಿತವಾದ ಬೆಳವಣಿಗೆ ಕಂಡಿರುವುದರಿಂದ ಒಂದಿಷ್ಟು ಇಳಿಕೆ (ಮಾರ್ಕೆಟ್ ಕರೆಕ್ಷನ್) ನಿರೀಕ್ಷಿಸಬಹುದು. ಸದ್ಯದ ಸ್ಥಿತಿಯಲ್ಲಿ ಉತ್ತಮ ಆಂತರಿಕ ಮೌಲ್ಯವಿರುವ ಕಂಪನಿಗಳ ಷೇರುಗಳಲ್ಲಿ ಹೂಡಿಕೆ ಮಾಡುವುದನ್ನು ಮಾತ್ರ ಹೂಡಿಕೆದಾರರು ಪರಿಗಣಿಸುವುದು ಉತ್ತಮ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹520
12 ಮೊಟ್ಟೆಗೆ	₹68
ಮೈಸೂರು	
100 ಮೊಟ್ಟೆಗೆ	₹518

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

'ಮುಂದಿನ ಹಣಕಾಸು ವರ್ಷದಲ್ಲಿ ಕಾರ್ಮಿಕ ಸಂಹಿತೆ ಅನುಷ್ಠಾನ'

ನವದೆಹಲಿ (ಪಿಟಿಐ): 13 ರಾಜ್ಯಗಳು ನಿಯಮ ರೂಪಿಸಿರುವುದರಿಂದ ನಾಲ್ಕು ಕಾರ್ಮಿಕ ಸಂಹಿತೆಗಳು ಮುಂದಿನ ಹಣಕಾಸು ವರ್ಷದಲ್ಲಿ ಅನುಷ್ಠಾನಕ್ಕೆ ಬರುವ ಸಾಧ್ಯತೆ ಇದೆ ಎಂದು ಸರ್ಕಾರದ ಹಿರಿಯ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಕೇಂದ್ರ ಕಾರ್ಮಿಕ ಸಚಿವಾಲಯವು ನಿಯಮಗಳನ್ನು ರೂಪಿಸಿ ಆಗಿದೆ. 2021ರ ಫೆಬ್ರುವರಿಯಲ್ಲಿ ಈ ಸಂಹಿತೆಗಳಿಗೆ ಕರಡು ನಿಯಮಗಳನ್ನು ಅಂತಿಮಗೊಳಿಸುವ ಪ್ರಕ್ರಿಯೆಯನ್ನು ಕೇಂದ್ರ ಸರ್ಕಾರವು ಪೂರ್ಣಗೊಳಿಸಿದೆ. ಇವುಗಳಿಗೆ ಸಂಬಂಧಿಸಿದಂತೆ ಬಹುತೇಕ ರಾಜ್ಯ ಸರ್ಕಾರಗಳು ಅಧಿಸೂಚನೆಯಲ್ಲಿ ಪ್ರಕಟಿಸಿವೆ. ಹೀಗಾಗಿ 2022–23ನೇ ಹಣಕಾಸು ವರ್ಷದಲ್ಲಿ ಕಾಯ್ದೆಗಳು ಅನುಷ್ಠಾನಕ್ಕೆ ಬರುವ ಸಾಧ್ಯತೆ ಇದೆ ಎಂದು ತಿಳಿಸಿದ್ದಾರೆ.

ಪ್ರತೀಕಾರ: 80 ನಾಯಿಮರಿಗಳನ್ನು ಕೊಂದ ಮಂಗಗಳು

ಪ್ರಜಾವಾಣಿ ವಾರ್ತೆ

ಮುಂಬೈ: ಮಹಾರಾಷ್ಟ್ರದ ಬೀಡ್ ಜಿಲ್ಲೆಯ ಮಜಲ್‌ಗಾಂವ್‌ನಲ್ಲಿ ಕಳೆದ ಮೂರು ತಿಂಗಳಿಂದ ಸುಮಾರು 80 ನಾಯಿಮರಿಗಳನ್ನು ಮಂಗಗಳು ಕೊಂದು ಹಾಕಿವೆ ಎಂದು 'ಇಂಡಿಯಾ ಟುಡೆ' ವರದಿ ಮಾಡಿದೆ.

ಇದು ಸ್ಥಳೀಯ ನಿವಾಸಿಗಳಲ್ಲಿ ಅಚ್ಚರಿ ಮೂಡಿಸಿದೆ. ಈ ಪ್ರದೇಶದಲ್ಲಿ ಬೀದಿನಾಯಿಗಳು ಕೋತಿ ಮರಿಯನ್ನು ಕೊಂದು ಹಾಕಿದ ಬಳಿಕ ಈ ಸೇಡಿನ ಸರಣಿ ಆರಂಭವಾಗಿದೆ. ಮಂಗಗಳು ನಾಯಿ ಮರಿಗಳನ್ನು ಎತ್ತಿಕೊಂಡು ಬಂದು ಮರ ಅಥವಾ ಎತ್ತರದ ಕಟ್ಟಡದ ಮೇಲಿಂದ ಎಸೆಯುತ್ತಿವೆ ಎಂದು ಗ್ರಾಮಸ್ಥರು ತಿಳಿಸಿದ್ದಾರೆ.

ಮಜಲ್‌ಗಾಂವ್‌ನಲ್ಲಿರುವ ಲವೂಲ್ ಗ್ರಾಮದಲ್ಲಿ ಸುಮಾರು 5,000 ನಿವಾಸಿ-ಗಳಿದ್ದಾರೆ. ಈ ಗ್ರಾಮದಲ್ಲೀಗ ಒಂದೇ ಒಂದು ನಾಯಿ ಮರಿಯೂ ಉಳಿದಿಲ್ಲ.

ನಿಧನ ವಾರ್ತೆ

ಹೋಟೆಲ್ ಉದ್ಯಮಿ ಜಗನ್ನಾಥ ಶೆಟ್ಟಿ

ಪ್ರಜಾವಾಣಿ ವಾರ್ತೆ

ಜಗನ್ನಾಥ ಶೆಟ್ಟಿ

ಮುಂಬೈ: ಹೋಟೆಲ್ ಉದ್ಯಮಿ ಜಗನ್ನಾಥ ಶೆಟ್ಟಿ (89) ಅವರು ಪುಣೆಯಲ್ಲಿ ಭಾನುವಾರ ನಿಧನರಾದರು. ಅವರಿಗೆ ಪುತ್ರಿ ಇದ್ದಾರೆ.

ಆಪ್ತ ಬಳಗದಲ್ಲಿ ಅವರನ್ನು 'ಜಗನ್ನಾಥ ಅಣ್ಣ' ಎಂದೇ ಕರೆ-ಯಲಾಗುತ್ತಿತ್ತು. ಅವರು ಕಾರ್ಕಳ ಬಳಿಯ ಬೈಲೂರಿನ ಓಣಿಮಜಲು ಮನೆಯವರು.

ಪುಣೆ ನಿವಾಸಿಗಳಿಗೆ ಇಡ್ಲಿ, ದೋಸೆ, ವಡಾ, ಉಪ್ಪಿಟ್ಟು ಸೇರಿದಂತೆ ದಕ್ಷಿಣ ಭಾರತದ ಊಟ ಮತ್ತು ತಿಂಡಿಗಳನ್ನು ಪರಿಚಯಿಸಿದ ಕೀರ್ತಿ ಶೆಟ್ಟಿ ಅವರದು. ಅವರು 'ವೈಶಾಲಿ', 'ರೂಪಾಲಿ' ಹಾಗೂ 'ಆಮ್ರಪಾಲಿ' ಎಂಬ ರೆಸ್ಟೋರೆಂಟ್ ಗಳನ್ನು ಸ್ಥಾಪಿಸಿದ್ದರು. ಗಣ್ಯ ಉದ್ದಿ-ಮೆದಾರರಾದ ಪೂನಾವಾಲಾ, ಬಜಾಜ್, ಕಿರ್ಲೋಸ್ಕರ್ ಹಾಗೂ ಕಲ್ಯಾಣಿ ಕುಟುಂಬಗಳಿಗೆ 'ವೈಶಾಲಿ' ರೆಸ್ಟೋರೆಂಟ್ ನೆಚ್ಚಿನ ತಾಣವಾಗಿತ್ತು.

ಉತ್ತಮ ಗಾಲ್ಫ್ ಆಟಗಾರರಾಗಿದ್ದ ಅವರು, ಸಮಾಜಸೇವೆಯಲ್ಲೂ ತೊಡ-ಗಿಸಿಕೊಂಡಿದ್ದರು. ವರದಕ್ಷಿಣೆ ವಿರುದ್ಧ ಆಂದೋಲನ ಆರಂಭಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು.

ಮೌಲ್ಯಮಾಪನ ವಿಳಂಬ: ಮರ್ಚೆಂಟ್ ಬ್ಯಾಂಕ್ ಅಧಿಕಾರಿ

'ಎಲ್‌ಐಸಿ ಐಪಿಒ: ಮಾರ್ಚ್ ಅಂತ್ಯಕ್ಕೆ ಅನುಮಾನ'

ನವದೆಹಲಿ (ಪಿಟಿಐ): ಭಾರತೀಯ ಜೀವ ವಿಮಾ ನಿಗಮದ (ಎಲ್‌ಐಸಿ) ಆರಂಭಿಕ ಸಾರ್ವಜನಿಕ ಹೂಡಿಕೆಯು (ಐಪಿಒ) ಪ್ರಸಕ್ತ ಹಣಕಾಸು ವರ್ಷದ ಮಾರ್ಚ್ ಅಂತ್ಯದ ವೇಳೆಗೆ ನಡೆಯುವುದು ಅನುಮಾನ ಎಂದು ಮರ್ಚೆಂಟ್ ಬ್ಯಾಂಕ್‌ನ ಅಧಿಕಾರಿಯೊ-ಬ್ಬರು ಹೇಳಿದ್ದಾರೆ.

ಸರ್ಕಾರಿ ಸ್ವಾಮ್ಯದ ಈ ಕಂಪನಿಯ ಮೌಲ್ಯಮಾಪನ ಮಾಡಲು ನಿರೀಕ್ಷೆಗಿಂತಲೂ ಹೆಚ್ಚಿನ ಸಮಯ ತೆಗೆದುಕೊಳ್ಳುತ್ತಿದೆ. ಪೂರ್ವಸಿದ್ಧತಾ ಕಾರ್ಯವು ಇನ್ನೂ ಮುಗಿದಿಲ್ಲ ಎಂದು ಅವರು ತಿಳಿಸಿದ್ದಾರೆ.

ಎಲ್‌ಐಸಿಯ ಮೌಲ್ಯಮಾಪನ-ಕ್ಕೆ ಸಂಬಂಧಿಸಿದಂತೆ ಇನ್ನೂ ಕೆಲವು ಸಮಸ್ಯೆಗಳನ್ನು ಪರಿಹರಿಸಬೇಕಾಗಿ-ದೆ. ಆ ಬಳಿಕ ನಿಯಂತ್ರಣ ವ್ಯವಸ್ಥೆಗೆ ಸಂಬಂಧಿಸಿದಂತೆ ಹಲವು ಪ್ರಕ್ರಿಯೆಗಳ-ನ್ನು ನಡೆಸಬೇಕಿದೆ ಎಂದಿದ್ದಾರೆ.

ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿ (ಸೆಬಿ) ಅಷ್ಟೇ ಅಲ್ಲದೆ ವಿಮಾ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರ (ಐಆರ್‌ಡಿಎಐ) ಸಹ ಐಪಿಒ ಕುರಿತಾಗಿ ಕೂಲಂಕಷವಾಗಿ ಪರಿಶೀಲನೆ ನಡೆಸಬೇಕಿದೆ. ಎಲ್‌ಐಸಿಯು ದೊಡ್ಡ ಕಂಪನಿ ಆಗಿರುವುದರಿಂದ ಅದರ ಮೌಲ್ಯಮಾಪನ ಮಾಡುವುದು ಬಹಳ ಸಂಕೀರ್ಣವಾದ ಪ್ರಕ್ರಿಯೆ ಆಗಿದೆ. ಅದರ ರಿಯಲ್ ಎಸ್ಟೇಟ್ ಸ್ವತ್ತುಗಳು, ಅಂಗಸಂಸ್ಥೆಗಳು, ಲಾಭದ ಹಂಚಿಕೆಯ ಸ್ವರೂಪ ಮತ್ತು ಷೇರು ಮಾರಾಟದ ಗಾತ್ರವು ಮೌಲ್ಯಮಾಪನವನ್ನು ಅವಲಂಬಿಸಿರುತ್ತದೆ ಎಂದು ಅವರು ವಿವರಿಸಿದ್ದಾರೆ.

ಮಿಲಿಮನ್ ಅಡ್ವೈಸರಿ ಎಲ್‌ಎಲ್‌ಪಿ ಇಂಡಿಯಾ ಕಂಪನಿಯು ಎಲ್‌ಐಸಿಯ ಮೌಲ್ಯದ ಅಂದಾಜು ಮಾಡುತ್ತಿದೆ. ಆರ್ಥಿಕ ವ್ಯವಹಾರಗಳ ಸಚಿವ ಸಂಪುಟ ಸಮಿತಿಯು (ಸಿಸಿಇಎ) ಎಲ್‌ಐಸಿ ಐಪಿಒಗೆ ಜುಲೈನಲ್ಲಿ ತಾತ್ವಿಕ ಒಪ್ಪಿಗೆ ನೀಡಿತು. ಆ ಬಳಿಕ ಕೇಂದ್ರ ಸರ್ಕಾರವು 10 ಮರ್ಚೆಂಟ್ ಬ್ಯಾಂಕರ್‌ಗಳನ್ನು ನೇಮಿಸಿದೆ.

ಕೇಂದ್ರ ಸರ್ಕಾರದ ಷೇರು ವಿಕ್ರಯ ಗುರಿ ತಲುಪಲು ಎಲ್‌ಐಸಿ ಐಪಿಒ ಬಹಳ ಮುಖ್ಯವಾಗಿದೆ. ಕೇಂದ್ರ ಸರ್ಕಾರವು ಪ್ರಸಕ್ತ ಹಣಕಾಸು ವರ್ಷದಲ್ಲಿ ಷೇರು ವಿಕ್ರಯದ ಮೂಲಕ ₹ 1.75 ಲಕ್ಷ ಕೋಟಿ ಸಂಗ್ರಹಿಸುವ ಗುರಿಯನ್ನು ಇಟ್ಟುಕೊಂಡಿದೆ.

ಓಮೈಕ್ರಾನ್: ರಾಜ್ಯದಲ್ಲಿ ಲಸಿಕೆ ವಿತರಣೆಗೆ ವೇಗ

ಡಿಸೆಂಬರ್‌ನಲ್ಲಿ ಪ್ರತಿನಿತ್ಯ ಸರಾಸರಿ 4.54 ಲಕ್ಷ ಡೋಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಭಾವ್ಯ ಕೋವಿಡ್ ಮೂರನೇ ಅಲೆ ಹಾಗೂ ಓಮೈಕ್ರಾನ್ ಪತ್ತೆಯ ಕಾರಣ ರಾಜ್ಯ ಸರ್ಕಾರವು ಲಸಿಕಾ ಅಭಿಯಾನಕ್ಕೆ ವೇಗ ನೀಡಿದೆ. ಈ ತಿಂಗಳು ಪ್ರತಿನಿತ್ಯ ಸರಾಸರಿ 4.54 ಲಕ್ಷ ಡೋಸ್‌ಗಳಷ್ಟು ಲಸಿಕೆ ವಿತರಿಸಲಾಗಿದೆ.

ರಾಜ್ಯದಲ್ಲಿ ಈವರೆಗೆ 8.27 ಕೋಟಿ ಡೋಸ್‌ಗಳಷ್ಟು ಲಸಿಕೆ ನೀಡಲಾಗಿದೆ. 4.70 ಕೋಟಿ ಮಂದಿ ಲಸಿಕೆಯ ಮೊದಲ ಡೋಸ್ ಹಾಗೂ 3.56 ಕೋಟಿ ಮಂದಿ ಎರಡೂ ಡೋಸ್‌ಗಳನ್ನು ಪಡೆದುಕೊಂಡಿದ್ದಾರೆ. ವರ್ಷಾಂತ್ಯಕ್ಕೆ 18 ವರ್ಷ ಮೇಲ್ಪಟ್ಟ ಎಲ್ಲರಿಗೂ ಎರಡು ಡೋಸ್ ಲಸಿಕೆ ವಿತರಿಸುವ ಗುರಿಯನ್ನು ರಾಜ್ಯ ಸರ್ಕಾರ ಹಾಕಿಕೊಂಡಿದೆ.

ಈ ತಿಂಗಳು 81.76 ಲಕ್ಷ ಡೋಸ್‌ಗಳಷ್ಟು ಲಸಿಕೆಗಳನ್ನು ನೀಡಲಾಗಿದೆ. ರಾಜ್ಯದಲ್ಲಿ 2021ರ ಜ.16ರಿಂದ ಲಸಿಕೆ ವಿತರಿ-ಸಲಾಗುತ್ತಿದೆ. ಆರೋಗ್ಯ ಇಲಾಖೆಯ ಮಾಹಿತಿ ಪ್ರಕಾರ ರಾಜ್ಯದಲ್ಲಿ 4.89 ಲಕ್ಷ ಮಂದಿ 18 ವರ್ಷಗಳು ಮೇಲ್ಪಟ್ಟವರಾ-ಗಿದ್ದಾರೆ.

ತಿಂಗಳುವಾರು ಕೋವಿಡ್ ಲಸಿಕೆ ವಿತರಣೆ

ತಿಂಗಳು	ಒಟ್ಟು ಡೋಸ್‌ಗಳು	ದೈನಂದಿನ ಸರಾಸರಿ
2021 ಜನವರಿ	3.36 ಲಕ್ಷ	21 ಸಾವಿರ
ಫೆಬ್ರವರಿ	6.24 ಲಕ್ಷ	22ಸಾವಿರ
ಮಾರ್ಚ್	37.91 ಲಕ್ಷ	1.22 ಲಕ್ಷ
ಏಪ್ರಿಲ್	58.93 ಲಕ್ಷ	1.96 ಲಕ್ಷ
ಮೇ	39.88 ಲಕ್ಷ	1.28 ಲಕ್ಷ
ಜೂನ್	88.29 ಲಕ್ಷ	2.94 ಲಕ್ಷ
ಜುಲೈ	76.06 ಲಕ್ಷ	2.45 ಲಕ್ಷ
ಆಗಸ್ಟ್	1.18 ಕೋಟಿ	3.80 ಲಕ್ಷ
ಸೆಪ್ಟೆಂಬರ್	1.40 ಕೋಟಿ	4.83 ಲಕ್ಷ
ಅಕ್ಟೋಬರ್	84.75 ಲಕ್ಷ	2.73 ಲಕ್ಷ
ನವೆಂಬರ್	91.15 ಲಕ್ಷ	3.03 ಲಕ್ಷ
ಡಿಸೆಂಬರ್	81.76 ಲಕ್ಷ	4.54 ಲಕ್ಷ

ಜನವರಿ ತಿಂಗಳಲ್ಲಿ ನಿತ್ಯ ಸರಾಸರಿ 21 ಸಾವಿರ ಡೋಸ್‌ಗಳಷ್ಟು ಮಾತ್ರ ಲಸಿಕೆ ವಿತರಿಸಲಾಗಿತ್ತು. ಆರೋಗ್ಯ ಕಾರ್ಯಕರ್ತರು ಮತ್ತು ಕೋವಿಡ್ ಮುಂಚೂಣಿ ಯೋಧರಿಗೆ ಪ್ರಾರಂಭಿಕ ದಿನಗಳಲ್ಲಿ ಲಸಿಕೆ ನೀಡಲಾಗಿತ್ತು. ಬಳಿಕ ಆದ್ಯತೆಯ ಅನುಸಾರ ಲಸಿಕೆ ಒದಗಿಸಲಾಯಿತು. ಇದರಿಂದ ದೈನಂದಿನ ವಿತರಣೆಯೂ ಏರಿಕೆ ಕಂಡಿತು. ಸೆಪ್ಟೆಂಬರ್ ಒಂದೇ ತಿಂಗಳಲ್ಲಿ 1.40 ಕೋಟಿ ಡೋಸ್‌ಗಳಷ್ಟು ಲಸಿಕೆ ವಿತರಿಸಲಾಗಿದ್ದು, ಸರಾಸರಿ 4.83 ಲಕ್ಷ ಡೋಸ್‌ಗಳಷ್ಟು ಲಸಿಕೆ ನೀಡಲಾಗಿದೆ.

18 ರಿಂದ 44 ವರ್ಷದೊಳಗಿನ-ವರಲ್ಲಿ 2.71 ಕೋಟಿ ಮಂದಿ ಮೊದಲ ಡೋಸ್ ಹಾಗೂ 1.90 ಕೋಟಿ ಮಂದಿ ಎರಡನೇ ಡೋಸ್ ಲಸಿಕೆ ಪಡೆದು-ಕೊಂಡಿದ್ದಾರೆ. 45 ವರ್ಷ ಮೇಲ್ಪಟ್ಟ-ವರಲ್ಲಿ 1.84 ಕೋಟಿ ಮಂದಿ ಮೊದಲ ಡೋಸ್ ಹಾಕಿಸಿಕೊಂಡಿದ್ದಾರೆ. ಅವರಲ್ಲಿ 1.50 ಕೋಟಿ ಮಂದಿ ಎರಡೂ ಡೋಸ್‌ಗಳನ್ನು ಪಡೆದಿದ್ದಾರೆ.

ಆರೋಗ್ಯ ಕಾರ್ಯಕರ್ತರಲ್ಲಿ 7.64 ಲಕ್ಷ ಹಾಗೂ ಕೋವಿಡ್ ಮುಂಚೂಣಿ ಯೋಧರಲ್ಲಿ 9.43 ಲಕ್ಷ ಮಂದಿ ಮೊದಲ ಡೋಸ್ ಪಡೆದಿದ್ದಾರೆ. ಇವರಲ್ಲಿ ಕ್ರಮವಾಗಿ 7.16 ಲಕ್ಷ ಮಂದಿ ಹಾಗೂ 8.86 ಲಕ್ಷ ಮಂದಿ ಎರಡೂ ಡೋಸ್ ಲಸಿಕೆ ಹಾಕಿಸಿಕೊಂಡಿದ್ದಾರೆ.

ಮಾನವ ಹಕ್ಕು ನೇಮಕಾತಿ: ಮಮತಾ ದ್ವಂದ್ವಕ್ಕೆ ಕಳವಳ

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳದ ಮಾನವ ಹಕ್ಕುಗಳ ಆಯೋಗದ (ಎಸ್‌ಎಚ್‌ಆರ್‌ಸಿ) ಅಧ್ಯಕ್ಷರ ನೇಮಕ ವಿಚಾರಕ್ಕೆ ಸಂಬಂಧಿಸಿದಂತೆ ಮಮತಾ ಬ್ಯಾನರ್ಜಿ ಅವರ ಸರ್ಕಾರದ ದ್ವಂದ್ವ ನಿಲುವಿನ ಬಗ್ಗೆ ಅಲ್ಲಿನ ರಾಜ್ಯಪಾಲ ಜಗದೀಪ್ ಧನಕರ್ ಭಾನುವಾರ ಕಳವಳ ವ್ಯಕ್ತಪಡಿಸಿದ್ದಾರೆ.

ಎಸ್‌ಎಚ್‌ಆರ್‌ಸಿ ಅಧ್ಯಕ್ಷರ ನೇಮಕಕ್ಕೆ ಕಾಲಮಿತಿಯೊಳಗೆ ಶಿಫಾರಸು ಮಾಡುವಂತೆ ಅವರು ಸರ್ಕಾರಕ್ಕೆ ಸೂಚನೆ ನೀಡಿದ್ದಾರೆ.

ಎಸ್‌ಎಚ್‌ಆರ್‌ಸಿ ಅಧ್ಯಕ್ಷರ ನೇಮಕ ವಿಷಯದಲ್ಲಿ ಮಮತಾ ಬ್ಯಾನರ್ಜಿ ಅವರ ನಿಲುವನ್ನು ಪ್ರಶ್ನಿಸಿ ಟ್ವೀಟ್ ಮಾಡಿರುವ ರಾಜ್ಯಪಾಲರು, ರಾಜ್ಯದಲ್ಲಿ ಆಡಳಿತಗಾರನ ಕಾನೂನು ಇದೆಯೇ ಹೊರತು ನೆಲದ ಕಾನೂನು (ರೂಲ್ ಆಫ್ ಲಾ) ಇಲ್ಲ. ಇದನ್ನು ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ ಗಮನಿಸಬೇಕು ಎಂದು ಹೇಳಿದ್ದಾರೆ.

ರಾಜ್ಯದಲ್ಲಿ ನಡೆದ ಚುನಾವಣೋತ್ತರ ಹಿಂಸಾಚಾರದ ಕುರಿತು ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗವು (ಎನ್‌ಎಚ್‌ಆರ್‌ಸಿ) ಸತ್ಯಶೋಧನಾ ಸಮಿತಿ ರಚಿಸಿತ್ತು. ಪಶ್ಚಿಮ ಬಂಗಾಳದಲ್ಲಿ 'ರೂಲ್ ಆಫ್ ಲಾ' ಬದಲಿಗೆ ಆಡಳಿತಗಾರನ ಕಾನೂನು ಇದೆ ಎಂದು ಸಮಿತಿ ಜುಲೈನಲ್ಲಿ ಹೇಳಿತ್ತು.

ಕಲ್ಕತ್ತ ಹೈಕೋರ್ಟ್ ಆದೇಶದ ಮೇರೆಗೆ ಎನ್‌ಎಚ್‌ಆರ್‌ಸಿ ಐವರು ನ್ಯಾಯಾಧೀಶರ ಸಮಿತಿಯನ್ನು ರಚಿಸಿದೆ.

'ಯಶವಂತಪುರ–ಹುಬ್ಬಳ್ಳಿ ಜೋಡಿ ರೈಲು ಮಾರ್ಗ ಪ್ರಗತಿಯಲ್ಲಿ'

ಪ್ರಜಾವಾಣಿ ವಾರ್ತೆ

ನವದೆಹಲಿ: ಯಶವಂತಪುರ-ಹುಬ್ಬಳ್ಳಿ ರೈಲು ಮಾರ್ಗವನ್ನು ಜೋಡಿ ಮಾರ್ಗವನ್ನಾಗಿ ಅಭಿವೃದ್ಧಿಪಡಿಸುವ ಕಾಮಗಾರಿ ಪ್ರಗತಿಯಲ್ಲಿದ್ದು, ಕಾಮಗಾರಿಯನ್ನು ಹಂತಹಂತವಾಗಿ ಕಾರ್ಯಗತಗೊಳಿಸ-ಲಾಗುತ್ತದೆ ಎಂದು ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಹೇಳಿದ್ದಾರೆ.

ರಾಜ್ಯಸಭಾ ಸದಸ್ಯ ಕೆ.ನಾರಾಯಣ ಅವರ ಪ್ರಶ್ನೆಗೆ ಸಂಸತ್‌ನಲ್ಲಿ ಉತ್ತರಿಸಿದ ಅವರು, ಈ ಮಾರ್ಗದ ಪೈಕಿ ಚಿಕ್ಕಜಾಜೂರು–ಅರಸೀಕೆರೆ, ತುಮಕೂರು–ಯಶವಂತಪುರ ಮಧ್ಯೆ ಕಾಮಗಾರಿಗೆ ಚಾಲನೆ ನೀಡಲಾಗಿದೆ ಎಂದು ತಿಳಿಸಿದ್ದಾರೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Engg/ Production Technical

URGENTLY WANTED experienced QA, QC personnel for Electromagnetic products supplied for Defence and Aerospace. Minimum experience of 10 years. Very competitive remuneration. Vita Technology Pvt. Ltd., Contact: 7899752257 / 9686203434 vitatech@vitatechindia.com

General

ಕಂಪನಿಗಳಿಗೆ ಬೇಕಾಗಿದ್ದಾರೆ. ಟಾಟಾಮೋಟಾರ್ಸ್, TVS, ಬ್ರಿಟಾನಿಯಾಗಳಿಗೆ SSLC, PUC, Degreeಯವರು ITIನವರುಗಳು (ವಿದ್ಯಾರ್ಹತೆಯಿಲ್ಲದವರಿಗೂ) 18,100- 56,000/- ವಸತಿಯೂಟದೊಂದಿಗೆ. 7899778278, 9611715755

ಬೇಕಾಗಿದ್ದಾರೆ ಟಯೋಟಾ, ಟಾಟಾಮೋಟರ್ಸ್, ಹೊಂಡ ಆನ್‌ಲೈನ್ ಕಂಪನಿಗಳಿಗೆ 10ನೇ, ಪಿಯುಸಿ, ಡಿಗ್ರಿ, ಡಿಪ್ಲೊಮಾದವರು 16,600-62000/- (ಮನೆಯಲ್ಲಿಯೇ ಕೆಲಸ) ವಸತಿಯೂಟದೊಂದಿಗೆ 8123884588, 8123884788

ತಕ್ಷಣ ಬೇಕಾಗಿದ್ದಾರೆ: ಕರ್ನಾಟಕದಾದ್ಯಂತ ಕಂಪನಿ, ಆಫೀಸ್ ಕೆಲಸಗಳಿಗೆ ಯುವಕ ಯುವತಿಯರು. 10th, Degree. ವಸತಿಯೂಟದೊಂದಿಗೆ ಸಂಬಳ 17,800- 19,200. 8197389603

ಕರ್ನಾಟಕದಾದ್ಯಂತ ಹೆಸರಾಂತ ಕಂಪನಿ ಹಾಗೂ ಆಫೀಸ್ ಕೆಲಸಕ್ಕೆ ಯುವಕ/ಯುವತಿಯರು ಬೇಕಾಗಿದ್ದಾರೆ. ವಸತಿಯೂಟದೊಂದಿಗೆ Salary+ OT. 17,800/- 68,000/-. 8884666597, 8884666594.

WORK FROM HOME ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8095377333/ 8095377444

ನಮ್ಮ ಕಂಪನಿಯ ಆಯುರ್ವೇದಿಕ್ ಉತ್ಪನ್ನಗಳನ್ನು ನಮ್ಮ ಕಾರುಗಳಲ್ಲಿ ತೆರಳಿ ಪ್ರಮೋಟ್ ಮಾಡಿ ಉಚಿತ ವಸತಿಯೊಂದಿಗೆ ದಿನಕ್ಕೆ 800 -1200 ಸಂಪಾದಿಸಲು ಸಂಪರ್ಕಿಸಿ: 9513670249/ 8904379634

Multiple Vacancy

REQUIRED, TEAM Leader & Field executive For Banking Loan Collections. Contact: Timings (9 Am-6 Pm) 8951450742, 7019700755, 080-41155671.

Part-Time Jobs

ಕನ್ನಡ ಮತ್ತುಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

GLOBAL INTERNATIONAL Friendship Club Reqd M&F Daily Earn 10,000 To 15,000 PF& ESI Benefits with Food & Room. Whatsapp 9513045046/ 7022770604

Wanted

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆಕೆಲಸಕ್ಕೆ, ಅಡುಗೆಗೆ ಮಹಿಳೆಯರು ಹೋಂನರ್ಸ್ ಗಳು, ಹುಡುಗಿಯರು ಬೇಕಾಗಿದ್ದಾರೆ. ಊಟ ವಸತಿಯಿದೆ. 10,000- 15,000. 8951315839, 9880545002

ವ್ಯಾಪಾರ

Business Offers

Dealers And Stockists

DIPONED IS wanted Distributors for all over Karnataka for its Herbal Mosquito Vaporizer and Cattle &Poultry insect Repellent Spray contact 6362731681

ಶಿಕ್ಷಣ

Coaching Classes

ನೇರ ಪರೀಕ್ಷೆಗಳು DIRECT EXAMS ಮನೆಯಲ್ಲೆ ಓದಿ ನೇರ ಪರೀಕ್ಷೆ ಬರೆಯುವ ಅವಕಾಶ PUC,SCIENCE, COMMERCE, ARTS ಉನ್ನತ ಶಿಕ್ಷಣಕ್ಕೆ /ಸರ್ಕಾರಿ ಕೆಲಸಕ್ಕೆ ಮತ್ತು ಮುಂಬಡ್ತಿ ಪಡೆಯಲು ಉಪಯೋಗವಾಗುತ್ತದೆ. ಮಾನಸ ಎಜುಕೇಷನ್ ಟ್ರಸ್ಟ್(ರಿ) ಎಲ್.ಕೆ.ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ದಾವಣಗೆರೆ. 9740258276

ಭವಿಷ್ಯ

Astrology

ಶಕ್ತಿಶಾಲಿ ಮಹಾಲಕ್ಷ್ಮಿ ಯಂತ್ರ ವ್ಯಾಪಾರ ಅಭಿವೃದ್ಧಿ, ಹಣಕಾಸಿನ ಸಮಸ್ಯೆಯಿಂದ ಆರ್ಥಿಕ ಅಭಿವೃದ್ಧಿ ಹೊಂದಲು ಲಕ್ಷ್ಮಿಯಂತ್ರ ಕೊಡಲಾಗುತ್ತದೆ Rs. 1999 ಹಾಗೂ ಎಲ್ಲಾ ಕಠಿಣ ಸಮಸ್ಯೆಗಳಿಗೆ ಪರಿಹಾರ ಸಿಗುತ್ತದೆ: 9606701007/ 8892501007

ವಶೀಕರಣ ಸ್ಪೆಶಲಿಸ್ಟ್ ಕೊಳ್ಳೆಗಾಲದ ಪ್ರಖ್ಯಾತ ದೈವಾಂಶ ಮೋಡಿ ಮಾಂತ್ರಿಕರು ಇಷ್ಟಪಟ್ಟವರು ನಿಮ್ಮಂತಾಗಲು ನಿಮ್ಮ ಸಕಲ ಸಮಸ್ಯೆಗಳಿಗೆ ಪರಿಹಾರ ಅಸಾಧ್ಯವಾದುದ್ದು ಇಲ್ಲಿ ಸಾಧ್ಯ 9535883556

★ಅಂಭಾಭವಾನಿ★ ಜ್ಯೋತಿಷ್ಯಾಲಯ ಕೊಳ್ಳೆಗಾಲದ ನಂ.1'ವಶೀಕರಣ ಸ್ಪೆಷಲಿಸ್ಟ್' ದೇವಿಪ್ರಸಾದ್.(ಉಚಿತ ಭವಿಷ್ಯ ಖಚಿತ ಪರಿಹಾರ) ನಿಮ್ಮ ಸಮಸ್ಯೆಗಳೇನೇಯಿರಲಿ 2ದಿನದಲ್ಲಿ ಪರಿಹಾರ. 9886755306

★ವಶೀಕರಣ ಸ್ಪೆಷಲಿಸ್ಟ್★ ಗಂಡ ಹೆಂಡತಿ ಕಲಹ, ಪ್ರೇಮವಿಚಾರ, ಸಂತಾನ, ಸ್ತ್ರೀಪುರುಷ ಅನೈತಿಕ ಸಂಬಂಧ ಇನ್ನಿತರ ಸಮಸ್ಯೆಗಳಿಗೆ ಫೋನಿನ ಮುಖಾಂತರ ಪರಿಹಾರ 9538276534

ರೆಂಟಲ್ ಪ್ರಾಪರ್ಟೀಸ್

Accommodation Available

Flats

FLAT FOR Rent New 3 Bedroom apartment First Floor Kuvempunagar Apollo Hospital Main Road Mysore Contact 9845854588

ಪ್ರವಾಸ

Travel

★ಶ್ರೇಯಸ್ ಟೂರ್ಸ್★ 28.12.2021 15ದಿನಗಳು 32,000 (ಇಂದೋರ್‌ನಿಂದ) ಅಖಂಡ ಮಧ್ಯಪ್ರದೇಶ ರಾಜ್ಯ ಪ್ರವಾಸ (ಅಮರಕಂಟಕ ಸಹಿತ). 28.12.2021 16ದಿನಗಳು 32,000 ಅಖಂಡ ಆಂಧ್ರ ತೆಲಂಗಾಣ ರಾಜ್ಯದ 49ಸ್ಥಳಗಳು. 21.01.2022 13ದಿನಗಳು 28,000 (ಅಹಮದಾಬಾದ್ ನಿಂದ)ಅಖಂಡ ಗುಜರಾತ್ ರಾಜ್ಯ ಪ್ರವಾಸ (ಕಚ್‌ಬುಜ್ ಸಹಿತ). 15.02.2022 6ದಿನಗಳು 26,000 (ಡೆಹ್ರಾಡೂನ್‌ನಿಂದ) ಸ್ನೋಸ್ಪೆಷಲ್,ಔಲಿ,ನೈನಿತಾಲ್, ಭೀಮ್‌ತಾಲ್,ಅಲ್ಮೋರಾ, ಜಾಗೇಶ್ವರ,ಮುಕ್ತೇಶ್ವರ,ಜಿಮ್ ಕಾರ್ಬೆಟ್.22.02.2022 10ದಿನಗಳು 30,000 (ಬೆಂಗಳೂರಿನಿಂದ)ಪುರಿ, ಕೋನಾರ್ಕ್,ಭುವನೇಶ್ವರ, ಜಾಜ್ ಪುರ,ಕಟಕ್,ಕೊಲ್ಕತ್ತಾ, ಗಂಗಾಸಾಗರ್. 01.03.2022 12ದಿನಗಳು 34,000 (ಬೆಂಗಳೂರಿನಿಂದ) ಚಂದೀಗಡ್, ಸಿಮ್ಲಾ,ಕುಲುಮನಾಲಿ, 5ದೇವಿಯರು,ಡಾಲ್‌ಹೌಸಿ, ಕಟ್ರಾವೈಷ್ಣೋದೇವಿ,ಜಮ್ಮು, ಅಮೃತಸರ್,ಕುರುಕ್ಷೇತ್ರ. 01.03.2022 10ದಿನಗಳು 50,000 (ಬೆಂಗಳೂರಿನಿಂದ) ಅಖಂಡ ನೇಪಾಳರಾಷ್ಟ್ರ (ಮುಕ್ತಿನಾಥಸಹಿತ) 9743351212, 9206979202, 9902050065, 7406112334

29/1/2022 ರಿಂದ 17 ದಿನಗಳ ಅಷ್ಟಜ್ಯೋತಿರ್ಲಿಂಗ ಸಮೇತ ಅಹಮದಾಬಾದ್, ದ್ವಾರಕಾ, ಪಟೇಲ್ ಪ್ರತಿಮೆ, ಶಿರಡಿ. ಶಿವರಾತ್ರಿ ಪ್ರಯುಕ್ತ 17/2/2022 ರಿಂದ 22 ದಿನಗಳ ಪುರಿ, ಕೋಲ್ಕತ್ತಾ, ನೇಪಾಳ, ಹರಿದ್ವಾರ್, ಕಾಶಿ, ದೆಹಲಿ ಇತ್ಯಾದಿ ವಿವರಗಳಿಗೆ ಏಷ್ಯನ್ ಟ್ರಾವೆಲ್ ಲೈನ್ಸ್(S) ಆರ್.ವಿ.ರಸ್ತೆ #164/3, ಮಿನರ್ವ ಬಸ್‌ಸ್ಟಾಪ್ ಎದುರು, ಬೆಂಗಳೂರು4, 08026565085. 9480182865, 8105657052

'ಶ್ರೀಸಾಯಿ ರಾಘವೇಂದ್ರ ಟ್ರಾವೆಲ್ಸ್' ವತಿಯಿಂದ ರಿಯಾಯಿತಿ ದರದಲ್ಲಿ ಸುಲಭ ಕಂತಿನಲ್ಲಿ 15 ದಿನಗಳು. ರೈಲು/ ಬಸ್ಸಿನಲ್ಲಿ ಪೆಬ್ರವರಿ, ಮಾರ್ಚನಲ್ಲಿ ಕಾಶಿಯತ್ರ, ದೆಹಲಿ, ಆಗ್ರ, ಅಲಹಾಬದ್, ಗಯಾ, ಅಯೋಧ್ಯ, ಹರಿದ್ವರ, ಇತ್ಯಾದಿ (ಕೆಲವೇ ಸೀಟುಗಳಿವೆ), ಪ್ರತಿ ತಿಂಗಳು ಅಂಡಮಾನ್ ಹವಳದ್ವೀಪ Royal Package 9845560219/ 9739847429.

ಮಹಾಶಿವರಾತ್ರಿ ಪ್ರಯುಕ್ತ 24/2/2022ರಿಂದ 9ದಿನಗಳ ಅಲಹಾಬಾದ್,ಅಯೋಧ್ಯ, ಗಯಾ ಬುದ್ಧಗಯಾ,ಕಾಶಿ ವಿವರಗಳಿಗೆ:ಹೆಗಡೆ ಟೂರ್ಸ್ ಅಂಡ್ ಟ್ರಾವೆಲ್ಸ್, ಬಸವನಗುಡಿ, ಬೆಂಗಳೂರು4,ಫೋನ್: 8884866611/ 8884366611

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

DH DECCAN HERALD ಪ್ರಜಾವಾಣಿ
BOOK YOUR CLASSIFIEDS ONLINE
5 EASY STEP
5 Easy steps to book your ads
LOG INTO WWW.DHCLASSIFIEDS.COM
CHOOSE THE CATEGORY
CHOOSE THE AD DATES
COMPOSE THE MATTER
CONFIRM AND PAY
TO BOOK YOUR CLASSIFIEDS ADS ONLINE
JOB | LOST | REAL ESTATE | NAME CHANGE | EDU | HEALTH
MATRI | AUTO | ASTRO | NOTICE | TRAVEL
condition apply*
WWW.DHCLASSIFIEDS.COM
For more information Contact:
9880856233 | 9731810277 | 9901641752 | 9845114560 | 9886213331
Email: dhclassifieds@deccanherald.co.in

ವಿಶ್ವ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್: ಜಪಾನ್‌ಗೆ ಎರಡು ಚಿನ್ನ, ಒಂದು ಬೆಳ್ಳಿ ಪದಕ

ಗಾಯದ 'ನೋವು' ಮರೆಸಿದ ಖುಷಿ

ಯುವೆಲಾ, ಸ್ಪೇನ್ (ಪಿಟಿಐ): ಹೋರಾಡಿ ಸೋತ ಭಾರತದ ಕಿದಂಬಿ ಶ್ರೀಕಾಂತ್ ವಿಶ್ವ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನದ ಪದಕ ಗೆಲ್ಲುವ ಅವಕಾಶ ಕಳೆದುಕೊಂಡರು. ಆದರೆ ಬ್ಯಾಡ್ಮಿಂಟನ್ ಪ್ರಿಯರ ಮನ ಗೆಲ್ಲುವಲ್ಲಿ ಯಶಸ್ವಿಯಾದರು. ವರ್ಷಗಳಿಂದ ಕಾಡುತ್ತಿದ್ದ ಗಾಯದ ಸಮಸ್ಯೆಯಿಂದ ನೊಂದಿದ್ದ ಅವರಿಗೆ ಈ ಬೆಳ್ಳಿ ಪದಕ ತಂಪೆರೆಯಿತು.

ಭಾನುವಾರ ನಡೆದ ಪುರುಷರ ಸಿಂಗಲ್ಸ್ ಫೈನಲ್‌ನಲ್ಲಿ ಶ್ರೀಕಾಂತ್ ಸಿಂಗಪುರದ ಲೋಹ್ ಕೀನ್ ಯೂ ಎದುರು ನೇರ ಗೇಮ್‌ಗಳಿಂದ ಸೋತರು. ಆದರೆ ಚಾಂಪಿಯನ್‌ಷಿಪ್‌ನಲ್ಲಿ ದೇಶಕ್ಕೆ ಮೊತ್ತಮೊದಲ ಬೆಳ್ಳಿ ಪದಕ ಗಳಿಸಿಕೊಟ್ಟರು. 28 ವರ್ಷದ ಶ್ರೀಕಾಂತ್ 43 ನಿಮಿಷಗಳಲ್ಲಿ 15-21, 20-22ರಲ್ಲಿ ಎದುರಾಳಿಗೆ ಮಣಿದರು. ಪುರುಷರ ವಿಭಾಗದಲ್ಲಿ ಈ ಸಾಧನೆ ಮಾಡಿದ ದೇಶದ ಮೊದಲ ಆಟಗಾರ ಅವರು. ಮಹಿಳೆಯರ ವಿಭಾಗದಲ್ಲಿ ಪಿ.ವಿ.ಸಿಂಧು 2019ರಲ್ಲಿ ಚಾಂಪಿಯನ್ ಆಗಿದ್ದರು. ತಲಾ ಎರಡು ಬೆಳ್ಳಿ ಮತ್ತು ಕಂಚಿನ ಪದಕವೂ ಅವರಿಗೆ ಒಲಿದಿತ್ತು. ಸೈನಾ ನೆಹ್ವಾಲ್ 2015ರಲ್ಲಿ ಬೆಳ್ಳಿ ಹಾಗೂ 2017ರಲ್ಲಿ ಕಂಚಿನ ಪದಕ ಕೊರಳಿಗೆ ಹಾಕಿಕೊಂಡಿದ್ದರು.

ವಿಶ್ವ ಚಾಂಪಿಯನ್‌ಷಿಪ್‌ನ ಪುರುಷರ ವಿಭಾಗದಲ್ಲಿ ಇದೇ ಮೊದಲ ಬಾರಿ ಭಾರತ ಎರಡು ಪದಕ ಗೆದ್ದುಕೊಂಡಿದೆ. ಶನಿವಾರ ನಡೆದ ಸೆಮಿಫೈನಲ್‌ನಲ್ಲಿ ಶ್ರೀಕಾಂತ್ 17-21, 21-14, 21-17ರಲ್ಲಿ ಭಾರತದವರೇ ಆದ ಲಕ್ಷ್ಯ ಸೇನ್ ವಿರುದ್ಧ ಗೆದ್ದಿದ್ದರು. ಲಕ್ಷ್ಯ ಕಂಚಿನ ಪದಕ ಗಳಿಸಿದರು. ಪುರುಷರ ವಿಭಾಗದಲ್ಲಿ ಈ ಹಿಂದೆ ಪ್ರಕಾಶ್ ಪಡುಕೋಣೆ ಮತ್ತು ಬಿ.ಸಾಯಿ ಪ್ರಣೀತ್ ಕಂಚಿನ ಪದಕದ ಸಾಧನೆ ಮಾಡಿದ್ದಾರೆ.

ಎರಡು ವರ್ಷಗಳಲ್ಲಿ ಮೊದಲ ಫೈನಲ್: 2017ರಲ್ಲಿ ನಾಲ್ಕು ಸೂಪರ್ ಸೀರಿಸ್ ಟೂರ್ನಿಗಳಲ್ಲಿ ಪ್ರಶಸ್ತಿ ಗೆದ್ದಿದ್ದ ಕಿದಂಬಿ ಶ್ರೀಕಾಂತ್ ಆ ವರ್ಷದ ಫ್ರೆಂಚ್ ಓಪನ್ ಟೂರ್ನಿಯ ನಂತರ ಮೊಣಕಾಲಿನ ಗಾಯದ ಸಮಸ್ಯೆಯಿಂದ ಬಳಲಿದ್ದರು. 2019ರ ಇಂಡಿಯಾ ಓಪನ್ ನಂತರ ಅವರು ಯಾವ ಟೂರ್ನಿಯಲ್ಲೂ ಫೈನಲ್ ಪ್ರವೇಶಿಸಲಿಲ್ಲ.

12ನೇ ಶ್ರೇಯಾಂಕದ ಶ್ರೀಕಾಂತ್ ಅವರನ್ನು 24 ವರ್ಷದ ಲೋಹ್ ಪ್ರಬಲ ಆಕ್ರಮಣಕಾರಿ ಆಟದ ಮೂಲಕ ಕಾಡಿದರು. ನೆಟ್ ಬಳಿ ಅಮೋಘ ಡ್ರಾಪ್ ಮೂಲಕ ಪಾಯಿಂಟ್ ಗಳಿಸಿದ ಲೋಹ್ ಆರಂಭದ ಗೇಮ್‌ನಲ್ಲಿ 3-1ರ ಮುನ್ನಡೆ ಸಾಧಿಸಿದರು. ಚೇತರಿಸಿಕೊಂಡ ಶ್ರೀಕಾಂತ್ 9-3ರ ಮುನ್ನಡೆಯೊಂದಿಗೆ ಭರವಸೆ ಮೂಡಿಸಿದರು. ಲೋಹ್ ಪ್ರತಿದಾಳಿ ನಡೆಸಿದರೂ ಶ್ರೀಕಾಂತ್ ಮುನ್ನಡೆ ಮುಂದುವರಿಯಿತು.ವಿರಾಮದ ನಂತರ ಲೋಹ್ ಸತತ ನಾಲ್ಕು ಪಾಯಿಂಟ್ ಗಳಿಸಿ ಸಮಬಲ ಸಾಧಿಸಿದರು.

ಲೋಹ್ ಕೀನ್ ಯೂ / ಕಿದಂಬಿ ಶ್ರೀಕಾಂತ್

ಲೋಹ್ ಕೀನ್ ಯೂ		ಕಿದಂಬಿ ಶ್ರೀಕಾಂತ್
6	ಹೆಚ್ಚು ಸತತ ಪಾಯಿಂಟ್‌ಗಳು	8
4	ಗೇಮ್ ಪಾಯಿಂಟ್‌ಗಳು	0
43	ಗೆದ್ದ ರ‍್ಯಾಲಿಗಳು	35
43	ಗೆದ್ದ ಪಾಯಿಂಟ್‌ಗಳು	35

ನಂತರ ಭರ್ಜರಿ ಸ್ಮ್ಯಾಷ್ ಮೂಲಕ ಮುನ್ನಡೆ ಸಾಧಿಸಿದರು. ತಪ್ಪುಗಳನ್ನು ಎಸಗಿದ ಶ್ರೀಕಾಂತ್ 13-17ರ ಹಿನ್ನಡೆ ಅನುಭವಿಸಿದರು.

ಐದು ಗೇಮ್ ಪಾಯಿಂಟ್‌ಗಳೊಂದಿಗೆ ಲೋಹ್ ಮೊದಲ ಗೇಮ್‌ನಲ್ಲಿ ಪಾರಮ್ಯ ಮೆರೆದರು. 2ನೇ ಗೇಮ್‌ನಲ್ಲಿ ಇಬ್ಬರೂ ಜಿದ್ದಾಜಿದ್ದಿಯ ಹೋರಾಟ ನಡೆಸಿ 4-4ರ ಸಮಬಲ ಸಾಧಿಸಿದರು. ನಂತರ ಶ್ರೀಕಾಂತ್, ತಮ್ಮ ಸಹಜ ಆಟದ ಮೂಲಕ 7-4ರಲ್ಲಿ ಮುನ್ನಡೆದರು. ಆದರೆ ಮತ್ತೆ ತಪ್ಪುಗಳನ್ನು ಎಸಗಿ 9-9ರ ಸಮಬಲ ಸಾಧಿಸಲು ಎದುರಾಳಿಗೆ ಅವಕಾಶ ಮಾಡಿಕೊಟ್ಟರು. ನಂತರ ಲೋಹ್ ಮುನ್ನಡೆ 11-9ಕ್ಕೆ ಏರಿತು. ಕ್ರಾಸ್ ಕೋರ್ಟ್ ಫ್ಲಿಕ್ ಮತ್ತು ಸೊಗಸಾದ ರಿಟರ್ನ್‌ಗಳ ಮೂಲಕ ಕಿದಂಬಿ 16-14ರ ಮುನ್ನಡೆ ಸಾಧಿಸಿ ನಿರೀಕ್ಷೆ ಮೂಡಿಸಿದರು. 18-16ರ ಮುನ್ನಡೆಯಲ್ಲಿದ್ದಾಗ ಷಟಲ್ ಅನ್ನು ನೆಟ್ ಮೇಲೆ ಹಾಕಿ ಪಾಯಿಂಟ್ ಕಳೆದುಕೊಂಡರು. ಮತ್ತೊಮ್ಮೆ ಸ್ಮ್ಯಾಷ್‌ಗಳ ಮೂಲಕ ಮಿಂಚಿದ ಲೋಹ್ 19-18ರಲ್ಲಿ ಮುನ್ನಡೆದರು.

ಲಕ್ಷ್ಯ ಸೇನ್

ಫೈನಲ್ ಪಂದ್ಯದ ಸ್ಕೋರು

ಲೋಹ್ ಕೀನ್ ಯೂ	21	22	ಪಂದ್ಯದ ಅವಧಿ 43 ನಿಮಿಷ
ಕಿದಂಬಿ ಶ್ರೀಕಾಂತ್	15	20	

ಇತರ ಪಂದ್ಯಗಳ ಫಲಿತಾಂಶಗಳು

- ಮಹಿಳೆಯರ ಸಿಂಗಲ್ಸ್‌ನಲ್ಲಿ ಜಪಾನ್‌ನ ಅಕಾನೆ ಯಾಮಗುಚಿಗೆ 21-14, 21-11ರಲ್ಲಿ ಥೈಪೆಯ ಥಾಯ್ ಜು ಯಿಂಗ್ ವಿರುದ್ಧ ಜಯ
- ಪುರುಷರ ಡಬಲ್ಸ್‌ನಲ್ಲಿ ಜಪಾನ್‌ನ ಟಕುರೊ-ಯುಗೊಗೆ 21-12, 21-18ರಲ್ಲಿ ಚೀನಾದ ಹೇ ಜಿ-ಟಾನ್ ವಿರುದ್ಧ ಜಯ
- ಮಹಿಳೆಯರ ಡಬಲ್ಸ್‌ನಲ್ಲಿ ಚೀನಾದ ಚೆನ್-ಜಿಯಾಗೆ 21-16, 21-17ರಲ್ಲಿ ಕೊರಿಯಾದ ಲೀ-ಶಿನ್ ವಿರುದ್ಧ ಗೆಲುವು
- ಮಿಶ್ರ ಡಬಲ್ಸ್‌ನಲ್ಲಿ ಥಾಯ್ಲೆಂಡ್‌ನ ದೆಚಾಪೋಲ್-ಸಪ್ಸಿರಿಗೆ ಜಪಾನ್‌ನ ಯೂಟಾ-ಅರಿಸಾ ವಿರುದ್ಧ 21-13, 21-14ಲ್ಲಿ ಜಯ

ಹರ್ಮನ್‌ಪ್ರೀತ್ ಗೋಲು; ಭಾರತಕ್ಕೆ ಭರ್ಜರಿ ಗೆಲುವು

ಏಷ್ಯನ್ ಚಾಂಪಿಯನ್ಸ್ ಟ್ರೋಫಿ ಹಾಕಿ: ಜಪಾನ್‌ಗೆ ಸೋಲು

ಢಾಕಾ (ಪಿಟಿಐ): ಉಪನಾಯಕ ಹರ್ಮನ್‌ಪ್ರೀತ್ ಸಿಂಗ್ ಮತ್ತೊಮ್ಮೆ ಕೈಚಳಕ ತೋರಿದರು. ಅವರು ಗಳಿಸಿದ ಎರಡು ಗೋಲುಗಳ ನೆರವಿನಿಂದ ಭಾರತ ತಂಡವು ಏಷ್ಯನ್ ಚಾಂಪಿಯನ್ಸ್ ಟ್ರೋಫಿ ಹಾಕಿ ಟೂರ್ನಿಯ ಪಂದ್ಯದಲ್ಲಿ ಜಪಾನ್‌ಗೆ 6-0ಯಿಂದ ಸೋಲುಣಿಸಿತು.

ಮೌಲಾನ ಭಸಾನಿ ಹಾಕಿ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ರೌಂಡ್ ರಾಬಿನ್ ಕೊನೆಯ ಪಂದ್ಯದಲ್ಲಿ ಮನ್‌ಪ್ರೀತ್ ಸಿಂಗ್ ಬಳಗದ ಪರ ಹರ್ಮನ್‌ಪ್ರೀತ್ 10 ಮತ್ತು 53ನೇ ನಿಮಿಷ ಗೋಲು ದಾಖಲಿಸಿದರು. ದಿಲ್‌ಪ್ರೀತ್ ಸಿಂಗ್ (23ನೇ ನಿಮಿಷ), ಜರ್ಮನ್‌ಪ್ರೀತ್ ಸಿಂಗ್ (34ನೇ ನಿ.), ಸುಮಿತ್ (46ನೇ ನಿ.) ಹಾಗೂ ಶಂಷೇರ್ ಸಿಂಗ್ (54ನೇ ನಿ.) ತಂಡದ ಪರ ಯಶಸ್ಸು ಸಾಧಿಸಿದರು.

ಐದು ತಂಡಗಳು ಸ್ಪರ್ಧಿಸಿರುವ ಚಾಂಪಿಯನ್‌ಷಿಪ್‌ನಲ್ಲಿ ಭಾರತ ಈಗಾಗಲೇ ಸೆಮಿಫೈನಲ್ ತಲುಪಿದೆ. 10 ಪಾಯಿಂಟ್ಸ್‌ಗಳೊಂದಿಗೆ ಪಾಯಿಂಟ್ಸ್ ಪಟ್ಟಿಯಲ್ಲಿ ಅಗ್ರಸ್ಥಾನವನ್ನೂ ಗಳಿಸಿದೆ. ಕೊರಿಯಾ (6), ಜಪಾನ್ (5) ಮತ್ತು ಪಾಕಿಸ್ತಾನ (2) ಭಾರತಕ್ಕಿಂತ ಹಿಂದಿವೆ.

ಟೂರ್ನಿಯಲ್ಲಿ ಭಾರತಕ್ಕೆ ಇದು ಮೂರನೇ ಜಯ. ಪಂದ್ಯದ ಎಲ್ಲ ವಿಭಾಗಗಳಲ್ಲೂ ಭಾರತ ಪಾರಮ್ಯ ಮೆರೆಯಿತು. ಮೊದಲ ಆರು ನಿಮಿಷಗಳೊಳಗೆ ತಂಡಕ್ಕೆ ಎರಡು ಪೆನಾಲ್ಟಿ ಕಾರ್ನರ್ ಅವಕಾಶಗಳು ದೊರೆತವು. ಆದರೆ ಗೋಲಿನಲ್ಲಿ ಪರಿವರ್ತಿಸುವಲ್ಲಿ ಸಾಧ್ಯವಾಗಲಿಲ್ಲ. ಬಳಿಕ ಜಪಾನ್‌ಗೆ ದೊರೆತ ಪೆನಾಲ್ಟಿ ಅವಕಾಶವೂ ಗೋಲಾಗಲಿಲ್ಲ.

ಆಕ್ರಮಣ ಮುಂದುವರಿಸಿದ ಭಾರತಕ್ಕೆ ಸಿಕ್ಕ ಮತ್ತೊಂದು ಪೆನಾಲ್ಟಿ ಅವಕಾಶದಲ್ಲಿ ಹಾರ್ದಿಕ್ ಸಿಂಗ್ ನೀಡಿದ ಪಾಸ್‌ನಲ್ಲಿ ಹರ್ಮನ್‌ಪ್ರೀತ್ ಸೊಗಸಾದ ಗೋಲು ದಾಖಲಿಸಿ ಮುನ್ನಡೆ ತಂದುಕೊಟ್ಟರು. ಮನದೀಪ್ ಸಿಂಗ್, ಶೀಲಾನಂದ ಲಾಕ್ರಾ ನೆರವಿನಿಂದ ದಿಲ್‌ಪ್ರೀತ್ ತಂಡದ ಎರಡನೇ ಗೋಲು ಗಳಿಸಿದರು. ಈ ಹಂತದಲ್ಲಿ ಜಪಾನ್ ನಡೆಸಿದ ಪ್ರಯತ್ನಗಳಿಗೆ ಫಲ ಸಿಗಲಿಲ್ಲ. ಜರ್ಮನ್‌ಪ್ರೀತ್ ಮಾಡಿದ 'ಕ್ಲೀನ್ ಸ್ಟ್ರೈಕ್'; ಭಾರತಕ್ಕೆ ಮೂರನೇ ಗೋಲು ತಂದುಕೊಟ್ಟಿತು.

36ನೇ ನಿಮಿಷದಲ್ಲಿ ಜಪಾನ್‌ಗೆ ದೊರೆತ ಪೆನಾಲ್ಟಿ ಅವಕಾಶವನ್ನು ಭಾರತದ ಗೋಲ್‌ಕೀಪರ್ ಸೂರಜ್ ಕರ್ಕೇರಾ ವಿಫಲಗೊಳಿಸಿದರು. ಅಂತಿಮ ಕ್ವಾರ್ಟರ್‌ನ ಮೊದಲ ನಿಮಿಷದಲ್ಲಿ ಸುಮಿತ್ ತಂಡದ ಮುನ್ನಡೆಯನ್ನು 4-0ಗೆ ಹೆಚ್ಚಿಸಿದರು. ಬಳಿಕ ಹರ್ಮನ್‌ಪ್ರೀತ್ ಮತ್ತು ಶಂಷೇರ್ ಸಿಂಗ್ ಜಪಾನ್ ಕೋಟೆಯನ್ನು ಭೇದಿಸಿ ಗೆಲುವು ಖಚಿತಪಡಿಸಿದರು.

ಭಾರತದ ಆಕಾಶದೀಪ್ ಸಿಂಗ್ (ಮಧ್ಯ) ಅವರು ಜಪಾನ್ ಆಟಗಾರರಿಂದ ಚೆಂಡು ಕಸಿದುಕೊಳ್ಳಲು ಪ್ರಯತ್ನಿಸಿದರು– ಎಎಫ್‌ಪಿ ಚಿತ್ರ

ಗೆಲುವಿನತ್ತ ಆಸ್ಟ್ರೇಲಿಯಾ ಹೆಜ್ಜೆ

ಆ್ಯಷಸ್ ಟೆಸ್ಟ್: ಲಾಬುಶೇನ್, ಟ್ರಾವಿಸ್ ಹೆಡ್ ಅರ್ಧಶತಕ

ಅಡಿಲೇಡ್: ಭರವಸೆ ಮೂಡಿಸಿದ್ದ ನಾಯಕ ಜೋ ರೂಟ್ ದಿನದಾಟದ ಕೊನೆಯ ಓವರ್‌ನಲ್ಲಿ ಔಟಾದರು. ಇದರೊಂದಿಗೆ ಇಂಗ್ಲೆಂಡ್‌ನ ಆತಂಕ ಹೆಚ್ಚಾಯಿತು; ಆಸ್ಟ್ರೇಲಿಯಾದ ಗೆಲುವಿನ ಹಾದಿ ಇನ್ನಷ್ಟು ಹತ್ತಿರವಾಯಿತು.

ಆ್ಯಷಸ್ ಟೆಸ್ಟ್ ಸರಣಿಯ ಎರಡನೇ ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ ಭರ್ಜರಿ ಮುನ್ನಡೆ ಸಾಧಿಸಿರುವ ಆತಿಥೇಯ ಆಸ್ಟ್ರೇಲಿಯಾ 230 ರನ್ ಗಳಿಸಿದ ಎರಡನೇ ಇನಿಂಗ್ಸ್ ಡಿಕ್ಲೇರ್ ಮಾಡಿಕೊಂಡಿತು. ಈ ಮೂಲಕ ಇಂಗ್ಲೆಂಡ್ ಜಯಕ್ಕೆ ಕಠಿಣ ಗುರಿ ನೀಡಿತು. 468 ರನ್‌ಗಳ ಗುರಿ ಬೆನ್ನತ್ತಿರುವ ತಂಡ ನಾಲ್ಕನೇ ದಿನದ ಅಂತ್ಯಕ್ಕೆ 82 ರನ್ ಗಳಿಸಿ 4 ವಿಕೆಟ್ ಕಳೆದುಕೊಂಡಿದೆ. ಯಾವುದೇ ತಂಡ ಈ ವರೆಗೆ 450ಕ್ಕೂ ಹೆಚ್ಚು ರನ್‌ಗಳನ್ನು ಯಶಸ್ವಿಯಾಗಿ ಬೆನ್ನತ್ತಿಲ್ಲ. 2003ರಲ್ಲಿ ಸ್ಟೀವ್ ವಾ ನಾಯಕತ್ವದ ಆಸ್ಟ್ರೇಲಿಯಾ ತಂಡ ನೀಡಿದ 418 ರನ್‌ಗಳ ಗುರಿ ಬೆನ್ನತ್ತಿ ವೆಸ್ಟ್ ಇಂಡೀಸ್ ಜಯ ಸಾಧಿಸಿದ್ದು ಈ ವರೆಗಿನ ದಾಖಲೆಯಾಗಿದೆ.

ಎರಡನೇ ಇನಿಂಗ್ಸ್‌ನಲ್ಲಿ ಇಂಗ್ಲೆಂಡ್ ತಂಡ 4 ರನ್ ಗಳಿಸುವಷ್ಟರಲ್ಲಿ ತಂಡ ಹಸೀಬ್ ಹಮೀದ್ ಅವರನ್ನು ಕಳೆದುಕೊಂಡಿತು. ನಂತರ ರೋರಿ ಬರ್ನ್ಸ್ ಜೊತೆಗೂಡಿದ ಡೇವಿಡ್ ಮಲಾನ್ 44 ರನ್‌ಗಳನ್ನು ಸೇರಿಸಿದರು. ಮಲಾನ್ ಔಟಾದ ನಂತರ ಬರ್ನ್ಸ್ ಮತ್ತು ಜೋ ರೂಟ್ ಇನಿಂಗ್ಸ್ ಮುನ್ನಡೆಸಿದರು. ಇವರಿಬ್ಬರ ವಿಕೆಟ್ ಕಳೆದುಕೊಂಡ ತಂಡ ಸೋಲಿನತ್ತ ಸಾಗಿದೆ. 40 ಎಸೆತಗಳಲ್ಲಿ ಮೂರು ರನ್ ಗಳಿಸಿರುವ ಬೆನ್ ಸ್ಟೋಕ್ಸ್ ಭರವಸೆಯಾಗಿದ್ದಾರೆ. ಜಯಕ್ಕೆ ಕೊನೆಯ ದಿನವಾದ ಸೋಮವಾರ ಪ್ರವಾಸಿ ತಂಡ 386 ರನ್ ಗಳಿಸಬೇಕಾಗಿದೆ.

ಲಾಬುಶೇನ್, ಹೆಡ್ ಅರ್ಧಶತಕ: ಶನಿವಾರ ಒಂದು ವಿಕೆಟ್ ಕಳೆದುಕೊಂಡು 45 ರನ್ ಗಳಿಸಿದ್ದ ಆಸ್ಟ್ರೇಲಿಯಾ ನಾಲ್ಕನೇ ದಿನದ ಆರಂಭದಲ್ಲೇ ವಿಕೆಟ್‌ಗಳನ್ನು ಕಳೆದುಕೊಂಡಿತು. 7 ರನ್ ಗಳಿಸುವಷ್ಟರಲ್ಲಿ 3 ವಿಕೆಟ್ ಕಳೆದುಕೊಂಡಿದ್ದ ತಂಡ ಮಾರ್ನಸ್ ಲಾಬುಶೇನ್ ಮತ್ತು ಟ್ರಾವಿಸ್ ಹೆಡ್ ಅವರ ಅಮೋಘ ಆಟದ ನೆರವಿನಿಂದ ಚೇತರಿಸಿಕೊಂಡಿತು. ಮಾರ್ಕಸ್ ಹ್ಯಾರಿಸ್ ಜೊತೆ ದಿನದಾಟ ಆರಂಭಿಸಿದ ನೈಟ್ ವಾಚ್‌ಮನ್ ಮೈಕೆಲ್ ನೆಸರ್ ಮೊದಲ ಎಸೆತದಲ್ಲೇ ರನೌಟ್‌ನಿಂದ ಬಚಾವಾದರು. ಆದರೆ ಆ್ಯಂಡರ್ಸನ್ ಎಸೆತದಲ್ಲಿ ಬೌಲ್ಡ್ ಆದರು. ವಿಕೆಟ್ ಕೀಪರ್ ಜೋಸ್ ಬಟ್ಲರ್ ಅವರ ಅಮೋಘ ಕ್ಯಾಚ್‌ಗೆ ಹ್ಯಾರಿಸ್ ವಿಕೆಟ್ ಕಳೆದುಕೊಂಡರು. ಸ್ಮಿತ್ ನೀಡಿದ ಮೊದಲ ಕ್ಯಾಚ್ ಕೈಚೆಲ್ಲಿದ ಬಟ್ಲರ್ ಮತ್ತೊಂದು ಅವಕಾಶದಲ್ಲಿ ಯಶಸ್ವಿಯಾದರು.

ಟ್ರಾವಿಸ್ ಹೆಡ್ ಬ್ಯಾಟಿಂಗ್ ವೈಖರಿ –ಎಪಿ ಚಿತ್ರ

ಸ್ಕೋರ್ ಕಾರ್ಡ್

ಆಸ್ಟ್ರೇಲಿಯಾ ಮೊದಲ ಇನಿಂಗ್ಸ್ 9ಕ್ಕೆ 473 ಡಿಕ್ಲೇರ್ಡ್ (150.4 ಓವರ್)

ಇಂಗ್ಲೆಂಡ್ ಮೊದಲ ಇನಿಂಗ್ಸ್ 236 (84.1 ಓವರ್‌ಗಳಲ್ಲಿ)

ಆಸ್ಟ್ರೇಲಿಯಾ ಎರಡನೇ ಇನಿಂಗ್ಸ್ 9ಕ್ಕೆ 230 ಡಿಕ್ಲೇರ್ (61 ಓವರ್) (ಶನಿವಾರ 17 ಓವರ್‌ಗಳಲ್ಲಿ 1 ವಿಕೆಟ್‌ಗೆ 45)

ಮಾರ್ಕಸ್ ಸಿ ಬಟ್ಲರ್ ಬಿ ಬ್ರಾಡ್ 23 (66ಎ, 4x3), ನೆಸರ್ ಬಿ ಆ್ಯಂಡರ್ಸನ್ 3 (13 ಎ), ಲಾಬುಶೇನ್ ಸಿ ಸ್ಟೋಕ್ಸ್ ಬಿ ಮಲಾನ್ 51 (96 ಎ, 4x6), ಸ್ಮಿತ್ ಸಿ ಬಟ್ಲರ್ ಬಿ ರಾಬಿನ್ಸನ್ 6 (31 ಎ, 4x1), ಟ್ರಾವಿಸ್ ಸಿ ಸ್ಟೋಕ್ಸ್ ಬಿ ರಾಬಿನ್ಸನ್ 51 (54 ಎ, 4x7), ಕ್ಯಾಮರಾನ್ ಔಟಾಗದೆ 33 (43 ಎ), ಕ್ಯಾರಿ ಬಿ ರೂಟ್ 6 (6 ಎ, 4x1), ಸ್ಟಾರ್ಕ್ ಸಿ ಪೋಪ್ ಬಿ ರೂಟ್ 19 (20 ಎ, 6x1), ರಿಚರ್ಡ್ಸನ್ ಸಿ ಬಟ್ಲರ್ ಬಿ ಮಲಾನ್ 8 (4 ಎ, 6x1))

ಇತರೆ (ಬೈ 3, ಲೆಗ್ ಬೈ 8, ನೋಬಾಲ್ 5, ವೈಡ್ 1) 17

ವಿಕೆಟ್ ಪತನ: 1-41 (ಡೇವಿಡ್ ವಾರ್ನರ್, 13.6), 2-48 (ಮೈಕೆಲ್ ನೆಸರ್, 18.6), 3-48 (ಮಾರ್ಕಸ್ ಹ್ಯಾರಿಸ್, 19.2), 4-55 (ಸ್ಟೀವನ್ ಸ್ಮಿತ್, 28.6), 5-144 (ಟ್ರಾವಿಸ್ ಹೆಡ್, 45.6), 6-173 (ಮಾರ್ನಸ್ ಲಾಬುಶೇನ್, 52.3), 7-180 (ಅಲೆಕ್ಸ್ ಕ್ಯಾರಿ, 53.6), 8-216 (ಮಿಚೆಲ್ ಸ್ಟಾರ್ಕ್, 59.3), 9-230 (ಜೇ ರಿಚರ್ಡ್ಸನ್, 60.6)

ಬೌಲಿಂಗ್: ಜೇಮ್ಸ್ ಆ್ಯಂಡರ್ಸನ್ 10-6-8-1, ಸ್ಟುವರ್ಟ್ ಬ್ರಾಡ್ 10-3-27-1, ಒಲಿ ರಾಬಿನ್ಸನ್ 15-2-54-2, ಕ್ರಿಸ್ ವೋಕ್ಸ್ 12-3-46-0, ಜೋ ರೂಟ್ 6-1-27-2, ಬೆನ್ ಸ್ಟೋಕ್ಸ್ 2-0-24-0, ಡೇವಿಡ್ ಮಲಾನ್ 6-0-33-2

ಇಂಗ್ಲೆಂಡ್ 2ನೇ ಇನಿಂಗ್ಸ್ 4ಕ್ಕೆ 82 (43.2 ಓವರ್)

ಬರ್ನ್ಸ್ ಸಿ ಸ್ಮಿತ್ ಬಿ ರಿಚರ್ಡ್ಸನ್ 34 (95 ಎ, 4x5), ಹಸೀಬ್ ಸಿ ಕ್ಯಾರಿ ಬಿ ರಿಚರ್ಡ್ಸನ್ 0 (6 ಎ), ಮಲಾನ್ ಎಲ್‌ಬಿಡಬ್ಲ್ಯು ಬಿ ನೆಸರ್ 20 (52 ಎ, 4x4), ರೂಟ್ ಸಿ ಕ್ಯಾರಿ ಬಿ ಸ್ಟಾರ್ಕ್ 24 (67 ಎ, 4x1), ಸ್ಟೋಕ್ಸ್ ಬ್ಯಾಟಿಂಗ್ 3 (40 ಎ)

ಇತರೆ (ಲೆಗ್ ಬೈ 1) 1

ವಿಕೆಟ್ ಪತನ: 1ಪತನ

1-4 (ಹಸೀಬ್ ಹಮೀದ್, 1.6), 2-48 (ಡೇವಿಡ್ ಮಲಾನ್, 21.1), 3-70 (ರೋರಿ ಬರ್ನ್ಸ್, 30.6), 4-82 (ಜೋ ರೂಟ್, 43.2))

ಬೌಲಿಂಗ್: ಮಿಚೆಲ್ ಸ್ಟಾರ್ಕ್ 11.2-4-21-1, ಜೇ ರಿಚರ್ಡ್ಸನ್ 8-4-17-2, ನೇಥನ್ ಲಯನ್ 14-3-28-0, ಮೈಕೆಲ್ ನೆಸರ್ 5-2-7-1, ಕ್ಯಾಮರೂನ್ ಗ್ರೀನ್ 5-2-8-0

19 ವರ್ಷದೊಳಗಿನವರ ವಿಶ್ವಕಪ್: ಭಾರತ ತಂಡದಲ್ಲಿ ಅನೀಶ್ವರ್

ನವದೆಹಲಿ (ಪಿಟಿಐ): ವೆಸ್ಟ್ ಇಂಡೀಸ್‌ನಲ್ಲಿ ಜನವರಿ 14ರಿಂದ ಫೆಬ್ರುವರಿ 5ರವರೆಗೆ ನಡೆಯಲಿರುವ 19 ವರ್ಷದೊಳಗಿನವರ ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಯಶ್ ಧುಳ್ ಭಾರತ ತಂಡವನ್ನು ಮುನ್ನಡೆಸಲಿದ್ದಾರೆ. 17 ಸದಸ್ಯರ ತಂಡವನ್ನು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ(ಬಿಸಿಸಿಐ) ಭಾನುವಾರ ಪ್ರಕಟಿಸಿದೆ. ಕರ್ನಾಟಕದ ಅನೀಶ್ವರ್ ಗೌತಮ್ ತಂಡದಲ್ಲಿ ಸ್ಥಾನ ಗಳಿಸಿದ್ದಾರೆ.

ನಾಲ್ಕು ಬಾರಿ ವಿಶ್ವಕಪ್ ವಿಜೇತ ಭಾರತವು 'ಬಿ' ಗುಂಪಿನಲ್ಲಿ ದಕ್ಷಿಣ ಆಫ್ರಿಕಾ, ಐರ್ಲೆಂಡ್ ಮತ್ತು ಉಗಾಂಡ ತಂಡಗಳೊಂದಿಗೆ ಸ್ಥಾನ ಪಡೆದಿದೆ.

ಡಿಸೆಂಬರ್ 23ರಿಂದ ಯುಎಇಯಲ್ಲಿ ನಡೆಯಲಿರುವ ಮುಂಬರುವ ಏಷ್ಯಾಕಪ್‌ಗೆ ನಾಯಕರಾಗಿ ನೇಮಕಗೊಂಡಿದ್ದರಿಂದ ಧುಳ್ ಅವರ ನೇಮಕವು ನಿರೀಕ್ಷಿತವಾಗಿತ್ತು. ಆಂಧ್ರದ ಎಸ್‌.ಕೆ. ರಶೀದ್ ಅವರನ್ನು ಉಪನಾಯಕರನ್ನಾಗಿ ನೇಮಿಸಲಾಗಿದೆ.

14ನೇ ಆವೃತ್ತಿಯ ಟೂರ್ನಿಯಲ್ಲಿ 48 ಪಂದ್ಯಗಳಲ್ಲಿ 16 ತಂಡಗಳು ಟ್ರೋಫಿಗಾಗಿ ಪೈಪೋಟಿ ನಡೆಸಲಿವೆ.

ಭಾರತ ತಂಡವು 2000, 2008, 2012 ಮತ್ತು 2018ರಲ್ಲಿ ಪ್ರಶಸ್ತಿ ಜಯಿಸಿದೆ. 2016ರ ಮತ್ತು 2020ರಲ್ಲಿ ನ್ಯೂಜಿಲೆಂಡ್‌ನಲ್ಲಿ ನಡೆದ ಟೂರ್ನಿಯಲ್ಲಿ ರನ್ನರ್ ಅಪ್ ಆಗಿತ್ತು.

ಬಲಗೈ ಮಧ್ಯಮ ಕ್ರಮಾಂಕದ ಬ್ಯಾಟರ್ ಆಗಿರುವ ದೆಹಲಿಯ ಯಶ್, ಈ ವರ್ಷದ ಆರಂಭದಲ್ಲಿ ವಿನೂ ಮಂಕಡ್ ಟ್ರೋಫಿಯಲ್ಲಿ ಹೆಚ್ಚು ರನ್ ಗಳಿಸಿದ ಆಟಗಾರ ಆಗಿದ್ದಾರೆ. ತಂಡವು ಆಡಿದ ಐದು ಪಂದ್ಯಗಳಲ್ಲಿ ದೆಹಲಿ ತಂಡಕ್ಕಾಗಿ ಅವರು 75.50 ಸರಾಸರಿಯಲ್ಲಿ 302 ರನ್‌ಗಳನ್ನು ಗಳಿಸಿದ್ದರು.

ಯಶ್ ಧೂಲ್ –ಟ್ವಿಟರ್ ಚಿತ್ರ

ಜನವರಿ 15ರಂದು ಗಯಾನಾದ ಪ್ರಾವಿಡೆನ್ಸ್ ಕ್ರೀಡಾಂಗಣದಲ್ಲಿ ಭಾರತ, ದಕ್ಷಿಣ ಆಫ್ರಿಕಾ ವಿರುದ್ಧ ತನ್ನ ಅಭಿಯಾನವನ್ನು ಪ್ರಾರಂಭಿಸಲಿದೆ. ಜನವರಿ 19 ಮತ್ತು 22ರಂದು ಕ್ರಮವಾಗಿ ಐರ್ಲೆಂಡ್ ಮತ್ತು ಉಗಾಂಡಾ ವಿರುದ್ಧ ಗುಂಪು ಹಂತದ ಪಂದ್ಯಗಳನ್ನು ಆಡಲಿದೆ.

ಆಂಟಿಗಾ ಆ್ಯಂಡ್ ಬಾರ್ಬಡಾ, ಗಯಾನಾ, ಸೇಂಟ್ ಕಿಟ್ಸ್ ಆ್ಯಂಡ್ ನೆವಿಸ್ ಮತ್ತು ಟ್ರಿನಿಡಾಡ್ ಆ್ಯಂಡ್ ಟೊಬಾಗೊದಲ್ಲಿ ಪಂದ್ಯಗಳನ್ನು ಆಯೋಜಿಸಲಾಗುತ್ತದೆ.

ಜನವರಿ 14ರಂದು ಗಯಾನಾದಲ್ಲಿ ನಡೆಯಲಿರುವ ಟೂರ್ನಿಯ ಮೊದಲ ಪಂದ್ಯದಲ್ಲಿ ಶ್ರೀಲಂಕಾ, ಸ್ಕಾಟ್ಲೆಂಡ್‌ಅನ್ನು ಎದುರಿಸಲಿದೆ. ಅದೇ ದಿನ ಆತಿಥೇಯ ವೆಸ್ಟ್ ಇಂಡೀಸ್ ಆಸ್ಟ್ರೇಲಿಯಾ ವಿರುದ್ಧ ಆಡಲಿದೆ.

ಫೆಬ್ರುವರಿ ಒಂದು ಮತ್ತು ಎರಡರಂದು ಸೆಮಿಫೈನಲ್ ಪಂದ್ಯಗಳು ನಡೆಯಲಿವೆ. ಫೆಬ್ರುವರಿ 5ರಂದು ಫೈನಲ್ ನಡೆಯಲಿದೆ.

ಭಾರತ ತಂಡ: ಯಶ್ ಧುಳ್ (ನಾಯಕ), ಎಸ್‌.ಕೆ. ರಶೀದ್ (ಉಪನಾಯಕ) ಹರ್ನೂರ್ ಸಿಂಗ್, ಅಂಗ್‌ಕ್ರಿಶ್ ರಘುವಂಶಿ, ನಿಶಾಂತ್ ಸಿಂಧು, ಸಿದ್ಧಾರ್ಥ್ ಯಾದವ್, ಅನೀಶ್ವರ್ ಗೌತಮ್, ದಿನೇಶ್ ಬಾನಾ (ವಿಕೆಟ್ ಕೀಪರ್), ಆರಾಧ್ಯ ಯಾದವ್ (ವಿಕೆಟ್ ಕೀಪರ್), ರಾಜ್ ಅಂಗದ್ ಬಾವಾ, ಮಾನವ್ ಪರಾಖ್, ಕೌಶಲ್ ತಾಂಬೆ, ಆರ್. ಎಸ್. ಹಂಗರ್‌ಗೇಕರ್, ವಾಸು ವತ್ಸ್ , ವಿಕ್ಕಿ ಓಸ್ವಾಲ್, ರವಿಕುಮಾರ್, ಗರ್ವ್ ಸಂಗ್ವಾನ್.

ಕಾಯ್ದಿರಿಸಿದ ಆಟಗಾರರು: ರಿಷಿತ್ ರೆಡ್ಡಿ, ಉದಯ್ ಸಹರನ್, ಅಂಶ್ ಗೋಸಾಯಿ, ಅಮೃತರಾಜ್ ಉಪಾಧ್ಯಾಯ, ಪಿಎಂ ಸಿಂಗ್ ರಾಥೋಡ್.

ಓಮೈಕ್ರಾನ್: ಲಂಡನ್‌ನಲ್ಲಿ ಒಂದೇ ದಿನ 10 ಸಾವಿರ ಪ್ರಕರಣ

ಲಂಡನ್ (ಪಿಟಿಐ): ಇಂಗ್ಲೆಂಡ್‌ನಲ್ಲಿ ಶನಿವಾರ ಒಂದೇ ದಿನ 10 ಸಾವಿರಕ್ಕೂ ಹೆಚ್ಚು ಓಮೈಕ್ರಾನ್ ಸೋಂಕು ಪ್ರಕರಣಗಳು ವರದಿಯಾಗಿವೆ. ದಿನವೊಂದರಲ್ಲಿ ದಾಖಲಾದ ಅತ್ಯಧಿಕ ಪ್ರಕರಣಗಳು ಇವಾಗಿವೆ. ಅಲ್ಲದೆ, ಒಟ್ಟಾರೆಯಾಗಿ ಕೋವಿಡ್ ಪ್ರಕರಣಗಳ ಸಂಖ್ಯೆ 90 ಸಾವಿರಕ್ಕೆ ಏರಿದೆ.

ಯುಕೆ ಆರೋಗ್ಯ ಭದ್ರತಾ ಸಂಸ್ಥೆಯು, ಓಮೈಕ್ರಾನ್‌ನ 10,059 ಪ್ರಕರಣಗಳು ದೃಢಪಟ್ಟಿವೆ. ಇದು, ಶುಕ್ರವಾರ ವರದಿಯಾಗಿದ್ದ (3,201) ಪ್ರಕರಣಗಳಿಗಿಂತ ಮೂರು ಪಟ್ಟು ಹೆಚ್ಚು. ಈ ಮೂಲಕ ಹೊಸ ತಳಿಯ ಪ್ರಕರಣಗಳ ಸಂಖ್ಯೆ 24,968ಕ್ಕೆ ಏರಿದೆ ಎಂದು ತಿಳಿಸಿದೆ.

ಕೋವಿಡ್‌ನಿಂದ ಶುಕ್ರವಾರ 111 ಮಂದಿ ಮೃತಪಟ್ಟಿದ್ದಾರೆ. ಓಮೈಕ್ರಾನ್ ಸೋಂಕಿನಿಂದ ಮೃತಪಟ್ಟವರ ಸಂಖ್ಯೆ 7ಕ್ಕೆ ಏರಿದೆ. ಸೋಂಕು ಪ್ರಕರಣಗಳ ಏರಿಕೆ ಹಿನ್ನೆಲೆಯಲ್ಲಿ ಲಾಕ್‌ಡೌನ್ ನಿರ್ಬಂಧಗಳನ್ನು ಹೇರಲು ಚಿಂತನೆ ನಡೆದಿದೆ ಎಂದು ಆರೋಗ್ಯ ಇಲಾಖೆ ಕಾರ್ಯದರ್ಶಿ ಸಾಜಿದ್ ಜಾವಿದ್ ತಿಳಿಸಿದ್ದಾರೆ.

'ಅಂಕಿ-ಅಂಶ ಆಧರಿಸಿ ವಿಜ್ಞಾನಿಗಳು, ಪರಿಣಿತರ ಜೊತೆಗೆ ಚರ್ಚಿಸುತ್ತಿದ್ದೇವೆ. ಸೂಕ್ಷ್ಮವಾಗಿ ಪರಿಸ್ಥಿತಿ ಗಮನಿಸುತ್ತಿದ್ದೇವೆ' ಎಂದರು. 'ಹೊಸ ನಿರ್ಬಂಧಗಳು ಅನಿವಾರ್ಯ' ಎಂದು ಮೇಯರ್ ಸಾದಿಕ್ ಖಾನ್ ಹೇಳಿದರು.

'ಓಮೈಕ್ರಾನ್ ಏರಿಕೆ ಆತಂಕ ಮೂಡಿಸುತ್ತಿದೆ. ಕಳೆದ 24 ಗಂಟೆಗಳಲ್ಲಿ ಬಹುತೇಕ 30 ಸಾವಿರ ಕೋವಿಡ್ ಪ್ರಕರಣಗಳು ಪತ್ತೆಯಾಗಿವೆ. ಒಟ್ಟಾರೆ, ಸೋಂಕು ಪ್ರಮಾಣ ಏರಿಕೆಯ ಹಾದಿಯಲ್ಲಿದೆ' ಎಂದು ಹೇಳಿದರು.

ಸೋಂಕು ತಡೆಗೆ ಕೆಲವೊಂದು ಕಾರ್ಯಕ್ರಮಗಳಿಗೆ ಕೋವಿಡ್ ಪಾಸ್ ಹಾಗೂ ಮಾಸ್ಕ್ ಕಡ್ಡಾಯ ಮಾಡುವುದು, ಮನೆಯಿಂದಲೇ ಕೆಲಸ ಮಾಡುವ ಪ್ರವೃತ್ತಿಗೆ ಉತ್ತೇಜನ ನೀಡುವ ಕ್ರಮವು ಚಿಂತನೆಯಲ್ಲಿದೆ ಎಂದರು.

ಸೋಂಕು ಏರಿಕೆ ಹಿನ್ನೆಲೆಯಲ್ಲಿ ಸ್ಕಾಟ್ಲೆಂಡ್‌ನಲ್ಲಿ ನಿರ್ಬಂಧ ಬಿಗಿಗೊಳಿಸಿದ್ದರೆ, ವೇಲ್ಸ್‌ನಲ್ಲಿ ಕ್ರಿಸ್‌ಮಸ್ ಪೂರ್ವಭಾವಿಯಲ್ಲಿ ನೈಟ್‌ಕ್ಲಬ್‌ಗಳನ್ನು ಮುಚ್ಚಲು ಆದೇಶಿಸಲಾಗಿದೆ.

ಸೋಂಕು ಭೀತಿ: ವಿವಿಧೆಡೆ ನಿರ್ಬಂಧ

ನೆದರ್‌ಲ್ಯಾಂಡ್ಸ್ (ಎ.ಪಿ): ಓಮೈಕ್ರಾನ್ ಸೋಂಕು ತಡೆ ಕ್ರಮವಾಗಿ ಯೂರೋಪ್‌ನ ವಿವಿಧ ರಾಷ್ಟ್ರಗಳು ಮತ್ತೆ ಲಾಕ್‌ಡೌನ್‌ಗೆ ಒಲವು ತೋರುತ್ತಿವೆ. ನೆದರಲ್ಯಾಂಡ್ ಮತ್ತೆ ಲಾಕ್‌ಡೌನ್ ಘೋಷಿಸಿದೆ.

ಅಗತ್ಯ ಸೇವೆ ಹೊರತುಪಡಿಸಿ, ಶಾಲೆ, ವಿಶ್ವವಿದ್ಯಾಲಯಗಳು, ಬಾರ್, ರೆಸ್ಟೋರೆಂಟ್‌ಗಳು ಸೇರಿ ಎಲ್ಲ ವಹಿವಾಟು ಜನವರಿ 14ರವರೆಗೆ ಬಂದ್ ಆಗಲಿವೆ ಎಂದು ಪ್ರಭಾರಿ ಪ್ರಧಾನಿ ಮಾರ್ಕ್ ರೂಟೆ ತಿಳಿಸಿದ್ದಾರೆ.

ಓಮೈಕ್ರಾನ್ ಪರಿಣಾಮ ಕೋವಿಡ್‌ನ ಐದನೇ ಅಲೆ ಕಾಣಿಸಿಕೊಳ್ಳುತ್ತಿದೆ. ಲಾಕ್‌ಡೌನ್ ಅನಿವಾರ್ಯ. ಜನತೆ ಹೊಸ ವರ್ಷ, ಕ್ರಿಸ್‌ಮಸ್ ವೇಳೆ ನಾಲ್ವರು, ಉಳಿದಂತೆ ಇಬ್ಬರು ಅತಿಥಿಗಳನ್ನಷ್ಟೇ ಆಹ್ವಾನಿಸಬಹುದು ಎಂದಿದ್ದಾರೆ.

ಫ್ರಾನ್ಸ್, ಸೈಪ್ರಸ್, ಆಸ್ಟ್ರಿಯಾ, ಡೆನ್ಮಾರ್ಕ್, ಜರ್ಮನಿ ಈಗಾಗಲೇ ವಿದೇಶ ಪ್ರಯಾಣದ ಮೇಲೆ ನಿರ್ಬಂಧ ಹೇರಿವೆ. ಪ್ಯಾರಿಸ್‌ನಲ್ಲಿ ಹೊಸವರ್ಷ ಮುನ್ನಾದಿನದ ಕಾರ್ಯಕ್ರಮ ರದ್ದಾಗಿದೆ. ಐರ್ಲೆಂಡ್‌ನಲ್ಲಿ ರಾತ್ರಿ ಕರ್ಫ್ಯೂ ಜಾರಿಗೆ ಬಂದಿದೆ.

ಇರಾನ್‌ನಲ್ಲಿ ಮೊದಲ ಪ್ರಕರಣ : ಇರಾನ್‌ನಲ್ಲಿ ಭಾನುವಾರ ಮೊದಲ ಓಮೈಕ್ರಾನ್ ಸೋಂಕು ಪತ್ತೆಯಾಗಿದೆ. ಜಾಗತಿಕವಾಗಿ ರೂಪಾಂತರ ತಳಿ ಪತ್ತೆಯಾದ ತಿಂಗಳಲ್ಲಿಯೇ ಇರಾನ್‌ಗೂ ಪ್ರವೇಶಿಸಿದೆ.

ವಿಶ್ವ ಆರೋಗ್ಯ ಸಂಘಟನೆಯು ಶನಿವಾರವಷ್ಟೇ ಓಮೈಕ್ರಾನ್ ಸೋಂಕು ಒಟ್ಟಾರೆ 89 ದೇಶಗಳಲ್ಲಿ ಕಾಣಿಸಿಕೊಂಡಿದೆ. ಸಮುದಾಯದಲ್ಲಿ ಮೂರು ದಿನದಲ್ಲಿ ಒಂದೂವರೆ ಪಟ್ಟು ವೇಗವಾಗಿ ಹರಡಲಿದೆ ಎಂದು ತಿಳಿಸಿತ್ತು.

ಐಎಸ್‌ಎಲ್: ಬಿಎಫ್‌ಸಿಗೆ ಜಯದ ತವಕ

ಬ್ಯಾಂಬೊಲಿಮ್ (ಪಿಟಿಐ): ಸತತ ಆರು ಪಂದ್ಯಗಳಲ್ಲಿ ಗೆಲುವು ಕಾಣದ ಬೆಂಗಳೂರು ಎಫ್‌ಸಿ ತಂಡವು ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಯಲ್ಲಿ ಸೋಮವಾರ ಜಮ್ಷೆಡ್‌ಪುರ ಎಫ್‌ಸಿ ಸವಾಲು ಎದುರಿಸಲಿದೆ. ಇಲ್ಲಿನ ಅಥ್ಲೆಟಿಕ್ ಕ್ರೀಡಾಂಗಣದಲ್ಲಿ ಪಂದ್ಯ ನಡೆಯಲಿದೆ.

ಕಳೆದ ಪಂದ್ಯದಲ್ಲಿ ಸುನಿಲ್ ಚೆಟ್ರಿ ನಾಯಕತ್ವದ ತಂಡವು ಎಟಿಕೆ ಮೋಹನ್ ಬಾಗನ್ (ಎಟಿಕೆಎಂಬಿ) ತಂಡದೊಂದಿಗೆ 3-3ರಿಂದ ಸಮಬಲ ಸಾಧಿಸಿತ್ತು. ಈ ಪಂದ್ಯದಲ್ಲಿ ತೋರಿದ ಉತ್ತಮ ಸಾಮರ್ಥ್ಯವು ತಂಡದ ಆತ್ಮವಿಶ್ವಾಸ ಹೆಚ್ಚಿಸಿದೆ. ಆದರೆ ಬಲಿಷ್ಠ ಜಮ್ಷೆಡ್‌ಪುರ ಸವಾಲು ಮೀರಬೇಕಾದರೆ ತಂಡ ಬಿಎಫ್‌ಸಿ ಬೆವರು ಹರಿಸಬೇಕಾಗುತ್ತದೆ.

ಸದ್ಯ ಬೆಂಗಳೂರು ತಂಡವು 11 ತಂಡಗಳಿರುವ ಟೂರ್ನಿಯ ಪಾಯಿಂಟ್ಸ್ ಪಟ್ಟಿಯಲ್ಲಿ 10ನೇ ಸ್ಥಾನದಲ್ಲಿದೆ. ಆದರೆ ಜಮ್ಷೆಡ್‌ಪುರ ಆರು ಪಂದ್ಯಗಳಿಂದ 11 ಪಾಯಿಂಟ್ಸ್ ಕಲೆಹಾಕಿದ್ದು, ಮೂರನೇ ಸ್ಥಾನದಲ್ಲಿದೆ. ಚೆಟ್ರಿ ಪಡೆಯಲ್ಲಿ ಪ್ರಿನ್ಸ್ ಇಬಾರ ಉತ್ತಮ ದಾಳಿ ಸಂಘಟಿಸುತ್ತಿದ್ದಾರೆ.

ಪಂದ್ಯ ಆರಂಭ: ರಾತ್ರಿ 7.30

ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್

ಮುಂಬೈಗೆ ಆಘಾತ ನೀಡಿದ ಕೇರಳ

ಮಡಗಾಂವ್ (ಪಿಟಿಐ): ಕೇರಳ ಬ್ಲಾಸ್ಟರ್ಸ್ ತಂಡವು ಐಎಸ್‌ಎಲ್ ಟೂರ್ನಿಯಲ್ಲಿ ಭಾನುವಾರ ಮುಂಬೈ ಸಿಟಿ ಎಫ್‌ಸಿಗೆ ಆಘಾತ ನೀಡಿತು.

ವಿಜೇತ ತಂಡದ ಪರ ಸಹಲ್ ಅಬ್ದುಲ್ (27ನೇ ನಿಮಿಷ), ಅಲ್ವಾರೊ ವಾಜ್‌ಕೆಜ್ (47ನೇ ನಿಮಿಷ) ಮತ್ತು ಜೋರ್ಗ್ ಪ್ರೇಯರ ಡಿಯಾಜ್ (51ನೇ ನಿಮಿಷ) ಗೋಲು ಗಳಿಸಿದರು. ಈ ಗೆಲುವಿನೊಂದಿಗೆ ತಂಡವು ಪಾಯಿಂಟ್ಸ್ ಪಟ್ಟಿಯಲ್ಲಿ ಐದನೇ ಸ್ಥಾನಕ್ಕೇರಿತು.

ಹೈದರಾಬಾದ್ ರೇಸ್

ಕೆಸರಿಯಾ ಬಾಲಮ್ ಗೆಲ್ಲುವ ನಿರೀಕ್ಷೆ

ಪ್ರಿನ್ಸ್ ಆಫ್ ಬೆರಾರ್ ಟ್ರೋಫಿ ಸೋಮವಾರದ ಹೈದರಾಬಾದ್ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಕೆಸರಿಯಾ ಬಾಲಮ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1.15ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ

1ನೇ ರೇಸ್: ಸರ್ವೈವರ್ 6, ಕ್ಯಾಂಡಿ ಗರ್ಲ್ 7, ಎಸೆನ್ಶಿಯಲ್ 2
2ನೇ ರೇಸ್: ಕ್ವಾಲಿಟಿ ವಾರಿಯರ್ 2, ದೆಸ್ಪಾಂಗ್ 9, ಸ್ಟಾರ್ ಡ್ಯಾನ್ಸರ್ 1
3ನೇ ರೇಸ್: ಪ್ರೊಲಿಫಿಕ್ ಕಮಾಂಡ್ 3, ಸ್ಪೆಷಲ್ ಎಫರ್ಟ್ 4, ಕ್ಯಾಶ್ ರಿಜಿಸ್ಟರ್ 9
4ನೇ ರೇಸ್: ಕ್ರೇಜಿ ಹಾರ್ಸ್ 4, ಇನ್ ಕಂಟೆನ್ಶನ್ 9, ಸೂಪರ್ ಏಂಜೆಲ್ 7
5ನೇ ರೇಸ್: ಬೋಲ್ಡ್ ಬಿಡ್ಡಿಂಗ್ 2, ಫಾರೆವರ್ ಬಾಂಡ್ 4, ಲೈಟ್ನಿಂಗ್ ಫೇರಿ 8
6ನೇ ರೇಸ್: ಕೆಸರಿಯಾ ಬಾಲಮ್ 9, ಸ್ಟ್ರಾಮ್‌ಜೆಟ್ 5, ಸಮ್ಮರ್ ನೈಟ್ 10
7ನೇ ರೇಸ್: ಟರ್ನಿಂಗ್ ವ್ಹೀಲ್ 2, ಮಿಸ್ ಲಿಟ್ಲ್ ಏಂಜೆಲ್ 5, ಎಕ್ಸಾಟಿಕ್ ಡ್ಯಾನ್ಸರ್ 4

ಉತ್ತಮ ಬೆಟ್: ಪ್ರೊಲಿಫಿಕ್ ಕಮಾಂಡ್

ಜಾಕ್‌ಪಾಟ್	1ನೇ ಮಿನಿ ಜಾಕ್‌ಪಾಟ್	2ನೇ ಮಿನಿ ಜಾಕ್‌ಪಾಟ್
3,4,5,6,7	1,2,3,4	4,5,6,7

1ನೇ ಟ್ರಿಬಲ್	2ನೇ ಟ್ರಿಬಲ್
2,3,4	5,6,7

ಸಂಕ್ಷಿಪ್ತ ಸುದ್ದಿ

ಶ್ರೀಲಂಕಾದಲ್ಲಿ 55 ಭಾರತೀಯ ಮೀನುಗಾರರ ಬಂಧನ

ರಾಮೇಶ್ವರಂ (ಪಿಟಿಐ): ಶ್ರೀಲಂಕಾದ ನೌಕಾಪಡೆಯು ಕಡಲುಗಡಿಯನ್ನು ದಾಟಿ ಮೀನುಗಾರಿಕೆ ಮಾಡುತ್ತಿದ್ದ ಆರೋಪದಡಿ ತಮಿಳುನಾಡಿನ 55 ಮೀನುಗಾರರನ್ನು ಬಂಧಿಸಿದ್ದು, ಎಂಟು ದೋಣಿಗಳನ್ನು ವಶಕ್ಕೆ ಪಡೆದುಕೊಂಡಿದೆ.

ಜಾಫ್ನಾದಲ್ಲಿನ ಡೆಫ್ಟ್ ದ್ವೀಪ ಭಾಗದಲ್ಲಿ ಶನಿವಾರ ಇವರು ಮೀನುಗಾರಿಕೆ ಮಾಡುತ್ತಿದ್ದರು. ನೌಕಾಪಡೆಯ 4 ಎಫ್‌ಎಎಫ್‌ಗೆ ಸೇರಿದ ಕಾರ್ಯಪಡೆಯ ಸಿಬ್ಬಂದಿ ದಾಳಿ ನಡೆಸಿದರು. ಕೋವಿಡ್‌ನ ಮಾರ್ಗಸೂಚಿಯಂತೆ ಪರೀಕ್ಷೆ ಬಳಿಕ ಕಾನೂನು ಕ್ರಮಕ್ಕೆ ಸಂಬಂಧಿಸಿದವರಿಗೆ ಬಂಧಿತರನ್ನು ಒಪ್ಪಿಸಲಾಯಿತು ಎಂದು ಹೇಳಿಕೆ ತಿಳಿಸಿದೆ.

ಈ ಮಧ್ಯೆ, ತಮಿಳುನಾಡು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಅವರು ವಿದೇಶಾಂಗ ವ್ಯವಹಾರಗಳ ಸಚಿವ ಎಸ್.ಜೈಶಂಕರ್ ಅವರೊಂದಿಗೆ ದೂರವಾಣಿಯಲ್ಲಿ ಮಾತುಕತೆ ನಡೆಸಿದ್ದು, ಮೀನುಗಾರರ ಬಿಡುಗಡೆಗೆ ತಕ್ಷಣದ ಕ್ರಮವಹಿಸಬೇಕು ಎಂದು ಒತ್ತಾಯಿಸಿದ್ದಾರೆ.

ಕಡಲುಗಡಿ ದಾಟಿ ಮೀನುಗಾರಿಕೆ ನಡೆಸಿದ ಆರೋಪದ ಮೇಲೆ ಉಭಯ ದೇಶಗಳ ಮೀನುಗಾರರನ್ನು ಆಗಾಗ್ಗೆ ಬಂಧಿಸುವುದು ಸಾಮಾನ್ಯವಾಗಿದೆ. ಉಭಯ ದೇಶಗಳ ದ್ವಿಪಕ್ಷೀಯ ಬಾಂಧವ್ಯ ವಿಷಯದಲ್ಲಿಯೂ ತೊಡಕಾಗಿದೆ.

52 ಸ್ಟಾರ್‌ಲಿಂಕ್ ಉಪಗ್ರಹಗಳು ಕಕ್ಷೆಗೆ

ಕ್ಯಾಲಿಫೋರ್ನಿಯಾ (ಎ.ಪಿ): ಸ್ಪೇಸ್ ಎಕ್ಸ್ ಇಲ್ಲಿನ ವಂಡೆನ್‌ಬರ್ಗ್ ಬಾಹ್ಯಾಕಾಶ ನೆಲೆಯಿಂದ 52 ಸ್ಟಾರ್‌ಲಿಂಕ್ ಇಂಟರ್‌ನೆಟ್ ಉಪಗ್ರಹಗಳನ್ನು ಹೊತ್ತಿದ್ದ ರಾಕೆಟ್ ಅನ್ನು ಶನಿವಾರ ಯಶಸ್ವಿಯಾಗಿ ಉಡಾವಣೆ ಮಾಡಿತು.

ಎರಡು ಹಂತದಲ್ಲಿ ಫಾಲ್ಕನ್ 9 ರಾಕೆಟ್ ಉಡಾವಣೆ ಪ್ರಕ್ರಿಯೆ ನಡೆಯಿತು. ಮೊದಲ ಹಂತದ ರಾಕೆಟ್ ಕಡಲಿನಲ್ಲಿದ್ದ ಸ್ಪೇಸ್ ಎಕ್ಸ್‌ನ ಡ್ರೋನ್ ಹಡಗಿಗೆ ಮರಳಿತು.

ಎರಡನೇ ಹಂತದಲ್ಲಿ ರಾಕೆಟ್ ಯಶಸ್ವಿಯಾಗಿ ಗುರಿ ತಲುಪಿದ್ದು, ಕಕ್ಷೆಗೆ ಉಪಗ್ರಹಗಳನ್ನು ಸೇರಿಸಿತು ಎಂದು ಉಡಾವಣಾ ವೀಕ್ಷಣೆಗಾರ ಯೊಮೆ ರೋ ಅವರು ತಿಳಿಸಿದರು.

ಸ್ಟಾರ್‌ಲಿಂಕ್ ಎಂಬುದು ಉಪಗ್ರಹ ಆಧರಿತ ಜಾಗತಿಕ ಇಂಟರ್‌ನೆಟ್ ವ್ಯವಸ್ಥೆಯಾಗಿದ್ದು, ಸ್ಪೇಸ್ ಎಕ್ಸ್ ಇದನ್ನು ದಶಕಗಳಿಂದ ನಿರ್ವಹಣೆ ಮಾಡುತ್ತಿದೆ.

ಫಿಲಿಪ್ಪೀನ್ಸ್ ಚಂಡಮಾರುತ: ಮೃತರ ಸಂಖ್ಯೆ 112ಕ್ಕೆ

ಮನಿಲಾ (ಎ.ಪಿ): ಫಿಲಿಪ್ಪೀನ್ಸ್‌ನಲ್ಲಿ 'ರೈ' ಚಂಡಮಾರುತದ ಪರಿಣಾಮ ಮೃತಪಟ್ಟವರ ಸಂಖ್ಯೆ 112ಕ್ಕೇ ಏರಿದೆ. ಭಾನುವಾರವೇ 65 ಜನ ಮೃತಪಟ್ಟಿದ್ದಾರೆ ಎಂದು ಸೆಂಟ್ರಲ್ ಫಿಲಿಪ್ಪೀನ್ಸ್ ಪ್ರಾಂತ್ಯದ ಗವರ್ನರ್ ತಿಳಿಸಿದ್ದಾರೆ.

ಚಂಡಮಾರುತದ ತೀವ್ರತೆಗೆ ದ್ವೀಪರಾಷ್ಟ್ರದ ಬಹುತೇಕ ಪಟ್ಟಣಗಳು ಗುರಿಯಾಗಿವೆ. 10 ಜನ ನಾಪತ್ತೆಯಾಗಿದ್ದು, 13 ಮಂದಿ ಗಾಯಗೊಂಡಿದ್ದಾರೆ. ಸಂಪರ್ಕ ಕೊರತೆಯಿಂದ ಇನ್ನೂ 33 ಮೇಯರ್‌ಗಳು ವಸ್ತುಸ್ಥಿತಿ ವರದಿ ಕಳುಹಿಸಿಲ್ಲ. ಹೀಗಾಗಿ, ಮೃತರ ಸಂಖ್ಯೆ ಇನ್ನಷ್ಟು ಏರಬಹುದು ಎಂದು ಗವರ್ನರ್ ಅರ್ಥರ್ ಯಾಪ್ ತಿಳಿಸಿದ್ದಾರೆ.

ವಿಜಯ್ ಹಜಾರೆ ಟ್ರೋಫಿ: ಸಿದ್ಧಾರ್ಥ್–ಮನೀಷ್ ಶತಕದ ಜೊತೆಯಾಟ; ವೈಶಾಖ್‌ಗೆ 4 ವಿಕೆಟ್

ಕ್ವಾರ್ಟರ್‌ಫೈನಲ್‌ಗೆ ಕರ್ನಾಟಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆತಿಥೇಯ ರಾಜಸ್ಥಾನ ತಂಡವನ್ನು ಎಂಟು ವಿಕೆಟ್‌ಗಳಿಂದ ಮಣಿಸಿದ ಮನೀಷ್ ಪಾಂಡೆ ನೇತೃತ್ವದ ಕರ್ನಾಟಕ ತಂಡ ವಿಜಯ್ ಹಜಾರೆ ಟ್ರೋಫಿ ಏಕದಿನ ಕ್ರಿಕೆಟ್ ಟೂರ್ನಿಯ ಕ್ವಾರ್ಟರ್ ಫೈನಲ್ ಪ್ರವೇಶಿಸಿತು.

ಜೈಪುರದ ಕೆ.ಎಲ್.ಸೈನಿ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಪ್ರೀ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಕರ್ನಾಟಕ ಎಂಟು ವಿಕೆಟ್‌ಗಳ ಜಯ ಸಾಧಿಸಿತು. 200 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ತಂಡ ಇನ್ನೂ 38 ಎಸೆತ ಬಾಕಿ ಇರುವಾಗ ಗೆಲುವಿನ ದಡ ಸೇರಿತು.

ಆರಂಭಿಕ ಬ್ಯಾಟರ್ ದೇವದತ್ತ ಪಡಿಕ್ಕಲ್ ತಂಡದ ಮೊತ್ತ 25 ಆಗಿದ್ದಾಗ ಔಟಾದರು. ರವಿಕುಮಾರ್ ಸಮರ್ಥ್ ಜೊತೆಗೂಡಿದ ಕೃಷ್ಣಮೂರ್ತಿ ಸಿದ್ಧಾರ್ಥ್ 75 ರನ್ ಸೇರಿಸಿ ತಂಡಕ್ಕೆ ಆಸರೆಯಾದರು. ಸಮರ್ಥ್ ಔಟಾದ ನಂತರ ಸಿದ್ಧಾರ್ಥ್ ಮತ್ತು ಮನೀಷ್ ಪಾಂಡೆ ಆಟ ರಂಗೇರಿತು. ಇಬ್ಬರೂ 104 ರನ್‌ಗಳ ಜೊತೆಯಾಟವಾಡಿ ಸುಲಭ ಜಯ ತಂದುಕೊಟ್ಟರು.

ಟಾಸ್ ಗೆದ್ದ ಕರ್ನಾಟಕ ತಂಡದ ನಾಯಕ ಮನೀಷ್ ಪಾಂಡೆ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡರು. ನಾಲ್ಕು ವಿಕೆಟ್ ಗಳಿಸಿದ ವೇಗಿ ವೈಶಾಖ್ ವಿಜಯಕುಮಾರ್ ಮತ್ತು ಎರಡು ವಿಕೆಟ್ ಪಡೆದ ಆಫ್ ಸ್ಪಿನ್ನರ್ ಕೃಷ್ಣಪ್ಪ ಗೌತಮ್ ಅವರ ದಾಳಿಗೆ ಆತಿಥೇಯ ತಂಡದ ಬ್ಯಾಟರ್‌ಗಳು ರನ್ ಗಳಿಸಲು ಪರದಾಡಿದರು.

ಐದು ಸಿಕ್ಸರ್ ಮತ್ತು ಒಂಬತ್ತು ಬೌಂಡರಿ ಸಿಡಿಸಿ 109 ಎಸೆತಗಳಲ್ಲಿ 109 ರನ್ ಗಳಿಸಿದ ನಾಯಕ ದೀಪಕ್ ಹೂಡಾ ಏಕಾಂಗಿಯಾಗಿ ಇನಿಂಗ್ಸ್ ಮುನ್ನಡೆಸಿದರು. ಹೀಗಾಗಿ ತಂಡಕ್ಕೆ ಸವಾಲಿನ ಮೊತ್ತ ಕಲೆ ಹಾಕಲು ಸಾಧ್ಯವಾಯಿತು.

ಆರಂಭಿಕ ಬ್ಯಾಟರ್ ಅಭಿಜಿತ್ ತೋಮರ್ ಅವರನ್ನು ಪ್ರಸಿದ್ಧ ಕೃಷ್ಣ ಅವರು ವಾಪಸ್ ಕಳುಹಿಸಿದರೆ ಮಣೆಂದರ್ ಸಿಂಗ್ ಮತ್ತು ಮಹಿಪಾಲ್ ಲೊಮ್ರೊರ್ ವಿಕೆಟ್ ವೈಶಾಖ್ ಪಾಲಾಯಿತು. ಆಗ ತಂಡ 15ಕ್ಕೆ3 ಎಂಬ ಸ್ಥಿತಿಯಲ್ಲಿತ್ತು. 19 ರನ್ ಗಳಿಸುವಷ್ಟರಲ್ಲಿ ಐದು ವಿಕೆಟ್ ಕಳೆದುಕೊಂಡು ತಂತ ಸಂಕಷ್ಟಕ್ಕೆ ಸಿಲುಕಿತು. ಈ ಹಂತದಲ್ಲಿ ದೀಪಕ್ ಹೂಡಾ ಮತ್ತು ಸಮರ್ಪಿತ್ ಜೋಶಿ ಶತಕದ (118 ರನ್) ಜೊತೆಯಾಟವಾಡಿ ತಂಡವನ್ನು ಕಾಪಾಡಿದರು.

ಸಮರ್ಪಿತ್ ಔಟಾದ ನಂತರ ಮತ್ತೆ ಕುಸಿತದ ಹಾದಿ ಹಿಡಿದ ತಂಡಕ್ಕೆ 41ನೇ ಓವರ್‌ನಲ್ಲಿ ದೀಪಕ್ ವಿಕೆಟ್ ಉರುಳಿಸಿ ಪ್ರವೀಣ್ ದುಬೆ ಭಾರಿ ಪೆಟ್ಟು ನೀಡಿದರು. ಮುಂದಿನ ಓವರ್‌ನಲ್ಲಿ ತಂಡದ ಇನಿಂಗ್ಸ್‌ಗೆ ತೆರೆ ಬಿತ್ತು.

ಕೆ.ವಿ.ಸಿದ್ಧಾರ್ಥ್ –ಪ್ರಜಾವಾಣಿ ಚಿತ್ರ

ಕ್ವಾರ್ಟರ್‌ಫೈನಲ್ ಹಣಾಹಣಿ	
ದಿನಾಂಕ	ತಂಡಗಳು
ಡಿ.21	ಹಿಮಾಚಲ ಪ್ರದೇಶ–ಉತ್ತರ ಪ್ರದೇಶ
ಡಿ.21	ಕರ್ನಾಟಕ–ತಮಿಳುನಾಡು
ಡಿ.22	ಸೌರಾಷ್ಟ್ರ–ವಿದರ್ಭ
ಡಿ.22	ಕೇರಳ–ಸರ್ವಿಸಸ್
ಸ್ಥಳ: ಜೈಪುರ ಆರಂಭ: ಬೆಳಿಗ್ಗೆ 9.00	

ಮನೀಷ್ ಪಾಂಡೆ –ಪ್ರಜಾವಾಣಿ ಚಿತ್ರ

ಸ್ಕೋರ್ ಕಾರ್ಡ್

ರಾಜಸ್ಥಾನ 199 (41.4 ಓವರ್)

ಅಭಿಜಿತ್ ಸಿ ಪಡಿಕ್ಕಲ್ ಬಿ ಪ್ರಸಿದ್ಧ 5 (11 ಎ, 4x1), ಮಣೆಂದರ್ ಸಿಂಗ್ ಎಲ್‌ಬಿಡಬ್ಲ್ಯು ಬಿ ವೈಶಾಖ್ 1 (6 ಎ), ಮಹಿಪಾಲ್ ಬಿ ವೈಶಾಖ್ 4 (6 ಎ, 4x1), ದೀಪಕ್ ಸ್ಟಂಪ್ಡ್ ಶರತ್ ಬಿ ಪ್ರವೀಣ್ 109 (109 ಎ, 4x9, 6x5), ಸಲ್ಮಾನ್ ಸಿ ಪ್ರಸಿದ್ಧ ಬಿ ವೈಶಾಖ್ 4 (6 ಎ, 4x1), ಕಮಲೇಶ್ ಸಿ ಪ್ರವೀಣ್ ಬಿ ವೈಶಾಖ್ 0 (3 ಎ), ಸಮರ್ಪಿತ್ ಸಿ ಮನೋಹರ್ ಬಿ ವೆಂಕಟೇಶ್ 33 (63 ಎ), ಶುಭಂ ರನೌಟ್ (ಪಡಿಕ್ಕಲ್) 7 (12 ಎ, 4x1), ಬಿಷ್ಣೋಯ್ ಸಿ ಪಾಂಡೆ ಬಿ ಗೌತಮ್ 17 (27 ಎ, 4x2, 6x1), ಅನಿಕೇತ್ ಔಟಾಗದೆ 5 (5 ಎ, 4x1), ಖಲೀಲ್ ಸ್ಟಂಪ್ಡ್ ಶರತ್ ಬಿ ಗೌತಮ್ 0 (3 ಎ)

ಇತರೆ (ಲೆಗ್‌ಬೈ 4, ನೋಬಾಲ್ 1, ವೈಡ್ 9) 14

ವಿಕೆಟ್ ಪತನ: 1-6 (ಅಭಿಜಿತ್ ತೋಮರ್, 2.4), 2-10 (ಮನೇಂದರ್ ಸಿಂಗ್, 3.1), 3-15 (ಮಹಿಪಾಲ್ ಲೊಮ್ರೊರ್, 5.2), 4-19 (ಸಲ್ಮಾನ್ ಖಾನ್, 7.2), 5-19 (ಕಮಲೇಶ್ ನಾಗರಕೋಟಿ, 7.5), 6-137 (ಸಮರ್ಪಿತ್ ಜೋಶಿ, 29.6), 7-159 (ಶುಭಂ ಶರ್ಮಾ, 33.6), 8-185 (ರವಿ ಬಿಷ್ಣೋಯ್, 39.2), 9-193 (ದೀಪಕ್ ಹೂಡಾ, 40.4), 10-199 (ಖಲೀಲ್ ಅಹಮ್ಮದ್, 41.4)

ಬೌಲಿಂಗ್: ಪ್ರಸಿದ್ಧ ಕೃಷ್ಣ 8–3–17–1, ವೈಶಾಖ್ ವಿಜಯಕುಮಾರ್ 7–1–22–4, ಪ್ರವೀಣ್ ದುಬೆ 9–0–39–1, ಎಂ.ವೆಂಕಟೇಶ್ 9–0–56–1, ಕೃಷ್ಣಪ್ಪ ಗೌತಮ್ 8.4–0–61–2

ಕರ್ನಾಟಕ 2 ವಿಕೆಟ್‌ಗೆ 204 (43.4 ಓವರ್)

ರವಿಕುಮಾರ್ ಸಿ ಮಣೆಂದರ್ ಬಿ ಚೌಧರಿ 54 (65 ಎ, 4x7), ದೇವದತ್ತ ಸಿ ಲುಮ್ರೊರ್ ಬಿ ನಾಗರಕೋಟಿ 4 (24 ಎ), ಸಿದ್ಧಾರ್ಥ್ ಔಟಾಗದೆ 85 (120 ಎ, 4x6), ಮನೀಷ್ ಔಟಾಗದೆ 52 (53 ಎ, 4x4, 6x1)

ಇತರೆ (ಲೆಗ್‌ಬೈ 1, ವೈಡ್ 8) 9

ವಿಕೆಟ್ ಪತನ: 1–25 (ದೇವದತ್ತ ಪಡಿಕ್ಕಲ್, 8.1), 2–100 (ರವಿಕುಮಾರ್ ಸಮರ್ಥ್, 24.3)

ಬೌಲಿಂಗ್: ಖಲೀಲ್ ಅಹಮ್ಮದ್ 8–0–37–0, ಅನಿಕೇತ್ ಚೌಧರಿ 10–1–39–1, ಕಮಲೇಶ್ ನಾಗರಕೋಟಿ 6–1–27–1, ರವಿ ಬಿಷ್ಣೋಯ್ 9.4–0–63–0, ಶುಭಂ ಶರ್ಮಾ 9–0–28–0, ಮಹಿಪಾಲ್ ಲುಮ್ರೊರ್ 1–0–9–0

ಫಲಿತಾಂಶ: ಕರ್ನಾಟಕಕ್ಕೆ 8 ವಿಕೆಟ್‌ಗಳ ಜಯ; ಕ್ವಾರ್ಟರ್‌ಫೈನಲ್ ಪ್ರವೇಶ

ಬುಲ್ಸ್ ಬೆಂಬಲಕ್ಕೆ ಸುದೀಪ್ ಆಹ್ವಾನ

ಬೆಂಗಳೂರು: ಪ್ರೊ ಕಬಡ್ಡಿ ಲೀಗ್‌ನ ಎಂಟನೇ ಆವೃತ್ತಿಗೆ ಸಜ್ಜಾಗುತ್ತಿರುವ ಬೆಂಗಳೂರು ಬುಲ್ಸ್ ತಂಡವನ್ನು ಹುರಿದುಂಬಿಸಲು ಚಿತ್ರನಟ ಕಿಚ್ಚ ಸುದೀಪ್ ಕೋರಿದ್ದಾರೆ.

'ನಮ್ಮ ಊರು ನಮ್ಮ ಆಟ, ನಮ್ಮ ಹುಡುಗರು, ನಮ್ಮ ಬುಲ್ಸ್' ಎಂಬ ಘೋಷಣೆಯೊಂದಿಗೆ ತಂಡವನ್ನು ಬೆಂಬಲಿಸಬೇಕು ಎಂದು ಅವರು ಕೋರಿದ್ದಾರೆ ಎಂದು ತಂಡದ ಪ್ರಕಟಣೆ ತಿಳಿಸಿದೆ.

ತವರಿನಲ್ಲಿ ನಡೆಯಲಿರುವ 8ನೇ ಆವೃತ್ತಿಯ ಮೊದಲ ಪಂದ್ಯದಲ್ಲಿ ಮಾಜಿ ಚಾಂಪಿಯನ್ ಬೆಂಗಳೂರು ಬುಲ್ಸ್ ಯು ಮುಂಬಾವನ್ನು ಎದುರಿಸಲಿದೆ. ಈ ಪಂದ್ಯ ಉದ್ಘಾಟನೆಯ ದಿನವಾದ ಇದೇ 22ರಂದು ನಡೆಯಲಿದೆ. ತಂಡಗಳು ಈಗಾಗಲೇ ಬೆಂಗಳೂರಿಗೆ ಬಂದಿದ್ದು ಬಯೊಬಬಲ್‌ನಲ್ಲಿ ಇವೆ. ವೈಟ್‌ಫೀಲ್ಡ್‌ನ ಶೆರಾಟನ್ ಗ್ರ್ಯಾಂಡ್ ಹೋಟೆಲ್‌ನ ಸಭಾಂಗಣದಲ್ಲಿ ಪಂದ್ಯಗಳಿಗಾಗಿ ಮ್ಯಾಟ್ ಸಿದ್ಧಪಡಿಸಲಾಗಿದೆ.

ಯೋಧಾ ಅಭಿಮಾನಿಗಳ ದಿನಾಚರಣೆ: ಯು.ಪಿ.ಯೋಧಾ ತಂಡವು ಅಭಿಮಾನಿಗಳ ದಿನವನ್ನು ಭಾನುವಾರ ಆಚರಿಸಿಕೊಂಡಿತು. ಬಿ.ಕೆ.ಕಬಡ್ಡಿ ಅಕಾಡೆಮಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಅನೇಕ ಮರಂಜನಾ ಕಾರ್ಯಕ್ರಮಗಳು ನಡೆದವು. ಕಬಡ್ಡಿ ಪಂದ್ಯಗಳನ್ನು ಕೂಡ ಈ ಸಂದರ್ಭದಲ್ಲಿ ಆಡಲಾಯಿತು.

ಯು.ಪಿ.ಯೋಧಾಗೆ ಇದು ನಾಲ್ಕನೇ ಟೂರ್ನಿಯಾಗಿದ್ದು 8ನೇ ಆವೃತ್ತಿಯ ಮೊದಲ ಪಂದ್ಯದಲ್ಲಿ ಹಾಲಿ ಚಾಂಪಿಯನ್ ಬೆಂಗಾಲ್ ವಾರಿಯರ್ಸ್ ವಿರುದ್ಧ ಸೆಣಸಲಿದೆ.


ನಾಯಕ ಪವನ್ ಶೆರಾವತ್

ಐಒಎ ಸಂವಿಧಾನ ತಿದ್ದುಪಡಿಗೆ ಆರು ಸದಸ್ಯರ ಸಮಿತಿ ರಚನೆ

ನವದೆಹಲಿ(ಪಿಟಿಐ): ಚುನಾವಣೆಗೂ ಮೊದಲು ತನ್ನ ಸಂವಿಧಾನದ ತಿದ್ದುಪಡಿಗಾಗಿ ಭಾರತ ಒಲಿಂಪಿಕ್ ಸಮಿತಿ (ಐಒಎ) ಆರು ಸದಸ್ಯರ ಸಮಿತಿಯನ್ನು ಭಾನುವಾರ ರಚಿಸಿದೆ. ರಾಷ್ಟ್ರೀಯ ಕ್ರೀಡಾ ನೀತಿ ಅನುಗುಣವಾಗಿ ನಿಯಮಾವಳಿಗಳನ್ನು ರೂಪಿಸಲು ಐಒಎ ಈ ಮೂಲಕ ಉದ್ದೇಶಿಸಿದೆ.

ಸಮಿತಿಯು ಐಒಎ ಅಧ್ಯಕ್ಷ ನರಿಂದರ್ ಬಾತ್ರಾ, ಪ್ರಧಾನ ಕಾರ್ಯದರ್ಶಿ ರಾಜೀವ್ ಮೆಹ್ತಾ, ಖಜಾಂಚಿ ಆನಂದೇಶ್ವರ್ ಪಾಂಡೆ, ಹಿರಿಯ ಉಪಾಧ್ಯಕ್ಷರಾದ ಅನಿಲ್ ಖನ್ನಾ, ಆರ್‌.ಕೆ. ಆನಂದ್ ಮತ್ತು ಲಲಿತ್ ಭಾನೋಟ್ ಅವರನ್ನು ಒಳಗೊಂಡಿದೆ.

ನರಿಂದರ್ ಬಾತ್ರಾ

ಒಲಿಂಪಿಕ್ ಸಮಿತಿಯ ವಾರ್ಷಿಕ ಸಾಮಾನ್ಯ ಸಭೆಯನ್ನು ನಿವೃತ್ತ ನ್ಯಾಯಮೂರ್ತಿ ರಾಜೀವ್ ಸಹಾಯ್ ಎಂಡ್ಲಾವ್ ಅವರು ನಡೆಸಿದರು. ಸಭೆಯ ಹಿನ್ನೆಲೆಯಲ್ಲಿ ಅವರನ್ನು ಆಡಳಿತಾಧಿಕಾರಿಯಾಗಿ ದೆಹಲಿ ಹೈಕೋರ್ಟ್ ನೇಮಕ ಮಾಡಿತ್ತು. ಮಾಜಿ ಕ್ರೀಡಾ ಕಾರ್ಯದರ್ಶಿ ಇಂಜೆತಿ ಶ್ರೀನಿವಾಸ್ ಅವರು ಇದ್ದರು.

ಸಾಮಾನ್ಯ ಸಭೆ ಭಾನುವಾರ ಗುವಾಹಟಿಯಲ್ಲಿ ನಡೆಯಬೇಕಿತ್ತು. ಆದರೆ ವಕೀಲ ರಾಹುಲ್ ಮೆಹ್ರಾ ಅವರು ದೆಹಲಿ ಹೈಕೋರ್ಟ್‌ಗೆ ಸಲ್ಲಿಸಿದ ಅರ್ಜಿಯಲ್ಲಿ ಮಾಡಿರುವ ಮನವಿಯ ಹಿನ್ನೆಲೆಯಲ್ಲಿ ದೆಹಲಿಗೆ ಸ್ಥಳಾಂತರಿಸಲಾಗಿತ್ತು.

ಹೊರಗೆ ಹೋಗುವಾಗ ಮುಖಗವಸು ಧರಿಸಿ

ಪರಸ್ಪರ ಅಂತರ ಕಾಯ್ದುಕೊಳ್ಳಿ


ಜೆನಿಫರ್ ಬ್ರಾಡಿ– ಎಎಫ್‌ಪಿ ಚಿತ್ರ

ಆಸ್ಟ್ರೇಲಿಯಾ ಓಪನ್: ಹಿಂದೆ ಸರಿದ ಬ್ರಾಡಿ

ಮೆಲ್ಬರ್ನ್(ಎಪಿ): ಆಸ್ಟ್ರೇಲಿಯಾ ಓಪನ್ ಟೆನಿಸ್ ಟೂರ್ನಿ ಮತ್ತು ಎರಡು ಅಭ್ಯಾಸ ಟೂರ್ನಿಗಳಿಂದ ಅಮೆರಿಕದ ಜೆನ್ನಿಫರ್ ಬ್ರಾಡಿ ಹೊರಗುಳಿದಿದ್ದಾರೆ.

ಎಡ ಪಾದದ ಗಾಯದಿಂದಾಗಿ ಬ್ರಾಡಿ ಟೂರ್ನಿಯಲ್ಲಿ ಆಡುತ್ತಿಲ್ಲ ಎಂದು ಆಸ್ಟ್ರೇಲಿಯಾ ಓಪನ್‌ನ ಅಧಿಕಾರಿಗಳು ಭಾನುವಾರ ಸ್ಪಷ್ಟಪಡಿಸಿದ್ದಾರೆ. 'ಜೆನಿಫರ್ ಶೀಘ್ರವಾಗಿ ಚೇತರಿಸಿಕೊಳ್ಳಲಿ' ಎಂದು ಎಂದು ಟ್ವೀಟ್ ಮಾಡಿದ್ದಾರೆ.

ವಿಶ್ವ ರ‍್ಯಾಂಕಿಂಗ್‌ನಲ್ಲಿ 25ನೇ ಸ್ಥಾನದಲ್ಲಿರುವ ಜೆನಿಫರ್ ಅವರು ಕಳೆದ ವರ್ಷ ಮೆಲ್ಬರ್ನ್ ಪಾರ್ಕ್‌ನಲ್ಲಿ ನಡೆದ ಟೂರ್ನಿಯ ಫೈನಲ್‌ನಲ್ಲಿ ಜಪಾನ್‌ನ ನವೊಮಿ ಒಸಾಕಾ ವಿರುದ್ಧ ನೇರ ಸೆಟ್‌ಗಳಲ್ಲಿ ಸೋತಿದ್ದರು.